For the use of
Kanarese 4th Standard in the Bombay Presidency

DISCRIPTION AND HISTORY

OF

KARNATAKA

(THE KANARESE COUNTRY)

COMPILED BY

NARAYANA SRINIVAS RAJAPUROHIT

(*Research Scholar, Kannad History*)

FIRST EDITION, 2,000 Copies.

PUBLISHED BY THE

R SHIVANAGAPPA VAGVILAS BOOK

HUBLI

Price 8 As

Printed by K. R. Bhise at the Karnatak Printing Works, Dharwar
and Published by A. R. Shivanagappa Vagvilas Book Depot
HUBLI

ಮುಂಬಯಿ ಇಲಾಖೆಯೊಳಗಿನ ಪ್ರಾಥಮಿಕ ಶಾಲೆಗಳ ಕನ್ನಡ ೪ನೆಯ ಇಯತ್ತೆಯ ವಿದ್ಯಾರ್ಥಿಗಳ
ಉಪಯೋಗಕ್ಕಾಗಿ ಹೊಸ ಅಭ್ಯಾಸ ಕ್ರಮಕ್ಕನುಸರಿಸಿ ರಚಿಸಿದ

ಕರ್ನಾಟಕದ

ವರ್ಣನೆಯೂ ಇತಿಹಾಸವೂ

ಕರ್ನಾಟಕ ಇತಿಹಾಸ ಸಂಶೋಧಕರಾದ

ನಾರಾಯಣ ಶ್ರೀನಿವಾಸ ರಾಜಪುರೋಹಿತ

ಇವರು ರಚಿಸಿದ್ದು.

೧ ನೇ ಆವೃತ್ತಿ ೨೦೦೦ ಪ್ರತಿಗಳು

ಕರ್ನಾಟಕ ಪ್ರಿಂಟಿಂಗ ವರ್ಕ್ಸ, ಧಾರವಾಡ

ಪ್ರಕಾಶಕರು

ಎ. ಆರ್. ಶಿವನಾಗಪ್ಪಾ ಬುಕ್ಕಸೇಲರ ಹುಬ್ಬಳ್ಳಿ.

೧೯೩೦

ಬೆಲೆ ೮ ಆಣೆ.

ಅನುಕ್ರಮಣಿಕೆ

ಮುನ್ನುಡಿ.

ಕರ್ನಾಟಕ ಇತಿಹಾಸ ಸಂಶೋಧಕ ಮಂಡಲದಲ್ಲಿಯ ಒಬ್ಬ ಮುಖ್ಯ ಸದಸ್ಯರಾದ ಶ್ರೀಯುತ ನಾರಾಯಣ ಶ್ರೀನಿವಾಸ ರಾಜಪುರೋಹಿತರು ಈ ಇತಿಹಾಸವನ್ನು ಬರೆದಿರುತ್ತಾರೆ. ಅಂದಬಳಿಕ ಈ ಇತಿಹಾಸದೊಳಗಿನ ಸಂಗತಿಗಳು ಯಾವತ್ತು ವಿದ್ಯಾರ್ಥಿಗಳಿಗೆ ತಿಳಿಯುವಂತೆ ವ್ಯವಸ್ಥಿತವಾಗಿ ಬರೆಯಲ್ಪಟ್ಟಿರುತ್ತವೆಂದು ಬೇರೆ ಹೇಳುವ ಅವಶ್ಯಕತೆಯು ಇರುವದಿಲ್ಲ. ಈಗ ಕರ್ನಾಟಕವ ತುಂಬೆಲ್ಲ ಹೊಸ ಜಾಗ್ರುತಿಯು ಉತ್ಪನ್ನವಾಗಿದ್ದು ಹೊಸ ಚೈತನ್ಯವು ಉತ್ಪನ್ನವಾಗಿರುವದರಿಂದ ಕರ್ನಾಟಕದ ಯಾವತ್ತು ವಾಚಕರ ಸಲುವಾಗಿ ಕರ್ನಾಟಕ ಪ್ರಾಚೀನಕಾಲದ ಯಾವತ್ತು ಅರಸರ, ವೀರರ, ಧರ್ಮಸ್ಥಾಪಕರ, ಕವಿಗಳು ಮತ್ತು ಕರ್ತೃತ್ವಶಾಲಿಗಳ ಸಾದ್ಯಂತ ಇತಿಹಾಸದ ಅಗತ್ಯವು ಬಹಳವಿರುತ್ತದೆ. ಆದರೆ ಈಗಿನ ಇತಿಹಾಸವು ಅಂಥ ಉಚ್ಚಗ್ರಂಥವಲ್ಲಗಿದ್ದರೂ ಮುಖ್ಯವಾಗಿ ಪ್ರಾಥಮಿಕ ಶಾಲೆಗಳಗಿನ ವಿದ್ಯಾರ್ಥಿಗಳ ಉಪಯೋಗದ ಸಲುವಾಗಿಯೇ ಈ ಇತಿಹಾಸದ ಪ್ರಕಾಶಕರು ಶ್ರೀಯುತ ರಾಜಪುರೋಹಿತರ ಕಡೆಯಿಂದ ಇದನ್ನು ಬರಿಸಿರುವದರಿಂದ ಇದು ಸುಲಭವಾದ ಭಾಷೆಯಿಂದ ಸಂಕ್ಷಿಪ್ತವಾಗಿ ಬರೆಯಲ್ಪಟ್ಟಿರುತ್ತದೆಂದು ಹೇಳಲಿಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಇದರಲ್ಲಿ ನಿರರ್ಥಕವಾದ ಸಂಗತಿಯು ಒಂದೂ ಇಲ್ಲ. ಈ ಪುಸ್ತಕದಲ್ಲಿ ಅಲ್ಲಲ್ಲಿಯ ಮಹತ್ವವಾದ ಭೂಪ್ರದೇಶಗಳ ಮತ್ತು ಮಂದಿರಗಳ ಸುಂದರವಾದ ನಕಾಶೆಗಳೂ, ಅರಸರ ಮತ್ತು ಧರ್ಮಸ್ಥಾಪಕರ ಸುಂದರವಾದ ಚಿತ್ರಗಳೂ ಕೊಡಲ್ಪಟ್ಟಿರುವದರಿಂದ ಅವು ತರುಣ ವಾಚಕರ ಮನಸ್ಸನ್ನು ಬೇಗನೆ ಆಕರ್ಷಣ ಮಾಡಿಕೊಳ್ಳುತ್ತವೆ. ಆದುದರಿಂದ ಈ ಇತಿಹಾಸವು ವಿದ್ಯಾರ್ಥಿಗಳಿಗೂ ಇತರ ತರುಣರಿಗೂ ಬಹಳ ಉಪಯೋಗವಾಗುವದೆಂದು ನನ್ನ ಅಭಿಪ್ರಾಯವಿರುತ್ತದೆ. ಹಿಂದಕ್ಕೆ ಒಬ್ಬ ಸದ್ಗೃಹಸ್ಥರು ಕನ್ನಡ ಸಾಲೆಯ ವಿದ್ಯಾರ್ಥಿಗಳ ಸಲುವಾಗಿ ಕರ್ನಾಟಕದ ಇತಿಹಾಸವೆಂಬ ಚಿಕ್ಕ ಪುಸ್ತಕವನ್ನು ಬರೆದಿದ್ದಾರೆ. ಆದರೆ ಅವರು ತಮ್ಮ ಇತಿಹಾಸವನ್ನು ಬರೆದ ಕಾಲಕ್ಕೆ ಕರ್ನಾಟಕ ಇತಿಹಾಸದ ಸಾಧನಸಾಮಗ್ರಿಯು ವಿಪುಲವಾಗಿ ದೊರೆಯುತ್ತಿದ್ದಿಲ್ಲ. ಈಗ ಮೈಸೂರ ಆರ್ಕಿಯಾಲಾಜಿಕಲ

ಯಿಸಿಯುವರ ಪರಿಶ್ರಮದಿಂದಲೂ ಮೆಹರ್ಬಾನ ಪ್ಲೀಟಸಾಹೇಬ ಮುಂತಾದವರ ಪರಿಶ್ರಮದಿಂದಲೂ ಕರ್ನಾಟಕದೊಳಗಿನ ಶಿಲಾಲಿಪಿಗಳು, ತಾಮ್ರಶಾಸನಗಳು ಮೊದಲಾದವುಗಳು ದೊರಕಿರುವದರಿಂದ ಕರ್ನಾಟಕದ ಇತಿಹಾಸವನ್ನು ಬರೆಯು ವವರಿಗೆ ದೊಡ್ಡ ಸಾಧನ ಸಾಮಗ್ರಿಯು ದೊರಕಿರುತ್ತದೆ. ಈ ಸಾಧನ ಸಾಮ ಗ್ರಿಯಿಂದ ಕರ್ನಾಟಕ ಇತಿಹಾಸ ಸಂಶೋಧಕ ಮಂಡಲದ ಅಧ್ಯಕ್ಷರಾದ 'ಯುತ ವೆಂಕಟರಾವ ಆಲೂರ ಇವರು ಈಗ ಸುಮಾರು ೧೦-೧೨ ವರ್ಷಗಳ ೈ.ಕರ್ನಾಟಕ ಗತವೈಭವವೆಂಬ ಪುಸ್ತಕವನ್ನು ಬರೆದು ಕರ್ನಾಟಕ ಇತಿ ಸವನ್ನು ಓದುವ ಬಗ್ಗೆ ಕರ್ನಾಟಕದ ಜನರಲ್ಲಿ ಜಿಜ್ಞಾಸೆಯನ್ನು ಹುಟ್ಟಿಸಿದರು. ೧ ಅದೇ ಮಂಡಲದ ಒಬ್ಬ ಪ್ರಮುಖ ಸದಸ್ಯರಾದ ಶ್ರೀಯುತ ರಾಜಪುರೋ ತರು ಈ ಇತಿಹಾಸವನ್ನು ಬರೆದಿರುವದರಿಂದ ಇದು ವಿದ್ಯಾರ್ಥಿಗಳಿಗೆ ಮಾತ್ರ ವಲ್ಲದೆ ಇತರರಿಗೂ ಸಾಕಷ್ಟು ಉಪಯೋಗವಾಗದೆ ಇರಲಾರದು. ಈ ಇತಿ ಹಾಸವನ್ನು ಕನ್ನಡಿಗರ ಮುಂದೆ ತಂದಿಟ್ಟ ಶ್ರೇಯವು ಶ್ರೀಯುತ ರಾಜಪುರೋಹಿತ ರಿಗೆ ಇರುವದಲ್ಲದೆ ಶ್ರೀಯುತ ರಾಜಪುರೋಹಿತರ ಕಡೆಯಿಂದ ಬರೆಯಿಸಿ ಇದನ್ನು ಬಹಳ ವೆಚ್ಚದಿಂದಲೂ ಶ್ರಮದಿಂದಲೂ ಪ್ರಕಟಗೊಳಿಸಿದ ಹುಬ್ಬಳ್ಳಿಯ ವಾಗ್ವಿ ಲಾಸ ಬುಕ್ಕಡಿಪೋದ ಒಡೆಯರಾದ ಶ್ರೀಯುತ ಎ. ಆರ್. ಶಿವನಾಗಪ್ಪಾ ಇವರಿ ಗಾದರೂ ಇರುತ್ತದೆಂದು ನಾನು ಇಲ್ಲಿ ಹೇಳದೆ ಇರಲಾರೆನು.

ಈ ಚಿಕ್ಕ ಇತಿಹಾಸಕ್ಕೆ ಮುನ್ನುಡಿಯನ್ನು ಬರೆದುಕೊಡಲಿಕ್ಕೆ ಇವರ ಪ್ರಕಾಶಕರು ನನಗೆ ಈ ದಿವಸ ವಿನಂತಿಯನ್ನು ಮಾಡಿಕೊಂಡ ಪ್ರಕಾರ ನಾನು ಸಂತೋಷದಿಂದ ಈ ಚಿಕ್ಕ ಮುನ್ನುಡಿಯನ್ನು ಬರೆದಿದ್ದೇನೆ.

ಧಾರವಾಡ
ತಾ॥ ೯ನೇ ಮಾರ್ಚ
೧೯೩೦ ಇಸ್ವಿ.

ತಮ್ಮ ವಿಧೇಯ,
ಗದಿಗೆಯ್ಯಾ ಹುಚ್ಚಯ್ಯಾ ಹೊನ್ನಾಪುರಮಠ.
ಸಂಪಾದಕ "ಶ್ರೀ ವಾಗ್ದೇವೀ ಗ್ರಂಥಮಾಲೆ" ಧಾರವಾಡ.

ಈ ಪುಸ್ತಕದ ಬಗ್ಗೆ ಅಭಿಪ್ರಾಯಗಳು

ಕನ್ನಡಿಗರಿಗೋಸ್ಕರ ವಿಶೇಷತಃ ಬಾಲಕರಿಗೋಸ್ಕರ ಕರ್ನಾಟಕದ ಇತಿ
ಹಾಸ ಪುಸ್ತಕವೊಂದು ಬೇಕಾಗಿತ್ತು. ಪುಸ್ತಕ ಪ್ರಚಾರ ಕಾರ್ಯದಲ್ಲಿ ಸಾಹಸಿ
ಗರಾದ ಶ್ರೀ. ಶಿವನಾಗಪ್ಪನವರು ಶ್ರೀ. ನಾರಾಯಣ ಶ್ರೀನಿವಾಸ ರಾಜಪುರೋ
ಹಿತ ಇವರಿಂದ ಅದನ್ನು ಬರೆಯಿಸಿ ಸುಂದರವಾಗಿ ಮುದ್ರಿಸಿ ಕನ್ನಡಿಗರ ಮೇಲೆ
ದೊಡ್ಡ ಉಪಕಾರ ಮಾಡಿರುವರು. ಈ ಪುಸ್ತಕವನ್ನು ಬರೆದ ಶ್ರೀ ರಾಜಪು
ರೋಹಿತರು ಬಹಳ ದಿವಸಗಳಿಂದ ಸಂಶೋಧನದಲ್ಲಿ ನುರಿತವರು, ಕರ್ನಾಟಕದ
ಭಕ್ತರು ಅಂಥವರ ಲೆಕ್ಕಣಿಕೆಯಿಂದ ಬಂದ ಇತಿಹಾಸದಲ್ಲಿ ಓಜಸ್ವಿತೆ ಇರುತ್ತದೆಂ
ಬುದನ್ನು ಹೇಳುವ ಕಾರಣವಿಲ್ಲ. ವಿಷಯಗಳು ಸಂಕ್ಷೇಪವಾಗಿಯೂ ಸ್ಪಷ್ಟವಾ
ಗಿಯೂ ಪ್ರತಿಪಾದಿಸಲ್ಪಟ್ಟಿದ್ದು ಭಾಷೆಯು ಸರಳವೂ ಶುದ್ಧವೂ ಆಗಿದೆ. ಪುಸ್ತ
ಕವು ೫೦–೬೦ ಮನೋಹರವಾದ ಚಿತ್ರಗಳಿಂದಲೂ ನಕಾಶೆಗಳಿಂದಲೂ ಯುಕ್ತ
ವಾಗಿದ್ದರೂ ಬೆಲೆ ತೀರ ಕಡಿಮೆ ಎಂದರೆ ಎಂಟೇ ಆಣೆ ಇರುವುದರಿಂದ, ಎಲ್ಲರೂ
ಇದನ್ನು ಕೊಂಡುಕೊಂಡು ಓದಬಹುದು. ಕನ್ನಡಿಗರೆಲ್ಲರೂ ಇದಕ್ಕೆ ಪ್ರೋತ್ಸಾ
ಹನ ಕೊಡುವುದು ಉಚಿತವಾಗಿದೆಂಬದು ಮಾತ್ರವೇ ಅಲ್ಲ, ಅತ್ಯವಶ್ಯವೂ ಆಗಿದೆ.

ಧಾರವಾಡ.
೨೦–೩–೧೯೩೦

ವೆಂಕಟೇಶ ಭೀಮರಾವ ಆಲೂರ.

“ **ಕರ್ನಾಟಕದ ವರ್ಣನೆಯೂ ಇತಿಹಾಸವೂ** ” ಎಂಬ ಪುಸ್ತಕ
ವನ್ನು ನಾನು ಓದಿ ನೋಡಿದೆನು. ಇದು ಪ್ರಾಮುಖ್ಯವಾಗಿ ಕನ್ನಡ ಶಾಲೆಯ
ಳನೆಯ ಇಯತ್ತೆಯ ವಿದ್ಯಾರ್ಥಿಗಳಿಗೂ, ಕರ್ನಾಟಕದ ಇತಿಹಾಸವನ್ನು ಓದಿ
ತಿಳಕೊಳ್ಳಲು ಆತುರಪಡುತ್ತಿರುವ ತರುಣರಿಗೂ ತಕ್ಕದ್ದಾಗಿದೆ. ಈ ಪುಸ್ತಕ
ದಲ್ಲಿ ಕರ್ನಾಟಕದ ಇತಿಹಾಸಜ್ಞಾನವು ಸುಲಭವಾಗಿ ಬೋಧವಾಗುವ ಹಾ
ಈಗಿನ ಪರಿಸ್ಥಿತಿಗೆ ಅನುಸರಿಸಿ ವಿದ್ಯಾರ್ಥಿಗಳಲ್ಲಿ ಕರ್ನಾಟಕದ ಸಂಬಂಧ ಯೆ
ವಾದ ಅಭಿಮಾನವು ತಲೆದೋರುವ ಹಾಗೆ ಸರಿಯಾದ ವಿಷಯ ವಿವೇ
ಹೊಂದಿಕೆಯೂ ಮಾಡಲ್ಪಟ್ಟಿದೆ. ಇದರ ಭಾಷೆಯಾದರೂ ಸರಳವಾಗಿ

ರ್ಥಿಗಳ ಶಿಕ್ಷಣ ಸೌಲಭ್ಯಕ್ಕೂ, ಮನೋರಂಜನಕ್ಕೂ ಅನುರೂಪವಾಗಿ ಅಲ್ಲಲ್ಲಿಗೆ ತಕ್ಕವಾದ ನಕಾಶಗಳೂ, ಚಿತ್ರಗಳೂ, ವಂಶಾವಳಿಗಳೂ ಇವರಲ್ಲಿ ಸೇರಿಸಲ್ಪಟ್ಟವೆ. ಈ ವರೆಗೆ ೪ನೆಯ ಇಯತ್ತೆಯ ವಿದ್ಯಾರ್ಥಿಗಳಿಗೋಸ್ಕರ ಸಿದ್ಧವಾಗಿರುವ ಪುಸ್ತಕಗಳಿಗಿಂತ ಈ ಪುಸ್ತಕವು ಎಲ್ಲ ಬಗೆಯಿಂದ ಹೆಚ್ಚು ಉಪಯುಕ್ತವಾಗಿರುವದೆಂದು ಹೇಳಲು ಅಭ್ಯಂತರವಿಲ್ಲ.

ಧಾರವಾಡ.	**ಬಿ. ಬಿ. ಬೂದೀಹಾಳ.**
॥ ೧೬-೩-೧೯೩೦	ಸುಪರವಾಯಿಝರ ಡಿ. ಎಸ್ ಬಿ. ಧಾರವಾಡ.

ಪ್ರಕಾಶಕರ ನಾಲ್ಕು ಶಬ್ದಗಳು.

೧. ಹೊಸ ಪದ್ಧತಿಯ ಶಿಕ್ಷಣಕ್ರಮದಲ್ಲಿ ಒಳ್ಳೇ ನುರುಪಡಿ ಹೊಂದಿದರೂ ಕರ್ನಾಟಕ ಭಾಷಾಭಿಮಾನಿಗಳೂ ಆದ ಶ್ರೀ. ಬಾಳಾಜಿ ಕೃಷ್ಣ ಹಳಪೇಟೆಯವರು ಈ ಪುಸ್ತಕವನ್ನು ಸಂಪೂರ್ಣವಾಗಿ ಓದಿ ಕರ್ನಾಟಕದಲ್ಲಿ ಇದೊಂದು ಒಳ್ಳೇ ಪುಸ್ತಕವು ಜನಿಸಿತೆಂದು ಆನಂದಬಟ್ಟು ಮಕ್ಕಳು ಓದಲು ಚನ್ನಾಗಿದೆಯೆಂದು ತಲೆದೂಗಿದರು.

೨. ಶ್ರೀಯುತ ಹುಕ್ಕೇರಿಕರ ಮಾಸ್ತರ ಎಂ. ಏ., ಇವರು ನನಗೆ ಈ ಪುಸ್ತಕವನ್ನು ಬರೆಯಿಸಲಿಕ್ಕೆ ಅನೇಕ ಸೂಚನೆಗಳನ್ನು ಮಾಡಿ ಶ್ರೀ ರಾಜಪುರೋಹಿತರಂಥ ಉತ್ತಮ ಲೇಖಕರನ್ನು ಗೊತ್ತುಮಾಡಿಕೊಟ್ಟದ್ದರಿಂದ ಈ ಮಹನೀಯರ ಉಪಕಾರವನ್ನು ಇಲ್ಲಿ ಸ್ಮರಿಸದೆ ಇರಲಾರೆನು.

೩. ಗುತ್ತಲದ ಹೆ। ಮಾಸ್ತರರಾದ ಶ್ರೀ. ನಾಡಿಗೇರ ಇವರು ಈ ಪುಸ್ತಕದ ಹಸ್ತಲಿಖಿತ ಪ್ರತಿಯನ್ನು ಓದಿ ಅನೇಕ ಸೂಚನೆಗಳನ್ನು ಮಾಡಿದ್ದರಿಂದ ಇವರ ಉಪಕಾರವನ್ನು ಸ್ಮರಿಸುವೆನು.

೪. ಕರ್ನಾಟಕ ಪ್ರಿಂಟಿಂಗ ಪ್ರೆಸ್ಸಿನ ಒಡೆಯರಾದ ಶ್ರೀ. ಜಠಾರ ಬಳವಂತರಾಯರು ಅಲ್ಪಾವಕಾಶದಲ್ಲಿ ಅಂದವಾಗಿ ಮುದ್ರಿಸಿಕೊಟ್ಟದ್ದರಿಂದ ಕೃತಜ್ಞತಾಬುದ್ಧಿಯಿಂದ ಈ ಮಹನೀಯರ ಉಪಕಾರವನ್ನು ಸ್ಮರಿಸುವೆನು.

— ಪ್ರಕಾಶಕ.


ಬ್ರಿಟಿಶ ಕರ್ನಾಟಕವು
ಕರ್ನಾಟಕದಲ್ಲಿಯ ಸಂಸ್ಥಾನಗಳು.
ಕರ್ನಾಟಕದ ಮೇರೆ.
ಹೊಗೆಬಂಡಿಯ ಮಾರ್ಗ.
ಕರ್ನಾಟಕದೇಶದ
ನಕಾಶೆಯು.

ಕರ್ನಾಟಕದ ಇತಿಹಾಸವು

೧ನೆಯ ಪ್ರಕರಣ

ಕರ್ನಾಟಕದ ಇತಿಹಾಸವೆಂದರೇನು? ಹಾಗೂ ಅದನು ಹೇಳುವವರು ಯಾರು?

ಕರ್ನಾಟಕದ ಇತಿಹಾಸವು

ಕನ್ನಡ ನುಡಿಯನ್ನಾಡುವ ನಾವು ಕನ್ನಡಿಗರು ಇರುವ ದೇಶಕ್ಕೆ **'ಕರ್ನಾಟಕ'** ಎಂಬ ಹೆಸರು. ಈಗ ನಮ್ಮ ಈ ಕರ್ನಾಟಕ ದೇಶದಲ್ಲಿ ಇಂಗ್ಲಿಷರು ಸಾರ್ವಭೌಮರಾಗಿ ಆಳುತ್ತಿದ್ದಾರೆ. ಇವರಿಗಿಂತ ಮೊದಲು ಪುಣೆಯ ಪೇಶವೆಯವರೂ, ಶಿವಾಜಿಯ ಮನೆತನದವರೂ ಮತ್ತು ವಿಜಾಪುರದ ಆದಿಲಶಾಹಿ, ಕಲಬುರ್ಗಿಯ ಬಹಾಮನೀ ಬಾದಶಾಹಿ ಮುಂತಾದ ಮುಸಲ್ಮಾನ ಅರಸರೂ ಇಲ್ಲಿ ರಾಜ್ಯವನ್ನಾಳುತ್ತಿದ್ದರು. ಇವರಿಗಿಂತಲೂ ಪೂರ್ವದಲ್ಲಿ ವಿಜಯನಗರದ ಅರಸರು, ದೇವಗಿರಿಯ ಯಾದವರು, ಹೊಯ್ಸಳ ಯಾದವರು, ಕಲಚೂರ್ಯರು, ಕಲ್ಯಾಣದ ಚಾಳುಕ್ಯರು, ಮಳಖೇಡದ ರಾಷ್ಟ್ರಕೂಟರು, ಬಾದಾಮಿಯ ಚಾಳುಕ್ಯರು, ಕದಂಬರು, ಗಂಗರು, ಶಾತವಾಹನರು, ಕಾಣ್ವರು, ಶುಂಗರು ಮೊದಲಾದ ನಮ್ಮ ಜನರೇ ಕರ್ನಾಟಕವನ್ನು ಆಳುತ್ತಿದ್ದರು. ಇವರೆಲ್ಲರ ಆಳಿಕೆಯಲ್ಲಿ ನಮ್ಮ ಹಿರಿಯರು ಮಾಡುತ್ತ ಬಂದಿರುವ ಕೆಲಸಗಳು ಯಾವವು? ಮತ್ತು ಅವುಗಳಿಂದ ಕನ್ನಡಿಗರಾದ ನಮ್ಮ ಮೇಲೆ ಏನೇನು ಪರಿಣಾಮಗಳಾದವು? ಇವೇ ಮುಂತಾದ ನಡೆದ ಸಂಗತಿಗಳನ್ನು ಹೇಳುವದೇ ಕರ್ನಾಟಕದ ಇತಿಹಾಸವು.

ಇತಿಹಾಸವನ್ನು ಹೇಳುವವರು

ಈ ಇತಿಹಾಸವನ್ನು ಹೇಳುವವರು ಯಾರಿದ್ದಾರೆ? ಇಷ್ಟು ಪ್ರಾಚೀನ ಕಾಲದಿಂದ ನಡೆದು ಬಂದ ಕರ್ನಾಟಕದೇಶದ ಇತಿಹಾಸವನ್ನು ಹೇಳುವದಕ್ಕೆ ಅಷ್ಟು ಹಿಂದಿನಕಾಲದ ಮುದುಕರು ಯಾರಾದರೂ ಇದ್ದಾರೋ? ಇದ್ದಾರೆ; ಆದರೆ ಅವರು ಮನುಷ್ಯರು ಮಾತ್ರ ಅಲ್ಲ! ಕೇವಲ ನಿರ್ಜೀವ ವಸ್ತುಗಳು. ಶಾಸನದ ಕಲ್ಲು, ನಿಷಿದಿಯ ಕಲ್ಲು, ಮಹಾಸತಿಯ ಕಲ್ಲು, ವೀರಗಲ್ಲು, ತಾಮ್ರಪಟ, ತಾಡವಾಲಿಯ ಮೇಲೆ ಬರೆದ ಗ್ರಂಥಗಳು, ಕಡಿತದ ಮೇಲೆ ಬರೆದ ಲೇಖಗಳು, ಬಖರಗಳು, ಲಾವಣಿಗಳು, ಕಾಗದಪತ್ರಗಳು, ಪ್ರಾಚೀನ ನಾಣ್ಯಗಳು, ಚಿತ್ರಗಳು, ಮೂರ್ತಿಗಳು, ಕಟ್ಟಡಗಳು ಇವೇ ಮೊದಲಾದವು.[೧] ಇವುಗಳನ್ನು ಚನ್ನಾಗಿ ಓದಿ, ಮತ್ತು ನೋಡಿ, ಪಂಡಿತರು ಕರ್ನಾಟಕದ ಇತಿಹಾಸವನ್ನು ಬರೆದಿದ್ದಾರೆ.

ಶಾಸನದ ಕಲ್ಲು

ಇದನ್ನು 'ಶಿಲಾಲೇಖ' ಅಥವಾ 'ಶಿಲಾಲಿಪಿ' ಎಂದು ಕರೆಯುತ್ತಾರೆ. ಈ ಶಿಲಾಲಿಪಿಗಳಲ್ಲಿ ದೇವರ ನೈವೇದ್ಯ, ನಂದಾದೀಪ ಮುಂತಾದವುಗಳ ವೆಚ್ಚಕ್ಕೋಸ್ಕರ ದೇವರ ಗುಡಿಗಳಿಗೆ ಭೂಮಿಯನ್ನು ದಾನಕೊಟ್ಟದ್ದನ್ನು ಬರೆದಿರುತ್ತಾರೆ. ಪ್ರತಿಯೊಂದು ಶಿಲಾಲೇಖದಲ್ಲಿ ಮೊದಲು ಆಯಾ ಕಾಲದಲ್ಲಿ ರಾಜ್ಯವನ್ನಾಳುತ್ತಿದ್ದ ಅರಸರ ಹಾಗೂ ಆತನ ಪೂರ್ವಜರ ವರ್ಣನೆಯಿರುತ್ತದೆ. ಈ ಲೇಖಗಳನ್ನು ಹಳೆಗನ್ನಡ ಅಕ್ಷರಗಳಿಂದ, ಹಳೆಗನ್ನಡ ಭಾಷೆಯಿಂದ ಬರೆದಿರುತ್ತಾರೆ.

---


೧. ಪ್ರಾಚೀನಕಾಲದಲ್ಲಿ ಕಾಗದಗಳು ಇದ್ದಿಲ್ಲ. ಅದುದರಿಂದ ಆಗಿನಕಾಲದಲ್ಲಿ ಕಲ್ಲುಗಳ ಮೇಲೆ, ಇಟ್ಟಿಗೆಗಳ ಮೇಲೆ, ತಾಮ್ರದ ತಗಡುಗಳ ಮೇಲೆ, ಲೇಖಗಳನ್ನು ಕೆತ್ತಿಸುತ್ತಿದ್ದರು. ಮತ್ತು ಗಿಡಗಳ ಎಲೆಗಳ ಮೇಲೆ ಎಂದರೆ ತಾಡವಾಲಿಯ ಮೇಲೆ, ಭೂರ್ಜಪತ್ರಗಳ ಮೇಲೆ ಬರೆಯುತ್ತಿದ್ದರು. ಅಲ್ಲದೆ ಕಡಿತದ ಮೇಲೆ ಎಂದರೆ ಬಟ್ಟೆಯ ಮೇಲೆ ಲೆಕ್ಕಪತ್ರಗಳನ್ನು ಬರೆಯುತ್ತಿದ್ದರು. ಈಚೀಚೆಗೆ ಮುಸಲ್ಮಾನರ ಆಳಿಕೆಯ ಕಾಲದಿಂದ ಕಾಗದಗಳು ಹುಟ್ಟಿ, ಬಳಕೆಗೆ ಬಂದವು. ಆಮೇಲೆ ಬಖರಗಳನ್ನೂ ಲೆಕ್ಕಪತ್ರಗಳನ್ನೂ ಗ್ರಂಥ ಕಾಗದಗಳ ಮೇಲೆ ಬರೆಯಲಾರಂಭಿಸಿದರು.




ಶಿಲಾಲಿಪಿ

ನಿಷಿದಿಯ ಕಲ್ಲು

ಜೈನರಲ್ಲಿ ಕೆಲವರು ಪುಣ್ಯವಂತರಾದ ಹೆಂಗಸರೂ ಗಂಡಸರೂ, ಸಲ್ಲೇಖನವ್ರತದಿಂದ ಅಂದರೆ ಕ್ರಮಕ್ರಮದಿಂದ ಆಹಾರವನ್ನು ಬಿಟ್ಟು, ಉಪವಾಸಮಾಡುತ್ತ, ಶಾಂತಮನಸ್ಸಿನಿಂದ ಜಿನದೇವರನ್ನು ಧ್ಯಾನಿಸುತ್ತ ಪ್ರಾಣಬಿಡುತ್ತಿದ್ದರು. ಇಂಥ ಮಹನೀಯರಾದ ಸ್ತ್ರೀ-ಪುರುಷರ ನೆನವರಿಕೆಗೋಸ್ಕರ ಇವರ ಮಹಿಮೆಯನ್ನು ವರ್ಣಿಸಿದ ಲೇಖವನ್ನು ಈ ನಿಷಿದಿಯ ಕಲ್ಲಿನ ಮೇಲೆ ಕೆತ್ತಿಸಿರುತ್ತಾರೆ. ಇವುಗಳಲ್ಲಿಯೂ ಶಿಲಾಲೇಖಗಳಂತೆ ಆರಂಭಕ್ಕೆ ಆಯಾ ಕಾಲದ ಅರಸರ ವರ್ಣನೆಯಿರುತ್ತದೆ.



ವೀರಗಲ್ಲು



ಮಹಾಸತಿಯ ಕಲ್ಲು

ಹಿಂದಿನಕಾಲದಲ್ಲಿ ಎಲ್ಲ ಜಾತಿಯ ಜನರೊಳಗೂ ಪತಿವ್ರತೆಯರಾದ ಹೆಣ್ಣುಮಕ್ಕಳು, ಗಂಡನು ಸತ್ತರೆ ಆತನ ಕೂಡ ಸಹಗಮನವನ್ನು ಮಾಡು ತ್ತಿದ್ದರು. ಹುಗಿಯುವ ಪರಿಪಾಠವಿರುವ ಜನರೊಳಗಿನ ಪತಿವ್ರತೆಯಾದ ಸ್ತ್ರೀಯು, ಗಂಡನ ಹೆಣವನ್ನು ಸಮಾಧಿ ಯಲ್ಲಿ ಕುಳ್ಳಿರಿಸಿದ ಕೂಡಲೆ ಆ ಸಮಾಧಿಯಲ್ಲಿ ಹೊಕ್ಕು, ಆ ಗಂಡನ ಹೆಣದ ಹತ್ತರ ಕುಳಿತುಕೊಂಡು, ತನ್ನ ಬಂಧುಬಳಗದವರಿಂದ ಮೇಲೆ ಮಣ್ಣನ್ನು ಹಾಕಿಸಿಕೊಂಡು ಸಾಯುವಳು. ಸುಡುವ ಪರಿಪಾಠ ವಿರುವ ಜನರೊಳಗಿನ ಪತಿವ್ರತೆಯು, ಗಂಡನ ಹೆಣವು ಚಿತೆಯಲ್ಲಿ ಸುಡು ತ್ತಿರಲು, ಅಗ್ನಿಪ್ರವೇಶಮಾಡಿ, ಆ ಗಂಡನ ಹೆಣದ ಹತ್ತರ ಕುಳಿತುಕೊಂಡು ಸಾಯುವಳು. ಈಪ್ರಕಾರ ಸಹಗಮನ ಮಾಡಿದ ಸ್ತ್ರೀಯರ ಸ್ಮಾರಕ ವನ್ನು ಮಾಡುವದಕ್ಕೆಂದು ಈ ಬದಿಗೆ ತೋರಿಸಿದ ಚಿತ್ರದ[೧] ಹಾಗೆ ಕಲ್ಲನ್ನು ನಿಲ್ಲಿಸಿ, ಅದರಲ್ಲಿ ಸಹಗಮನ ಮಾಡಿದ ಸಂಗತಿಯ ಲೇಖವನ್ನು ಕೆತ್ತಿಸಿರು ತ್ತಾರೆ. ಈ ಕಲ್ಲಿನಲ್ಲಿಯೂ ಆಯಾಕಾಲದ ಅರಸರ ವರ್ಣನೆಯಿರುತ್ತದೆ.

ಮಹಾಸತಿಯ ಕಲ್ಲು

ಯುದ್ಧವನ್ನು ಮಾಡುತ್ತ ಮಾಡುತ್ತ ರಣಭೂಮಿಯಲ್ಲಿ ಮರಣ ಹೊಂದಿದ ವೀರಪುರುಷನ ಸ್ಮಾರಕವನ್ನು ಮಾಡುವದಕ್ಕೋಸ್ಕರ ಈ ಬದಿಗೆ ತೋರಿಸಿದ ಚಿತ್ರದ[೨] ಪ್ರಕಾರ ವೀರಗಲ್ಲನ್ನು ನಿಲ್ಲಿಸಿ, ಅದರ ಮೇಲೆ "ಇಂದ ದಿವಸ ಇಂಥ ಯುದ್ಧದಲ್ಲಿ ಇಂಥ ವೀರನು ಸತ್ತು ವೀರಸ್ವರ್ಗವನ್ನು ಹೊಂದಿದನು." ಎಂಬ ಲೇಖವನ್ನು ಕೆತ್ತಿಸಿರುತ್ತಾರೆ.

ವೀರಗಲ್ಲು


---

೧. ಹೆಂಡತಿಯು ಗಂಡನ ಅರ್ಧದೇಹವಾಗುದರಿಂದ ಸಹಗಮನ ಮಾಡಿದ ಆ ಮಹಾ ಸತಿಯ ಅರ್ಧದೇಹದ ಪ್ರತಿಮೆಯನ್ನು ಮಾಡಿ ಈಪ್ರಕಾರ ನಿಲ್ಲಿಸಿದ್ದಾರೆ.

೨. ಈ ವೀರಗಲ್ಲಿನಲ್ಲಿ ಎಲ್ಲಕ್ಕೂ ಕೆಳಗೆ ಆ ವೀರನು ಯಾವ ಯುದ್ಧದಲ್ಲಿ ಮರಣಹೊಂದಿ ದನೋ, ಆ ಯುದ್ಧದ ಚಿತ್ರವಿದೆ. ಅದಕ್ಕೂ ಮೇಲೆ ಆ ವೀರನು ವೀರಸ್ವರ್ಗಕ್ಕೆ ಹೋಗಿ ಮುಟ್ಟಿದ ಕೂಡಲೆ ಅಪ್ಸರಾಸ್ತ್ರೀಯರು, ಆತನನ್ನು ಸಂತೋಷಪಡಿಸುವದಕ್ಕಾಗಿ ಆತನ ಎಡ ಬಲಕ್ಕೆ ಕೈಮೇಲೆ ಕೈಹಾಕಿಕೊಂಡು ಕುಣಿಯುತ್ತಿದ್ದಂಥ ಚಿತ್ರವಿದೆ. ಅದಕ್ಕೂ ಮೇಲೆ ಅಪ್ಸರಾಸ್ತ್ರೀಯರು ಆ ವೀರನನ್ನು ದೇವರಸನ್ನಿಧಿಗೆ ಕರೆದುಕೊಂಡು ಹೋಗುತ್ತಿದ್ದ ಚಿತ್ರವಿದೆ. ಎಲ್ಲಕ್ಕೂ ಮೇಲೆ ಶಿವಲಿಂಗವಿದೆ.

ಅರಸರು, ತಮ್ಮ ಧರ್ಮಗುರುಗಳಿಗೆ ಅಥವಾ ತಮ್ಮ ವೀರಪುರುಷರಿಗೆ ಹೊಲಗಳನ್ನು ಉಂಬಳಿ ಹಾಕಿಕೊಡುವಾಗ, ತಾಮ್ರದ ತಗಡುಗಳ ಮೇಲೆ ಆ ಎಲ್ಲ ಸಂಗತಿಗಳನ್ನು ಹೊಗಳಿದ ಶಾಸನವನ್ನು ಕೆತ್ತಿಸಿ ಕೊಡುತ್ತಿದ್ದರು. ಮತ್ತು ಆ ತಾಮ್ರಪಟಗಳ ಬಳೆಯ ಮೇಲ ತಮ್ಮ ರಾಜಮುದ್ರೆಯನ್ನು ಹಾಕುತ್ತಿದ್ದರು.

ತಾಮ್ರಪಟ



ತಾಮ್ರಪಟ

೨ನೆಯ ಪ್ರಕರಣ


ದಂಡಕಾರಣ್ಯದಲ್ಲಿ ಕನ್ನಡನಾಡು ಹುಟ್ಟಿತು.

ಬಾಲಕರೇ, ಈಗ ನಾವು ಇರುವ ಕನ್ನಡನಾಡು, ಬಹಳ ಪುರಾತನ ಕಾಲದಲ್ಲಿ ಈಗಿನಂತೆ ಜನರಿಂದ ತುಂಬಿದ್ದಿಲ್ಲ. ಆಗ ಇದೊಂದು ಬಲು ದಟ್ಟವಾದ ಅರಣ್ಯವಾಗಿತ್ತು; ಇದನ್ನು **ದಂಡಕಾರಣ್ಯ**ವೆಂದು ಕರೆಯುತ್ತಿದ್ದರು. ಈ ದಂಡಕಾರಣ್ಯದಲ್ಲಿ ಮೊದಲು ಬಂದು ಇದ್ದವರೆಂದರೆ **ದ್ರಾವಿಡ** ಜನರು. ಇವರು ಮೂಲತಃ ಹಿಂದುಸ್ಥಾನದ ದಕ್ಷಿಣ ದಿಕ್ಕಿಗೆ ಆಸ್ಟ್ರೇಲಿಯಾದ ವರೆಗೂ ಹಬ್ಬಿ ' ಆದರೆ ಈಗ ಸದ್ಯಕ್ಕೆ ಮಾತ್ರ ಅದರ ಕೆಲವು ಭಾಗವು ಸಮುದ್ರದಲ್ಲಿ

ಕನ್ನಡನಾಡಿನ ಹುಟ್ಟು

ಮುಳುಗಿ ಹೋದಂಥ) ಒಂದು ದೊಡ್ಡ ಭೂಭಾಗದಲ್ಲಿ ಇರುತ್ತಿದ್ದರು. ಆ ಸ್ಥಳದಿಂದ ಹೊರಟು ಈ ದ್ರಾವಿಡರು ದಕ್ಷಿಣದಿಕ್ಕಿನಿಂದ ಹಿಂದುಸ್ಥಾನ ದಲ್ಲಿ ಪ್ರವೇಶಮಾಡಿ, ಇಲ್ಲಿ ಒಕ್ಕಲಾಗಿ ನಿಂತರು. ಆಬಳಿಕ ಮುಂದೆ ಕೆಲವು ಕಾಲವು ಕಳೆದನಂತರ **ಆರ್ಯರು** ಉತ್ತರಧ್ರುವದ ಬಳಿಯ ಪ್ರದೇಶದಿಂದ ಹೊರಟು, ವಾಯುವ್ಯ ದಿಕ್ಕಿನಿಂದ ಹಿಂದುಸ್ಥಾನದೊಳಗೆ ಬಂದರು. ಅವರು ಮೊದಲು ಉತ್ತರ ಹಿಂದುಸ್ಥಾನದಲ್ಲಿ ವಾಸಮಾಡಿ ದರು. ಆಮೇಲೆ ಅವರಲ್ಲಿ ಎಲ್ಲಕ್ಕೂ ಮೊದಲು ಅಗಸ್ತ್ಯ ಋಷಿಗಳು ವಿಂಧ್ಯಪರ್ವತವನ್ನು ದಾಟಿ, ಈ ದಂಡಕಾರಣ್ಯದಲ್ಲಿ ಪ್ರವೇಶಮಾಡಿದರು. ಆ ಋಷಿಗಳು ಬಂದನಂತರ ಆರ್ಯರು ವಿಂಧ್ಯಾದ್ರಿಯನ್ನು ದಾಟಿ, ಮೆಲ್ಲ ಮೆಲ್ಲನೆ ಈ ದಂಡಕಾರಣ್ಯದಲ್ಲಿ ಬಂದು ನೆಲೆಯಾಗಿ ನಿಂತರು. ಆಗ ದಕ್ಷಿಣ ಹಿಂದುಸ್ಥಾನವೆಲ್ಲ ಜನಭರಿತವಾಯಿತು. ಈಮೊದಲೇ ಇಲ್ಲಿಗೆ ಬಂದು ಇದ್ದಂಥ ದ್ರಾವಿಡರೂ ಆರ್ಯರಂತೆ ಸುಧಾರಿಸಿದವರಾದ್ದರಿಂದ ಇವರು, ಆರ್ಯರ ಸುಧಾರಿಸಿದ ಆಚಾರ ವಿಚಾರಗಳನ್ನೂ ಭಾಷೆಯನ್ನೂ ಸ್ವೀಕರಿಸಿದರು. ಹಾಗೆಯೇ ದ್ರಾವಿಡರ ಸುಧಾರಿಸಿದ ಆಚಾರವಿಚಾರ ಗಳನ್ನೂ ಭಾಷೆಯನ್ನೂ ಆ ಆರ್ಯರೂ ಅಂಗೀಕರಿಸಿದರು. ಇಷ್ಟೇ ಅಲ್ಲ, ಎಷ್ಟೋ ಜನ ಆರ್ಯರೂ ದ್ರಾವಿಡರೂ ಪರಸ್ಪರ ವಿವಾಹಸಂಬಂಧವನ್ನೂ ಸಹ ಮಾಡಿದರು. ಆದುದರಿಂದ ಇಲ್ಲಿ **ಆರ್ಯರು, ದ್ರಾವಿಡರು, ಆರ್ಯ-ದ್ರಾವಿಡ ಮಿಶ್ರಕುಲಜವರು** ಎಂಬ ಮೂರು ದೊಡ್ಡ ಪಂಗಡ ಗಳಾದವು. ಮುಂದೆ ಬರಬರುತ್ತ ಕಾಲಾಂತರದಿಂದ ಈ ಮೂರು ಪಂಗಡ ಗಳಲ್ಲಿ ಉದ್ಯೋಗಭೇದದಿಂದ, ಪ್ರಾಂತಭೇದದಿಂದ ಸಾವಿರಾರು ಜಾತಿ ಗಳು ಹುಟ್ಟಿದವು. ಇದೇ ಪ್ರಕಾರ ಈ ದಕ್ಷಿಣ ಹಿಂದುಸ್ಥಾನದಲ್ಲಿ ಎಂದರೆ ಈ ದಂಡಕಾರಣ್ಯದಲ್ಲಿ ಆರ್ಯರೂ ದ್ರಾವಿಡರೂ ಒಟ್ಟುಗೂಡಿದ ನಂತರ ಕೆಲವು ಕಾಲದಮೇಲೆ **ಕರ್ನಾಟಕ**, ಆಂಧ್ರ (ತೆಲುಗುನಾಡು), ದ್ರಾವಿಡ (ತಮಿಳುನಾಡು), ಮಹಾರಾಷ್ಟ್ರ, ಗುರ್ಜರ (ಗುಜರಾಥ) ಮುಂತಾದ ನಾಡುಗಳು ತಲೆದೋರಿದವು. ಹಾಗೆಯೇ ಸಂಸ್ಕೃತಭಾಷೆಯಲ್ಲಿ ಮರಾಠಿ, ಗುಜರಾಥಿ ಮುಂತಾದ ಭಾಷೆಗಳೂ ದ್ರಾವಿಡಭಾಷೆಯಲ್ಲಿ **ಕನ್ನಡ**, ತೆಲುಗು, ತಮಿಳು, ಮಲೆಯಾಳಿ, ತುಳು ಮುಂತಾದ ಭಾಷೆಗಳೂ ಹುಟ್ಟಿದವು.

ದಂಡಕಾರಣ್ಯವು ನಾಶವಾಗುತ್ತ ನಡೆದು, ಆ ಸ್ಥಳದಲ್ಲಿ ಫಲಭರಿತವಾದ ಹೊಲ, ಗದ್ದೆ, ತೋಟಗಳೂ, ಜನಭರಿತವಾದ ಸುಂದರವಾದ ಪಟ್ಟಣಗಳೂ ಹಳ್ಳಿಗಳೂ ಕಂಗೊಳಿಸಹತ್ತಿದವು. ಆ ಪ್ರಾಚೀನ ಕಾಲದಲ್ಲಿ ನಮ್ಮ ಕರ್ನಾಟಕ ದೇಶವು ಕಾವೇರಿ ನದಿಯಿಂದ ಗೋದಾವರಿ ನದಿಯ ವರೆಗೆ ವಿಶಾಲವಾದ ಪ್ರದೇಶದಲ್ಲಿ ಮೆರೆಯುತ್ತಿತ್ತು. ಆ ಪ್ರಾಚೀನ ಕರ್ನಾಟಕದ ಪೇರಿಗಳು ಯಾವವೆಂದರೆ:—



ಉತ್ತರ :— ನಾಸಿಕ, ಪೈಠಣ, ದೇವಗಿರಿ, ಎಲ್ಲಾಪುರ(ವೇರೂಳ), ೭. ಅಜಂತೆ, ವಾಲೂರು, ಮುಧೋಳ(ಜಿಲ್ಲಾ ನಾಂದೇಡ) ಗ್ರಾಮ

ಗಳೂ ಗೋದಾವರಿ ನದಿಯೂ ಪ್ರಾಚೀನ ಕರ್ನಾಟಕದ ಉತ್ತರ ಮೇರೆಯಲ್ಲಿದ್ದವು. ಇವುಗಳಾಚೆಗೆ ಮಹಾರಾಷ್ಟ್ರ ದೇಶವು. **ಪೂರ್ವ**:–ಅಜಂತೆಯಿಂದ ಗೋದಾವರಿ, ಮಂಜೀರ ನದಿಗಳ ಸಂಗಮಸ್ಥಲಕ್ಕೊಂದು ಗೆರೆಯನ್ನೆಳೆದು, ಅಲ್ಲಿಂದ ಕೃಷ್ಣಾ, ತುಂಗಭದ್ರಾ ನದಿಗಳ ಸಂಗಮದ ಮೇಲಿಂದ ಹಾಯಿದು, ಪೂರ್ವಘಟ್ಟದ ವರೆಗೆ ನೆಟ್ಟಗೆ ಗೆರೆಯೊಂದನ್ನು ಎಳೆದರೆ, ಆ ಗೆರೆಯೇ ಸ್ಥೂಲಮಾನದಿಂದ ಪ್ರಾಚೀನ ಕರ್ನಾಟಕದ ಪೂರ್ವ ಮೇರೆಯಾಗುವದು. ಈಮೇರೆಯ ಆಚೆಗೆ ತೆಲುಗು ದೇಶವು. **ದಕ್ಷಿಣ**:—ಹೊಸೂರು, ಕೃಷ್ಣಗಿರಿ, ಕೊಳ್ಳೇಗಾಲ, ಕೊಯಮುತ್ತೂರು ಮುಂತಾದ ಗ್ರಾಮಗಳೂ, ನೀಲಗಿರಿ, ಕೊಡಗು ಪ್ರಾಂತಗಳೂ ಕಾವೇರಿ ನದಿಯೂ ದಕ್ಷಿಣ ಮೇರೆಯಾಗಿ ಕರ್ನಾಟಕದಲ್ಲಿರುತ್ತವೆ. ಇವುಗಳಾಚೆಗೆ ತಮಿಳು ಮಲೆಯಾಳ, ನಾಡುಗಳು. **ಪಶ್ಚಿಮ**:—ಅರಬೀ ಸಮುದ್ರವೇ ಪ್ರಾಚೀನ ಕರ್ನಾಟಕದ ಪಶ್ಚಿಮ ಮೇರೆಯು.

ಪ್ರಾಚೀನ ಕರ್ನಾಟಕ

೯ನೆಯ ಶತಮಾನದಲ್ಲಿ ಆಳುತ್ತಿದ್ದ ರಾಷ್ಟ್ರಕೂಟ ವಂಶದ ಸಾರ್ವಭೌಮರಾಜನಾದ ನೃಪತುಂಗನು ಕನ್ನಡ ಕವಿಯಾಗಿದ್ದನು. ಈತನು ತಾನು ಬರೆದ **ಕವಿರಾಜಮಾರ್ಗ**ವೆಂಬ ಗ್ರಂಥದಲ್ಲಿ ಹೇಳಿದ್ದೇನೆಂದರೆ:—"**ಕಾವೇರಿ** ನದಿಯಿಂದ **ಗೋದಾವರಿ** ನದಿಯ ವರೆಗೆ ವಿಸ್ತಾರವಾದ **ಕರ್ನಾಟಕ** ದೇಶವಿದೆ. ಈ **ಕರ್ನಾಟಕ**ದಲ್ಲಿ, **ಕಿಸುವೊಳಲ** ನಾಡು, **ಕೊಪಣನಗರ**ದ ನಾಡು, **ಪುಲಿಗೆರೆಯ** ನಾಡು, **ಒಂಕುಂದ**ದ ನಾಡು ಎಂಬ ಈ ನಾಲ್ಕು ನಾಡುಗಳು ಕೂಡಿ ಆದಂಥ **ನಟ್ಟನಡುವಿನ ನಾಡು**, ತಿರುಳ್ಗನ್ನಡ ಭಾಷೆಯ ಪ್ರಾಂತವಾಗಿದೆ." **ತಿರುಳ್ಗನ್ನಡ**ವೆಂದರೆ ಶುದ್ಧವಾದ ಕನ್ನಡ ಭಾಷೆಯು. ಅಥವಾ ಅಚ್ಚಕನ್ನಡ ಮಾತು. ಕಿಸುವೊಳಲ ನಾಡಿನಲ್ಲಿ ಎಪ್ಪತ್ತು ಗ್ರಾಮಗಳಿದ್ದವು. ಕೊಪಣನಗರದ ನಾಡಿನಲ್ಲಿ ಹನ್ನೆರಡು ನೂರು ಗ್ರಾಮಗಳಿದ್ದವು. ಪುಲಿಗೆರೆಯ ನಾಡಿನಲ್ಲಿ ಮೂರುನೂರು ಗ್ರಾಮಗಳಿದ್ದವು. ಒಂಕುಂದದ ನಾಡಿನಲ್ಲಿ ಎಷ್ಟು ಗ್ರಾಮಗಳಿದ್ದವೆಂಬುದು

ಅಚ್ಚಕನ್ನಡ ನಾಡು

ಇನ್ನೂ ಗೊತ್ತಾಗಿಲ್ಲ. ಕಿಸುವೊಳಲು ಎಂದರೆ ಈಗಿನ ವಿಜಾಪುರ ಜಿಲ್ಹೆಯಲ್ಲಿ ಬಾದಾಮಿಯ ಈಶಾನ್ಯಕ್ಕೆ ೮ ಮೈಲು ದೂರದಲ್ಲಿರುವ **ಪಟ್ಟದಕಲ್ಲೆಂ**ಬ ಗ್ರಾಮವು. ಕೊಪಣನಗರವೆಂದರೆ ಧಾರವಾಡ ಜಿಲ್ಹೆಯ ಗದಗ ತಾಲೂಕಿಗೆ ಹೊಂದಿದ ನಿಜಾಮ ಸಂಸ್ಥಾನದಲ್ಲಿರುವ **ಕೊಪ್ಪಳ**ವೆಂಬ ಗ್ರಾಮವು. ಪುಲಿಗೆರೆಯೆಂದರೆ ಧಾರವಾಡ ಜಿಲ್ಹೆಯ ಮಧ್ಯದಲ್ಲಿರುವ **ಲಕ್ಷ್ಮೇಶ್ವರ**ವೆಂಬ ಗ್ರಾಮವು. ಒಂಕುಂದವೆಂದರೆ ಧಾರವಾಡ ತಾಲೂಕಿಗೆ ಹೊಂದಿ, ಬೆಳಗಾಂವ ಜಿಲ್ಹೆಯಲ್ಲಿರುವ **ಒಕ್ಕುಂದ**ವೆಂಬ ಗ್ರಾಮವು.

೩ನೆಯ ಪ್ರಕರಣ.

ನಮ್ಮ ತಾಯಿನಾಡಿನ ಸ್ವಾಭಾವಿಕ ಸ್ಥಿತಿಯು.

ಪ್ರತಿಯೊಂದು ಜನಾಂಗದವರು ತಮ್ಮ ತಮ್ಮ ದೇಶಕ್ಕೆ ಮಾತೃಭೂಮಿ, ಅಥವಾ ತಾಯಿನಾಡು ಎಂದು ಕರೆಯುವ ವಾಡಿಕೆಯುಂಟು. ನಮ್ಮ ತಾಯಿನಾಡಾದ ಕರ್ನಾಟಕದೇಶದ ಇತಿಹಾಸವನ್ನು ತಿಳಿದುಕೊಳ್ಳುವದಕ್ಕಿಂತ ಮೊದಲು ಅದರ ಸ್ವಾಭಾವಿಕವಾದ ಸ್ಥಿತಿಯು ಹೇಗೆ ಇರುತ್ತದೆಂಬುದನ್ನು ತಿಳಿದುಕೊಳ್ಳುವದು ಅವಶ್ಯವಾಗಿದೆ. ಏಕೆಂದರೆ, „ತಾಯಿಯಂತೆ ಮಕ್ಕಳು” ಎಂಬ ಪ್ರಸಿದ್ಧವಾದ ಗಾದೆಯ ಮಾತಿನಂತೆ ಆಯಾ ದೇಶಗಳ ಸ್ವಾಭಾವಿಕವಾದ ಪರಿಸ್ಥಿತಿಯ ಪ್ರಕಾರ ಆಯಾ ಜನಾಂಗಗಳ ಸ್ವಭಾವ-ಶೀಲಗಳು, ನಡೆ-ನುಡಿಗಳು, ವ್ಯಾಪಾರ-ಉದ್ಯೋಗಗಳು, ಧರ್ಮಕಾರ್ಯ-ರಾಜಕಾರಣಗಳು ಇರುತ್ತವೆ. ಆದುದರಿಂದ ಮೊದಲು ಕರ್ನಾಟಕ ದೇಶದ ಸ್ವಾಭಾವಿಕ ಸ್ಥಿತಿಯನ್ನು ಅರಿತುಕೊಳ್ಳೋಣ.

ಸ್ವಾಭಾವಿಕವಾಗಿ ಕರ್ನಾಟಕದಲ್ಲಿ ಬೈಲುಸೀಮೆಯೆಂದೂ ಮಲೆನಾಡೆಂದೂ ತೀರಪ್ರದೇಶವೆಂದೂ ಮೂರು ವಿಭಾಗಗಳನ್ನು ಮಾಡಬಹುದು.

ಸ್ವಾಭಾವಿಕ ಭಾಗಗಳು

(೧) **ಬೈಲುಸೀಮೆ**ಯೆಂದು ಕರೆಯಲ್ಪಡುವ ಬಯಲು ಪ್ರದೇಶವು, ತುಂಗಭದ್ರಾ ನದಿಯ ಉತ್ತರದಲ್ಲಿಯೂ ದಕ್ಷಿಣದಲ್ಲಿಯೂ ಇರುವದು. ಉತ್ತರದ ಬೈಲುಪ್ರದೇಶದ ಎತ್ತರವು, ಸುಮಾರು ೧೮೦೦ ಅಡಿಗಳು; ದಕ್ಷಿಣದ ಬೈಲಿನ ಎತ್ತರವು, ೩ ಸಾವಿರ ಅಡಿಗಳು. ಉತ್ತರದ ದೊಡ್ಡಬೈಲು, ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದೆ. ಮತ್ತು ದಕ್ಷಿಣದ ಬೈಲು ಪಶ್ಚಿಮಕ್ಕೂ ದಕ್ಷಿಣಕ್ಕೂ

ಎತ್ತರವಿದೆ; ಪೂರ್ವಕ್ಕೂ ಉತ್ತರಕ್ಕೂ ಇಳಕಲಾಗಿದೆ. (೨) ಪಶ್ಚಿಮಘಟ್ಟದ ಮೇಲಿನ ಗುಡ್ಡಗಳೂ ಹಾಗೂ ಅವುಗಳ ಸುತ್ತಮುತ್ತಲೂ ಹಬ್ಬಿರುವ ಹಳುವುಗಳೂ ಇರುವಂಥ ಪ್ರದೇಶಕ್ಕೆ '**ಮಲೆನಾಡು**' ಎಂಬ ಹೆಸರು. (೩) ಸಹ್ಯಾದ್ರಿಗೂ ಸಮುದ್ರಕ್ಕೂ ನಡುವೆ ಇರುವ ಕೊಂಕು ಕೊಂಕಾದ ಪ್ರದೇಶಕ್ಕೆ **ಕೊಂಕಣ** ಅಥವಾ **ತೀರಪ್ರದೇಶ**ವೆಂಬೆನ್ನುತ್ತಾರೆ.

ಪಶ್ಚಿಮದಲ್ಲಿ ಸಹ್ಯಾದ್ರಿಯು; ದಕ್ಷಿಣದಲ್ಲಿ ನೀಲಗಿರಿಯು; ಆಗ್ನೇಯದಲ್ಲಿ ಪೂರ್ವಘಟ್ಟದ ಕೆಲವು ಭಾಗಗಳು. ಕರ್ನಾಟಕದಲ್ಲಿ ಬೆಟ್ಟಗಳು

ಬೆಟ್ಟಗಳು

ಇಷ್ಟೇ ಸರಿ. ಹೆಚ್ಚಾಗಿ ಇಲ್ಲ. **ಸಹ್ಯಾದ್ರಿಯ** ಸಾಲು ದಕ್ಷಿಣೋತ್ತರವಾಗಿ ಎಡೆಬಿಡದೆ ಹಬ್ಬಿದೆ. ಇದರ ಎತ್ತರವು ಸುಮಾರು ೩ ಸಾವಿರ ಅಡಿಗಳು. ಇದರ ದಕ್ಷಿಣದ ಸಾಲಿನಲ್ಲಿ ೬ ಸಾವಿರ ಅಡಿಗಳಿಗಿಂತಲೂ ಎತ್ತರವಾಗಿ ಹೋಗಿರುವ ಒಂದೆರಡು ಶಿಖರಗಳು ಮಾತ್ರ ಇವೆ. ಈ ಸಹ್ಯಾದ್ರಿಯ ಮೇಲೆ ಬಲು ದಟ್ಟವಾದ ಅರಣ್ಯವಿದೆ. **ನೀಲಗಿ**ರಿಯು ಪಶ್ಚಿಮಘಟ್ಟದ ದಕ್ಷಿಣ ತುದಿಯಿಂದ ಪೂರ್ವಘಟ್ಟದ ವರೆಗೆ ಹಬ್ಬಿದೆ. ಎಂದರೆ ಪಶ್ಚಿಮಘಟ್ಟವನ್ನೂ ಪೂರ್ವಘಟ್ಟವನ್ನೂ ಈ ನೀಲಗಿರಿಯು ಒಂದುಗೂಡಿಸುತ್ತದೆ. ೮೬೭೦ ಅಡಿಗಳ ಎತ್ತರವಿರುವಂಥ ಶಿಖರವುಳ್ಳ ದೊಡ್ಡ ಪರ್ವತವೆಂದರೆ, ಕರ್ನಾಟಕದಲ್ಲಿ ಇಷ್ಟೇ ಅಲ್ಲ ದಕ್ಷಿಣ ಹಿಂದುಸ್ಥಾನದಲ್ಲಿ ಈ ನೀಲಗಿರಿಯೊಂದೇ ಸರಿ. ಸಹ್ಯಾದ್ರಿಯಂತೆ ನೀಲಗಿರಿಯ ಮೇಲೆ ದಟ್ಟವಾದ ಅರಣ್ಯವಿಲ್ಲ. ಆದುದರಿಂದ ಈ ಪರ್ವತದ ಮೇಲಿನ ಹವೆಯು ಬಹು ಆರೋಗ್ಯಕರವಾಗಿದೆ. **ಪೂರ್ವಘಟ್ಟ**ಗಳು, ನೀಲಗಿರಿಗೆ ಈಶಾನ್ಯದಿಕ್ಕಿಗೆ ಹಬ್ಬಿವೆ. ಇವು ಸಹ್ಯಾದ್ರಿಯಂತೆ ಎಡೆಬಿಡದೆ ಹಬ್ಬಿರದೆ, ಅಲ್ಲಲ್ಲಿ ಒಡೆದೊಡೆದು ಹಬ್ಬಿವೆ. ಮೇಲಾಗಿ ಅದರಂತೆ ಎತ್ತರವಾಗಿಯೂ ಇಲ್ಲ. ಮತ್ತು ದಟ್ಟವಾದ ಅರಣ್ಯಗಳಿಂದಲೂ ಕೂಡಿರದೆ ಬೋಳಾಗಿಯೇ ಇರುತ್ತವೆಂದು ಹೇಳಬಹುದು.

ಕರ್ನಾಟಕದಲ್ಲಿ **ಗೋದಾವರಿ, ಮಂಜೀರಾ, ಭೀಮಾ, ಕೃಷ್ಣಾ, ತುಂಗಭದ್ರಾ, ಘಟಪ್ರಭಾ, ಮಲಪ್ರಭಾ, ಡೋಣಿ,**


ವರದಾ, ಧರ್ಮಾ, ಕುಮುದ್ವತಿ, ಶಾಲ್ಮಲಾ, ಶರಾವತಿ, ಕಾವೇರಿ, ಪಾಲಾರು, ಪೆನ್ನಾರು, ವೇದಾವತಿ, ಹೇಮಾವತಿ, ಅರ್ಕಾವತಿ, ಲಕ್ಷ್ಮಣತೀರ್ಥ, ಕಪಿಲಾನದಿ, ಹೊನ್ನುಹೊಳೆ ಮುಂತಾದ ಸಣ್ಣವೂ ದೊಡ್ಡವೂ ಹಲವು ನದಿಗಳು ಇವೆ.

ನದಿಗಳು

ಉತ್ತರ ಕರ್ನಾಟಕದ ಬ್ರಾಹ್ಮಣರು, ಈಗಲೂ ಪ್ರತಿದಿವಸ ಸಂಕಲ್ಪವನ್ನು ಮಾಡುವಾಗ, ಗೋದಾವರಿ ನದಿಯನ್ನು ಹೇಳಿ, ಅದರ ದಕ್ಷಿಣತೀರದಲ್ಲಿ ಇದ್ದೇವೆಂದು ಹೇಳುತ್ತಾರೆ. ಕರ್ನಾಟಕದಲ್ಲಿ ಗೋದಾವರಿ ನದಿಗೆ ಇದ್ದಷ್ಟು ಮಹತ್ವವು ಇನ್ನಾವ ನದಿಗೂ ಇಲ್ಲ. ಆದ್ದರಿಂದ ಕನ್ನಡಿಗರು ಗೋದಾವರಿ ನದಿಯನ್ನು ಇನ್ನೂ ಮರೆತಿಲ್ಲ. ಈ ನದಿಗೆ ಕೂಡತಕ್ಕ ಉಪನದಿಗಳಲ್ಲಿ ಮುಖ್ಯವಾದದ್ದೆಂದರೆ, ಮಂಜೀರಾ ನದಿಯೇ ಸರಿ. ಗೋದಾವರಿಯ ತರುವಾಯ ಕೃಷ್ಣಾನದಿಯೇ ಮಹತ್ವವಾದದ್ದು. ಪ್ರಾಚೀನಕಾಲದ ಇದರ ಹೆಸರು **ಪೆದೊರ್ರೆ** ಎಂದು ಇದೆ. ಪೆದೊರ್ರೆಯೆಂದರೆ ಹಿರಿಯ ಹೊಳೆ, ಈ ಹೆಸರಿನಿಂದ ಕೃಷ್ಣಾನದಿಯನ್ನು ಈಗಲೂ ಕರೆಯುತ್ತಾರೆ. ಕಪ್ಪಾದ ಎರೆ ಭೂಮಿಯೊಳಗೆ ಹರಿಯುವದರಿಂದ ಈ ಹೊಳೆಗೆ "ಕೃಷ್ಣಾ-ನದಿ" (ಎಂದರೆ ಕಪ್ಪುಹೊಳೆ) ಎಂಬ ಹೆಸರು ಬಂದಿದೆ. ಗೋದಾವರಿ, ಕೃಷ್ಣಾ, ಕಾವೇರಿ, ಪೆನ್ನಾರು, ಪಾಲಾರು ಈ ಐದು ನದಿಗಳು ಪೂರ್ವದಿಕ್ಕಿಗೆ ಹರಿದು ಬಂಗಾಲದ ಉಪಸಾಗರಕ್ಕೆ ಕೂಡುತ್ತವೆ. ಕೃಷ್ಣಾನದಿಗೆ ಭೀಮಾ, ತುಂಗಭದ್ರಾ, ಘಟಪ್ರಭಾ, ಮಲಪ್ರಭಾ, ಡೋಣಿ ನದಿಗಳು ಕೂಡುತ್ತವೆ. ಇದೇ ರೀತಿ ತುಂಗಭದ್ರಾ ನದಿಗೆ ವರದಾ, ಕುಮುದ್ವತಿ, ವೇದಾವತಿ ನದಿಗಳೂ, ವರದಾ ನದಿಗೆ ಧರ್ಮಾ ನದಿಯೂ ಕೂಡುತ್ತ ಕೊನೆಗೆ ಎಲ್ಲವೂ ಕೃಷ್ಣಾನದಿಯಲ್ಲಿ ಸೇರುತ್ತವೆ. ಹಾಗೆಯೇ ಹೇಮಾವತಿ, ಅರ್ಕಾವತಿ, ಲಕ್ಷ್ಮಣತೀರ್ಥ, ಕಪಿಲಾನದಿ, ಹೊನ್ನುಹೊಳೆ ಮುಂತಾದ ಹೊಳೆಗಳು ಕಾವೇರಿನದಿಗೆ ಕೂಡುತ್ತವೆ. ಇವೆಲ್ಲ ನದಿಗಳು ಪೂರ್ವಕ್ಕೆ ಹರಿಯುತ್ತವೆ. ಪಶ್ಚಿಮಕ್ಕೆ ಹರಿದು ಅರಬೀ ಸಮುದ್ರಕ್ಕೆ ಕೂಡುವ ನದಿಗಳಲ್ಲಿ ಶರಾವತಿ, ಶಾಲ್ಮಲಾ ಇವೇ ಎರಡು ಹೊಳೆಗಳು ತಕ್ಕಮಟ್ಟಿಗೆ ದೊಡ್ಡವು. ಮಿಕ್ಕವು ತೀರ ಚಿಕ್ಕ ಹೊಳೆಗಳು.

ಜಲಪಾತಗಳು

(೧) **ಜೋಗ ಜಲಪಾತವು**:— ಗೇರಸೊಪ್ಪೆಯ ಪೂರ್ವಕ್ಕೆ ೧೮ ಮೈಲುಗಳ ಮೇಲೆ **ಶರಾವತಿ** ನದಿಯ ಪ್ರವಾಹವು ನಾಲ್ಕು ಎಸಳುಗಳಾಗಿ **೯೦೦ ಅಡಿ** ಆಳವಾದ ತಗ್ಗಿನೊಳಗೆ ಬೀಳುತ್ತದೆ. ಇದಕ್ಕೆ ಜೋಗ ಜಲಪಾತ ಅಥವಾ **ಗೇರಸೊಪ್ಪೆಯ ತಡಸಲು** ಎಂದೆನ್ನುತ್ತಾರೆ. ಇಂಥ ಪ್ರಚಂಡವಾದ ಜಲಪಾತವು ಪೃಥ್ವಿಯಲ್ಲಿ ಮತ್ತೊಂದಿಲ್ಲ. ಅದ್ಭುತವಾದ ಈ ಜಲಪಾತವನ್ನು ನೋಡುವದಕ್ಕೆ ದೂರದೂರ ದೇಶಗಳ ಜನರು ಬರುತ್ತಾರೆ. (೨) **ಉಂಛಲಿಯ ಜಲಪಾತವು**:—ಉತ್ತರ ಕನ್ನಡ ಜಿಲ್ಹೆಯಲ್ಲಿ ಸಿದ್ದಾಪುರದ ಈಶಾನ್ಯಕ್ಕೆ ೧೨ ಮೈಲಿನ ಮೇಲೆ ಉಂಛಲಿಯೆಂಬ ಹಳ್ಳಿಯ ಬಳಿಯಲ್ಲಿ **ತದಡೀ** ಹೊಳೆಯು ಸಹ್ಯಾದ್ರಿಯ ಮೇಲಿಂದ **೪೦೦ ಅಡಿ** ಆಳವಾದ ತಗ್ಗಿನಲ್ಲಿ ಬೀಳುತ್ತದೆ. ಇದರ ಸುತ್ತುಮುತ್ತಲಿನ ಅಡಿಕೆಯ ತೋಟಗಳಿಂದಲೂ ನಾನಾತರದ ಭವ್ಯವಾದ ವೃಕ್ಷಗಳಿಂದಲೂ ಈ ಜಲಪಾತವು ಬಹು ಚಂದಕಾಣಿಸುತ್ತದೆ. (೩) **ಲಾಳಗುಳಿಯ ಜಲಪಾತವು**:— ಉತ್ತರಕನ್ನಡ ಜಿಲ್ಹೆಯಲ್ಲಿ ಎಲ್ಲಾಪುರದ ಉತ್ತರಕ್ಕೆ ೮ ಮೈಲಿನ ಮೇಲೆ ಲಾಳಗುಳಿಯೆಂಬ ಹಳ್ಳಿಯ ಬಳಿಯಲ್ಲಿ **ಕಾಳೀ** ನದಿಯು, ಸಹ್ಯಾದ್ರಿಯ ಇಳಕಲಿನ ಮೇಲಿಂದ ಹರಿಯುತ್ತ ಸುಮಾರು **೩೦೦ ಅಡಿ** ಕೆಳಗಿಳಿಯುತ್ತದೆ. ಈ ನದಿಯು ಪಾವಟಿಗೆಗಳಂಥ ಪ್ರದೇಶದ ಮೇಲಿಂದ ಹರಿಯುತ್ತಿ



ಗೇರಸೊಪ್ಪೆಯ ತಡಸಲು

ರುವದರಿಂದ ಅಲ್ಲಲ್ಲಿಗೆ೧೨–೨೦ ಅಡಿ ಎತ್ತರವಾದ ಪ್ರದೇಶಗಳ ಮೇಲಿಂದ ಬೀಳುತ್ತ ಅನೇಕ ಸಣ್ಣ ಸಣ್ಣ ತಡಸಲುಗಳನ್ನುಂಟು ಮಾಡಿದೆ. ಆದ್ದರಿಂದ ಈ ತಡಸಲುಗಳ ಸಾಲು ಬಹು ರಮಣೀಯವಾಗಿ ಕಾಣುತ್ತದೆ. (೪) **ಮಾಗೋಡದ ಜಲಪಾತವು**:—ಇದೇ ಎಲ್ಲಾಪುರ ತಾಲೂಕಿನಲ್ಲಿ ಮಾಗೋಡೆಂಬ ಹಳ್ಳಿಯ ಹತ್ತರ **ಗಂಗಾವಳಿ** ನದಿಯು, ಕಾಳೀ ನದಿಯಂತೆಯೇ ಪಾವಟಿಗೆಗಳಂಥ ಇಳಕಲಿನ ಪ್ರದೇಶದಲ್ಲಿ ಹರಿಯುತ್ತ **೮೦೦ ಅಡಿ** ಕೆಳಗಿಳಿದು ಹೋಗಿದೆ. ಇದು, ೧೮೦ ರಿಂದ ೨೦೦ ಅಡಿ ಎತ್ತರವಾದ ಪ್ರದೇಶಗಳ ಮೇಲಿಂದ ಬೀಳುತ್ತ ಹೋಗಿರುವದರಿಂದ ಲಾಳಗುಳಿಯ ತಡಸಲುಗಳಿಗಿಂತ ಈ ತಡಸಲುಗಳು ಹೆಚ್ಚು ಭವ್ಯವಾಗಿಯೂ ಸುಂದರವಾಗಿಯೂ ಕಾಣುತ್ತವೆ. (೫) **ಗೋಕಾವಿಯ ಜಲಪಾತವು**:—ಬೆಳಗಾಂವ ಜಿಲ್ಹೆಯಲ್ಲಿ ಗೋಕಾಕ ಗ್ರಾಮದ ವಾಯುವ್ಯಕ್ಕೆ ೩ ಮೈಲಿನ ಮೇಲೆ **ಘಟಪ್ರಭಾ**ನದಿಯು **೧೮೦ ಅಡಿ** ಆಳವಾದ ತಗ್ಗಿನಲ್ಲಿ ಬೀಳುತ್ತದೆ. (೬) **ಶಿವನಸಮುದ್ರದ ಜಲಪಾತವು**:— ಮೈಸೂರ ಸಂಸ್ಥಾನದಲ್ಲಿ ಶಿವನಸಮುದ್ರದ ಹತ್ತರ **ಕಾವೇರಿ** ನದಿಯು, ಎರಡು ಎಸಳುಗಳಾಗಿ, **ಗಗನಚಕ್ಕಿ, ಭರಚಕ್ಕಿ** ಎಂಬ ಎರಡುಕಡೆ **೩೦೦ ಅಡಿ** ಆಳವಾದ ತಗ್ಗಿನಲ್ಲಿ ಬೀಳುತ್ತದೆ.

ವಾಯುಗುಣ

ಬೈಲುಸೀಮೆಯಷ್ಟು ಆರೋಗ್ಯಕರವಾದ ಪ್ರದೇಶವು ಯಾವದೂ ಇಲ್ಲ. ಇಲ್ಲಿಯ ಜನರು ವಾಡಿಕೆಯಾಗಿ ನಿರೋಗಿಗಳಾಗಿರುತ್ತಾರೆ. ಮಲೆನಾಡಿನ ನೀರೂ ಹವೆಯೂ ರೋಗಕರವಾಗಿರುತ್ತವೆ. ಇಲ್ಲಿ ಚಳಿಯು ಬಹಳ. ಘಟ್ಟದ ಕೆಳಗೆ ಎಂದರೆ ತೀರಪ್ರದೇಶದಲ್ಲಿ ಶಕೆಯು ಬಹಳವಾಗಿದ್ದರೂ ಜನರು ಆರೋಗ್ಯದಿಂದ ಬಾಳುತ್ತಾರೆ. ಮಲೆನಾಡಿನಲ್ಲಿಯೂ ತೀರಪ್ರದೇಶದಲ್ಲಿಯೂ ಮಳೆಯು ಬಹಳ ಆಗುವದರಿಂದ ಅಲ್ಲಿಯ ಜನರು ಹಂಚಿನ ಮನೆಯಲ್ಲಿ ಅಥವಾ ಹುಲ್ಲಿನ ಗುಡಿಸಲಿನಲ್ಲಿ ಇರುತ್ತಾರೆ. ಬೈಲುಸೀಮೆಯಲ್ಲಿ ಮಳೆಯು ಕಡಿಮೆಯಾಗುವದರಿಂದ ಇಲ್ಲಿಯ ಜನರು ಮಣ್ಣಿನ ಮಾಳಿಗೆಯ ಮನೆಯಲ್ಲಿ ಇಲ್ಲವೆ ಕಲ್ಲಿನ ಮಾಳಿಗೆಯ ಮನೆಯಲ್ಲಿ ವಾಸಮಾಡುತ್ತಾರೆ.

ಮಲೆನಾಡಿನಲ್ಲಿಯೂ ತೀರಪ್ರದೇಶದಲ್ಲಿಯೂ ಕೆಂಪು ನೆಲವು ಇದೆ. ಇಂಥ ನೆಲಕ್ಕೆ ಮಳೆಯು ಬಹಳಬೇಕು. ಬಾಳೆ, ಹಲಸು, ತೆಂಗು, ಅಡಿಕೆ, ಯಾಲಕ್ಕಿ, ಮೆಣಸು ಮುಂತಾದ ಪದಾರ್ಥಗಳನ್ನು ಬೆಳೆಯುವ ತೋಟಗಳು, ಈ ಎರಡೂ ನಾಡುಗಳಲ್ಲಿ ಇರುತ್ತವೆ. ಭತ್ತ, ಕಬ್ಬು ಮುಂತಾದ್ದನ್ನು ಬೆಳೆಯುವ ಗದ್ದೆಯ ಹೊಲಗಳು ಮಾತ್ರ ತೀರಪ್ರದೇಶಕ್ಕಿಂತ ಮಲೆನಾಡಿನಲ್ಲಿ ಹೆಚ್ಚು. ಮಲೆನಾಡಿನ ಅರಣ್ಯದಲ್ಲಿ ತೇಗು, ಹೆದ್ದೇಗು, ಸಿಸುವು, ಮತ್ತಿ, ದಿಂಡಲ, ದಾಲಚಿನ್ನಿ, ಶ್ರೀಗಂಧ, ಸುರಹೊನ್ನೆ, ಹೊನ್ನಿ, ಹೆಬ್ಬಲಸು ಮುಂತಾದ ಬಹು ಬೆಲೆಯುಳ್ಳ ವೃಕ್ಷಗಳು ಹೇರಳವಾಗಿ ಬೆಳೆಯುತ್ತವೆ. ಮತ್ತು ಇಲ್ಲಿ ಉತ್ತಮವಾದ ಬಿದರು ವಿಶೇಷವಾಗಿ ಬೆಳೆಯುತ್ತದೆ. ಈ ಕಾಡಿನಲ್ಲಿ ದಟ್ಟವಾಗಿ ಹಬ್ಬಿದ ಬಿದರಿನ ಮೆಳೆಗಳನ್ನು ಅಲ್ಲಲ್ಲಿಗೆ ನೋಡಬಹುದು. ಈ ಅಡವಿಯಲ್ಲಿ ಹುಲಿ, ಕಿರಬು, ಕರಡಿ, ಕಾಡಹಂದಿ ಮುಂತಾದ ಕ್ರೂರ ಪಶುಗಳು ಹೆಚ್ಚಾಗಿವೆ. ಮೈಸೂರ ಪ್ರಾಂತದ ಮಲೆನಾಡಿನ ಅರಣ್ಯದಲ್ಲಿ ಆನೆಗಳು ವಿಶೇಷವಾಗಿವೆ. ಮಲೆನಾಡಿನಲ್ಲಿ ಎತ್ತು, ಕೋಣ, ಎಮ್ಮೆ, ಆಕಳು ಮುಂತಾದ ಪ್ರಾಣಿಗಳು, ಬೈಲುಸೀಮೆಯ ದನಗಳಂತೆ ಕಸುವುಳ್ಳವುಗಳಲ್ಲ. ಘಟ್ಟದ ಕೆಳಗೆ ಕುದುರೆಗಳು ಇಲ್ಲಿಂವರೂ ಸಲ್ಲುವದು. ಬೈಲುಸೀಮೆಯಲ್ಲಿ ಎರೆಭೂಮಿಯೊಳಗೆ ಬಿಳಿಜೋಳ ಗೋದಿ, ಹತ್ತಿ, ತೊಗರೆ ಮುಂತಾದ ಮುಖ್ಯ ಪೈರುಗಳೂ ಕಡಲೆ, ಹೆಸರು, ಉದ್ದು, ಹುರಳಿ, ಕುಸಿಬೆ, ಅಗಸಿ ಮೊದಲಾದ ಅಕ್ಕಡೀಕಾಳುಗಳೂ ಬೆಳೆಯುತ್ತವೆ. ಮಸಾರೆ ಭೂಮಿಯಲ್ಲಿ ಕೆಂಜೋಳ, ರಾಗಿ, ಸಾವಿ, ಗುರೆಳ್ಳು, ಎಳ್ಳು, ಮಡಿಕೆ, ನೆಲಗಡಲೆ ಮುಂತಾದ ಧಾನ್ಯಗಳು ಹುಟ್ಟುತ್ತವೆ. ತೋಟಗಳಲ್ಲಿ ವೀಳೆಯದೆಲೆಯ ಬಳ್ಳಿಗಳೂ, ಕಬ್ಬು, ಬಾಳೆ, ಲಿಂಬಿ, ದ್ರಾಕ್ಷೆ, ಅಂಜೀರ, ದಾಳಿಂಬ, ಕಿತ್ತಳೆ, ಮಾವು, ಹುಣಸೆ ಮುಂತಾದ ಫಲವೃಕ್ಷಗಳು ಬೆಳೆಯುತ್ತವೆ. ಬೈಲುಸೀಮೆಯ ಎತ್ತು, ಕೋಣ, ಎಮ್ಮೆ, ಆಕಳುಗಳು ಬಹು ಚನ್ನಾಗಿರುತ್ತವೆ. ಭೀಮಾ ನದಿಯ ತೀರದ ಕುದುರೆಗಳು ಬಹಳೇ ಹೆಸರಾದವು. ಬೈಲುಸೀಮೆಯಲ್ಲಿ ಗಿಡಗಳಂತೂ ಕಡಿಮೆ; ಇಲ್ಲಿಯ ದೊಡ್ಡ ಮರಗಳೆಂದರೆ, ಜಾಲಿ, ಬೇವು, ಆಲದಮರ ಇವೇ ಸರಿ.

ಭೂಮಿಯ ಗುಣ ಮತ್ತು ಬೆಳೆಗಳು



ಬೈಲುಸೀಮೆಯ ಹೊಲಗಳಲ್ಲಿ ಚಿಗರೆಗಳು ಹಿಂಡು ಕಟ್ಟಿಕೊಂಡು ತಿರು
ತ್ತಿರುತ್ತವೆ.

ಕರ್ನಾಟಕದಲ್ಲಿ ಚಿನ್ನ, ತಾಮ್ರ, ಕಬ್ಬಿಣ ಮುಂತಾದ ಧಾತುಗಳ ಖನಿಗಳೂ ಉತ್ತಮವಾದ ಕಲ್ಲಿನ ಕಣಿಗಳೂ ವಿಶೇಷವಾಗಿವೆ. ಮೈಸೂರು ಪ್ರಾಂತದಲ್ಲಿ ಚಿನ್ನವೂ ಕಬ್ಬಿಣವೂ ಹೇರಳವಾಗಿ ದೊರೆಯುತ್ತವೆ ನೀಲಗಿರಿಯಲ್ಲಿ ತಾಮ್ರದ ಖನಿಗಳುಂಟು. ವಿಜಾಪುರ ಪ್ರಾಂತದಲ್ಲಿ ಸ್ಲೇಟಿನಕಲ್ಲುಗಳೂ ಕಲಬುರ್ಗಿಯ ನಾಡಿನಲ್ಲಿ ಹಲಗೆಗಲ್ಲುಗಳೂ ವಿಪುಲವಾಗಿ ದೊರೆಯುತ್ತವೆ. ಆದುದರಿಂದ ಕಲಬುರ್ಗಿಯ ಪ್ರಾಂತದಲ್ಲಿ ಮನೆಯ ಮಾಳಿಗೆಗೆ ಕಲ್ಲಿನ ಹಲಗೆಗಳನ್ನು ಜೋಡಿಸಿರುತ್ತಾರೆ.

ಖನಿಜಗಳು

೪ನೆಯ ಪ್ರಕರಣ

ಪ್ರಾಚೀನಕಾಲದ ಇತಿಹಾಸವು

(ಕ್ರಿಸ್ತಪೂರ್ವ ೩೨೨ರಿಂದ ಕ್ರಿಸ್ತವರ್ಷದ ೫೦೦ರ ವರೆಗೆ)



ಬೌದ್ಧಧರ್ಮದ ಸ್ಥಾಪಕನಾದ **ಗೌತಮ ಬುದ್ಧನು** ಕ್ರಿ. ಪೂ. ೬೨೩ರಲ್ಲಿ ಹುಟ್ಟಿದನು. ಅಂದಿನಿಂದ ಇತಿಹಾಸ ಕಾಲವು[೧] ಪ್ರಾರಂಭವಾಯಿತೆಂದು ಪಂಡಿತರು ತಿಳಿಯುತ್ತಾರೆ. ಈ ಆರಂಭಕಾಲದಲ್ಲಿಯ ಮೂರು ಶತಮಾನಗಳ ಎಂದರೆ ಮೂರು ನೂರು ವರ್ಷಗಳ ಕರ್ನಾಟಕದ ಇತಿಹಾಸವು ಚನ್ನಾಗಿ ಗೊತ್ತಾಗಿರುವದಿಲ್ಲ. ಮುಂದೆ ಕ್ರಿ. ಪೂ. ೩೨೨ರಲ್ಲಿ ಮೌರ್ಯ ಸಾಮ್ರಾಜ್ಯವು ಸ್ಥಾಪಿಸಲ್ಪಟ್ಟಿತು.

---

೧ ಇತಿಹಾಸಶಾಸ್ತ್ರಜ್ಞರು ಕಾಲವನ್ನು-ವೇದಕಾಲ ಪುರಾಣಕಾಲ, ಇತಿಹಾಸಕಾಲ ಎಂದು ಮೂರು ಭಾಗಗಳನ್ನು ಮಾಡಿದ್ದಾರೆ

ಮೌರ್ಯಸಾಮ್ರಾಜ್ಯವು

(ಕ್ರಿ. ಪೂ ೩೨೨ರಿಂದ ಕ್ರಿ. ಪೂ. ೧೮೫ರ ವರೆಗೆ)

ಮೌರ್ಯಸಾಮ್ರಾಜ್ಯದ ಸ್ಥಾಪಕನಾದ **ಚಂದ್ರಗುಪ್ತನು**, **ನಂದ** ಸಾಮ್ರಾಜ್ಯವನ್ನು ಹಾಳುಮಾಡಿ, ಮಗಧರಾಜ್ಯದ ಚಕ್ರವರ್ತಿಯಾದನು.

ಚಂದ್ರಗುಪ್ತ

ಈ ಮೌರ್ಯಸಾಮ್ರಾಜ್ಯಕ್ಕೆ ನಮ್ಮ ಕನ್ನಡನಾಡು ಒಳ ಪಟ್ಟಿತ್ತು. ಆಕಾಲಕ್ಕೆ ಜೈನರ ೫ನೆಯ ಶ್ರುತಕೇವಲಿಯಾದ **ಭದ್ರಬಾಹುವೆಂ**ಬ ಮುನಿಗಳು, ಉತ್ತರದೇಶದಲ್ಲಿ ೧೨ ವರ್ಷಗಳ ದೊಡ್ಡ ಬರಗಾಲವುಂಟಾಗುವದೆಂಬ ಭವಿಷ್ಯವನ್ನು ತಿಳಿದು, ಅದನ್ನು ತಮ್ಮ ಶಿಷ್ಯರಿಗೆಲ್ಲ ಹೇಳಿದರು. ಆಗ ೧೨ ಸಾವಿರ ದಿಗಂಬರ ಜೈನರು, ಭದ್ರಬಾಹುವಿನ ಸಂಗಡ ಕರ್ನಾಟಕ ದೇಶಕ್ಕೆ ಬರುವದಕ್ಕೋಸ್ಕರ ಹೊರಟರು. ಆಸಮಯದಲ್ಲಿ ಸಾರ್ವಭೌಮನಾದ **ಚಂದ್ರಗುಪ್ತನು**, ವೈರಾಗ್ಯದಿಂದ ಭದ್ರಬಾಹುವಿನ ಶಿಷ್ಯನಾಗಿ ಅವರ ಜೊತೆಗೆ ತಾನೂ ಹೊರಟನು. ಬಳಿಕ ಇವರೆಲ್ಲರೂ ದಕ್ಷಿಣ ಕರ್ನಾಟಕದಲ್ಲಿರುವ (ಎಂದರೆ ಮೈಸೂರು ಪ್ರಾಂತದ ಹಾಸನ ಜಿಲ್ಹೆಯಲ್ಲಿರುವ) **ಶ್ರವಣಬೆಳ್ಗೊಳಕ್ಕೆ** ಬಂದರು.

ಈ ಕ್ಷೇತ್ರದಲ್ಲಿ ಭದ್ರಬಾಹುವಿಗೆ ಜ್ವರಬಂದದ್ದರಿಂದ ತನಗೆ ಮರಣಕಾಲವು ಸಮೀಪಿಸಿತೆಂದು ತಿಳಿದು, ಆತನು ತನ್ನ ಶಿಷ್ಯರಿಗೆ ಕರ್ನಾಟಕದಲ್ಲಿ ತೀರ ದಕ್ಷಿಣಕ್ಕಿದ್ದ **ಪುನ್ನಾಟ**ರಾಜ್ಯಕ್ಕೆ ಹೋಗಿರೆಂದು ಅಪ್ಪಣೆಯನ್ನು ಮಾಡಿದನು. ಆದರೆ ಚಂದ್ರಗುಪ್ತನು ಒಬ್ಬನು ಮಾತ್ರ ಕೊನೆಯುವರೆಗೂ ಶ್ರವಣಬೆಳ್ಗೊಳದಲ್ಲಿಯೇ ಇದ್ದು, ಗುರುವಿನ ಆರೈಕೆಯನ್ನು ಮಾಡಿದನು. ಆದರೆ ಮುಂದೆ ತುಸು ದಿವಸಗಳಲ್ಲಿಯೇ ಭದ್ರಬಾಹುಮುನಿಗಳು ನಿರ್ಯಾಣವನ್ನು ಹೊಂದಿದರು. ತರುವಾಯ ಚಂದ್ರಗುಪ್ತನು ಅಲ್ಲಿಯೇ ಗುರುಗಳ **ಪಾದಚಿಹ್ನ**ಗಳನ್ನು (ಎಂದರೆ ಹೆಜ್ಜೆಗಳನ್ನು) ಪೂಜಿಸುತ್ತ ೧೨ ವರ್ಷಗಳ ವರೆಗೆ ತಪಶ್ಚರ್ಯೆಯನ್ನು ಮಾಡಿ, ಸಲ್ಲೇಖನ ವ್ರತದಿಂದ ತಾನೂ ಮರಣಹೊಂದಿದನು. (ಕ್ರಿ. ಪೂ. ೨೯೮) ಈ ಶ್ರವಣಬೆಳ್ಗೊಳದಲ್ಲಿ ಭದ್ರಬಾಹುವಿನ ಪಾದಚಿಹ್ನಗಳೂ "**ಭದ್ರಬಾಹುಗುಹೆ**" ಎಂಬ ಗವಿಯೂ, **ಚಂದ್ರಗುಪ್ತನಬಸದಿಯೂ** ಈಗಲೂ ಇರುತ್ತವೆ.

ಶ್ರವಣ-ಬೆಳ್ಗೊಳ

ಚಂದ್ರಗುಪ್ತನ ನಂತರ ಆತನ ಮಗನಾದ **ಬಿಂದುಸಾರನು** ಮಗಧ ರಾಜ್ಯದ ಸಿಂಹಾಸನವನ್ನೇರಿದನು. ಆದರೆ ಈತನಲ್ಲಿ ಹೊಗಳತಕ್ಕಂಥ ಗುಣಗಳೇನೂ ಇದ್ದಿಲ್ಲ. ಈತನ ತರುವಾಯ ಇವನ ಮಗನಾದ ಸುಪ್ರಸಿದ್ಧನಾದ **ಅಶೋಕನು** ಸಾರ್ವಭೌಮನಾದನು. (ಕ್ರಿ. ಪೂ. **೨೭೨**) ಇವನು ಮೊದಲು ತಂದೆ, ಅಜ್ಜಂದಿರಂತೆ ಜೈನಮತಸ್ಥನಾಗಿಯೇ ಇದ್ದನು. ಮುಂದೆ ಈತನು ಕಲಿಂಗ ದೇಶಕ್ಕೆ ದಂಡೆತ್ತಿಹೋಗಿ ಬಂದನಂತರ ಬೌದ್ಧಧರ್ಮವನ್ನು ಸ್ವೀಕರಿಸಿದನು. ಇಷ್ಟೇ ಅಲ್ಲ, ಈ ಮಹಾಪುರುಷನು ಬೌದ್ಧಧರ್ಮವು ಪೃಥ್ವಿಯ ಮೇಲೆಲ್ಲ ಹಬ್ಬಬೇಕೆಂದು ನಾನಾಬಗೆಯಾಗಿ ಪ್ರಯತ್ನಗಳನ್ನು ಮಾಡಿದನು. ಇವನು ಸಿಂಹಳದ್ವೀಪ, ಕಾಶ್ಮೀರ ಮುಂತಾದ ದೇಶಗಳಿಗೆ ಬೌದ್ಧಧರ್ಮೋಪದೇಶಕರನ್ನು ಕಳುಹಿಸಿಕೊಟ್ಟಂತೆಯೇ ಕರ್ನಾಟಕ ದೇಶಕ್ಕೂ ಇಬ್ಬರನ್ನು ಕಳಿಸಿದ್ದನು. ಮಹಿಷಮಂಡಳಕ್ಕೆ ಎಂದರೆ **ಮೈಸೂರು** ಪ್ರಾಂತಕ್ಕೆ **ಮಹಾದೇವನೆಂಬುವನನ್ನೂ ಬನವಾಸಿ** ಪ್ರಾಂತಕ್ಕೆ **ರಕ್ಷಿತನೆಂಬುವನನ್ನೂ** ಕಳಿಸಿದ್ದನು. ಕರ್ನಾಟಕದಲ್ಲಿ ನಿಜಾಮ ಸಂಸ್ಥಾನದ ರಾಯಚೂರು ಜಿಲ್ಹೆಯಲ್ಲಿರುವ ಮಸ್ಕಿ ಎಂಬ ಊರಲ್ಲಿಯೂ ಮೈಸೂರು ಸಂಸ್ಥಾನದ ಚಿತ್ರದುರ್ಗ ಜಿಲ್ಹೆಯಲ್ಲಿರುವ ಸಿದ್ಧಾಪುರದ ಬಳಿಯಲ್ಲಿಯೂ ಅಶೋಕನ ಧರ್ಮಶಾಸನಗಳು ದೊರೆತಿರುತ್ತವೆ. ಈ ಅಶೋಕನು ಕ್ರಿ. ಪೂ. **೨೩೧** ರಲ್ಲಿ ಮರಣಹೊಂದಿದನು. ಇವನ ತರುವಾಯ ಇಬ್ಬರು ಮೂವರು ಹಾಗೂ ಹೀಗೂ ಆಳಿದರು. ಕೊನೆಯ ಅರಸನಾದ **ಬೃಹದ್ರಥನನ್ನು** ಆತನ ಸೇನಾಪತಿಯಾದ **ಪುಷ್ಯಮಿತ್ರನು** ಕೊಂದು, ಶುಂಗವಂಶದ ಸಾಮ್ರಾಜ್ಯವನ್ನು ಸ್ಥಾಪಿಸಿದನು. (ಕ್ರಿ. ಪೂ ೧೮೪)

ಅಶೋಕ ಚಕ್ರವರ್ತಿ

ಶುಂಗಸಾಮ್ರಾಜ್ಯವು

(ಕ್ರಿ. ಪೂ. ೧೮೫ ರಿಂದ ಕ್ರಿ. ಪೂ. ೭೩ರ ವರೆಗೆ)

ಮೌರ್ಯಸಾಮ್ರಾಜ್ಯವು ನಷ್ಟವಾದಂದಿನಿಂದ ಬೌದ್ಧಧರ್ಮದ ಅಳಿಗಾಲವು ಪ್ರಾರಂಭವಾಯಿತು. ಶುಂಗಸಾಮ್ರಾಜ್ಯದ ಸ್ಥಾಪಕನಾದ **ಪುಷ್ಯಮಿತ್ರನು** ವೈದಿಕಧರ್ಮದವನಾಗಿದ್ದನು. ಆದ್ದರಿಂದ **ಈತನು** ಬೌದ್ಧ.

ಧರ್ಮವನ್ನು ಮುರಿದು, ವೈದಿಕಧರ್ಮವನ್ನು ಮುಂದಕ್ಕೆ ತರಬೇಕೆಂದು ಹೋರಾಡಿದನು. ಅದಕ್ಕೋಸ್ಕರ ಇವನು, ಬೌದ್ಧಧರ್ಮವನ್ನು ನಾನಾ ರೀತಿಯಿಂದ ಹಾಳುಮಾಡಿದನು. ಬೌದ್ಧಜನರ ವಿಹಾರಗಳನ್ನೂ ಸ್ತೂಪಗಳನ್ನೂ ಕೆಡವಿಸಿದನು. ಹಾಗೂ ಬೌದ್ಧರನ್ನು ಕಂಡಕಂಡಲ್ಲಿ ಕೊಲ್ಲಿಸಿದನು! ಇಷ್ಟೆ ಅಲ್ಲ ಬೌದ್ಧಸನ್ಯಾಸಿಗಳ ತಲೆಗಳನ್ನು ಕೊಯಿದು ತಂದುಕೊಟ್ಟರೆ, ಪ್ರತಿಯೊಂದು ತಲೆಗೆ ನೂರು 'ದಿನಾರ' ನಾಣ್ಯಗಳನ್ನು ಬಕ್ಷೀಸು ಕೊಡುತ್ತೇನೆಂಬದಾಗಿ ದೇಶದಲ್ಲೆಲ್ಲಾ ಕಡೆಗೆ ಡಂಗುರವನ್ನು ಹೊಡಿಸಿದನು!![೧] ಈತನಿಂದ **ವೈದಿಕಧರ್ಮ**ಕ್ಕೆ ಪುನಃ ಕಳೆಯೇರಿತು. ವೈದಿಕಧರ್ಮಕ್ಕನುಸರಿಸಿ, ಈ ಪುಷ್ಯಮಿತ್ರ ಚಕ್ರವರ್ತಿಯು **ಅಶ್ವಮೇಧ**ವನ್ನು ಮಾಡಿದನು. ಈಪ್ರಕಾರ ವೈದಿಕಧರ್ಮಾಭಿಮಾನದಿಂದ ೩೬ ವರ್ಷ ಸಾಮ್ರಾಜ್ಯವನ್ನಾಳಿ ಕ್ರಿ. ಪೂ. **೧೪೯**ರಲ್ಲಿ ಮರಣಹೊಂದಿದನು.

ಬೌದ್ಧಧರ್ಮದ ಅಳಿಗಾಲ

ಇವನ ತರುವಾಯ **ಅಗ್ನಿಮಿತ್ರ, ವಸುಜ್ಯೇಷ್ಠ, ವಸುಮಿತ್ರ, ಅಂಧ್ರಕ, ಪುಳಿಂದಕ, ಘೋಷ, ವಜ್ರಮಿತ್ರ, ಭಾಗವತ, ದೇವಭೂತಿ** ಎಂಬ ೯ ಜನ ಅರಸರು ೭೬ ವರ್ಷ ಸಾಮ್ರಾಜ್ಯವನ್ನಾಳಿದರು. ಎಂದರೆ ಒಟ್ಟು ೧೦ ಜನ ಅರಸರು ೧೧೨ ವರ್ಷಗಳವರೆಗೆ ಸಾರ್ವಭೌಮರಾಗಿ ಆಳಿದರು. ವೈದಿಕಧರ್ಮದ ಕ್ಷತ್ರಿಯರಾದ ಈ ಶುಂಗವಂಶದ ಚಕ್ರವರ್ತಿಗಳಿಗೆ ಕಾಣ್ವಶಾಖೆಯ ಬ್ರಾಹ್ಮಣರು ಆರಂಭದಿಂದ ಕೊನೆಯುವರೆಗೆ ಸಾರ್ವಭೌಮ ಮಂತ್ರಿಯಾಗಿದ್ದರು. ಆದ್ದರಿಂದ ಈಕಾಲಕ್ಕೆ ವೈದಿಕಧರ್ಮವು ಏಳಿಗೆಯನ್ನು ಹೊಂದಿತು. ಈ ಸಾಮ್ರಾಜ್ಯಕ್ಕೆ ಕರ್ನಾಟಕವು ಒಳಪಟ್ಟಿತ್ತು. ಈ ಶುಂಗವಂಶದ ಕೊನೆಯ ಅರಸನಾದ **ದೇವಭೂತಿ** ಎಂಬವನು ಹೇಡಿಯೂ ಕೆಟ್ಟನಡತೆಯುಳ್ಳವನೂ ಆಗಿದ್ದರಿಂದ ಅವನ ಮಂತ್ರಿಯಾದ **ಕಾಣ್ವವಸುದೇವನು** ಆತನನ್ನು ಪಟ್ಟದಿಂದ ತಳ್ಳಿ, ಕ್ರಿ. ಪೂ. ೭೩ರಲ್ಲಿ ಕಾಣ್ವಶಾಖೆಯ ಬ್ರಾಹ್ಮಣಸಾಮ್ರಾಜ್ಯವನ್ನು ಸ್ಥಾಪಿಸಿದನು.

ಪುನಃ ವೈದಿಕ ಧರ್ಮದ ಏಳಿಗೆ

---

೧. ಆದ್ದರಿಂದ ಬೌದ್ಧ ಮತವನ್ನು ಖಂಡಿಸಿದ ಶ್ರೀ ಕುಮಾರಿಲಭಟ್ಟರು ಇದೇ ತರಿಸಿರಬಹುದೆಂದು ಕೆಲವು ಪಂಡಿತರು ಊಹಿಸಿದ್ದಾರೆ.

ಕಾಣ್ವಸಾಮ್ರಾಜ್ಯವು

(ಕ್ರಿ. ಪೂ. ೭೩ರಿಂದ ಕಿ. ಪೂ. ೨೮ರ ವರೆಗೆ)

ಇತಿಹಾಸ ಕಾಲದಲ್ಲಿ ಬ್ರಾಹ್ಮಣಸಾಮ್ರಾಜ್ಯವೆಂದರೆ ಇದೇ ಮೊದಲನೆಯದು. ಈ **ಕಾಣ್ವ** ಮನೆತನದವರು, ಶುಂಗ ಸಾಮ್ರಾಜ್ಯದಲ್ಲಿ ೧೧೨ ವರ್ಷ ವಂಶಪರಂಪರೆಯಾಗಿ, ಸಾರ್ವಭೌಮ-ಮಂತ್ರಿಗಳಾಗಿದ್ದರಿಂದ ಇವರು ಬಹಳ ಬಲಿಷ್ಠರಾಗಿದ್ದರು. ಆಗ ಶುಂಗವಂಶದ ಚಕ್ರವರ್ತಿಯಾದ ಪುಷ್ಯಮಿತ್ರನ ಪ್ರಯತ್ನದಿಂದಲೂ ಕುಮಾರಿಲಭಟ್ಟರ ಉಪದೇಶದಿಂದಲೂ ವೈದಿಕಧರ್ಮವು, ಏಳಿಗೆಯನ್ನು ಹೊಂದಲು ಪ್ರಾರಂಭವಾಯಿತು. ಮುಂದೆ ಈ ಕಾಣ್ವಬ್ರಾಹ್ಮಣಚಕ್ರವರ್ತಿಗಳ ಕಾಲದಲ್ಲಂತು ವೈದಿಕಧರ್ಮವು ಮತ್ತಿಷ್ಟು ಘನತೆಗೇರಿತು. ಹಾಗೂ ಬೌದ್ಧಧರ್ಮವು ಕಳೆಗುಂದುತ್ತ ನಡೆಯಿತು. ಕಾಣ್ವ ಸಾಮ್ರಾಜ್ಯದ ಸ್ಥಾಪಕನಾದ **ವಸುದೇವ** ಚಕ್ರವರ್ತಿಯು ಕ್ರಿ. ಪೂ. ೭೩ರಿಂದ ಕ್ರಿ. ಪೂ. ೬೪ರವರೆಗೆ **ಒಂಭತ್ತು ವರ್ಷ** ಚನ್ನಾಗಿ ಸಾಮ್ರಾಜ್ಯವನ್ನಾಳಿದನು. ಇವನ ಆಳಿಕೆಯಲ್ಲಿ ಮಹಾರಾಷ್ಟ್ರ ದೇಶದಲ್ಲಿ ಮಾಹಿಷ್ಮತೀ ಪಟ್ಟಣದಲ್ಲಿ ಕಾಣ್ವ



ಶ್ರೀಸುರೇಶ್ವರಾಚಾರ್ಯರು

ಶಾಖೆಯ ಬ್ರಾಹ್ಮಣರಾದ **ಶ್ರೀ ಸುರೇಶ್ವರಾಚಾರ್ಯರು** ಎಂದರೆ **ಮಂಡನ ಪಂಡಿತರು** ಅವತರಿಸಿ, ಬೌದ್ಧಮತವನ್ನು ಖಂಡಿಸಿದರು; ಮತ್ತು ವೈದಿಕಧರ್ಮದ ಕರ್ಮಕಾಂಡವನ್ನು ಸ್ಥಾಪಿಸಿದರು. ಇದೇ ಕಾಲಕ್ಕೆ ಎಂದರೆ ಈ ವಸುದೇವ ಚಕ್ರವರ್ತಿಯು ಮೊಮ್ಮಗನಾದ **ನಾರಾಯಣ**

ಚಕ್ರವರ್ತಿಯ ಆಳಿಕೆಯಲ್ಲಿ **ಕೇರಳ** ದೇಶದ **ಕಾಲಟಿಯೆಂಬ** ಗ್ರಾಮದಲ್ಲಿ ತೈತ್ತಿರೀಯ ಶಾಖೆಯ ಬ್ರಾಹ್ಮಣರಾದ **ಶ್ರೀ ಶಂಕರಾಚಾರ್ಯರು**

ಶೃಂಗೇರಿಮಠದ ಸ್ಥಾಪನೆ

ಕ್ರಿ. ಪೂ. ೪೨ರಲ್ಲಿ[೧] ಅವತರಿಸಿ, ವೈದಿಕಧರ್ಮದ ಜ್ಞಾನಕಾಂಡವನ್ನು ಸ್ಥಾಪಿಸಿದರು. ಅಲ್ಲದೆ **ಶೃಂಗೇರಿ ಮಠವನ್ನು** ಏರ್ಪಡಿಸಿದರು. ಇದೇ ವೇಳೆಯಲ್ಲಿ ಮಂಡನಪಂಡಿತರು, ಶ್ರೀಶಂಕರಾಚಾರ್ಯರಿಂದ ಸನ್ಯಾಸವನ್ನು ಸ್ವೀಕರಿಸಿ "**ಶ್ರೀ ಸುರೇಶ್ವರಾಚಾರ್ಯರೆ**"ಂಬ ಹೆಸರಿನಿಂದ ಶೃಂಗೇರಿಮಠದ **ಆದ್ಯ ಜಗದ್ಗುರು**ಗಳಾದರು. ಇವರಿಬ್ಬರೂ **ಅದ್ವೈತ ಮತದ** ಅನೇಕ ಗ್ರಂಥಗಳನ್ನು ಬರೆದಿದ್ದಾರೆ.



ಶ್ರೀ ಶಂಕರಾಚಾರ್ಯರು

ವಸುದೇವ ಚಕ್ರವರ್ತಿಯ ತರುವಾಯ, ಆತನ ಮಗನಾದ **ಭೂಮಿಮಿತ್ರನು** ಕ್ರಿ. ಪೂ. ೬೪ರಲ್ಲಿ ಸಿಂಹಾಸನವನ್ನೇರಿದನು. ಈತನು ರಾಜನೀತಿಯಲ್ಲಿ ಜಾಣನೂ ಶೂರನೂ ಆಗಿದ್ದನು. ೧೪ ವರ್ಷಗಳವರೆಗೆ ಧರ್ಮದಿಂದ ರಾಜ್ಯವನ್ನಾಳಿ

---

೧. ಶ್ರೀಶಂಕರಾಚಾರ್ಯರ ಜನ್ಮಕಾಲದ ನಿರ್ಣಯದ ವಿಷಯವಾಗಿ ಈ ಪ್ರಕಾರ ಐದು ಭಿನ್ನಮತಗಳಿವೆ. (೧) ಕ್ರಿ. ಪೂ. ೪೨ (ಶೃಂಗೇರಿಮಠದ ಲೇಖ), (೨) ಕ್ರಿ. ಶ. ೫೯೦ (ಶ್ರೀ. ಕೆ. ಟಿ. ತೇಲಂಗ), (೩) ಕ್ರಿ. ಶ. ೫೮೯ (ಡಾ. ಫ್ಲೀಟ ಸಾಹೇಬ), (೪) ಕ್ರಿ. ಶ. ೭೮೮ (ವಿ. ರೈಸಸಾಹೇಬ), (೫) ಕ್ರಿ. ಶ. ೭೮೮ (ಮ್ಯಾಕ್ಸಮುಲ್ಲರ) ಇವು ಗಳಲ್ಲಿ ಶೃಂಗೇರಿಮಠದ ಕಾಲನಿರ್ಣಯವೇ ಹೆಚ್ಚು ಸಪ್ರಮಾಣವಾಗಿದೆ. ವೇಲಾಗಿ, ಕಾಣ್ವ ರಾಜರ ಮತ್ತು ಶಾತವಾಹನ ಅರಸರ ಕಾಲದಲ್ಲಿ ಹಾಗೂ ಬಾದಾಮಿ ಚಾಳುಕ್ಯರ ಕಾಲದಲ್ಲಿ

ದನು. ನಂತರ ಇವನ ಮಗನಾದ **ನಾರಾಯಣ** ಚಕ್ರವರ್ತಿಯು ಪಟ್ಟಕ್ಕೆ ಕುಳಿತನು. (ಕ್ರಿ. ಪೂ. ೫೦) ಈತನು ಬಹಳ ವಿದ್ಯಾಪಕ್ಷಪಾತಿಯಾಗಿದ್ದನು. ಇವನು ೧೨ ವರ್ಷ ಸುಖದಿಂದ ರಾಜ್ಯವನ್ನಾಳಿ ಕ್ರಿ. ಪೂ. ೩೮ರಲ್ಲಿ ಮರಣ ಹೊಂದಿದನು. ಆ ಬಳಿಕ ಇವನ ಮಗನಾದ **ಸುಶರ್ಮನು** ಸಿಂಹಾಸನವನ್ನೇರಿದನು. ಇವನು ಹತ್ತು ವರ್ಷ ರಾಜ್ಯವನ್ನಾಳಿದನು. ಅಷ್ಟರಲ್ಲಿ ಈತನ ಮಾಂಡಲಿಕ ಅರಸನಾದ ಶಾತವಾಹನ ವಂಶದ **ಕುಂತಲಸ್ವಾತಿಕರ್ಣನೆಂಬುವನು** ಈ ಸುಶರ್ಮನನ್ನು ಕೊಂದು, ಶಾತವಾಹನ ಸಾಮ್ರಾಜ್ಯವನ್ನು ಸ್ಥಾಪಿಸಿದನು. (ಕ್ರಿ. ಪೂ. ೨೮) ಒಟ್ಟು ಈ ಕಾಣ್ವಸಾಮ್ರಾಜ್ಯದಲ್ಲಿ ನಾಲ್ಕುಮಂದಿ ರಾಜರು ೪೫ ವರ್ಷ ಆಳಿದರು.

ಭೂಮಿಮಿತ್ರ, ನಾರಾಯಣ, ಸುಶರ್ಮ.

ಶಾತವಾಹನ ಸಾಮ್ರಾಜ್ಯವು

(ಕ್ರಿ. ಪೂ. ೨೪೦ರಿಂದ ಕ್ರಿ. ವ. ೨೧೮ರ ವರೆಗೆ)

ಶಾತವಾಹನ ಅಥವಾ **ಶಾಲಿವಾಹನ** ಎಂಬುದು, ಈ ಅರಸು ಮನೆತನದ ಅಡ್ಡಹೆಸರು ಇರುತ್ತದೆಯೇ ಹೊರತು ಇದು ಒಬ್ಬ ಪುರುಷನ ಹೆಸರಲ್ಲ. **ಸಿಮುಕನೆಂಬುವನೇ** ಈ ಮನೆತನಕ್ಕೆ ಮೂಲ ಪುರುಷನು. ಈತನು ಕ್ರಿ. ಪೂ. **೨೪೦**ರಲ್ಲಿ ಈ ಮನೆತನದ ರಾಜಸಿಂಹಾಸನವನ್ನು ಸ್ಥಾಪಿಸಿದನು. ಅಂದಿನಿಂದ ಪ್ರಾರಂಭವಾಗಿ ಕ್ರಿ. ವ. ೨೧೮ರ ವರೆಗೆ ಒಟ್ಟು ೪೫೮ ವರ್ಷಗಳಲ್ಲಿ ೩೦ ಮಂದಿ ಶಾತವಾಹನ ರಾಜರು ರಾಜ್ಯವನ್ನಾಳಿದರು. ಇವರಲ್ಲಿ ೧೩ನೆಯ ಅರಸನಾದ **ಕುಂತಲ ಸ್ವಾತಿಕರ್ಣನು**, ಕ್ರಿ. ಪೂ. ೨೮ರಲ್ಲಿ ಕಾಣ್ವಸಾಮ್ರಾಜ್ಯವನ್ನು ಮುರಿದು, **ಶಾತವಾಹನ ಸಾಮ್ರಾಜ್ಯವನ್ನು** ಸ್ಥಾಪಿಸಿದನು. ಮುಂ... ಈ ವಂಶದಲ್ಲಿ ೧೭ನೆಯ ಅರಸನಾದ **ಹಾಲರಾಜನು** ಪ್ರಸಿದ್ಧಪುರುಷನಾದನು.

ಸಿಮುಕನು

ವೈದಿಕಧರ್ಮವು ಚನ್ನಾಗಿ ಸ್ಥಾಪಿಸಲ್ಪಟ್ಟ ಲಕ್ಷಣಗಳು ಸ್ಪಷ್ಟವಾಗಿವೆ. ಅವು ಯಾವವೆಂದರೆ, ಯಜ್ಞಯಾಗಾದಿ ಕರ್ಮಗಳನ್ನು ಮಾಡುವದು, ವಿಷ್ಣು, ಶಿವ-ದೇವಾಲಯಗಳನ್ನು ಕಟ್ಟಿಸುವದು. ಬ್ರಾಹ್ಮಣರಿಗೆ ದಾನಧರ್ಮವನ್ನು ಮಾಡುವದು, ಲಕ್ಷಜನ ಬ್ರಾಹ್ಮಣ ಸಮುದಾಯಕ್ಕೆ ಊಟಕ್ಕೆ ಹಾಕುವದು ಮುಂತಾದವು.

ಈತನು ಪ್ರಾಕೃತ ಭಾಷೆಯಲ್ಲಿ '**ಸಪ್ತಶತಿ**' ಎಂಬುದೊಂದು ಗ್ರಂಥವನ್ನು ಬರೆದಿದ್ದಾನೆ. ಈ ಗ್ರಂಥದಲ್ಲಿ ತುಪ್ಪ, ಪೊಟ್ಟೆ (ಹೊಟ್ಟೆ), ಅತ್ತೆ ಮುಂತಾದ ಕನ್ನಡ ಶಬ್ದಗಳಿವೆ. ಬಳ್ಳಾರಿ ಜಿಲ್ಲೆಯ ಹಿರೇಹಡಗಲಿ ಗ್ರಾಮದ ತಾಮ್ರ ಶಾಸನದಿಂದ ಈ ಶಾತವಾಹನ ರಾಜರು ಕನ್ನಡಿಗರೆಂದು ಗೊತ್ತಾಗುತ್ತದೆ. ಈ ಶಾಸನದಲ್ಲಿ ಹಿರೇಹಡಗಲಿ ಪ್ರಾಂತಕ್ಕೆ "**ಶಾತವಾಹನ ನಾಡು**" ಎಂಬ ಹೆಸರಿದೆ. ಈ ಶಾತವಾಹನ ರಾಜರಲ್ಲಿ ೨೩ನೆಯವನಾದ **ಶಿವ ಸ್ವಾತಿ**ಯೆಂಬುವನು, ಕ್ರಿ. ವ. ೭೩ರಲ್ಲಿ ಸಿಂಹಾಸನವನ್ನೇರಿ ೨೮ ವರ್ಷ ರಾಜ್ಯವನ್ನಾಳಿದನು. ಈ ಕಾಲದಲ್ಲಿ ಎಂದರೆ ಕ್ರಿ. ವ. ೭೮ರಲ್ಲಿ ಗುಜರಾಥ ದಲ್ಲಿ ಆಳುತ್ತಿದ್ದ **ಶಕ**ಕುಲದ ಕ್ಷಹರಾಟ ಮನೆತನದ ಒಬ್ಬ ರಾಜನು, ತನ್ನ ಪಟ್ಟಾಭಿಷೇಕವಾದಂದಿನಿಂದ ತನ್ನ **ಶಕ**ಕುಲದ ಹೆಸರಿನಿಂದ ಕಾಲ ಗಣನೆಯನ್ನು ಪ್ರಾರಂಭಮಾಡಿದನು. ಆದ್ದರಿಂದ ಇದಕ್ಕೆ '**ಶಕಕಾಲ**' '**ಶಕನೃಪಕಾಲ**' ಇಲ್ಲವೆ "**ಶಕವರ್ಷ**" ಎಂಬ ಹೆಸರುಂಟಾಯಿತು. ಮುಂದೆ ಹನ್ನೆರಡುನೂರು ವರ್ಷಗಳ ವರೆಗೆ ಇದೇ ಹೆಸರಿನಿಂದ ನಡೆದು, ೧೩ನೆಯ ಶತಮಾನದಲ್ಲಿ ಜನರು '**ಶಕ**' ಶಬ್ದದ ಹಿಂದೆ 'ಶಾಲಿವಾಹನ' ಶಬ್ದವನ್ನು ಜೋಡಿಸಿ, "**ಶಾಲಿವಾಹನ ಶಕ**' ಎಂದು ಅನ್ನಲಾರಂಭಿಸಿ ದರು. ಆದರೆ ವಾಸ್ತವವಾಗಿ ಈ ಕಾಲಗಣನೆಯನ್ನು ಶಾಲಿವಾಹನ ರಾಜ ರಲ್ಲಿ ಯಾವನೂ ಪ್ರಾರಂಭಮಾಡಿರುವದಿಲ್ಲ. '**ಶಕ**'ರೆಂಬ ಪರದೇಶದ ಅರಸರೇ ಇದನ್ನು ಪ್ರಾರಂಭಮಾಡಿದ್ದಾರೆ. ಈ ಶಾತವಾಹನ ರಾಜರ ರಾಜಧಾನಿಗಳು ಮೂರು, **ಬನವಾಸಿ, ಪೈಠಣ, ಧನಕಟಕ**. ಈ ಶಾಲಿ ವಾಹನರ ರಾಜ್ಯವು, ಕ್ರಿ. ವ. ೨೧೮ರಲ್ಲಿ ಸಂಪೂರ್ಣವಾಗಿ ನಾಶವಾಯಿತು. ಮುಂದೆ ಕ್ರಿ. ವ. ೫೦೦ರ ವರೆಗೆ ಕರ್ನಾಟಕದಲ್ಲಿ ಚಿಕ್ಕ ಚಿಕ್ಕ ಅರಸುಮನೆ ತನಗಳು ಅಲ್ಲಲ್ಲಿ ರಾಜ್ಯವಾಳಹತ್ತಿದವು.

ಶಾತವಾಹನ ಸಾಮ್ರಾಜ್ಯವು ನಾಶವಾದ ನಂತರ ಕ್ರಿ. ವ. ೨೧೮ ರಿಂದ ೫೦೦ರ ವರೆಗೆ ಕರ್ನಾಟಕದಲ್ಲಿ ಆಳಿದ ಸಣ್ಣ ದೊಡ್ಡ ಅರಸು ಮನೆ ತನಗಳು:—**ಕ್ಷತ್ರಪರು**, **ಆಭೀರರು**, **ರಾಷ್ಟ್ರಕೂಟರು**, **ಮೌರ್ಯರು**, **ಕದಂಬರು**, **ಬಾರಕೂರಿನ ಪಾಂಡ್ಯರು**, **ಅಳುಪರು**, **ನಳರು**,

ಪಲ್ಲವರು, ಪುನ್ನಾಟರು, ಬಾಣರಸರು, ಗಂಗರಸರು ಮೊದಲಾದವರು.

ಸಿಂಹಾವಲೋಕನವು :–ಮೌರ್ಯಸಾಮ್ರಾಜ್ಯದ ಕಾಲಕ್ಕೆ ಧರ್ಮೋಪದೇಶಕ್ಕಾಗಿ ಜೈನರು, ಬೌದ್ಧರು ಕರ್ನಾಟಕಕ್ಕೆ ಬಂದು, ಇಲ್ಲಿ ನೆಲೆಯಾಗಿ ನಿಂತರು. ಬನವಾಸಿಯ **ಭೂತಪಾಲಶೆಟ್ಟಿ**ಯೆಂಬುವನು ಬೌದ್ಧರಿಗೋಸ್ಕರ ಪುಣೆಯ ಹತ್ತರ ಕಾರ್ಲೆಯ ಗುಡ್ಡದೊಳಗೆ ದೊಡ್ಡ ಚೈತ್ಯಾಲಯವನ್ನು ಕೊರೆಯಿಸಿಕೊಟ್ಟನು. ಜೈನಧರ್ಮಕ್ಕಂತೂ ಕರ್ನಾಟಕದಲ್ಲಿ ಚನ್ನಾಗಿ ಆಶ್ರಯವು ದೊರೆಯಿತು. ಮೌರ್ಯ ಸಾಮ್ರಾಜ್ಯವು ನಷ್ಟವಾದ ಕೂಡಲೆ ಬೌದ್ಧ ಧರ್ಮಕ್ಕೆ ಅಳಿಗಾಲವು ಪ್ರಾರಂಭವಾಯಿತು. ಮುಂದೆ ಶುಂಗ, ಕಾಣ್ವ, ಶಾತವಾಹನ ಸಾಮ್ರಾಜ್ಯಗಳ ಕಾಲದಲ್ಲಿ ವೈದಿಕಧರ್ಮಕ್ಕೆ ಉತ್ತೇಜನವು ದೊರೆಯಿತು. ಶಾತವಾಹನವಂಶದ ೩೩ನೆಯ ಅರಸನಾದ **ಗೌತಮೀಪುತ್ರನು** ಬ್ರಾಹ್ಮಣರಿಗೆ ಹೇರಳವಾದ ದ್ರವ್ಯವನ್ನು ದಾನಮಾಡುತ್ತಿದ್ದನು. ಎಂದರೆ ಈ ಅರಸನು ಗೋ-ಬ್ರಾಹ್ಮಣ ಪ್ರತಿಪಾಲಕನಾಗಿದ್ದನು. ಇದೇ ಪ್ರಕಾರ ಆ ಕಾಲದಲ್ಲಿ **ಉಷವದಾತ**ನೆಂಬುವನು ಲಕ್ಷಜನ ಬ್ರಾಹ್ಮಣ ಸಮುದಾಯಕ್ಕೆ ಪಕ್ವಾನ್ನದ ಊಟವನ್ನು ಮಾಡಿಸಿದನು.

೫ನೆಯ ಪ್ರಕರಣ

ಬಾದಾಮಿ ಚಾಳುಕ್ಯರು ಸಾರ್ವಭೌಮರಾಜರಾದರು

(ಕ್ರಿ. ಶ. ೫೦೦ ರಿಂದ ೭೫೭ರ ವರೆಗೆ)


ಚಾಳುಕ್ಯವಂಶದ **ಜಯಸಿಂಹ**ನೆಂಬುವನು ಸುಮಾರು ಕ್ರಿ. ಶ. ೫೦೦ರಲ್ಲಿ ಉತ್ತರ ಕರ್ನಾಟಕದಲ್ಲಿ ಆಳುತ್ತಿದ್ದ ರಾಷ್ಟ್ರಕೂಟ ಅರಸರನ್ನು ಸೋಲಿಸಿ, ರಾಜ್ಯವನ್ನು ಸಂಪಾದಿಸಿದನು. ಈತನ ತರುವಾಯ ಇವನ ಮಗನಾದ **ರಣರಾಗನು** ಸಿಂಹಾಸನವನ್ನೇರಿದನು. ಈ ರಣರಾಗನ ಮಗನೇ ೧ನೆಯ ಪುಲಿಕೇಶಿಯು.

೧ನೆಯ ಪುಲಿಕೇಶಿ
ಕ್ರಿ. ಶ. ೫೫೦-೫೬೬

೧ನೆಯ ಪುಲಿಕೇಶಿಯು ಕರ್ನಾಟಕದ ಪೂರ್ವಭಾಗದಲ್ಲಿ ಆಳುತ್ತಿದ್ದ **ಪಲ್ಲವ**ರಾಜರನ್ನು ಹೊಡದೋಡಿಸಿ, ಆ ಪ್ರಾಂತವನ್ನು ಗೆದ್ದು ಕೊಂಡನು. ಮತ್ತು **ಬಾದಾಮಿ** (ವಾತಾಪಿ) ಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿ ಕೊಂಡನು. ಆಬಳಿಕ ಇವನು ಅಶ್ವಮೇಧವೆಂಬ ಯಜ್ಞವನ್ನು ಮಾಡಿ, "**ಸತ್ಯಾಶ್ರಯ ಶ್ರೀಪೃಥ್ವೀವಲ್ಲಭ ಪುಲಿಕೇಶಿ ಮಹಾರಾಜ**" ಎಂಬ ಸಾರ್ವಭೌಮಪದವಿಯನ್ನು ಹೊಂದಿದನು. ಇವನಿಗೆ **ಕೀರ್ತಿವರ್ಮ**, **ಮಂಗಳೇಶ** ಎಂಬಿಬ್ಬರು ಮಕ್ಕಳಿದ್ದರು.

ಕೀರ್ತಿವರ್ಮನು, ಮಂಗಳೇಶನು

ಇವರಲ್ಲಿ ಹಿರಿಯನಾದ **ಕೀರ್ತಿವರ್ಮ**ನು ತಂದೆಯನಂತರ ಪಟ್ಟಕ್ಕೆ ಕುಳಿತು, ಕ್ರಿ. ಶ. **೫೬೬**ರಿಂದ **೫೯೭**ರ ವರೆಗೆ ರಾಜ್ಯವನ್ನಾಳಿದನು. ಈ ಕೀರ್ತಿವರ್ಮನಿಗೆ **೨ನೆಯ ಪುಲಿಕೇಶಿ**, **ಕುಬ್ಜ ವಿಷ್ಣುವರ್ಧನ**, **೨ನೆಯ ಜಯಸಿಂಹ** ಎಂಬ ಮೂರುಮಂದಿ ಮಕ್ಕಳಿದ್ದರು. ಕೀರ್ತಿವರ್ಮನು ಮರಣಹೊಂದಿದಾಗ ಆತನ ಹಿರಿಯ ಮಗನಾದ ೨ನೆಯ ಪುಲಿಕೇಶಿಯು



ಬಾದಾಮಿಯ ಗುಡ್ಡದಲ್ಲಿ ಕೊರೆದ ಕಲ್ಮನೆಯು.

ಚಿಕ್ಕವನಿದ್ದನು. ಆದ್ದರಿಂದ ಈ ಹುಡುಗರ ಕಕ್ಕನಾದ **ಮಂಗಳೇಶನು** ಸಿಂಹಾಸನದ ಮೇಲೆ ಕುಳಿತನು. ಇವನು ಬಾದಾಮಿಯ ಗುಡ್ಡದಲ್ಲಿ **ಕಲ್ಮನೆಯನ್ನು** (ಎಂದರೆ ದೇವಾಲಯವನ್ನು) ಕೊರೆಯಿಸಿ, ಅದರಲ್ಲಿ ವಿಷ್ಣು ದೇವರನ್ನು ಸ್ಥಾಪಿಸಿದನು. ಮತ್ತು ದಿನಾಲು ಆ ದೇವರ ಪೂಜೆ, ನೈವೇದ್ಯ, ನಾರಾಯಣಬಲಿಗಳ ವೆಚ್ಚಕ್ಕೋಸ್ಕರ ಹಾಗೂ ಅಲ್ಲಿ ಪ್ರತಿದಿನ ೧೬ ಜನ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ, ದಕ್ಷಿಣೆಯನ್ನು ಕೊಡುವದಕ್ಕೋಸ್ಕರ ಒಂದು ಗ್ರಾಮವನ್ನು ದಾನಕೊಟ್ಟನು. ಈತನು ಕ್ರಿ. ಶ. **೬೦೮**ರಲ್ಲಿ ಸತ್ತಬಳಿಕ ೨ನೆಯ ಪುಲಿಕೇಶಿಯು ಸಿಂಹಾಸನವನ್ನೇರಿದನು.

೨ನೆಯ ಪುಲಿಕೇಶಿ
ಕ್ರಿ. ಶ. ೬೦೯-೬೪೨

ಈ **ಇಮ್ಮಡಿ ಪುಲಿಕೇಶಿಯು**, ಚಾಳುಕ್ಯರ ಇತಿಹಾಸದಲ್ಲಿ ಇಷ್ಟೇ ಅಲ್ಲ, ಇಡೀ ಕರ್ನಾಟಕದ ಇತಿಹಾಸದಲ್ಲಿ ಎಲ್ಲರಿಗಿಂತಲೂ ಮಿಗಿಲಾದ ಶೂರನಾಗಿದ್ದಾನೆ. ಕ್ರಿ. ಶ. **೬೦೯**ರಲ್ಲಿ ಈ ತರುಣ ವೀರನಿಗೆ ಪಟ್ಟಾಭಿಷೇಕವಾಯಿತು. ಮುಂದೆ ಸ್ವಲ್ಪ ದಿವಸಗಳಲ್ಲಿಯೇ ಈ ಚಾಳುಕ್ಯಸಾಮ್ರಾಜ್ಯದ ಮಾಂಡಲಿಕ ಅರಸರೆಲ್ಲರೂ ತಾವು ಸ್ವತಂತ್ರರಾಗಬೇಕೆಂದು ಎಲ್ಲ ಕಡೆಗೂ ದಂಗೆಯನ್ನು ಎಬ್ಬಿಸಿದರು.

ಇಮ್ಮಡಿ ಪುಲಿಕೇಶಿಯ ವಿಜಯಯಾತ್ರೆ

ಆಕೂಡಲೇ ಪುಲಿಕೇಶಿಯು, ದೊಡ್ಡ ಸೈನ್ಯದೊಡನೆ ಯುದ್ಧಕ್ಕೆ ಹೊರಟನು. ಎಲ್ಲಕ್ಕೂ ಮೊದಲು **ಅಪ್ಪಯ್ಯಿಕ, ಗೋವಿಂದ** ಇವರಿಬ್ಬರಿಗೆ ಏಟುಕೊಟ್ಟನು. ಆಗ ಅಪ್ಪಯ್ಯಿಕನು ಹೆದರಿ ಓಡಿಹೋದನು; ರಾಷ್ಟ್ರಕೂಟ ವಂಶದ ಈ ಗೋವಿಂದನು ಪುಲಕೇಶಿಗೆ ಶರಣು ಬಂದನು. ಆಮೇಲೆ ಪುಲಿಕೇಶಿಯು ಬನವಾಸಿ **ಕದಂಬ**ರನ್ನೂ ಚೇರದೇಶದ **ಗಂಗ** ಅರಸರನ್ನೂ ಹೆಣಹಾಕಿದನು. ಹಾಗೆಯೇ ಮಲಬಾರ ಪ್ರಾಂತದ **ಅಳುಪ** ಅರಸರನ್ನೂ ಕೊಂಕಣದ **ಮೌರ್ಯ**ರನ್ನೂ ಸದೆ ಬಡಿದು, ಅವರನ್ನು ತನ್ನ ಅಪ್ಪಣೆಯಂತೆ ಇರುವ ಹಾಗೆ ಮಾಡಿದನು. ಅಲ್ಲದೆ ನೂರಾರು ಹಡಗುಗಳ ಮೇಲೆ ದಂಡನ್ನು ತೆಗೆದುಕೊಂಡು ಹೋಗಿ ಪಶ್ಚಿಮಸಮುದ್ರ ತೀರದಲ್ಲಿದ್ದ '**ಪುರಿ**' ಎಂಬ ಕೊಂಕಣದ ರಾಜಧಾನಿಯನ್ನು ವಶಮಾಡಿ

ಕೊಂಡನು. ಆಮೇಲೆ ಈತನು ಕೊಂಕಣದ ಉತ್ತರದಿಕ್ಕಿಗೆ ಸಾಗಿ, **ಲಾಟ, ಮಾಳವ, ಗುರ್ಜರ** ದೇಶಗಳ ಅರಸರನ್ನು ಗೆದ್ದು, ಅವರನ್ನು ತನ್ನ ಮಾಂಡಲಿಕರನ್ನಾಗಿ ಮಾಡಿದನು. ಆಬಳಿಕ ೯೯ ಸಾವಿರ ಗ್ರಾಮಗಳುಳ್ಳಂಥ **ಮೂರು ಮಹಾರಾಷ್ಟ್ರಕ**ಗಳನ್ನು ಪಾದಾಕ್ರಾಂತ ಮಾಡಿದನು. ಇದೇ ಪ್ರಕಾರ **ಕೋಸಲ, ಕಲಿಂಗ** ದೇಶಗಳ ಅರಸರನ್ನೂ ಕಾಂಚಿಯ **ಪಲ್ಲವ**ರನ್ನೂ ಗೆದ್ದು, ಅವರನ್ನು ತನ್ನ ಅಂಕಿತರನ್ನಾಗಿ ಮಾಡಿದನು. ಆ ಬಳಿಕ ಕಾವೇರಿ ನದಿಯನ್ನು ದಾಟಿ, **ಚೋಳ, ಪಾಂಡ್ಯ, ಕೇರಳ** ದೇಶಗಳಲ್ಲಿ ಹೊಕ್ಕನು. ಕೂಡಲೇ ಆ ದೇಶಗಳ ಅರಸರು ಪುಲಿಕೇಶಿಗೆ ಶರಣು ಬಂದರು. ಈ ರೀತಿ ಇವನು ಸಂಪೂರ್ಣವಾಗಿ **ದಕ್ಷಿಣ ಹಿಂದುಸ್ಥಾನ**ದ ಮೇಲೆ ತನ್ನ ಒಡೆತನವನ್ನು ನೆಲೆಗೊಳಿಸಿದನು.

ಇಮ್ಮಡಿ ಪುಲಿಕೇಶಿಯು ಇಡೀ ಹಿಂದುಸ್ಥಾನದ ಸಾರ್ವಭೌಮನಾದನು

ಇದೇ ಕಾಲಕ್ಕೆ **ಉತ್ತರ ಹಿಂದುಸ್ಥಾನ**ದ ಸಾರ್ವಭೌಮ ರಾಜನಾದ ಕನೋಜದ **ಶ್ರೀಹರ್ಷ**ನು, ದಕ್ಷಿಣ ಹಿಂದುಸ್ಥಾನದಲ್ಲಿ ನುಗ್ಗಬೇಕೆಂದು ಹವಣಿಸುತ್ತಿದ್ದನು. ಆಗ ಈ ವೀರ ಪುಲಿಕೇಶಿಯು ಪ್ರಚಂಡವಾದ ಸೈನ್ಯದೊಡನೆ ನರ್ಮದಾ ನದಿಯ ತೀರಕ್ಕೆ ಹೋಗಿ, ಅಲ್ಲಿ ಶ್ರೀಹರ್ಷವರ್ಧನನನ್ನು ಸೋಲಿಸಿ, ಉತ್ತರ ಹಿಂದುಸ್ಥಾನವನ್ನೂ ಪಾದಾಕ್ರಾಂತ ಮಾಡಿದನು. ಅಂದಿನಿಂದ ಈತನಿಗೆ **ಪರಮೇಶ್ವರ** (ಎಂದರೆ ಇಡಿ ಹಿಂದುಸ್ಥಾನದ ಸಾರ್ವಭೌಮ) ಎಂಬ ಬಿರುದು[೧] ಪ್ರಾಪ್ತವಾಯಿತು. (ಕ್ರಿ. ವ. ೬೩೪), ತರುವಾಯ ಈ ಪುಲಿಕೇಶಿ ಚಕ್ರವರ್ತಿಯು, ಸುಖಸಂಕಥಾವಿನೋದದಿಂದ ಸಾಮ್ರಾಜ್ಯವನ್ನಾಳಹತ್ತಿದನು. ಇವನ ಕಾಲದಲ್ಲಿ

---

(೧) ಈ ‘ ಪರಮೇಶ್ವರ ’ ಎಂಬ ಬಿರುದನ್ನು ಚಾಳುಕ್ಯವಂಶದ ಮುಂದಿನ ಅರಸರೆಲ್ಲರೂ ಬಹಳ ಅಭಿಮಾನದಿಂದ ಧರಿಸಿದ್ದಾರೆ ಉದಾಹರಣಾರ್ಥವಾಗಿ ಚಾಳುಕ್ಯ ವಿಕ್ರಮಾದಿತ್ಯನ ಈ ಬಿರುದಾವಳಿಯನ್ನು ನೋಡಿರಿ. " ಸಕಲ+ಉತ್ತರಾಪಥೇಶ್ವರ ಶ್ರೀಹರ್ಷವರ್ಧನ ಪರಾಜಯೋಪಲಬ್ಧ ಪರಮೇಶ್ವರ+ಅಪರ ನಾಮಧೇಯ ವಿಕ್ರಮಾದಿತ್ಯ ಪರಮೇಶ್ವರ ಭಟ್ಟಾರಕಸ್ಯ " (ಸೊರಬ ತಾಲೂಕ ೫೬೧ ನೆಯ ಶಾಸನ) ಹೀಗೆಯೇ ಇದೇ ಕಾಲಕ್ಕೆ ಈ ಪುಲಿಕೇಶಿಯ ಸೈನ್ಯಕ್ಕೆ " ಕಾಂಚೀಶ, ಕೇರಳ ನರಾಧಿಪ ಪಾಂಡ್ಯಚೋಳ ಶ್ರೀ

ಕರ್ನಾಟಕದ ವೈಭವವೂ ಕೀರ್ತಿಯೂ ಶಿಖರಕ್ಕೆ ಹೋಗಿ ಮುಟ್ಟಿದವು.

ಪುಲಿಕೇಶಿಯ ರಾಜ್ಯದ ವರ್ಣನೆ

ಇದೇ ಕಾಲಕ್ಕೆ ಬೌದ್ಧಧರ್ಮದವನಾದ **ಹುವೆನ್‌ತ್ಸಾಂಗ**ನೆಂಬ **ಚೀನ** ದೇಶದ ಪ್ರವಾಸಿಯು, ಹಿಂದುಸ್ಥಾನಕ್ಕೆ ಬಂದು, ಅಲ್ಲಲ್ಲಿ ಸಂಚರಿಸುತ್ತ ಕರ್ನಾಟಕ ದೇಶಕ್ಕೂ ಬಂದು ನೋಡಿ, ಪುಲಿಕೇಶಿಯ ರಾಜ್ಯವನ್ನೂ ಪ್ರಜೆಗಳನ್ನೂ ಹೀಗೆ ವರ್ಣಿಸಿದ್ದಾನೆ:— “ಈ ರಾಜ್ಯದ ಸುತ್ತಳತೆಯು ೧೨೦೦ ಮೈಲು; ರಾಜಧಾನಿಯ ಸುತ್ತಳತೆಯು ೬ ಮೈಲು. ಈ ರಾಜಧಾನಿಯ ಪಶ್ಚಿಮ ಭಾಗವು ಒಂದು ದೊಡ್ಡ ಹೊಳೆಯ ಬಳಿಯಲ್ಲಿದೆ. ಈ ನಾಡಿನ ಭೂಮಿಯು ಬಹು ಬೆಳೆಯುಳ್ಳದ್ದಾಗಿದೆ. ಇದರಲ್ಲಿ ಧಾನ್ಯಗಳು ಹೇರಳವಾಗಿ ಬೆಳೆಯುತ್ತವೆ. ಇಲ್ಲಿಯ ಹವೆಯು ಸೆಕೆಯುಳ್ಳದ್ದಾಗಿದೆ. ಜನರ ರೀತಿ ನಡಾವಳಿಗಳು ಒಳ್ಳೆಯವು; ಇವರು ಪ್ರಾಮಾಣಿಕರಾಗಿದ್ದಾರೆ. ಹಾಗೂ ನಿಲುವಿಕೆಯಲ್ಲಿ ಎತ್ತರವಾಗಿದ್ದಾರೆ. ಇವರು ಸ್ವಾಭಿಮಾನಿಗಳು ಮತ್ತು ದರ್ಪವುಳ್ಳವರು. ಇವರು ತಮಗೆ ಉಪಕಾರ ಮಾಡಿದವರಿಗೆ ಪ್ರತ್ಯುಪಕಾರವನ್ನು ಮಾಡದೆ ಎಂದಿಗೂ ಅವರನ್ನು ಮರೆಯರು, ಇದೇ ಪ್ರಕಾರ ಇವರಿಗೆ ಅಪಕಾರ ಮಾಡಿದವರನ್ನು ಮುಯ್ಯಕ್ಕೆ ಮುಯ್ಯವಾಗಿ ಸೇಡು ತೀರಿಸಿಕೊಳ್ಳದೆ ಎಂದಿಗೂ ಬಿಡರು. ಇವರಿಗೆ ಯಾರಾದರೂ ಅಪಮಾನವನ್ನು ಮಾಡಿದರೆ, ಅದನ್ನು ನಿವಾರಣಮಾಡಿಕೊಳ್ಳುವದಕ್ಕಾಗಿ ಇವರು ತಮ್ಮ ಪ್ರಾಣವನ್ನು ಸಹ ಕೊಡುವದಕ್ಕೆ ಸಿದ್ಧರಾಗುವರು. ಸಂಕಟದಲ್ಲಿ ಸಿಕ್ಕಂಥವರು ಇವರನ್ನು ಸಾಹಾಯ್ಯಕ್ಕೆ ಕರೆದರೆ, ಅವರಿಗೆ ನೆರವಾಗುವದಕ್ಕೆ ಒಮ್ಮಿಂದೊಮ್ಮೆ ಓಡಿಹೋಗುವರು. ಆ ಸಮಯದಲ್ಲಿ ತಮ್ಮ ಗತಿಯೇನಾದೀತೆಂಬುದನ್ನು ಇವರು ಮರತೇ ಬಿಡುವರು.

ಹರ್ಷವಜ್ರಟ ವಿಭೇದ ವಿಧಾನದಕ್ಷಂ । ಕರ್ನಾಟಕಂ ಬಲಂ” ಎಂಬ ಬಿರುದು ಉಂಟಾಯಿತು. ಈ ಬಿರುದನ್ನೂ ಸಹ ಈ ಚಾಳುಕ್ಯವಂಶದ ಮುಂದಿನ ಅರಸರೆಲ್ಲರೂ ತಮ್ಮ ಸೈನ್ಯಕ್ಕೆ ಅಭಿಮಾನದಿಂದ ಧರಿಸಿದ್ದಾರೆ. ಈ ಬಿರುದಿನ ಅರ್ಥವೇನಂದರೆ:— ಕಾಂಚಿಯ ಪಲ್ಲವ ಅರಸರು ಕೇರಳದೇಶದ ಅರಸರು, ಪಾಂಡ್ಯರು, ಚೋಳರು, ಉತ್ತರಹಿಂದುಸ್ಥಾನದ ಸಾರ್ವಭೌಮನಾದ ಶ್ರೀಹರ್ಷನು, ಕೋಸಲ ದೇಶದ ಅರಸನಾದ ವಜ್ರಟನು ಇವರೆಲ್ಲರ ಸೈನ್ಯವನ್ನು ವಿಧ್ವಂಸ ಮಾಡುವದರಲ್ಲಿ ಸಮರ್ಥವಾದಂಥ ಕರ್ನಾಟಕ ಸೈನ್ಯವು

ಯಾವದೊಂದು ಅಪಕಾರದಬಗ್ಗೆ ಸೇಡು ತೀರಿಸಿಕೊಳ್ಳುವದಿದ್ದರೆ, ಇವರು ತಮ್ಮ ಶತ್ರುವಿಗೆ ಎಚ್ಚರಿಕೆಯಿಂದ ಇರುವದಕ್ಕೆ ಮೊದಲು ಸೂಚನೆಯನ್ನು ಕೊಡುತ್ತಾರೆ. ಈ ಪ್ರಕಾರ ಸೂಚಿಸಿದ ಬಳಿಕ ಎರಡೂ ಬಣದವರು ಕವಚವನ್ನು ಹಾಕಿಕೊಂಡು, ಢಾಲು-ಭಾಲೆಗಳನ್ನು ಕೈಯಲ್ಲಿ ಹಿಡಿದುಕೊಂಡು ಯುದ್ಧಕ್ಕೆ ನಿಲ್ಲುವರು. ಯುದ್ಧದಲ್ಲಿ ಶತ್ರುಗಳು ಓಡಿಹೋದರೆ ಇವರು ಅವರನ್ನು ಬೆನ್ನಟ್ಟುವರು. ಅವರಲ್ಲಿ ಯಾರಾದರೂ ಶರಣು ಬಂದರೆ ಅವರನ್ನು ಕೊಲ್ಲುವದಿಲ್ಲ. ಸೇನಾಪತಿಯು ಯುದ್ಧದಲ್ಲಿ ಸೋತು ಬಂದರೆ, ಅರಸನು ಅವನಿಗೆ ದೇಹದಂಡನೆಯನ್ನು ಮಾಡುವದಿಲ್ಲ; ಸೀರೆಯನ್ನು ಉಡಿಸುತ್ತಾನೆ. ಇದರಿಂದ ಆತನು ತಾನಾಗಿಯೇ ಆತ್ಮಹತ್ಯವನ್ನು ಮಾಡಿಕೊಳ್ಳುವನು. ಈ ಅರಸನ ಬಳಿಯಲ್ಲಿ ಮರಣಕ್ಕೆ ಹೆದರದಂಥ ಲಕ್ಷಾವಧಿ ವೀರರು ಇದ್ದಾರೆ. ಸೈನ್ಯವು ಯುದ್ಧಕ್ಕೆ ಹೊರಟಿತೆಂದರೆ, ಪ್ರಚಂಡವಾದ ರಣಭೇರಿಯ ನಾದದ ತಾಳಕ್ಕನುಸರಿಸಿ, ಹೆಜ್ಜೆಯನ್ನು ಹಾಕುತ್ತ ಸೈನಿಕರು ಹೆಮ್ಮೆಯಿಂದ ನಡೆಯುತ್ತಾರೆ. ಸಾವಿರಾರು ಮದ್ದಾನೆಗಳಿಂದಲೂ ಲಕ್ಷಾವಧಿ ವೀರರಿಂದಲೂ ಕೂಡಿದ ಈ ಸೇನಾಸಮೂಹವನ್ನು ಎದುರಿಸುವ ಧೈರ್ಯವು ಯಾರಿಗಿದೆ? ಇಂಥ ಪ್ರತಾಪಶಾಲಿಯಾದ ಸೈನ್ಯದ ಬಲದಿಂದ ಪುಲಿಕೇಶಿಯು ನೆರೆಹೊರೆಯ ಅರಸರನ್ನು ಧಿಕ್ಕರಿಸುತ್ತಾನೆ. ಇವನು ಕ್ಷತ್ರಿಯನಾಗಿದ್ದಾನೆ. ಅಲ್ಲದೆ ಗಂಭೀರವಾದ ವಿಚಾರವುಳ್ಳವನೂ ದಯಾಳು ಸ್ವಭಾವದವನೂ ಆಗಿದ್ದಾನೆ. ಈತನ ಹೆಸರು "**ಪುಲೋಕಿಶಿ**; ಇವನ ಸಾರ್ವಭೌಮ ರಾಜ್ಯದ ಹೆಸರು **ಮೋಹೋಲಾಕ್ಷ**"[೧].

೧. ಹುವೆನ್‌ತ್ಸಾಂಗನು ಪುಲಿಕೇಶಿಯ ಹೆಸರನ್ನು 'ಪುಲೋಕಿಶಿ' ಎಂದು ಹೇಳಿದ್ದಾನೆ. ಇದರಿಂದ ಈತನು ಲಕಾರವನ್ನೂ ಕಕಾರವನ್ನೂ ಚನ್ನಾಗಿ ಉಚ್ಚರಿಸುತ್ತಿದ್ದನು. ಆದರೆ ಸ್ವರಗಳನ್ನು ಮಾತ್ರ ಹಿಂದೆ ಮುಂದೆ ಮಾಡುತ್ತಿದ್ದನು. ಎಂಬುದು ಗೊತ್ತಾಗುತ್ತದೆ ಇದೇ ರೀತಿ ಈತನು ಪುಲಿಕೇಶಿಯ ಸಾರ್ವಭೌಮ ರಾಜ್ಯವನ್ನು "ಮೋಹೋಲಾಕ್ಷ" ಎಂದು ಕರೆದಿದ್ದಾನೆ. ಈತನು 'ಪುಲಿಕೇಶಿ' ಎಂಬ ಹೆಸರನ್ನು "ಪುಲೋಕಿಶಿ" ಎಂದು ಹೇಗೆ ಉಚ್ಚರಿಸಿದ್ದಾನೋ, ಹಾಗೆಯೇ 'ಮಹಾಲೋಕ' ಎಂಬ ಶಬ್ದದ ಉಚ್ಚಾರವನ್ನು ಈತನು "ಮೋಹೋಲಾಕ್ಷ" ಎಂದು ಮಾಡಿದ್ದಾನೆಂಬುದು ಒಡೆದು ಕಾಣುತ್ತದೆ. ಸಾರಾಂಶವೇನಂದರೆ, ಪುಲಿಕೇಶಿಯ ಸಾರ್ವಭೌಮರಾಜ್ಯದ ಹೆಸರು ಮಹಾಲೋಕವು.

ಬಾದಾಮಿ ಚಾಳುಕ್ಯರ ವಂಶಾವಳಿಯು.

- (೧) ಜಯಸಿಂಹ ೧
  - ಬುದ್ಧವರ್ಮ
    - ವಿಜಯರಾಜ ಅಥವಾ ವಿಜಯವರ್ಮ
  - (೨) ರಣರಾಗ, ರಾಜಸಿಂಹ
    - (೩) ೧ನೆಯ ಪುಲಕೇಶಿ ಪೊಲೆಕೇಶಿ, ಸತ್ಯಾಶ್ರಯ ರಣವಿಕ್ರಮ (ಪಟ್ಟದರಸಿ - ದುರ್ಲಭಾದೇವಿ) ಕ್ರಿ.ಶ. ೫೫೦
      - (೪) ಕೀರ್ತಿವರ್ಮ ೧. ರಣಪರಾಕ್ರಮ (ಕ್ರಿ.ಶ. ೫೬೬-೫೯೭)
        - (೬) ಪುಲಕೇಶಿ ೨. ಸತ್ಯಾಶ್ರಯ. (ಕ್ರಿ.ಶ. ೬೦೯-೬೪೨)
          - ಆದಿತ್ಯವರ್ಮ.
          - ಚಂದ್ರಾದಿತ್ಯ. ಪಟ್ಟದರಸಿ- ವಿಜಯಮಹಾದೇವಿ (ಕ್ರಿ.ಶ. ೬೪೫-೬೫೯)
          - (೭) ವಿಕ್ರಮಾದಿತ್ಯ ೧. ರಣರಸಿಕ (ಕ್ರಿ.ಶ. ೬೫೫-೬೮೦)
            - (೮) ವಿನಯಾದಿತ್ಯ ರಾಜಾಶ್ರಯ (ಕ್ರಿ.ಶ. ೬೮೦-೬೯೬)
              - (೯) ವಿಜಯಾದಿತ್ಯ ಸಮಸ್ತಭುವನಾಶ್ರಯ. (ಕ್ರಿ.ಶ. ೬೯೬-೭೩೩)
                - (೧೦) ವಿಕ್ರಮಾದಿತ್ಯ ೨. (ಪಟ್ಟದರಸಿ-ಲೋಕಮಹಾದೇವಿ) (ಕ್ರಿ.ಶ. ೭೩೩-೭೪೬)
                  - (೧೧) ಕೀರ್ತಿವರ್ಮ ೨. (ಕ್ರಿ.ಶ. ೭೪೬-೭೫೭) (ಚಾಳುಕ್ಯ ಸಾಮ್ರಾಜ್ಯವನ್ನು ಕಳೆದುಕೊಂಡನು.)
                - ಭೀಮ ೧
                  - ಕೀರ್ತಿವರ್ಮ ೩.
                    - ಹಿರಿಯ ತೈಲಪ
                      - ಮುಮ್ಮಡಿ ವಿಕ್ರಮಾದಿತ್ಯ
                        - ಭೀಮ ೨
                          - ಅಯ್ಯಣದೇವ ೧.
                            - ವಿಕ್ರಮಾದಿತ್ಯ ೪ ರಾಣಿ - ಬೊಂತಾದೇವಿ (ಚೇದಿ ದೇಶದ ರಾಜಪುತ್ರಿ)
                              - ಇಮ್ಮಡಿ ತೈಲಪ (ಕ್ರಿ.ಶ. ೯೭೩-೯೯೭) (ಚಾಳುಕ್ಯ ಸಾಮ್ರಾಜ್ಯವನ್ನು ಪುನಃ ಸ್ಥಾಪಿಸಿದನು.)
          - ಅಂಬೇರಾದೇವಿ. (ಮಗಳು)
          - ಜಯಸಿಂಹವರ್ಮ (ಗುಜರಾಥದಲ್ಲಿ ಚಾಳುಕ್ಯ ಸಿಂಹಾಸನವನ್ನು ಸ್ಥಾಪಿಸಿದವನು.)
        - ಕುಬ್ಜವಿಷ್ಣುವರ್ಧನ (ಪೂರ್ವ (ವೆಂಗಿ) ಚಾಳುಕ್ಯ ವಂಶದ ಸಂಸ್ಥಾಪಕ) (ಕ್ರಿ.ಶ. ೬೧೫-೬೩೩)
        - ಜಯಸಿಂಹ ೨. . .
          - ನಾಗವರ್ಧನ
      - (೫) ಮಂಗಳೇಶ, ಮಂಗಲೀಶ, ರಣವಿಕ್ರಾಂತ (ಕ್ರಿ.ಶ. ೫೯೭-೬೦೮)
        - ಸತ್ಯಾಶ್ರಯ ಇಂದ್ರವರ್ಮ.



ಈ ಪುಲಿಕೇಶಿ ಚಕ್ರವರ್ತಿಯ ಕೀರ್ತಿಧ್ವಜವು ಇಡಿ ಹಿಂದುಸ್ತಾನದಲ್ಲಿ ಮೆರೆಯುತ್ತಿತ್ತು. ಇಷ್ಟೇ ಅಲ್ಲ, ಹಿಂದುಸ್ಥಾನದ ಹೊರಗೂ ಅನೇಕ ದೇಶ

ಪುಲಿಕೇಶಿಯ ಓಲಗದಲ್ಲಿ ಇರಾಣದ ವಕೀಲರು

ಗಳಲ್ಲಿ ಅದು ಕಂಗೊಳಿಸುತ್ತಿತ್ತು! **ಇರಾಣ** ದೇಶದ ಅರಸನಾದ ೨ನೆಯ **ಖೋಶ್ರೋರ್ಝು**ನು ಪುಲಿಕೇಶಿಯ ಸಂಗಡ ಸ್ನೇಹವನ್ನು ಸಂಪಾದಿಸಿದನು. ಅವನು ತನ್ನ ರಾಯಬಾರಿಗಳನ್ನು ಪುಲಿಕೇಶಿಯ ಒಡ್ಡೋಲಗಕ್ಕೆ ಕಳಿಸಿದ್ದನು. ಪುಲಿಕೇಶಿಯೂ ತನ್ನ ವಕೀಲರನ್ನು ಖೋಶ್ರೋರ್ಝುನ ಓಲಗಕ್ಕೆ ಕಳಿಸಿದ್ದನು. (ಕ್ರಿ. ವ. ೬೨೫).



ಓಲಗದಲ್ಲಿ ಇರಾಣ ದೇಶದ ವಕೀಲರು ಪುಲಕೇಶಿಯು ಸಂಗಡ ಸಂಭಾಷಣ ಮಾಡುತ್ತ ನಿಂತಿದ್ದಾರೆ.

ರಾಜ್ಯದ ಆಡಳಿತೆಯು

ಪುಲಿಕೇಶಿಯು, ತಮ್ಮಂದಿರನ್ನೂ ಮಕ್ಕಳನ್ನೂ ಬೇರೆ ಬೇರೆ ಪ್ರಾಂತಗಳಿಗೆ ಅಧಿಕಾರಿಗಳನ್ನಾಗಿ ನೇಮಿಸಿದನು. **ವಿಷ್ಣುವರ್ಧನ**ನನ್ನು ಮೊದಲು **ಸಾತಾರೆ, ಪಂಢರಪುರ** ಪ್ರಾಂತಗಳಿಗೆ ಅಧಿಕಾರಿಯನ್ನಾಗಿ ನೇಮಿಸಿದ್ದನು. ಮುಂದೆ ಈತನನ್ನು **ವೆಂಗಿ** ಪ್ರಾಂತಕ್ಕೆ ಅಧಿಕಾರಿಯನ್ನಾಗಿ ಮಾಡಿದನು. ಈತನು ಅಲ್ಲಿ ಒಂದು ಶಾಖಾಸಿಂಹಾಸನವನ್ನು ಸ್ಥಾಪಿಸಿದನು. ಇದಕ್ಕೆ "**ಪೂರ್ವ ಚಾಳುಕ್ಯರ ಸಿಂಹಾಸನ**." ಎಂಬ ಹೆಸರು ಉಂಟಾಯಿತು. ೨ನೆಯ ತಮ್ಮನಾದ **ಜಯಸಿಂಹ**ನು **ನಾಸಿಕ** ಪ್ರಾಂತಕ್ಕೆ ಅಧಿಕಾರಿಯಾಗಿದ್ದನು.

ಚಂದ್ರಾದಿತ್ಯನೆಂಬ ಮಗನು **ಸಾವಂತವಾಡಿ** ಪ್ರಾಂತಕ್ಕೂ **ಜಯ-ಸಿಂಹವರ್ಮ**ನೆಂಬ ಮಗನು **ಲಾಟ** ದೇಶಕ್ಕೂ ಒಡೆಯರಾಗಿದ್ದರು. ಈ ಜಯಸಿಂಹವರ್ಮನು ಗುಜರಾಥದಲ್ಲಿ ಚಾಳುಕ್ಯರ ಶಾಖಾ ಸಿಂಹಾಸನವನ್ನು ಸ್ಥಾಪಿಸಿದನು. ಮೂರನೆಯ ಮಗನಾದ **ವಿಕ್ರಮಾದಿತ್ಯ**ನಂತೂ ಪುಲಿಕೇಶಿಯ ಪ್ರೀತಿಯ ಮಗನಾಗಿದ್ದನು. ಆದ್ದರಿಂದ ಈತನು ಯುವರಾಜನಾಗಿ ತಂದೆಯ ಬಳಿಯಲ್ಲಿಯೇ ಇದ್ದನು.

೧ನೆಯ ವಿಕ್ರಮಾದಿತ್ಯ
ಕ್ರಿ. ಶ. ೬೫೫-೬೮೦


ಪುಲಿಕೇಶಿಯ ತರುವಾಯ **ವಿಕ್ರಮಾದಿತ್ಯ**ನು ಸಿಂಹಾಸನವನ್ನೇರಿದನು. ಇವನು ಶೂರನೂ ರಾಜನೀತಿನಿಪುಣನೂ ಆಗಿದ್ದುದರಿಂದ ಪುಲಿಕೇಶಿಗೆ ಪ್ರೀತಿಯ ಮಗನಾಗಿದ್ದನು. ಆದುದರಿಂದಲೇ ಇವನು ೩ನೆಯ ಮಗನಾಗಿದ್ದರೂ ಸಿಂಹಾಸನಕ್ಕೆ ಅಧಿಕಾರಿಯಾದನು. ಈತನು ಪಟ್ಟಕ್ಕೆ ಕುಳಿತಕೂಡಲೇ ಕಾಂಚಿಯ **ಪಲ್ಲವರೂ, ಚೋಳ, ಪಾಂಡ್ಯ, ಕೇರಳ** ದೇಶಗಳ ಅರಸರೂ ದಂಗೆಯನ್ನೆಬ್ಬಿಸಿದರು. ತತ್ಕಾಲವೇ ಈ ಶೂರಪುರುಷನಾದ ವಿಕ್ರಮಾದಿತ್ಯನು ಸೈನ್ಯದೊಡನೆ ತಮಿಳುನಾಡಿಗೆ ಹೋಗಿ, ಆ ಪಲ್ಲವರಾಜನನ್ನು ಚನ್ನಾಗಿ ಸದೆಬಡೆದನು. ಹಾಗೂ ಕಾಂಚಿ ಪಟ್ಟಣವನ್ನು ಪೂರ್ಣವಾಗಿ ಕೈವಶಮಾಡಿಕೊಂಡನು. ಇಷ್ಟೇ ಅಲ್ಲ, ಆ ಪಲ್ಲವರು ದಾಸಾನುದಾಸರಂತೆ ತಲೆಯನ್ನು ತೀರ ಬೊಗ್ಗಿಸಿ ಕೈಮುಗಿಯಬೇಕೆಂದು ಅವರಿಗೆ ಕಟ್ಟಪ್ಪಣೆಯನ್ನು ಮಾಡಿದನು. ಚೋಳ, ಪಾಂಡ್ಯ, ಕೇರಳ ಅರಸರ ಹಣೆಯ ಬರಹವಾದರೂ ಹೀಗೆಯೇ ಆಯಿತು. ಅಂದಿನಿಂದ ಇವರೆಲ್ಲರೂ ವಿಕ್ರಮಾದಿತ್ಯನ ಮುಂದೆ ತಲೆಯನ್ನು ಮೇಲಕ್ಕೆತ್ತಲಿಲ್ಲ. ಈ ವಿಕ್ರಮಾದಿತ್ಯನ ನಂತರ **ವಿನಯಾದಿತ್ಯ, ವಿಜಯಾದಿತ್ಯ, ೨ನೆಯ ವಿಕ್ರಮಾದಿತ್ಯ, ೨ನೆಯ ಕೀರ್ತಿವರ್ಮ** ಮೊದಲಾದವರು ರಾಜ್ಯವನ್ನಾಳಿದರು. ೨ನೆಯ ಕೀರ್ತವರ್ಮನ ಕಾಲದಲ್ಲಿ ಈತನ ಮಾಂಡಲಿಕ ಅರಸನಾದ ರಾಷ್ಟ್ರಕೂಟ ವಂಶದ **ದಂತಿದುರ್ಗ**ನು ಪ್ರಬಲನಾಗಿ ಚಾಳುಕ್ಯಸಾಮ್ರಾಜ್ಯವನ್ನು ಗೆದ್ದುಕೊಂಡನು (ಕ್ರಿ. ಶ. ೭೫೭).

ಸಿಂಹಾವಲೋಕನವು:— ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ ಅಜಂತೆಯ ಕಲ್ಮನೆಗಳಲ್ಲಿ ಚಿತ್ರಗಳನ್ನು ಬರೆಯುವ ಕೆಲಸವು ನೆರವೇರಿತು.



ಅಜಂತೆಯ ಕಲ್ಮನೆಯೊಳಗಿನ ಚಿತ್ರಗಳು

ಮಂಗಲೇಶನ ಕಾಲದಲ್ಲಿ ಬಾದಾಮಿಯ ಗುಡ್ಡದಲ್ಲಿ ಕೊರೆದು ಮಾಡಿದ ವಿಷ್ಣು ದೇವಾಲಯ ಮುಂತಾದ ಕಲ್ಮನೆಗಳು ಹುಟ್ಟಿದವು. ವಿಜಯಾದಿತ್ಯನ ಕಾಲದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರ ಮೂರ್ತಿಗಳು ಬಾದಾಮಿಯಲ್ಲಿ ಸ್ಥಾಪಿಸಲ್ಪಟ್ಟವು. ೨ನೆಯ ವಿಕ್ರಮಾದಿತ್ಯನ ಕಾಲದಲ್ಲಿ ಪಟ್ಟದಕಲ್ಲೆಂಬ ಗ್ರಾಮದಲ್ಲಿ ಆತನ ಮಹಾರಾಣಿಯರಾದ **ಲೋಕಮಹಾದೇವಿ, ತ್ರೈಲೋಕ್ಯಮಹಾದೇವಿ** ಎಂಬುವರಿಬ್ಬರು **ಲೋಕೇಶ್ವರ, ತ್ರೈಲೋಕ್ಯೇಶ್ವರ** ಎಂಬೆರಡು ಶಿವಾಲಯಗಳನ್ನು ಕಟ್ಟಿಸಿದರು. ಎಂದರೆ ಈ ಚಾಳುಕ್ಯ ಚಕ್ರವರ್ತಿಗಳಿಂದ ಚಿತ್ರಕಲೆ, ಶಿಲ್ಪಕಲೆಗಳಿಗೆ ಉತ್ತೇಜನವು ದೊರೆಯಿತು. ಚಾಳುಕ್ಯರು ವೈದಿಕಧರ್ಮದವರಾಗಿದ್ದರು. ಆದರೂ ಬೌದ್ಧರಿಗೂ ಜೈನರಿಗೂ ಆಶ್ರಯವನ್ನು ಕೊಟ್ಟಿದ್ದರು. ಈ ಕಾಲಕ್ಕೆ ಬೌದ್ಧಧರ್ಮವು ಕಳೆಗುಂದಿತ್ತು; ಜೈನಧರ್ಮಕ್ಕೆ ಕಳೆಯೇರುತ್ತಿತ್ತು. ವೈದಿಕ ಧರ್ಮವಂತೂ ಬಹಳೇ ಉತ್ತಮಸ್ಥಿತಿಯಲ್ಲಿತ್ತು.



ಪಟ್ಟದಕಲ್ಲಿನ ಲೋಕೇಶ್ವರನ ದೇವಾಲಯ

೬ನೆಯ ಪ್ರಕರಣ

ನಾಡಗೌಡರು ಸಾರ್ವಭೌಮರಾಜರಾದರು

(ಕ್ರಿ. ಶ. ೭೫೩ರಿಂದ ೯೭೩ರ ವರೆಗೆ)


'ರಾಷ್ಟ್ರಕೂಟ' ಎಂದರೆ ನಾಡಗೌಡ; ರಾಷ್ಟ್ರಕೂಟರು ತಮ್ಮ ನಾಡ ಗೌಡಿಕೆಯಿಂದ ಏರುತ್ತ ಏರುತ್ತ ಸಾರ್ವಭೌಮರಾಜರಾದರು. ಈ ರಾಷ್ಟ್ರ ಕೂಟ ವಂಶದ **ದಂತಿದುರ್ಗ**ನೆಂಬ ರಾಜನು, **ದಂತಿದುರ್ಗನು** ಬಾದಾಮಿ ಚಾಳುಕ್ಯ ಚಕ್ರವರ್ತಿಯಾದ ಇಮ್ಮಡಿ ಕೀರ್ತಿವರ್ಮನನ್ನು ಸೋಲಿಸಿ, ರಾಷ್ಟ್ರಕೂಟ ಸಾಮ್ರಾಜ್ಯವನ್ನು ಸ್ಥಾಪಿಸಿದನು. (ಕ್ರಿ. ಶ. **೭೫೩**) ಆ ಮೇಲೆ ಇವನು **ಕಾಂಚಿ,**

ಕಲಿಂಗ, ಕೋಸಲ, ಶ್ರೀಶೈಲ, ಮಾಳವ, ಲಾಟ, ಟಂಕ ಈ ದೇಶಗಳ ಅರಸರನ್ನು ಗೆದ್ದು, ಅವರನ್ನು ತನ್ನ ಮಾಂಡಲಿಕರನ್ನಾಗಿ ಮಾಡಿಕೊಂಡನು. ಈತನು ಮುಂದೆ ಕ್ರಿ. ವ. **೭೬೨**ರಲ್ಲಿ ಮರಣಹೊಂದಿದನು. ತರುವಾಯ ಇವನ ಕಕ್ಕನಾದ **ಕೃಷ್ಣ**ರಾಜನು ಸಿಂಹಾಸನವನ್ನೇರಿದನು.

ಈ **ಕೃಷ್ಣ**ರಾಜನು ಕರ್ನಾಟಕದ ಉತ್ತರ ಮೇರೆಯಲ್ಲಿದ್ದ [1]**ಎಲಾಪು**ರದಲ್ಲಿ(ವೇರೂಳದಲ್ಲಿ) ಅತ್ಯಂತ ಭವ್ಯವೂ ಸುಂದರವೂ ಆದ **ಕೈಲಾಸ**ವೆಂಬ ಶಿವಾಲಯವನ್ನು ಗುಡ್ಡದಲ್ಲಿ ಕೊರೆಯಿಸಿದನು.

ಕೃಷ್ಣರಾಜ, ಗೋವಿಂದರಾಜ, ಧ್ರುವರಾಜ

ಈ ಕೃಷ್ಣನು ಕ್ರಿ. ವ. **೭೬೨** ರಿಂದ **೭೭೯**ರ ವರಿಗೆ ೧೭ ವರ್ಷ ಸುಖದಿಂದ ರಾಜ್ಯವನ್ನಾಳಿದನು. ಇವನಿಗೆ **ಇಮ್ಮಡಿ ಗೋವಿಂದನೆಂದೂ ಧ್ರುವನೆಂದೂ** ಇಬ್ಬರು ಮಕ್ಕಳಿದ್ದರು. ಈತನ ತರುವಾಯ **ಇಮ್ಮಡಿ ಗೋವಿಂದ**ನು ಪಟ್ಟಕ್ಕೆ ಕುಳಿತನು. ಈ ಗೋವಿಂದನು ಹೇಡಿಯಾಗಿದ್ದನು.




ವೇರೂಳದ ಕೈಲಾಸ ದೇವಾಲಯ


ಆದ್ದರಿಂದ ಇವನ ತಮ್ಮನಾದ **ಧ್ರುವರಾಜ**ನು ಅಣ್ಣನನ್ನು ಪಟ್ಟದಿಂದ

---

೧. ಈ ಎಲಾಪುರ (ವೇರೂಳ) ಗ್ರಾಮವು, ಔರಂಗಾಬಾದ ಜಿಲ್ಹೆಯಲ್ಲಿ ಕನ್ನಡ ತಾಲೂಕಿನಲ್ಲಿದೆ. ಈ ಗ್ರಾಮದ ಬಳಿಯಲ್ಲಿದ್ದ ಗುಡ್ಡದಲ್ಲಿ ೩೪ ಕಲ್ಮನೆಗಳು ಇವೆ. ಮೊದಲಿನವು, ೧೨ ಬೌದ್ಧಕಲ್ಮನೆಗಳೂ ನಂತರ ೧೭ ಶೈವಕಲ್ಮನೆಗಳೂ ಬಳಿಕ ೫ ಜೈನಕಲ್ಮನೆಗಳೂ ೭. ಕೈಲಾಸವೆಂಬ ದೇವಾಲಯವು ೧೬ನೆಯ ಕಲ್ಮನೆಯಾಗಿದೆ.

ಮಾನ್ಯಖೇಟದ ರಾಷ್ಟ್ರಕೂಟರ ವಂಶಾವಳಿ.





ರಾಷ್ಟ್ರಕೂಟ ಸಾಮ್ರಾಜ್ಯದ ವಿಸ್ತಾರ.
(ಮಾನ್ಯಖೇಟ (ಮಳಖೇಡ) ರಾಷ್ಟ್ರಕೂಟರು)

ತಳ್ಳಿ, ಸಿಂಹಾಸನವನ್ನೇರಿದನು. (ಕ್ರಿ. ವ. ೭೮೩) ಈ ಧ್ರುವರಾಜನ ಮಗನೇ ಸುಪ್ರಸಿದ್ಧನಾದ **೩ನೆಯ ಗೋವಿಂದನು.**

ಈ **ಮುಮ್ಮಡಿ ಗೋವಿಂದರಾಜನು** ರಾಷ್ಟ್ರಕೂಟ ಅರಸರಲ್ಲಿ ಮಹಾ ಪರಾಕ್ರಮಶಾಲಿಯಾದನು. ಇವನ ಶೂರತನವನ್ನೂ ಜಾಣತನವನ್ನೂ ನೋಡಿ, ತಂದೆಯಾದ ಧ್ರುವರಾಜನು ಸಂತೋಷಬಟ್ಟು, ತಾನು ಇರುವಾಗಲೇ ಇವನಿಗೆ ರಾಜ್ಯಾಭಿಷೇಕವನ್ನು ಮಾಡಬೇಕೆಂದು ಏರ್ಪಾಡು ಮಾಡಿದನು. ಆದರೆ ಇದಕ್ಕೆ ಗೋವಿಂದನು ತನ್ನ ಒಪ್ಪಿಗೆಯನ್ನು ಕೊಡಲಿಲ್ಲ. ತಂದೆಯು ಮರಣಹೊಂದಿದ ಬಳಿಕ ಗೋವಿಂದನು ಸಿಂಹಾಸನವನ್ನೇರಿದನು. ಆಗ ಇವನ ಅಣ್ಣನಾದ **ಕಂಭರಾಜನು**, ಒಳಸಂಚು ಮಾಡಿ, ೧೨ ಜನ ಅರಸರ ಸಾಹಾಯ್ಯವನ್ನು ಪಡೆದುಕೊಂಡು, ಈ ಗೋವಿಂದನ ಮೇಲೆ ಏರಿಬಂದನು. ಕಾಲಕ್ಕೆ ಈ ಗೋವಿಂದರಾಜನಿಗೆ ಯಾರೂ ಸಹಾಯಕರಿದ್ದಿಲ್ಲ. ಇಂಥ ಬಿಕ್ಕಟ್ಟಿನ ಪ್ರಸಂಗದಲ್ಲಿಯೂ ಸಹ ಈ ಶೂರನಾದ ಗೋವಿಂದನು ಅತಿ ಶೌರ್ಯದಿಂದ ಯುದ್ಧಮಾಡಿ, ಅವರೆಲ್ಲರನ್ನು ಸೋಲಿಸಿದನು. ಮತ್ತು ರಾಜ್ಯದಲ್ಲಿ ಎಲ್ಲ ಕಡೆಗೂ ಶಾಂತತೆಯನ್ನುಂಟುಮಾಡಿದನು. ಈತನ ತಂದೆಯು **ಚೇರ**ದೇಶದ **ಗಂಗ** ಅರಸನನ್ನು ಸೆರೆಯಲ್ಲಿಟ್ಟಿದ್ದನು. ಆದರೆ ಇವನು ಉದಾರಬುದ್ಧಿಯಿಂದ ಆತನನ್ನು ಸೆರೆಯಿಂದ ಬಿಡುಗಡೆ ಮಾಡಿದನು. ಗಂಗರಾಜನು ಮಾತ್ರ ಈ ಉಪಕಾರವನ್ನು ನೆನಸದೆ, ತನ್ನ ದೇಶವನ್ನು ಮುಟ್ಟಿದಾಕ್ಷಣವೇ ದುರ್ಬುದ್ಧಿಯಿಂದ ಪುನಃ ಪುಂಡಾಟಿಕೆಯನ್ನೆಬ್ಬಿಸಿದನು. ಕೂಡಲೇ ಈ ಗೋವಿಂದನು ಚನ್ನಾಗಿ ಏಟುಕೊಟ್ಟು, ಅವನನ್ನು ಹಿಡಿದುಕೊಂಡು ಬಂದು ಪುನಃ ಸೆರೆಮನೆಯಲ್ಲಿಟ್ಟನು.

೩ನೆಯ ಗೋವಿಂದನು
ಕ್ರಿ. ವ. ೭೯೪-೮೧೪

ಆ ಮೇಲೆ ಉತ್ತರದ ಕಡೆಗೆ ವಿಜಯಯಾತ್ರೆಗೆ ಹೊರಟನು. ಮೊದಲು ಗುಜರಾಥ ದೇಶಕ್ಕೆ ಹೋದನು. ಆಗ ಇವನು ಬಂದಿದ್ದಾನೆಂಬ ಸುದ್ದಿಯನ್ನು ಕೇಳಿದಕೂಡಲೆ **ಗುರ್ಜರರಾಜನು** ದೇಶಬಿಟ್ಟು ಓಡಿಹೋದನು. ನಂತರ ಈತನು **ಗುಜರಾಥ** ದೇಶವನ್ನು ವಶಮಾಡಿಕೊಂಡು, **ಮಾಳವಾ**

ಗೋವಿಂದನ ವಿಜಯ ಯಾತ್ರೆ

ಪ್ರಾಂತದ ಕಡೆಗೆ ತಿರುಗಿದನು. ಆಗ ಅಲ್ಲಿಯ ಅರಸನು ಹೆದರಿ ತಾನಾಗಿಯೇ ಇವನಿಗೆ ಶರಣು ಬಂದನು. ಅಲ್ಲಿಂದ ಈತನು ವಿಂಧ್ಯಾದ್ರಿಯ ಕಡೆಗೆ ಸಾಗಲು, ಆ ಪ್ರಾಂತದ ಅರಸನಾದ **ಮಾರಶರ್ವ**ನು ತಾನಾಗಿಯೇ ಇವನ ಸಮೀಪಕ್ಕೆ ಬಂದು, ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ಬಹು ಬೆಲೆಯುಳ್ಳ ವಜ್ರ, ವೈಡೂರ್ಯ, ರತ್ನ ಮುಂತಾದವುಗಳನ್ನು ಕಾಣಿಕೆಯಾಗಿ ಕೊಟ್ಟನು. ಮುಂದೆ ಮಳೆಗಾಲವು ಬಂದದ್ದರಿಂದ ಅಲ್ಲಿಂದ ಹೊರಟು, **'ಶ್ರೀಭವನ'** ವೆಂಬ ಊರಿಗೆ ಹೋಗಿ, ಮಳೆಗಾಲವು ತೀರುವತನಕ ಅಲ್ಲಿಯೇ ತಳವೂರಿದನು. ಮಳೆಗಾಲವು ಕಳೆದ ನಂತರ ಸೈನ್ಯದೊಡನೆ ಅಲ್ಲಿಂದ ಹೊರಟು, ತುಂಗಭದ್ರಾ ನದಿಯತನಕ ಬಂದನು. ಅಲ್ಲಿಯೇ ಕೆಲವು ದಿವಸ ಪಾಳೆಯವನ್ನು ಹಾಕಿದನು. ಮತ್ತು ಕಾಂಚಿ ಪಲ್ಲವರಾಜನಾದ **ದಂತಿಗ**ನನ್ನು ಮತ್ತೊಮ್ಮೆ ಹಣಿದು, ಆತನನ್ನು ದಾಸಾನುದಾಸನನ್ನಾಗಿ ಮಾಡಿ, ಅವನಿಂದ ಕಪ್ಪಗಾಣಿಕೆಯನ್ನು ತೆಗೆದುಕೊಂಡನು. ಇದೇ ಕಾಲಕ್ಕೆ **ವೆಂಗಿ**ದೇಶದ ಚಾಳುಕ್ಯ ಅರಸನು ಸೇವಕನಂತೆ ಇಲ್ಲಿಗೆ ಬಂದು, ಗೋವಿಂದರಾಜನಿಗೆ ಶರಣು ಹೋದನು. ಈಪ್ರಕಾರ ಎಲ್ಲ ಕಡೆಗೂ ಜಯವನ್ನು ಹೊಂದಿ, ಈ ೩ನೆಯ ಗೋವಿಂದನು ದಕ್ಷಿಣಹಿಂದುಸ್ಥಾನದ ಸಾರ್ವಭೌಮರಾಜನಾದನು. (ಕ್ರಿ. ಶ. **೮೦೪**) ಮುಂದೆ ಹತ್ತು ವರ್ಷ ಸುಖದಿಂದ ರಾಜ್ಯವನ್ನಾಳಿದನು. ಈತನಿಗೆ **ಪ್ರಭೂತವರ್ಷ, ಜಗತ್ತುಂಗ, ಜಗದ್ರುದ್ರ** ಎಂಬ ಬಿರುದುಗಳಿದ್ದವು.

ನೃಪತುಂಗ
ಕ್ರಿ. ಶ. ೮೧೪-೮೭೭

೩ನೆಯ ಗೋವಿಂದನ ತರುವಾಯ ಅವನ ಮಗನಾದ **ನೃಪತುಂಗ**ನು ಸಿಂಹಾಸನವನ್ನೇರಿದನು. ಈತನಿಗೆ **ಅಮೋಘವರ್ಷ, ವೀರನಾರಾಯಣ, ಅತಿಶಯಧವಳ** ಮುಂತಾದ ಬಿರುದುಗಳಿದ್ದವು. ಇವನು ತಂದೆಯಂತೆ ಮಹಾಶೂರನೂ ರಾಜನೀತಿ ನಿಪುಣನೂ ಆಗಿದ್ದನು. ಅಲ್ಲದೆ ಈತನು ಸ್ವತಃ ಕನ್ನಡ ಕವಿಯಾಗಿದ್ದನು. ಇಷ್ಟೇ ಅಲ್ಲ, ತನ್ನ ಆಸ್ಥಾನದಲ್ಲಿ ಕನ್ನಡ ಕವಿಗಳಿಗೆ ಆಶ್ರಯವನ್ನು ಕೊಟ್ಟಿದ್ದನು. ಮತ್ತು

ತಾನು ಕನ್ನಡ ಭಾಷೆಯಲ್ಲಿ "**ಕವಿರಾಜಮಾರ್ಗ**" ಎಂಬ ಅಲಂಕಾರ ಶಾಸ್ತ್ರದ ಗ್ರಂಥವನ್ನು ಬರೆದಿದ್ದಾನೆ. ಈಗ ನಮಗೆ ದೊರೆತಿರುವ ಪ್ರಾಚೀನ ಕನ್ನಡ ಗ್ರಂಥಗಳಲ್ಲಿ ಇದೇ ಮೊದಲನೆಯದು. ಈ ರಾಜರ್ಷಿಯಾದ ನೃಪತುಂಗನು **೬೪ ವರ್ಷ** ರಾಜ್ಯವನ್ನಾಳಿ, ತಾನೇ ಸಂತೋಷದಿಂದ ಸಿಂಹಾಸನದಿಂದಿಳಿದು, ತನ್ನ ಮಗನಾದ **ಇಮ್ಮಡಿ ಕೃಷ್ಣ**ನಿಗೆ ಪಟ್ಟಗಟ್ಟಿದನು. ನಂತರ ವಾನಪ್ರಸ್ಥ ಆಶ್ರಮವನ್ನು ಹೊಂದಿದನು. ಈತನು ವೈದಿಕ ಮತದವನು; ಆದರೂ ಜೈನಧರ್ಮಕ್ಕೆ ಬಹಳ ಉತ್ತೇಜನವನ್ನು ಕೊಟ್ಟನು. ಅಲ್ಲದೆ **ಜಿನಸೇನ ಭಟ್ಟಾರಕರ** ಶಿಷ್ಯನಾಗಿದ್ದನು.

ಈ ನೃಪತುಂಗನ ತರುವಾಯ **ಇಮ್ಮಡಿ ಕೃಷ್ಣನು**, **ಮುಮ್ಮಡಿ ಇಂದ್ರ**ನು, **ಇಮ್ಮಡಿ ಅಮೋಘವರ್ಷ**ನು, **ನಾಲ್ವಡಿ ಗೋವಿಂದ**ನು, **ಮುಮ್ಮಡಿ ಅಮೋಘವರ್ಷ**ನು ಈ ಪ್ರಕಾರ ಐದು ಜನ ಅರಸರು ಆಳಿದ ನಂತರ ಸುಪ್ರಸಿದ್ಧನಾದ **ಮುಮ್ಮಡಿ ಕೃಷ್ಣರಾಜ**ನು ಸಿಂಹಾಸನವನ್ನೇರಿದನು.

ಮುಮ್ಮಡಿ ಕೃಷ್ಣನು
ಕ್ರಿ. ಶ ೯೩೯–೯೬೮

ಮುಮ್ಮಡಿ ಕೃಷ್ಣರಾಜನು ಮಹಾ ಪ್ರತಾಪಶಾಲಿಯಾದ ರಾಜನು. ಈತನು ದೊಡ್ಡ ಸೈನ್ಯದೊಡನೆ ದಕ್ಷಿಣದೇಶಕ್ಕೆ ವಿಜಯಯಾತ್ರೆಗೆ ಹೊರಟು, ಕಾಂಚಿಯ **ಪಲ್ಲವ**ರನ್ನೂ **ಪಾಂಡ್ಯ**, **ಚೋಳ**, **ಚೇರ** ಅರಸರನ್ನೂ ಸದೆ ಬಡೆದು, ಅವರೆಲ್ಲರನ್ನು ಮೆತ್ತಗೆ ಮಾಡಿದನು. ಹಾಗೆಯೇ ಮುಂದಕ್ಕೆ ಸಾಗಿ, **ಸಿಂಹಳದ್ವೀಪ**ದಲ್ಲಿ ಹೊಕ್ಕು, ಅಲ್ಲಿಯ ಅರಸನನ್ನು ಬಗ್ಗುಬಡಿದು, **ರಾಮೇಶ್ವರ**ದ ಬಳಿಯಲ್ಲಿ ಒಂದು **ಜಯಸ್ತಂಭ**ವನ್ನು ನಿಲ್ಲಿಸಿದನು. ಇದೇ ಪ್ರಕಾರ ಉತ್ತರ ದೇಶಗಳಿಗೂ ಹೋಗಿ, **ಗುರ್ಜರ ರಾಜ** ಮೊದಲಾದವರನ್ನು ದಂಡಿಸಿದನು.

ಈತನು ವಿದ್ಯಾಪಕ್ಷಪಾತಿಯಾಗಿದ್ದನು. ಸುಪ್ರಸಿದ್ಧ ಕನ್ನಡ ಕವಿಯಾದ **ಪೊನ್ನ**ನಿಗೆ "**ಕವಿಚಕ್ರವರ್ತಿ**" ಎಂಬ ಬಿರುದನ್ನು ಕೊಟ್ಟನು. ಕಾಣ್ವಶಾಖೆಯ ಬ್ರಾಹ್ಮಣನಾದ **ಗಜಾಂಕುಶ ನಾರಾಯಣ**ನೆಂಬುವನು ಈ ಕೃಷ್ಣರಾಜನಿಗೆ ಮುಖ್ಯ ಮಂತ್ರಿಯಾಗಿದ್ದನು. ಈ ನಾರಾಯಣ

ಮಂತ್ರಿಗೆ ಬಲಗೈಯಂತೆ ಸಮರ್ಥನಾದ **ಚಕ್ರಾಯುಧಬುಧನೆಂಬ** ಉಪ ಮಂತ್ರಿಯಿದ್ದನು. ಇವನೂ ಕಾಣ್ವಶಾಖೆಯ ಬ್ರಾಹ್ಮಣನಾಗಿದ್ದು, **ಪವಿಟ್ಟಗೆ** ಗ್ರಾಮದ ಅಧಿಪತಿಯಾಗಿದ್ದನು. ಈತನು ಸಕಲ ವಿದ್ಯೆಗಳಿಗೆ ಘನಪಂಡಿತನೂ ಸುಶೀಲನೂ ಆಗಿದ್ದು, ಆ[೧] **ಪವಿಟ್ಟಗೆ** ಗ್ರಾಮದಲ್ಲಿ **ವಿಶ್ವವಿದ್ಯಾಲಯವನ್ನು** ಸ್ಥಾಪಿಸಿದ್ದನು. ಈ ವಿದ್ಯಾಲಯದಲ್ಲಿ– ವೇದಗಳು, ದರ್ಶನಗಳು, ಮೀಮಾಂಸೆಗಳು, ಧರ್ಮಶಾಸ್ತ್ರಗಳು ಮುಂತಾದ ಎಲ್ಲ ವೈದಿಕ ವಿದ್ಯೆಗಳನ್ನು ಕಲಿಸುತ್ತಿದ್ದರು. **ಕವಿರಹಸ್ಯ**ವೆಂಬ ಕಾವ್ಯವನ್ನು ಬರೆದ **ಹಲಾಯುಧ**ನೆಂಬ ಸಂಸ್ಕೃತ ಕವಿಯೂ ಈ ಕೃಷ್ಣರಾಜನ ಆಶ್ರಯದಲ್ಲಿದ್ದನು. ಇದೇ ಕಾಲಕ್ಕೆ **ಪುಲಿಗೆರೆ**ಯಲ್ಲಿ ಸುಪ್ರಸಿದ್ಧ ಕನ್ನಡ ಕವಿಯಾದ **ಆದಿ-ಪಂಪನು** ಕನ್ನಡದಲ್ಲಿ ಆದಿಪುರಾಣವನ್ನೂ ಭಾರತವನ್ನೂ ರಚಿಸಿದನು. (ಕ್ರಿ. ವ. ೯೪೧). ಸಾರಾಂಶ, ಈ ಕೃಷ್ಣರಾಜನ ಆಳಿಕೆಯಲ್ಲಿ ಸಕಲ ವಿದ್ಯೆಗಳಿಗೆ ಉತ್ತೇಜನವುಂಟಾಯಿತು. ಈ ಚಕ್ರವರ್ತಿಯ ಕಾಲಕ್ಕೆ ರಾಷ್ಟ್ರಕೂಟ ಸಾಮ್ರಾಜ್ಯದ ವೈಭವವು ಶಿಖರಕ್ಕೆ ಹೋಗಿ ಮುಟ್ಟಿತು.

ಉತ್ತೇಜನವು

ಇವನ ತರುವಾಯ **ಕೊಟ್ಟಿಗ, ಇಮ್ಮಡಿ ಕಕ್ಕಲ** ಎಂಬಿಬ್ಬರು ಬಲಹೀನರಾದ ಅರಸರು ಸಿಂಹಾಸನವನ್ನೇರಿದರು. ಚಾಳುಕ್ಯವಂಶದ **ನೂರ್ಮಡಿ ತೈಲಪನು**, ಕೊನೆಯ ಅರಸನಾದ ಇಮ್ಮಡಿ ಕಕ್ಕಲದೇವನನ್ನು ಗೆದ್ದು, ಅವನ ಮಗಳಾದ **ಜಾಕಬ್ಬೆ**ಯನ್ನು ಮದುವೆ ಮಾಡಿಕೊಂಡನು. ಹಾಗೂ ಚಾಳುಕ್ಯ ಸಾಮ್ರಾಜ್ಯವನ್ನು ಪುನಃ ಸ್ಥಾಪಿಸಿದನು. (ಕ್ರಿ. ವ. ೯೭೩).

ರಾಷ್ಟ್ರಕೂಟ ಸಾಮ್ರಾಜ್ಯದ ಕೊನೆ

ಸಿಂಹಾವಲೋಕನವು :— ರಾಷ್ಟ್ರಕೂಟ ಅರಸರಲ್ಲಿ ಕೆಲವರು ಶೈವರಾಗಿಯೂ ಕೆಲವರು ವೈಷ್ಣವರಾಗಿಯೂ ಇದ್ದರು. ಈ ಕಾಲಕ್ಕೆ ಜೈನಧರ್ಮವು

---

೧. ಈ ಪವಿಟ್ಟಗೆಯ ಗ್ರಾಮವನ್ನು ಈಗಿನ ಕಾಲದ ಜನರು 'ಸಾಲೋಟಗಿ' ಎಂದು ಕರೆಯುತ್ತಾರೆ. ಶಾಲೆಯ ಪವಿಟ್ಟಗೆ = ಸಾಲೆಯ ಪವಿಟ್ಟಗೆ = ಸಾಲೋಟಗಿ ಎಂದಾಗಿದೆ. ಈ ಗ್ರಾಮವು, ವಿಜಾಪುರ ಜಿಲ್ಲೆಯಲ್ಲಿ ಇಂಡಿ ತಾಲೂಕಿನಲ್ಲಿದೆ.

ಉತ್ತಮ ಸ್ಥಿತಿಯಲ್ಲಿತ್ತು. ಆದರೆ ಬೌದ್ಧಧರ್ಮವು ತೀರ ಹೀನಸ್ಥಿತಿಗಿಳಿದಿತ್ತು. ಈ ರಾಷ್ಟ್ರಕೂಟರು '**ಕೈಲಾಸ**' ಮೊದಲಾದ ಕಲ್ಮನೆಗಳನ್ನು **ವೇರೂಳ**ಗುಡ್ಡದಲ್ಲಿ ಕೊರೆಯಿಸಿದರು. ಇದರಿಂದ ಶಿಲ್ಪಕಲೆಗೆ ಕಳೆಯೇರಿತು. ಮತ್ತು **ಸವಿಟ್ಟಿಗೆ**ಯಲ್ಲಿ ವಿದ್ಯಾಲಯವು ಸ್ಥಾಪಿಸಲ್ಪಟ್ಟು, ವೈದಿಕ ವಿದ್ಯೆಗಳಿಗೆ ಉತ್ತೇಜನವು ದೊರೆಯಿತು; ಕನ್ನಡ, ಸಂಸ್ಕೃತ ಕವಿಗಳಿಗೆ ರಾಜಾಶ್ರಯವು ಸಿಕ್ಕಿತು. **ನೃಪತುಂಗ**ನ ಆಳಿಕೆಯಲ್ಲಿ ರಾಷ್ಟ್ರಕೂಟರ ರಾಜಧಾನಿಯಾದ **ಮಾನ್ಯಖೇಟ** (ಮಳಖೇಡ) ನಗರವು ಇಂದ್ರನ ಅಮರಾವತಿ ಪಟ್ಟಣವನ್ನು ಹೀಯಾಳಿಸುವ ಹಾಗೆ ಶೃಂಗಾರ ಮಾಡಲ್ಪಟ್ಟಿತು.

೮ನೆಯ ಪ್ರಕರಣ

ಚಾಳುಕ್ಯರು ಪುನಃ ಸಾರ್ವಭೌಮರಾಜರಾದರು

(ಕ್ರಿ. ಶ. ೯೭೩ ರಿಂದ ೧೧೮೯ ರ ವರೆಗೆ)

ಚಾಳುಕ್ಯರ ಅಜ್ಞಾತವಾಸ

ಬಾದಾಮಿ ಚಾಳುಕ್ಯರಲ್ಲಿ ಕೊನೆಯ ಅರಸನಾದ ಇಮ್ಮಡಿ ಕೀರ್ತಿವರ್ಮನು ಕ್ರಿ. ಶ. ೭೫೩ರಲ್ಲಿ ಸಾರ್ವಭೌಮ ಪದವಿಯನ್ನು ಕಳೆದುಕೊಂಡ ನಂತರ ಮುಂದೆ ಕ್ರಿ. ಶ. ೯೭೩ರಲ್ಲಿ **ನೂರ್ಮಡಿ ತೈಲಪ**ನು, ಈ ಸಾರ್ವಭೌಮ ರಾಜ್ಯಾಧಿಕಾರವನ್ನು ಪುನಃ ದೊರಕಿಸುವ ತನಕ **೨೧೬ ವರ್ಷ** ಈ ಚಾಳುಕ್ಯರು ಅಜ್ಞಾತವಾಸದಲ್ಲಿದ್ದರೆಂದು ಹೇಳಿದರೆ ಚನ್ನಾಗಿ ಒಪ್ಪುತ್ತದೆ. ಯಾಕೆಂದರೆ, ಈ ಕಾಲದಲ್ಲಿ ಬಾದಾಮಿ ಚಾಳುಕ್ಯರ ಈ ಮುಖ್ಯ ಮನೆತನದವರು ಎಲ್ಲಿ ಇರುತ್ತಿದ್ದರು? ಯಾವ ಪ್ರಾಂತವನ್ನು ಆಳುತ್ತಿದ್ದರು? ಎಂಬುದು ಇನ್ನೂ ತಿಳಿದು ಬಂದಿಲ್ಲ. ಈ ಕಾಲಕ್ಕೆ ವೆಂಗಿಯ ಚಾಳುಕ್ಯರೂ ಪುಲಿಗೆರೆಯ ಚಾಳುಕ್ಯರೂ ಮಾತ್ರ ಪ್ರಸಿದ್ಧರೀತಿಯಿಂದ ರಾಷ್ಟ್ರಕೂಟರ ಮಾಂಡಲಿಕರಾಗಿ ಚಿಕ್ಕ ಚಿಕ್ಕ ಪ್ರಾಂತಗಳನ್ನು ಆಳುತ್ತಿದ್ದರು. ಇವೆರಡೂ ಮನೆತನದವರು, ಬಾದಾಮಿಯ ಮನೆತನಕ್ಕೆ ದೂರಿನ ವಂಶಸ್ಥ


ರಾಗಿದ್ದಾರೆ. ಆದರೆ ಈ ನೂರ್ಮಡಿ ತೈಲಪನು ಕೇವಲ ಬಾದಾಮಿ ಚಾಳುಕ್ಯರ ಮನೆತನದವನಾಗಿದ್ದಾನೆ.

ನೂರ್ಮಡಿ ತೈಲಪನು ಚಾಳುಕ್ಯ ಸಾಮ್ರಾಜ್ಯವನ್ನು ಪುನಃ ಸ್ಥಾಪಿಸಿದ್ದರಿಂದ ಈತನು "**ಚಾಳುಕ್ಯಾಭರಣ,**" "**ಸತ್ಯಾಶ್ರಯ ಕುಲತಿಲಕ,**" "**ಆಹವಮಲ್ಲ**" ಎಂಬ ಬಿರುದುಗಳನ್ನು ಪಡೆದನು. ಇವನು **ಮಳಖೇಡ, ರತ್ನಗಿರಿ** ಪಟ್ಟಣಗಳನ್ನು ತನ್ನ ರಾಜಧಾನಿಗಳನ್ನಾಗಿ ಮಾಡಿಕೊಂಡು, **೨೪ ವರ್ಷ** ಜಾಣತನದಿಂದ ರಾಜ್ಯವನ್ನಾಳಿದನು. ಈ ತೈಲಪನು ದಕ್ಷಿಣ ದೇಶಕ್ಕೆ

ನೂರ್ಮಡಿ ತೈಲಪ
ಕ್ರಿ. ಶ. ೯೭೩-೯೯೭

ದಂಡೆತ್ತಿ ಹೊರಟು, ಮೊದಲು **ಚೋಳ**ರನ್ನು ಹಣ್ಣಿಗೆ ತಂದು ಅವರಿಂದ ಕಪ್ಪಗಾಣಿಕೆಯನ್ನು ತೆಗೆದುಕೊಂಡನು. **ಚೇದಿ, ಉತ್ಕಲ** ದೇಶಗಳ ಅರಸರನ್ನು ಗೆದ್ದು, ಅವರನ್ನು ತನ್ನ ಮಾಂಡಲಿಕರನ್ನಾಗಿ ಮಾಡಿದನು. **ಸವದತ್ತಿ**ಯ **ರಟ್ಟರಸ**ರೂ **ಕೊಂಕಣ**ದ **ಶಿಲಾಹಾರ**ರೂ ಇವನಿಗೆ ದಾಸಾನುದಾಸರಾದರು. **ಗುಜರಾಥ** ದೇಶದ ಅರಸನೂ ಈತನಿಗೆ ಅಂಕಿತನಾದನು. ಆ ಮೇಲೆ ತೈಲಪನು, **ದೇವಗಿರಿ ಯಾದವ ಇಮ್ಮಡಿ ಭಿಲ್ಲಮ**ನನ್ನು ತನ್ನ ಕೈಕೆಳಗೆ ತೆಗೆದುಕೊಂಡು, **ಮಾಳವಾ** ದೇಶವನ್ನು ಗೆದ್ದನು. ಆಗ ಮಾಳವಾ ಪ್ರಾಂತದ **ಮುಂಜರಾಜ**ನು ತೈಲಪನ ಮುಂದೆ ತನ್ನ ಗತಿಯೇನಾದೀತೆಂಬುದನ್ನು ಅರಿಶುಕೊಳ್ಳದೆ, ಕರ್ನಾಟಕದ ಮೇಲೆ ಯುದ್ಧಕ್ಕೆ ಬರಲು ಹವಣಿಸಿಕೊಳ್ಳಲಾರಂಭಿಸಿದನು. ಆ ಕಾಲಕ್ಕೆ ಆತನ ವೃದ್ಧಮಂತ್ರಿಯಾದ **ರುದ್ರಾದಿತ್ಯ**ನು—"ನೀವು ತೈಲಪನನ್ನು ತಡವಬೇಡಿರಿ; ತಡವಿದರೆ ನಿಮ್ಮ ಪರಿಣಾಮವು ನೆಟ್ಟಗಾಗಲಿಕ್ಕಿಲ್ಲ." ಎಂದು ಕೈಯಲ್ಲಿ ಕಡ್ಡಿಕೊಟ್ಟು, ಪರಿಪರಿಯಿಂದ ಮುಂಜನಿಗೆ ಉಪದೇಶ ಮಾಡಿದನು. ಅವನ ಈ ಹಿತದ ಮಾತನ್ನು ಲೆಕ್ಕಿಸದೆ, ಮುಂಜನು ಗೋದಾವರಿ ನದಿಯನ್ನು ದಾಟಿ, ಕರ್ನಾಟಕದ ಮೇಲೆ ಯುದ್ಧಕ್ಕೆ ಬಂದನು. ಕೂಡಲೆ ತೈಲಪನು ದೊಡ್ಡ ದಂಡಿನೊಡನೆ ಅವನ ಮೇಲೆ ಸಾಗಿಹೋಗಿ, ಅವನ ಸೈನ್ಯವನ್ನು ಇರಿದು ನೆಲಕ್ಕೆ ಉರುಳಿಸಿದನು. ಹಾಗೂ ಆ ಮುಂಜ

ನನ್ನು ಸೆರೆಹಿಡಿದು, ಸೆರೆಮನೆಯಲ್ಲಿಟ್ಟನು. ಆದರೆ ಅವನು ಆ ಸೆರೆಮನೆಯಿಂದ ತಪ್ಪಿಸಿಕೊಂಡು ಓಡಿಹೋಗಬೇಕೆಂದು ಪ್ರಯತ್ನಮಾಡಿದ್ದರಿಂದ ಅವನನ್ನು ಮನೆಮನೆಗೆ ಭಿಕ್ಷೆಬೇಡುವದಕ್ಕೆ ಕಳುಹಿಸಿದನು; ಕೊನೆಗೆ ಆತನ ತಲೆಯನ್ನು ಹೊಡಿಸಿದನು! ತೈಲಪನು ಶೂರನಾಗಿದ್ದಂತೆ ವಿದ್ಯಾಪಕ್ಷಪಾತಿಯೂ ಆಗಿದ್ದನು. ಸುಪ್ರಸಿದ್ಧ ಕನ್ನಡ ಕವಿಯಾದ **ರನ್ನ**ನಿಗೆ " **ಕವಿಚಕ್ರವರ್ತಿ** "ಎಂಬ ಬಿರುದನ್ನೂ ಕನಕದಂಡ, ಛತ್ರ, ಚಾಮರ, ಆನೆ ಮುಂತಾದ ಬಹುಮಾನಗಳನ್ನೂ ಕೊಟ್ಟನು. ಈ ಕವಿಯು ತಿರುಳಕನ್ನಡ ಭಾಷೆಯಲ್ಲಿ " **ಗದಾಯುದ್ಧ** " ವೆಂಬ ಕಾವ್ಯವನ್ನು ಬರೆದಿದ್ದಾನೆ. ಈ ಕವಿಯು ಜೈನಮತದವನು. ಈ ತೈಲಪನ ಆಳಿಕೆಯಲ್ಲಿ **ರಾಚಮಲ್ಲ**ನೆಂಬ ಗಂಗರಾಜನ ಮಂತ್ರಿಯಾದ **ಚಾವುಂಡರಾಯ**ನು ಜೈನರ ಪವಿತ್ರಕ್ಷೇತ್ರವಾದ **ಶ್ರವಣಬೆಳ್ಗೊಳ**ದಲ್ಲಿ ' **ಗೊಮ್ಮಟೇಶ್ವರ** 'ಎಂಬ ಜಿನಮೂರ್ತಿಯ ಪ್ರತಿಷ್ಠೆಯನ್ನು ಮಾಡಿಸಿದನು. ಇದು ಬಹಳ ಭವ್ಯವಾದ ಮೂರ್ತಿಯಾಗಿದೆ. ಇದರ ಉದ್ದಳತೆಯು **೫೭ ಅಡಿ**! ಈ ತೈಲಪ ಚಕ್ರವರ್ತಿಯು ಕ್ರಿ. ವ. **೯೯೭**ರಲ್ಲಿ ಮರಣಹೊಂದಿದನು.



ಗೊಮ್ಮಟೇಶ್ವರ

ತೈಲಪನ ತರುವಾಯ **ಇರಿವಬೆಡಂಗ, ೫ನೆಯ ವಿಕ್ರಮಾದಿತ್ಯ, ಜಯಸಿಂಹ** ಈ ಮೂವರು ಕ್ರಮದಿಂದ ರಾಜ್ಯವನ್ನಾಳಿದರು. ನಂತರ ಮೊದಲನೆಯ **ಸೋಮೇಶ್ವರ**ನು, **'ತ್ರೈಲೋಕ್ಯಮಲ್ಲ' 'ಆಹವಮಲ್ಲ'** ಎಂಬೆರಡು ಬಿರುದುಗಳನ್ನು ಧರಿಸಿ, ಕ್ರಿ. ವ. **೧೦೪೨**ರಿಂದ **೧೦೬೮**ರ ವರೆಗೆ ಒಳ್ಳೆಯ ದಕ್ಷತೆಯಿಂದ ಸಾಮ್ರಾಜ್ಯವನ್ನಾಳಿದನು. ಇವನು ಕ್ರಿ. ವ. **೧೦೫೩**ರಲ್ಲಿ **ಕಲ್ಯಾಣ** ಪಟ್ಟಣವನ್ನು


ಹೊಸದಾಗಿ ಕಟ್ಟಿಸಿ, ಅದನ್ನು ತನ್ನ ರಾಜಧಾನಿಯನ್ನು ಮಾಡಿಕೊಂಡನು. ಅವನಿಗೆ **ಇಮ್ಮಡಿ ಸೋಮೇಶ್ವರ, ೬ನೆಯ ವಿಕ್ರಮಾದಿತ, ಮುಮ್ಮಡಿ ಜಯಸಿಂಹ, ವಿಷ್ಣುವರ್ಧನ** ಎಂಬ ನಾಲ್ಕು ಜನ ಗಂಡುಮಕ್ಕಳಿದ್ದರು. ಇವರಲ್ಲಿ ಎರಡನೆಯ ಮಗನಾದ ೬ನೆಯ ವಿಕ್ರಮಾದಿತ್ಯನು ಮಹಾ ಪರಾಕ್ರಮಶಾಲಿಯೂ ರಾಜನೀತಿನಿಪುಣನೂ ಆಗಿದ್ದನು.


೧ನೆಯ ಸೋಮೇಶ್ವರನು

ಈತನ ಸದ್ಗುಣಗಳನ್ನು ನೋಡಿ, ತಂದೆಯು ಈ ಎರಡನೆಯ ಮಗನಿಗೇನೇ ರಾಜ್ಯಾಭಿಷೇಕವನ್ನು ಮಾಡಬೇಕೆಂದು ಏರ್ಪಾಡು ಮಾಡಿದನು. ಆಗ ಈ ವಿಕ್ರಮಾದಿತ್ಯನು ವಿನಯದಿಂದ ತಂದೆಗೆ ಸ್ಪಷ್ಟವಾಗಿ ಹೇಳಿದ್ದೇನೆಂದರೆ, "ಈ ಯುವರಾಜ ಪದವಿಯು ನನಗೆ ಬೇಡ; ಅಣ್ಣನಿಗೇ ಇರಲಿ." ಈ ಮಾತನ್ನು ಆಲಿಸಿ, ತಂದೆಯು ಹಿರಿಯಮಗನಾದ ಇಮ್ಮಡಿ ಸೋಮೇಶ್ವರನಿಗೆ ಯುವರಾಜ ಪದವಿಯನ್ನು ಕೊಟ್ಟನು. ಆದರೆ ಆ ಯುವರಾಜ ಸ್ಥಾನದ ಅಧಿಕಾರದ ಕಾರ್ಯಗಳನ್ನೆಲ್ಲ ಈ ವಿಕ್ರಮಾದಿತ್ಯನೇ ಮಾಡುತ್ತಿದ್ದನು. ಯುದ್ಧದ ಪ್ರಸಂಗವು ಬಂದಾಗ ತಂದೆಯು ಈ ವಿಕ್ರಮಾದಿತ್ಯನನ್ನೇ ಸಂಗ್ರಾಮಕ್ಕೆ ಕಳಿಸುತ್ತಿದ್ದನು. ವಿಕ್ರಮಾದಿತ್ಯನು ಮಾಡಿದ ಮೊದಲನೆಯ ಕೆಲಸವೇನೆಂದರೆ, **ಚೋಳ** ಅರಸನಾದ **ರಾಜೇಂದ್ರ**ನನ್ನು ಚನ್ನಾಗಿ ಹಣಿದು, ಆತನನ್ನು ತಲೆಯೆತ್ತದಂತೆ ಮಾಡಿದನು. ರಾಜ್ಯವನ್ನು ಕಳೆದುಕೊಂಡ **ಮಾಳವಾ** ದೇಶದ ಅರಸನು ಈ ವಿಕ್ರಮಾದಿತ್ಯನ ಸಾಹಾಯ್ಯವನ್ನು ಬೇಡಿದನು. ಆ ಕ್ಷಣವೇ ಈ ವಿಕ್ರಮಾಂಕನು ಅಲ್ಲಿಗೆ ಹೋಗಿ, ಅವನ ವೈರಿಯನ್ನು ನಾಶಮಾಡಿ, ಅವನನ್ನು ಪುನಃ ಮಾಳವಾದೇಶದ ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಹಾಗೆಯೇ ಈ ವೀರ ವಿಕ್ರಮಾಂಕನು, ಉತ್ತರ ಹಿಂದುಸ್ಥಾನದಲ್ಲಿ ವಿಜಯಯಾತ್ರೆಗೆ ಹೊರಟನು. ಅಲ್ಲಿ, **ಗೌಡ** (ಬಂಗಾಲ), **ಕಾಮರೂಪ** (ಆಸಾಮ) ದೇಶಗಳನ್ನು ಗೆದ್ದು ಅವುಗಳನ್ನು ವಶಮಾಡಿಕೊಂಡನು. ಆ ಬಳಿಕ ದಕ್ಷಿಣ ಹಿಂದುಸ್ಥಾನದ ಕಡೆಗೆ ತಿರುಗಿ, ಮೊದಲು **ಕೇರಳ** ದೇಶವನ್ನು ಗೆದ್ದನು. ಆ ಮೇಲೆ **ಸಿಂಹಳದ್ವೀಪ**ಕ್ಕೆ ಹೋದನು. ಇವನು ಹೋದ ಕೂಡಲೇ


ವಿಕ್ರಮಾದಿತ್ಯನ ವಿಜಯಯಾತ್ರೆ

ಕಲ್ಯಾಣ ಚಾಳುಕ್ಯರಾಜರ ವಂಶಾವಳಿ.




ಅಖಿಲಭಾರತೀಯ
ಚಕ್ರವರ್ತಿ ವಿಕ್ರಮಾಂಕನ
ಸಾಮ್ರಾಜ್ಯವು
ಕಾಮರೂಪ
(ಅಸ್ಸಾಮು)
ಗಂಗಾನದಿ
ಗುಜರಾಥ
ನರ್ಮದಾ ನದಿ
ಕಲಿಂಗ
ಅರಬೀ
ಸಮುದ್ರ
ಬಂಗಾಲ
ಉಪಸಾಗರ.
ಚೇರ
ಕಲ್ಯಾಣ ಚಾಳುಕ್ಯರ
ಸಾಮ್ರಾಜ್ಯದ ವಿಸ್ತಾರ.

ಚೋಳರಾಜರ ವಂಶಾವಳಿ



ಅಲ್ಲಿಯ ಅರಸನು ಇವನಿಗೆ ಶರಣು ಬಂದನು. ತದನಂತರ ಆಕಾಲದಲ್ಲಿ ಪ್ರಸಿದ್ಧವಾದ **ಗಂಗಕುಂಡ**ವೆಂಬ ಪಟ್ಟಣವನ್ನು ಕೈವಶಮಾಡಿಕೊಂಡನು. ತರುವಾಯ **ಚೋಳ** ದೇಶದಲ್ಲಿ ಹೊಕ್ಕನು. ಆಗ ಅಲ್ಲಿಯ ಅರಸನು, ಇವನಿಗೆ ಹೆದರಿ ಓಡಿಹೋಗಿ, ಗುಡ್ಡದ ದರಿಯಲ್ಲಿ ಅಡಗಿಕೊಂಡು ಕುಳಿತನು. ಇತ್ತ ಈ ವಿಕ್ರಮಾಂಕನು, ಅವನ ರಾಜಧಾನಿಯಾದ **ಕಾಂಚಿ** ಪಟ್ಟಣದಲ್ಲಿ ಪ್ರವೇಶಮಾಡಿ, ಅವನ ಬೊಕ್ಕಸವನ್ನೆಲ್ಲ ಸುಲಿದುಕೊಂಡು, **ವೆಂಗಿ, ಚಕ್ರಕೋಟೆ**ಗಳ ಕಡೆಗೆ ತೆರಳಿದನು.

ಸೋಮೇಶ್ವರನ ಜಲಸಮಾಧಿ

ವಿಕ್ರಮಾದಿತ್ಯನು ಈ ಪ್ರಕಾರ ವಿಜಯಯಾತ್ರೆಯಲ್ಲಿ ತೊಡಗಿರಲು, ಇವನ ತಂದೆಯಾದ ಆಹವಮಲ್ಲನಿಗೆ ಒಮ್ಮಿಂದೊಮ್ಮೆ ಕೆಟ್ಟ ಜ್ವರವು ಬಂದು, ಆತನು ಬಹಳ ಗಾಬರಿಯನ್ನು ಮಾಡಿದನು. ಆಗ ಅವನು—"ನಾನು ಇನ್ನೇನು ಈ ಬೇನೆಯಿಂದ ಪಾರಾಗುವದಿಲ್ಲ. ನನಗೆ ಮರಣ ಕಾಲವು ಸಮೀಪಿಸಿತು." ಎಂದು ನುಡಿದು, "ನನ್ನನ್ನು ತುಂಗಭದ್ರಾ ನದಿಯ ತೀರಕ್ಕೆ ಕರೆದುಕೊಂಡು ಹೋಗಿರಿ." ಎಂದು ಹೇಳಿದನು. ಕೂಡಲೇ ಆತನ ಅಪ್ಪಣೆಯಂತೆ **ಕುರವತ್ತಿ** ಗ್ರಾಮದ ಬಳಿಯಲ್ಲಿ ತುಂಗ-ಭದ್ರಾನದಿಯ ತೀರಕ್ಕೆ ಕರೆದುಕೊಂಡು ಹೋದರು. ಆ ದಿವಸ ಎಂದರೆ **ಶಕ ವರ್ಷದ ೯೯೦**ನೆಯ ಕೀಲಕನಾಮ ಸಂವತ್ಸರದ ಚೈತ್ರ ಬಹುಳ ಅಷ್ಟಮಿ ರವಿವಾರ ದಿನ ಆತನು ತುಂಗಭದ್ರಾ ನದಿಯಲ್ಲಿ ಸ್ನಾನಮಾಡಿ, ಹೇರಳವಾಗಿ ಬಂಗಾರವನ್ನು ದಾನಮಾಡಿದನು. ಮೇಲೆ ಮತ್ತೆ ಆ ನದಿಯಲ್ಲಿ ಹೊಕ್ಕು, ಕುತ್ತಿಗೆಯ ತನಕ ನೀರು ಬರುವವರೆಗೆ ಮುಂದೆ ಹೋಗಿ, ತೆರೆಗಳ ಗರ್ಜನೆಯೂ ಸಂಗೀತ, ವಾದ್ಯಗಳ ನಿನಾದವೂ ಕೂಡಿದ ಒಂದೇ ಒಂದು ಕೋಲಾಹಲವು ನಡೆದಿರಲು, ಆ ಸಮಯದಲ್ಲಿ ಒಮ್ಮಿಂದೊಮ್ಮೆ ಆಹವಮಲ್ಲನಾದ ಸೋಮೇಶ್ವರನು **ಜಲಸಮಾಧಿ**ಯನ್ನು ಹೊಂದಿದನು! ಎಂದರೆ ಸ್ವರ್ಗಸ್ಥನಾದನು. (ಕ್ರಿ. ವ. ೧೦೬೮).

ಆಹವಮಲ್ಲನಾದ ೧ನೆಯ ಸೋಮೇಶ್ವರನ ತರುವಾಯ ಅವನ ಜ್ಯೇಷ್ಠಪುತ್ರನಾದ **ಇಮ್ಮಡಿ ಸೋಮೇಶ್ವರನು, "ಭುವನೈಕಮಲ್ಲ"**

ಎಂಬ ಬಿರುದನ್ನು ಧರಿಸಿ, ಕ್ರಿ. ವ. ೧೦೬೮ರಲ್ಲಿ ಸಿಂಹಾಸನವನ್ನೇರಿದನು. ಇತ್ತ ವಿಜಯಯಾತ್ರೆಗೆ ಹೋದ ವಿಕ್ರಮಾದಿತ್ಯನು **ವೆಂಗಿ** ದೇಶವನ್ನು ಗೆದ್ದುಕೊಂಡು ತಿರುಗಿ ಬರುವಾಗ ದಾರಿಯಲ್ಲಿ, ತಂದೆಯು ಮರಣಹೊಂದಿದ ಸುದ್ದಿಯನ್ನು ಕೇಳಿದನು; ಆ ಕೂಡಲೇ ಹೊರಟು ಬೇಗನೆ **ಕಲ್ಯಾಣ** ರಾಜಧಾನಿಗೆ ಬಂದನು. ಆಗ ಅಣ್ಣನು ಬಹಳ ಪ್ರೀತಿಯಿಂದ ಇವನನ್ನು ಇದಿರ್ಗೊಂಡನು. ಅದೇ ಪ್ರಕಾರ ವಿಕ್ರಮಾದಿತ್ಯನೂ ತಾನು ವಿಜಯಯಾತ್ರೆಯಲ್ಲಿ ಸಂಪಾದಿಸಿದಂಥ ಸುವರ್ಣ, ವಜ್ರ, ವೈಡೂರ್ಯ ಮುಂತಾದ ಸಂಪತ್ತನ್ನೆಲ್ಲ ಪ್ರೀತಿಯಿಂದ ಅಣ್ಣನ ಕೈಯಲ್ಲಿ ಕೊಟ್ಟನು. ಇದೇ ಮೇರೆಗೆ ಮುಂದೆ ಕೆಲವು ಕಾಲದ ವರೆಗೆ ಇವರಿಬ್ಬರೂ ಪರಸ್ಪರ ಪ್ರೀತಿಯಿಂದ ಇದ್ದರು. ಆದರೆ ಅಣ್ಣನಾದ ಇಮ್ಮಡಿ ಸೋಮೇಶ್ವರನು ತಿಳಿಗೇಡಿಯೂ ಜನರಿಗೆ ತೊಂದರೆಯನ್ನು ಕೊಡುವವನೂ ಆಗಿದ್ದುದರಿಂದ ಪ್ರಜೆಗಳಿಗೆ ಅಪ್ರಿಯನಾದನು. ಇಷ್ಟೇ ಅಲ್ಲ, ತನ್ನ ಹಿತಚಿಂತಕರಾದ ಮಂತ್ರಿಗಳ ಹಾಗೂ ತಮ್ಮಂದಿರ ಹಿತದ ಮಾತುಗಳನ್ನು ಅಲ್ಲಗಳೆದು, ಮನಬಂದಂತೆ ನಡೆಯಹತ್ತಿದ್ದರಿಂದ ಎಲ್ಲರಿಗೂ ಬೇಡಾದನು.

೨ನೆಯ ಸೋಮೇಶ್ವರ
ಕ್ರಿ.ವ. ೧೦೬೮-೧೦೭೬

ಈ ಸಮಯದಲ್ಲಿ ಇಲ್ಲಿ ಇರುವದು ಒಳ್ಳೆಯದಲ್ಲವೆಂದು ತಿಳಿದು, ಈ ವಿಕ್ರಮಾದಿತ್ಯನು ತನ್ನ ಮಲತಮ್ಮನಾದ **ಜಯಸಿಂಹ**ನನ್ನು ಸಂಗಡ ಕರೆದುಕೊಂಡು, ದೊಡ್ಡ ಸೈನ್ಯದೊಡನೆ ರಾಜಧಾನಿಯನ್ನು ಬಿಟ್ಟು ಹೊರಟನು. ಆಗ ಈ ಇಮ್ಮಡಿ ಸೋಮೇಶ್ವರನು ಈ ವಿಕ್ರಮಾಂಕನನ್ನು ಸೆರೆಹಿಡಿಯಬೇಕೆಂದು ಇವನ ಬೆನ್ನಹಿಂದೆ ತನ್ನ ಸೈನ್ಯವನ್ನು ಕಳಿಸಿದನು. ಆಗ ಈ ವಿಕ್ರಮಾದಿತ್ಯನು ಅಣ್ಣನ ಸೈನ್ಯವನ್ನೆಲ್ಲ ಸಂಹರಿಸಿ, ನೆಲಕ್ಕೆ ಉರುಳಿಸಿದನು. ತದನಂತರ ಹಾಗೆಯೇ ಮುಂದಕ್ಕೆ ಸಾಗಿ, ತುಂಗಭದ್ರಾ ನದಿಯ ತೀರಕ್ಕೆ ಹೋಗಿ **ಕಂಪಿಲಿ** ಪಟ್ಟಣದಲ್ಲಿ ವಿಶ್ರಮಿಸಿದನು. ಈ ಬಳಿಕ **ಚೋಳ** ದೇಶಕ್ಕೆ ದಂಡೆತ್ತಿ

ಪುನಃ ವಿಕ್ರಮಾದಿತ್ಯನ ವಿಜಯಯಾತ್ರೆ

ಹೊರಟು, ಮಾರ್ಗದಲ್ಲಿ **ಬನವಾಸಿ** ಪಟ್ಟಣದಲ್ಲಿ ಕೆಲವು ಕಾಲ ಸುಖದಿಂದ ವೇಳೆಯನ್ನು ಕಳೆದನು. ಆ ಮೇಲೆ **ಮಲಯ** ದೇಶದ ಕಡೆಗೆ ದಿಗ್ವಿಜಯಕ್ಕೆ ಹೊರಟನು. ಆ ಸಮಯದಲ್ಲಿ **ಗೋಪಕ** ಪಟ್ಟಣದಲ್ಲಿ (ಗೋವೆಯಲ್ಲಿ) ಆಳುತ್ತಿದ್ದ **ಕದಂಬ** ವಂಶದ **ಜಯಕೇಶಿ**ಯೆಂಬ ಕೊಂಕಣ ದೇಶದ ಅರಸನು ವಿಕ್ರಮಾದಿತ್ಯನಿಗೆ ಶರಣುಬಂದನು. ಹಾಗೂ ಹೇರಳವಾದ ದ್ರವ್ಯವನ್ನು ಇವನಿಗೆ ಕಾಣಿಕೆಯಾಗಿ ಕೊಟ್ಟನು. ಈ ಕಾಣಿಕೆಯನ್ನು ತೆಗೆದುಕೊಂಡು, ವಿಕ್ರಮಾದಿತ್ಯನು ಬಹಳ ಸಂತೋಷದಿಂದ ತನ್ನ ಮಗಳಾದ **ಮೈಳಲದೇವಿ**ಯನ್ನು ಆ ಜಯಕೇಶಿಯ ಮೊಮ್ಮಗನಾದ **ಇಮ್ಮಡಿ ಜಯಕೇಶಿ**ಗೆ ಮದುವೆ ಮಾಡಿಕೊಟ್ಟನು. ಇದೇ ಕಾಲಕ್ಕೆ **ಆಳುಪರಾಜ**ನೂ ವಿಕ್ರಮಾದಿತ್ಯನಿಗೆ ಶರಣು ಬಂದನು. ತರುವಾಯ ಈತನು **ಕೇರಳ** ದೇಶವನ್ನು ಗೆದ್ದುಕೊಂಡು, ಅಲ್ಲಿ ತನ್ನ ಒಡೆತನವನ್ನು ನೆಲೆಗೊಳಿಸಿ, **ಚೋಳ** ದೇಶಕ್ಕೆ ತೆರಳಿದನು. ಆ ಕಾಲಕ್ಕೆ ಅಲ್ಲಿ ಆಳುತ್ತಿದ್ದ **ವೀರರಾಜೇಂದ್ರ** ಚೋಳನು (ಕ್ರಿ. ವ. ೧೦೬೩-೧೦೭೦), ಈ ವಿಕ್ರಮಾದಿತ್ಯನು ಬಂದ ಸುದ್ದಿಯನ್ನು ಕೇಳಿದಾಕ್ಷಣವೇ ಈತನ ಬಳಿಗೆ ತನ್ನ ರಾಯಭಾರಿಯನ್ನು ಕಳುಹಿಸಿ, "ನಾನು ತಮ್ಮ ಮಾಂಡಲಿಕನಾಗಿರುವದಕ್ಕೆ ಒಪ್ಪುತ್ತೇನಲ್ಲದೆ ತಮಗೆ ನನ್ನ ಮಗಳನ್ನು ಮದುವೆ ಮಾಡಿಕೊಡುತ್ತೇನೆ; ತಾವು ದಯಮಾಡಿ ಸ್ವೀಕರಿಸಬೇಕು." ಎಂಬ ತನ್ನ ವಿನಂತಿಯನ್ನು ತಿಳಿಸಿದನು. ಆ ಚೋಳರಾಜನ ಪ್ರಾರ್ಥನೆಯ ಪ್ರಕಾರ ವಿಕ್ರಮಾದಿತ್ಯನು ಒಪ್ಪಿ, ಹಿಂದಿರುಗಿ ಬಂದು, ತುಂಗಭದ್ರಾ ನದಿಯ ತೀರದಲ್ಲಿರುವ ತಮ್ಮ ಉಪರಾಜಧಾನಿಯಾದ **ಕಂಪಿಲಿ** ಪಟ್ಟಣದಲ್ಲಿ ನಿಂತುಕೊಂಡನು. ಆಗ ಆ **ಚೋಳ**ರಾಜನು ತನ್ನ ಕನ್ಯೆಯನ್ನು ಕರೆದುಕೊಂಡು ಈ ಪಟ್ಟಣಕ್ಕೆ ಬಂದು, ಮದುವೆಯ ಕೆಲಸವನ್ನು ನೆರವೇರಿಸಿದನು.

ಮುಂದೆ ಕೆಲವು ದಿವಸಗಳ ಮೇಲೆ ಎಂದರೆ ಕ್ರಿ. ವ. **೧೦೭೦**ರಲ್ಲಿ ಆ **ವೀರರಾಜೇಂದ್ರ** ಚೋಳನು ಮರಣಹೊಂದಿದನು. ಆ ಕಾಲಕ್ಕೆ ಆ ಚೋಳ ರಾಜ್ಯದಲ್ಲಿ ಒಮ್ಮಿಂದೊಮ್ಮೆ ಗಲಭೆಯುಂಟಾಗಿ, ಚೋಳ ಸಿಂಹಾಸನವು ಬುಡಮೇಲಾಗುವ ಪ್ರಸಂಗವು ಒದಗಿತು. ಈ ಸುದ್ದಿಯು ಈ

ವಿಕ್ರಮಾದಿತ್ಯನ ಕಿವಿಗೆ ಮುಟ್ಟಿದ ಕೂಡಲೆ ಈತನು ತಾತ್ಕಾಲವೇ **ಕಾಂಚಿ** ಪಟ್ಟಣಕ್ಕೆ ಹೋದನು. ಮತ್ತು ತನ್ನ ಮಾವನ ಮಗನಾದ **ಅಧಿರಾಜ-ರಾಜೇಂದ್ರ**ನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ, ಆತನ ಶತ್ರುಗಳನ್ನು ಹೊಡೆದೋಡಿಸಿದನು. ಆಮೇಲೆ **ಕಂಪಿಲಿ** ಪಟ್ಟಣಕ್ಕೆ ತಿರುಗಿ ಬಂದನು. ವಿಕ್ರಮಾದಿತ್ಯನು ಇತ್ತ ಕಡೆಗೆ ಬಂದ ಕೂಡಲೆ, ಆ ಅಧಿರಾಜ ರಾಜೇಂದ್ರ ಚೋಳನ ಸೋದರತ್ತೆಯ ಮಗನಾದ **ರಾಜಿಗ** (ಎಂದರೆ ಕುಲೋತ್ತುಂಗ) ನೆಂಬ **ವೆಂಗಿ**ದೇಶದ ಚಾಳುಕ್ಯರಾಜನು, ಆ ಚೋಳ ರಾಜನನ್ನು ಸಿಂಹಾಸನದಿಂದ ತಳ್ಳಿ, ಅವನ ರಾಜ್ಯವನ್ನೆಲ್ಲ ತಾನು ಆಕ್ರಮಿಸಿದನು. ಮತ್ತು ಆ ರಾಜಿಗನು ಆ ಚೋಳರಾಜನ ಭಾವನಾದ ಈ ವಿಕ್ರಮಾದಿತ್ಯನು ತನ್ನ ಮೇಲೆ ಯುದ್ಧಕ್ಕೆ ಬರುವನೆಂದು ತಿಳಿದು, ಈತನ ಅಣ್ಣನಾದ **ಇಮ್ಮಡಿ ಸೋಮೇಶ್ವರ**ನನ್ನು ತನ್ನ ಕಡೆಗೆ ಒಲಿಸಿಕೊಂಡನು. ಇದಲ್ಲದೆ ಚನ್ನಾಗಿ ಯುದ್ಧದ ಸಿದ್ಧತೆಯನ್ನೂ ಮಾಡಿದನು.

ಚೋಳದೇಶದ ಗಲಭೆ

ಇತ್ತ ಇಮ್ಮಡಿ ಸೋಮೇಶ್ವರನು, ತನ್ನ ತಮ್ಮನಾದ ವಿಕ್ರಮಾದಿತ್ಯನನ್ನು ಸೆರೆಹಿಡಿಯುವದಕ್ಕೆ ಇದು ಉತ್ತಮವಾದ ಸಮಯವೆಂದು ತಿಳಿದು, ತಾನೂ ಒಂದು ದೊಡ್ಡ ಸೈನ್ಯವನ್ನು ಏರ್ಪಡಿಸಿದನು. ಇಂಥ ಬಿಕ್ಕಟ್ಟಿನ ಪ್ರಸಂಗದಲ್ಲಿಯೂ ವಿಕ್ರಮಾದಿತ್ಯನು ಕಾಂಚಿಯ ಕಡೆಗೆ ಯುದ್ಧಕ್ಕೆ ಹೊರಟನು. ಇವನು ಅಲ್ಲಿಗೆ ಹೋಗಿ ರಾಜಿಗನ ಸೈನ್ಯವನ್ನು ತಾಗುವಷ್ಟರಲ್ಲಿ, ಹಿಂದಿನಿಂದ ಸೋಮೇಶ್ವರನು ದೊಡ್ಡ ಸೈನ್ಯದೊಡನೆ ಬಂದು ನಿಂತನು. ಆಗ ವಿಕ್ರಮಾದಿತ್ಯನು ಅಣ್ಣನನ್ನು ಕುರಿತು:— " ನೀನು ನನ್ನ ವೈರಿಗೆ ಸಹಾಯಕನಾಗಿ ನನ್ನ ವಿರುದ್ಧ ನಿಲ್ಲುವದು ಒಳ್ಳೆಯದಲ್ಲ; ಈ ತಪ್ಪು ಹಾದಿಯನ್ನು ಹಿಡಿಯದೆ ನನ್ನ ಕಡೆಗೆ ಬಾ " ಎಂದು ಅನೇಕ ರೀತಿಯಿಂದ ಉಪದೇಶ ಮಾಡಿದನು. ಆದರೆ ಅವನು ಈ ಒಳ್ಳೆಯ ಮಾತಿಗೆ ಕಿವಿಗೊಡಲಿಲ್ಲ. ಇಂಥ ಕಠಿಣ ಪ್ರಸಂಗವು ಒದಗಿದರೂ ಶೂರನಾದ ವಿಕ್ರಮಾದಿತ್ಯನು ಅತ್ಯಂತ ಶೌರ್ಯದಿಂದ ಈ ಉಭಯ ಶತ್ರುಗಳ ಸಂಗಡ

ಕಾಂಚಿಯ ಮಹಾಯುದ್ಧ

ಯುದ್ಧಮಾಡಿ, ರಕ್ತದ ಕಾಲುವೆಗಳನ್ನು ಹರಿಸಿದನು!! ಈ ದೊಡ್ಡ ಯುದ್ಧದಲ್ಲಿ ವಿಕ್ರಮಾದಿತ್ಯನೇ ಜಯವನ್ನು ಹೊಂದಿದನು! ರಾಜಿಗನು ಓಡಿಹೋದನು!! ಸೋಮೇಶ್ವರನು ವಿಕ್ರಮಾದಿತ್ಯನ ಸೆರೆಯಲ್ಲಿ ಸಿಕ್ಕನು!!! ಆಬಳಿಕ ಅಣ್ಣನನ್ನು ಸೆರೆಹಿಡಿದುಕೊಂಡು ಯಾತಗಿರಿ ಪಟ್ಟಣಕ್ಕೆ ಬಂದನು.

ಈ ಏತಗಿರಿಯ ರಾಜಧಾನಿಯಲ್ಲಿ ತಾನು **ಶಕ ವರ್ಷದ ೯೯೭** ನೆಯ ರಾಕ್ಷಸ ಸಂವತ್ಸರದ ಫಾಲ್ಗುಣ ಶುದ್ಧ ಪಂಚಮಿ ಸೋಮವಾರ ದಿವಸ **ಪಟ್ಟಬಂಧೋತ್ಸವ**ವನ್ನು ಮಾಡಿಸಿಕೊಂಡನು.

ವಿಕ್ರಮಾದಿತ್ಯನ ಪಟ್ಟಬಂಧೋತ್ಸವ ಮತ್ತು ಹೊಸಕಾಲಗಣನೆಯ ಪ್ರಾರಂಭ

ಮತ್ತು ಅಂದಿನಿಂದ "**ಶ್ರೀಮಚ್ಚಾಳುಕ್ಯವಿಕ್ರಮ ವರ್ಷ**[೧]" ಎಂಬ ತನ್ನ ಹೆಸರಿನ ಹೊಸ **ಕಾಲಗಣನೆ**ಯನ್ನು ಪ್ರಾರಂಭಮಾಡಿದನು. ಹಾಗೂ ರೂಢಿಯಲ್ಲಿದ್ದ "**ಶಕವರ್ಷ**"ವೆಂಬ ಕಾಲಗಣನೆಯನ್ನು ಬಿಡಿಸಿಬಿಟ್ಟನು. ಈ ವಿಕ್ರಮಾಂಕಚಕ್ರವರ್ತಿಯು, ಸಿಂಹಾಸನವನ್ನು ಏರುವದಕ್ಕಿಂತ ಮೊದಲೇ ತಂದೆಯ ಆಳಿಕೆಯಲ್ಲಿಯೂ ಅಣ್ಣನ ಆಳಿಕೆಯಲ್ಲಿಯೂ ವಿಜಯಯಾತ್ರೆಗೆ ಹೊರಟು, ತನ್ನ ಅತುಲ ಪರಾಕ್ರಮದಿಂದ ಇಡಿ ದಕ್ಷಿಣ ಹಿಂದುಸ್ಥಾನವನ್ನು ಜಯಿಸಿದ್ದಲ್ಲದೆ ದಕ್ಷಿಣದಲ್ಲಿ **ಸಿಂಹಳದ್ವೀಪ**ವನ್ನೂ ಉತ್ತರ ಹಿಂದುಸ್ಥಾನದಲ್ಲಿ **ಚೇದಿ, ಮಾಳವಾ, ಕನೋಜ, ಗೌಡ, ಕಾಮರೂಪ** ದೇಶಗಳನ್ನೂ ಗೆದ್ದು, **ಅಖಿಲ ಭರತಖಂಡ**ದಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಹಿಂದುಸ್ಥಾನದ ಇತಿಹಾಸದಲ್ಲಿ ಇವನಿಗೆ ಸಮಾನರಾದವರು, ಬಾದಾಮಿ ಚಾಳುಕ್ಯ ಚಕ್ರವರ್ತಿಯಾದ ಇಮ್ಮಡಿ

---

೧ ಬಲ್ಲಾಳ್ತನದಿಂ ರಿಪುನೃಪ |
ರೆಲ್ಲರನೇಕಾಂಗದಿಂದಮೊರಗಿಸಿ ಧರಣೀ- ||
ವಲ್ಲಭನಾದಂ ತ್ರಿಭುವನ |
ಮಲ್ಲಂ ಚಾಳುಕ್ಯ ವಿಕ್ರಮಾದಿತ್ಯನೃಪಂ || ೧ ||

ಎಸೆವ ಶಕವರುಷಮಂ ಮಾ- |
ಣಿಸಿ ವಿಕ್ರಮವರುಷಮೆಂದು ತನ್ನಯ ಪೆಸರಂ |
ವಸುಮತಿಗೆ ನೆಗಳ್ಚಿದಂ ಸಾ- |
ಹಸಿಗಂ ಜಗದೇಕದಾನಿ ಧರ್ಮವಿನೋದಂ || ೨ |

(ಗದಗಿನ ವೀರನಾರಾಯಣನ ದೇವಾಲಯದಲ್ಲಿದ್ದ ಶಿಲಾಲೇಖ)

ಪುಲಿಕೇಶಿಯು ಮತ್ತು ಮೌರ್ಯವಂಶದ **ಅಶೋಕನು** ಇವರಿಬ್ಬರ ಹೊರತು ಮತ್ತಿನ್ನಾರೂ ದೊರೆಯಲಾರರು. ಈ ಮಹಾಪುರುಷನು



ವಿಕ್ರಮಾಂಕ ಚಕ್ರವರ್ತಿಯು

ಕ್ರಿ. ವ. ೧೦೭೬ರಿಂದ ೧೧೨೬ರ ವರೆಗೆ ಎಡೆಬಿಡದೆ **೫೦ ವರ್ಷ**ಗಳತನಕ ಅತ್ಯಂತ ವೈಭವದಿಂದಲೂ ಪ್ರಜೆಗಳಿಗೆ ಹಿತವಾಗುವಂತೆಯೂ ಸಾಮ್ರಾಜ್ಯವನ್ನಾಳಿದನು. ಈತನಿಗೆ, **ಪೆರ್ಮಾಡಿ, ತ್ರಿಭುವನಮಲ್ಲ, ಕಲಿವಿಕ್ರಮ** ಎಂಬ ಬಿರುದುಗಳಿದ್ದವು.

ಈ ಚಕ್ರವರ್ತಿಯು **ಕಲ್ಯಾಣ**ದ ನೆಲೆವೀಡಿನಲ್ಲಿ ಸುಖದಿಂದ ಸಾಮ್ರಾಜ್ಯವನ್ನಾಳುತ್ತಿರಲು **ಕರ್ಹಾಡ**ದೇಶದ ಅರಸನು ತನ್ನ ಮಗಳಾದ **ಚಂದ್ರ-**

ಚಂದ್ರಲೇಖೆಯ ಲೇಖೆಯ ಸ್ವಯಂವರದ ಸಿದ್ಧತೆಯನ್ನು ಮಾಡಿದನು.
ಸ್ವಯಂವರ ಈ ರಾಜಪುತ್ರಿಯು ಬಹಳ ಚಲುವೆಯಾದುದರಿಂದ ಈ ಸ್ವಯಂವರಕ್ಕೆ ಅಯೋಧ್ಯಾ, ಚೇದಿ, ಕಾನ್ಯಕುಬ್ಜ, ಮಾಳವ, ಗುರ್ಜರ ಮೊದಲಾದ ಅನೇಕ ದೇಶಗಳ ಅರಸರು ಬಂದಿದ್ದರು. ಇದೇ ಪ್ರಕಾರ ಈ

ವಿಕ್ರಮಾಂಕ ಚಕ್ರವರ್ತಿಯೂ ಅಲ್ಲಿಗೆ ಹೋಗಿದ್ದನು. ಸ್ವಯಂವರದ ಮುಹೂರ್ತವು ಒದಗಲು, ಆ ಚಂದ್ರಲೇಖೆಯು ವಸ್ತ್ರಾಭರಣಗಳಿಂದ ಭೂಷಿತಳಾಗಿ, ಸ್ವಯಂವರ ಮಂಡಪದಲ್ಲಿ ಬಂದು, ಆ ರಾಜಸಮೂಹ ದಲ್ಲಿ ಈ ವಿಕ್ರಮಾದಿತ್ಯ ಚಕ್ರವರ್ತಿಯನ್ನು ವರಿಸಿ, ಈತನ ಕೊರಳಲ್ಲಿ ಮಾಲೆಯನ್ನು ಹಾಕಿದಳು. ಈ ಪೆರ್ಮಾಡಿರಾಯನಿಗೆ ಈಕೆಯ ಹೊರತು ಇನ್ನೂ ಅನೇಕ ಜನ ಮಹಾರಾಣಿಯರಿದ್ದರು.

ಜಯಸಿಂಹನ ಕಿಡಿಗೇಡಿತನ

ವಿಕ್ರಮಾದಿತ್ಯನು ತನ್ನ ಮಲತಮ್ಮನಾದ **ಜಯಸಿಂಹನನ್ನು ಬನವಾಸಿ** ಪ್ರಾಂತಕ್ಕೆ ಅಧಿಕಾರಿಯನ್ನಾಗಿ ನೇಮಿಸಿದನು. ಆದರೆ ಆ ಜಯಸಿಂಹನು ಹೊಟ್ಟೆಕಿಚ್ಚಿನಿಂದ ಅಣ್ಣನ ಸಂಗಡ ದ್ವೇಷಮಾಡಲಾರಂಭಿಸಿದನು. ಇಷ್ಟೇ ಅಲ್ಲ, **ಕುಲೋತ್ತುಂಗ** ಮೊದಲಾದ ಚಿಕ್ಕದೊಡ್ಡ ಅರಸರನ್ನು ತನ್ನ ಜೊತೆಗೆ ಕರೆದುಕೊಂಡು, ದೊಡ್ಡ ದಂಡಿನೊಡನೆ ಈ ವಿಕ್ರಮಾಂಕ ಚಕ್ರವರ್ತಿಯ ಸಂಗಡ ಯುದ್ಧಮಾಡುವದಕ್ಕೆ ಬಂದನು. ಆಗ ತ್ರಿಭುವನಮಲ್ಲನಾದ ಈ ವಿಕ್ರಮಾದಿತ್ಯನು ತನ್ನ ಸೈನ್ಯವನ್ನು ಹುರಿ ಮಾಡಿಕೊಂಡು, ತನ್ನ ಮದ್ದಾನೆಯ ಮೇಲೆ ಕುಳಿತುಕೊಂಡು, ವಿಲಕ್ಷಣ ವಾದ ಶೌರ್ಯದಿಂದ ಹೋರಾಡಿದನು. ಶತ್ರುಸೈನ್ಯವು ನೆಲಕ್ಕೆ ಉರುಳಿತು! ಜಯಸಿಂಹನು ಓಡಿಹೋಗಿ, ಅಡವಿಯಲ್ಲಿ ಅಡಗಿಕೊಂಡು ಕುಳಿತನು!! ಆತನ ಒಡನಾಡಿಗರಂತೂ ದಿಕ್ಕುಪಾಲಾಗಿ ಓಡಿಹೋದರು!!!

ಕವಿಗಳು, ಪಂಡಿತರು

ಈತನು ತನ್ನ ೫೦ ವರ್ಷಗಳ ಆಳಿಕೆಯಲ್ಲಿ ಪ್ರಜೆಗಳನ್ನು ಮಕ್ಕಳಂತೆ ಬಹು ದಕ್ಷತೆಯಿಂದ ಕಾಪಾಡಿದನು. ಆದುದರಿಂದ ಈತನ ಸಾಮ್ರಾಜ್ಯ ದೊಳಗಿನ ಜನರು ಬಹು ಸುಖಿಗಳಾಗಿದ್ದರು. ಮತ್ತು ಜನರು ಕಳ್ಳರಕಾಕರ[1] ಅಂಜಿಕೆಯಿಲ್ಲದೆ ಸಮಾಧಾನ ದಿಂದ ಜೀವಿಸುತ್ತಿದ್ದರು. ಈ ದೊರೆಯು ಬಡಬಗ್ಗರ ವಿಷಯವಾಗಿ ಕನಿಕರವುಳ್ಳವನಾಗಿದ್ದು, ಅವರಿಗೆ ಉದಾರಮನಸ್ಸಿನಿಂದ

---

೧. ವಿಕ್ರಮಾದಿತ್ಯನ ಆಸ್ಥಾನಪಂಡಿತನಾದ ಬಿಲ್ಹಣ ಕವಿಯು ತನ್ನ ಗ್ರಂಥದಲ್ಲಿ ಆಗಿನ ಕಾಲದ ಸ್ಥಿತಿಯನ್ನು ಹೀಗೆ ವರ್ಣಿಸಿದ್ದಾನೆ:—" ಜನರು ರಾತ್ರಿಯಲ್ಲಿ ತಮ್ಮ ಮನೆಯ

ಸಾಹಾಯ್ಯವನ್ನು ಮಾಡುತ್ತಿದ್ದನು. ಇದೂ ಅಲ್ಲದೆ ಇವನ ಆಶ್ರಯದಲ್ಲಿ ಮತ್ತು ಇವನ ಮಾಂಡಲಿಕರ ಆಶ್ರಯದಲ್ಲಿ **ಕೀರ್ತಿವರ್ಮ, ರಾಜಾದಿತ್ಯ, ಮಲ್ಲಿಕಾರ್ಜುನಭಟ್ಟ, ಕರ್ಪರಸ, ಚಂದ್ರರಾಜ** ಮೊದಲಾದ ಕನ್ನಡ ಕವಿಗಳು ಇದ್ದರು. ಅಲ್ಲದೆ ಕಾಶ್ಮೀರ ದೇಶದ **ಬಿಲ್ಹಣ**ನೆಂಬ ಸಂಸ್ಕೃತಕವಿಯು ಈತನ ಆಸ್ಥಾನದಲ್ಲಿದ್ದನು. ಆ ಬಿಲ್ಹಣನು ಸಂಸ್ಕೃತ ಭಾಷೆಯಲ್ಲಿ ಈ **ವಿಕ್ರಮಾಂಕದೇವನ ಚರಿತ್ರ**ವನ್ನು ಬರೆದಿದ್ದಾನೆ. ಇದೇ ವೇಳೆಯಲ್ಲಿ ಈತನ ಪ್ರಧಾನನಾದ **ವಿಜ್ಞಾನೇಶ್ವರ ಪಂಡಿತ**ನು ಸುಪ್ರಸಿದ್ಧವಾದ **ಯಾಜ್ಞವಲ್ಕ್ಯ ಸ್ಮೃತಿಗೆ 'ಮಿತಾಕ್ಷರಾ'** ಎಂಬ ಟೀಕೆಯನ್ನು ಬರೆದನು. ಈತನ ಸಾಮ್ರಾಜ್ಯದಲ್ಲಿ ಸುವ್ಯವಸ್ಥಿತವಾದ ಕಾಯದೆ ಕಾನೂನುಗಳು ಪ್ರಚಾರದಲ್ಲಿದ್ದವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈಗಿನ ಬ್ರಿಟಿಶರ ಆಳಿಕೆಯಲ್ಲಿ ಸಹ ಈ ಗ್ರಂಥವು ನ್ಯಾಯಮಂದಿರದಲ್ಲಿ ಆಧಾರವಾಗಿದೆ. ಪಾಶ್ಚಾತ್ಯ ಕಾಯದೆ ಪಂಡಿತರೂ ಈ ಗ್ರಂಥಕ್ಕೆ ಬಹಳ ಮಾನಕೊಡುತ್ತಾರೆ.

ಈ ಗ್ರಂಥದ ಕೊನೆಯಲ್ಲಿ ವಿಜ್ಞಾನೇಶ್ವರ ಪಂಡಿತನು ಹೇಳಿದ್ದೇನೆಂದರೆ :– " ಅತ್ಯಂತ ಸುಂದರವಾದ **ಕಲ್ಯಾಣ** ನಗರದಂಥ ಮತ್ತೊಂದು ಪಟ್ಟಣವು, ಪೃಥ್ವಿಯ ಮೇಲೆ ಹಿಂದೆ ಇದ್ದಿಲ್ಲ; ಈಗಲೂ ಇಲ್ಲ; ಮುಂದೆಯೂ ಹುಟ್ಟುವದಿಲ್ಲ. ಹಾಗೆಯೇ **ಸಕಲೈಶ್ವರ್ಯಸಂಪನ್ನ**ನಾದ **ವಿಕ್ರಮಾದಿತ್ಯ**ನಂಥ **ಚಕ್ರವರ್ತಿ**ಯನ್ನು ಎಂದೂ ಯಾರೂ ನೋಡಿದ್ದಿಲ್ಲ; ಅಥವಾ ಕೇಳಿದ್ದಿಲ್ಲ. ಮತ್ತು ಇದೇ ಪ್ರಕಾರ **ವಿಜ್ಞಾನೇಶ್ವರ ಪಂಡಿತ**ನಿಗೆ ಸರಿಸಮಾನರಾದವರು ಯಾರೂ ಇಲ್ಲ. **ರಾಮೇಶ್ವರ**ದಿಂದ **ಹಿಮಾಲಯ**ದ ವರೆಗೆ, **ಪಶ್ಚಿಮ ಸಮುದ್ರ**ದಿಂದ **ಪೂರ್ವ ಸಮುದ್ರ**ದ ವರೆಗೆ **ಇಡಿ ಹಿಂದುಸ್ಥಾನದ ಸಾರ್ವಭೌಮ**ನಾದ ವಿಕ್ರಮಾದಿತ್ಯನಿಗೆ ಎಲ್ಲ ಮಾಂಡಲಿಕ ರಾಜರು ಸಾಷ್ಟಾಂಗ ನಮಸ್ಕಾರವನ್ನು ಮಾಡುತ್ತಾರೆ. ಆ ಕಾಲಕ್ಕೆ ಆ ಮಾಂಡಲಿಕರಾಜರ ಕಿರೀಟದೊಳಗಿನ ರತ್ನಗಳ ಕಾಂತಿಯಿಂದ

ಬಾಗಿಲುಗಳನ್ನು ಇಕ್ಕುವ ಗೋಜಿಗೆ ಹೋಗುತ್ತಿರಲಿಲ್ಲ; ಕಳ್ಳರ ಬದಲಾಗಿ ಚಂದ್ರನ ಕಿರಣಗಳು ಮಾತ್ರ ಅವರ ಮನೆಯ ತೆರೆದ ಬಾಗಿಲುಗಳಿಂದ ಒಳಗೆ ಹೋಗುತ್ತಿದ್ದವು."

ಈ ವಿಕ್ರಮಾಂಕ ಚಕ್ರವರ್ತಿಯ ಪಾದಗಳು ಪ್ರಕಾಶಿಸುತ್ತವೆ. ಇಂಥ ಪರಮಭಾಗ್ಯಶಾಲಿಯಾದ ವಿಕ್ರಮಾದಿತ್ಯ ಚಕ್ರವರ್ತಿಯು ಚಿರಕಾಲ ಸಾಮ್ರಾಜ್ಯವನ್ನು ಆಳಲಿ." ಈ ಚಕ್ರವರ್ತಿಯ ಕಾಲದಲ್ಲಿ **ಕರ್ನಾಟಕ** ದೇಶಕ್ಕುಂಟಾದ ವೈಭವವನ್ನೂ ಕೀರ್ತಿಯನ್ನೂ ಎಷ್ಟು ಹೊಗಳಿದರೂ ಸ್ವಲ್ಪವೇ ಸರಿ. ಈ ಕಾಲವೆಂದರೆ, ಕರ್ನಾಟಕಕ್ಕೆ **ಸುವರ್ಣ-ಯುಗವು**!

ಈ ವಿಕ್ರಮಾದಿತ್ಯನ ಆಳಿಕೆಯಲ್ಲಿ ಕರ್ನಾಟಕದಲ್ಲಿದ್ದ ಮಾಂಡಲಿಕ ಅರಸರೆಂದರೆ:— **ದೇವಗಿರಿಯ ಯಾದವರು; ಕೊಲ್ಹಾಪುರ, ಕೊಂಕಣಗಳ ಶಿಲಾಹಾರರು; ಗೋವೆ, ಹಲಸಿಗೆ, ಹಾನಗಲ್ಲ, ಬನವಾಸಿಗಳ ಕದಂಬರು, ತರ್ದವಾಡಿಯ ಕಲಚೂರ್ಯರು; ಎಲಬುರ್ಗಿಯ ಸೇಂದ್ರಕರು; ಗುತ್ತಲದ ಗುಪ್ತರು; ಸವದತ್ತಿಯ ರಟ್ಟರು: ಗಂಗವಾಡಿಯ ಹೊಯ್ಸಳಯಾದವರು; ಉಚ್ಚಂಗಿ ದುರ್ಗದ ಪಾಂಡ್ಯರು** ಇವರೇ ಮೊದಲಾದವರು.

ವಿಕ್ರಮಾಂಕ ಚಕ್ರವರ್ತಿಯು ಮರಣಹೊಂದಿದ ನಂತರ ಆತನ ಮಗನಾದ **ಮುಮ್ಮಡಿ ಸೋಮೇಶ್ವರ**ನು ಪಟ್ಟಕ್ಕೆ ಕುಳಿತನು. (ಕ್ರಿ.ವ. **೧೧೨೬**) ಈತನು ತಂದೆಯಂತೆ ಶೂರನಾಗಿದ್ದುದಲ್ಲದೆ

೩ನೆಯ ಸೋಮೇಶ್ವರ
ಇಮ್ಮಡಿ ಜಗದೇಕಮಲ್ಲ
೩ನೆಯ ತೈಲಪ

ಸಕಲ ಶಾಸ್ತ್ರಗಳಲ್ಲಿ ಪಂಡಿತನೂ ಆಗಿದ್ದನು. ಈತನು ಸಂಸ್ಕೃತ ಭಾಷೆಯಲ್ಲಿ "**ಮಾನಸೋಲ್ಲಾಸ**" ಎಂಬ ಗ್ರಂಥವನ್ನು ಬರೆದಿದ್ದಾನೆ. ಇದರಲ್ಲಿ ರಾಜನೀತಿ-ಶಾಸ್ತ್ರ, ಯುದ್ಧಶಾಸ್ತ್ರ, ಅಶ್ವಶಾಸ್ತ್ರ, ಗಜಶಾಸ್ತ್ರ, ಶಿಲ್ಪ, ಚಿತ್ರಕಲೆ, ವೈದ್ಯಕ ಮುಂತಾದ ಸರ್ವಶಾಸ್ತ್ರಗಳೂ ಅಡಕವಾಗಿವೆ. ಇವನು ಕ್ರಿ. ವ. **೧೧೩೮**ರಲ್ಲಿ ಮರಣ ಹೊಂದಿದನು. ಆ ಬಳಿಕ ಇವನ ಹಿರಿಯ ಮಗನಾದ **ಇಮ್ಮಡಿ ಜಗದೇಕಮಲ್ಲ**ನು ಸಿಂಹಾಸನವನ್ನೇರಿ, **೧೨ ವರ್ಷ** ಸುಖದಿಂದ ಸಾಮ್ರಾಜ್ಯವನ್ನಾಳಿದನು. ತರುವಾಯ ಇವನ ತಮ್ಮನಾದ **ಮುಮ್ಮಡಿ ತೈಲಪ**ನು ಕ್ರಿ. ವ. **೧೧೫೦**ರಲ್ಲಿ ಪಟ್ಟಕ್ಕೆ ಕುಳಿತನು. **ತರ್ದವಾಡಿ** ನಾಡಿನ ಮಾಂಡಲಿಕನಾದ **ಬಿಜ್ಜಳ**ನು, ಈ ತೈಲಪನ ದಂಡನಾಯಕನಾದನು. ಈ

ಚಕ್ರವರ್ತಿಯು ಹೇಡಿಯಾಗಿದ್ದುದರಿಂದ ಆ **ಬಿಜ್ಜಳನು**, ಈ ಕಾಲವು ತನ್ನ ಹೆಚ್ಚಳಕ್ಕೆ ಅನುಕೂಲವಾಗಿರುತ್ತದೆಂದು ತಿಳಿದು, ಈ ಸಾಮ್ರಾಜ್ಯಸಿಂಹಾಸನವನ್ನು ಆಕ್ರಮಿಸಬೇಕೆಂದು ಪ್ರಯತ್ನವನ್ನು ಮಾಡಲಾರಂಭಿಸಿದನು.

೮ನೆಯ ಪ್ರಕರಣ

ದಂಡನಾಯಕನು ಸ್ವಲ್ಪಕಾಲ ಚಕ್ರವರ್ತಿಯಾದನು

(ಕ್ರಿ. ಶ. ೧೧೫೬ ರಿಂದ ೧೧೬೭ರ ವರೆಗೆ)

ಬಿಜ್ಜಳನು ಕಲಚೂರಿ ವಂಶದವನು. ಈ ಮನೆತನದ ಮೂಲ ಪುರುಷನ ಹೆಸರು **ಸಂತರಸನು**. ಈ ಸಂತರಸನಿಂದ ೭ನೆಯ ತಲೆಯವನಾದ **ಜೋಗಮನೆಂಬುವನೇ** ಈ ಬಿಜ್ಜಳನ ಅಜ್ಜನು.

ಬಿಜ್ಜಳನ ಪೂರ್ವಜರು

ಈ ಜೋಗಮನ ಮಗನಾದ **ಪೆರ್ಮಾಡಿಯೆಂಬುವನು** ಚಾಳುಕ್ಯ ಚಕ್ರವರ್ತಿಯಾದ ಮುಮ್ಮಡಿ ಸೋಮೇಶ್ವರನ ಮಾಂಡಲಿಕನಾಗಿ **ತರ್ದವಾಡಿ** ನಾಡನ್ನು (ಎಂದರೆ ಈಗಿನ ವಿಜಾಪುರ ಜಿಲ್ಹೆಯನ್ನು) ಆಳುತ್ತಿದ್ದನು.

ಈ ಪೆರ್ಮಾಡಿಯ ಮಗನಾದ ಬಿಜ್ಜಳನೇ ಚಾಳುಕ್ಯ ಸಾಮ್ರಾಜ್ಯ ಸಿಂಹಾಸನವನ್ನು ಆಕ್ರಮಿಸಬೇಕೆಂದು ಹವಣಿಸಹತ್ತಿದನು. ಈ ಕಾರ್ಯಕ್ಕೆ **ವರಂಗಲ್ಲಿನ ಕಾಕತೀಯ** ವಂಶದ **ಪ್ರೋಳ** ರಾಜನೂ **ಕೊಲ್ಹಾಪುರದ** ಮಹಾಮಂಡಳೇಶ್ವರನಾದ **ವಿಜಯಾರ್ಕನೂ** ಈ ಬಿಜ್ಜಳನಿಗೆ ನೆರವಾದರು.

ಬಿಜ್ಜಳನ ಸಾಹಸ

ಆಗ ಈತನು, ಆ ಕಾಲಕ್ಕೆ ಸಾರ್ವಭೌಮನಾಗಿದ್ದ ಮುಮ್ಮಡಿ ತೈಲಪಚಕ್ರವರ್ತಿಯನ್ನು ಕಲ್ಯಾಣದಿಂದ ಓಡಿಸಿ, ಸಾಮ್ರಾಜ್ಯದ ಎಲ್ಲ ಅಧಿಕಾರಗಳನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. (ಕ್ರಿ. ಶ. ೧೧೫೬). ಆದುದರಿಂದ ಆ ತೈಲಪನು **ಅಣ್ಣಿಗೇರಿಗೆ** (ಧಾರವಾಡಜಿಲ್ಹೆ) ಬಂದು, ಅದನ್ನು ತನ್ನ ನೆಲೆವೀಡನ್ನಾಗಿ ಮಾಡಿಕೊಂಡು ಇರಹತ್ತಿದನು.

ಕಲಚೂರಿ ಬಿಜ್ಜಳರಾಯನ ವಂಶಾವಳಿಯು.

(೧) ಸಂತರಸ

(೨) ....

(೩) ....

(೪) ಕನ್ನಮದೇವ

- ಬಿಜ್ಜಳ
  - ಅಮ್ಮುಗಿ
  - ಶಂಖವರ್ಮ
  - ಕನ್ನರ
- (೫) ರಾಜ
  - (೬) ಜೋಗಮ
    - (೭) ಪೆರ್ಮಾಡಿ (ಕ್ರಿ.ಶ.೧೧೨೮)
      - (೮) ಬಿಜ್ಜಳ, ಬಿಜ್ಜಣ I ನಿಶ್ಶಂಕಮಲ್ಲ, ತ್ರಿಭುವನಮಲ್ಲ (ಕ್ರಿ. ಶ. ೧೧೫೬— ೧೧೬೭)
        - ೨ ರಾಯಮುರಾರಿ ಸೋವಿದೇವ ಸೋಮೇಶ್ವರ ಭುವನೈಕಮಲ್ಲ (ಕ್ರಿ. ಶ ೧೧೬೭-೧೧೭೭)
        - ೩ ಸಂಕಮ ನಿಃಶಂಕಮಲ್ಲ (೧೧೭೭-೧೧೮೧)
        - ೪ ಆಹವಮಲ್ಲ ವೀರನಾರಾಯಣ ಅಪ್ರತಿಮಲ್ಲ (೧೧೮೦-೧೧೮೩)
        - ೫ ಸಿಂಘಣ (೧೧೮೩)
      - ಸಿರಿಯಾದೇವಿ (ಈಕೆಯನ್ನು ಎಲಬುರ್ಗೆಯ ಸಿಂದ್ಯಕ ವಂಶದ ಇಮ್ಮಡಿ ಚಾವುಂಡರಾಜನಿಗೆ ಮದುವೆ ಮಾಡಿಕೊಟ್ಟರು)

ಮುಂದೆ ಆರು ವರ್ಷಗಳ ಮೇಲೆ ಕ್ರಿ. ಶ. **೧೧೬೨**ರಲ್ಲಿ ಬಿಜ್ಜಳನು, ತನ್ನ ಒಡೆಯನಾದ ಈ ತೈಲಪ ದೊರೆಯ ಮೇಲೆ ದಂಡೆತ್ತಿ ಬಂದು, ಅಣ್ಣಿಗೇರಿ ರಾಜ್ಯವನ್ನೂ ಸಹ ಸೆಳೆದುಕೊಂಡನು. ಹಾಗೂ ಅಂದಿನಿಂದ ಸಾರ್ವ-ಭೌಮ ಬಿರುದುಗಳನ್ನು ಧರಿಸಿ, ತಾನು ಸ್ವತಂತ್ರ ರಾಜನಿದ್ದೇನೆಂದು ಎಲ್ಲ ಕಡೆಗೂ ಡಂಗುರವನ್ನು ಹೊಡಿಸಿದನು. ಇತ್ತ ಈ ತೈಲಪರಾಜನು ಅಣ್ಣಿಗೇರಿಯಿಂದ **ಬನವಾಸಿ**ಗೆ ಹೋಗಿ ಅಲ್ಲಿಯೇ ನಿಂತನು.

ಬಿಜ್ಜಳನು **ಜೈನ**ನಾಗಿದ್ದನು ; ಇವನ ಮಂತ್ರಿಯಾದ **ಬಲದೇವ**ನು **ಶೈವಬ್ರಾಹ್ಮಣ**ನಾಗಿದ್ದನು. ಇವರಿಬ್ಬರೂ ಮೂಲತಃ ವಿಜಾಪುರ ಪ್ರಾಂತದವರು, ಎಂದರೆ ತರ್ದೆವಾಡಿ ನಾಡಿನವರು. ಬಿಜ್ಜಳನು ಮೊದಲು ಈ ತರ್ದೆವಾಡಿ ನಾಡಿನಲ್ಲಿಯೇ ಮಹಾಮಂಡಳೇಶ್ವರನಾಗಿದ್ದನು. ಆಗಿನಿಂದಲೇ ಈತನಿಗೆ ಈ ಬಲದೇವನು ಮಂತ್ರಿಯಾಗಿದ್ದಂತೆ ತೋರುತ್ತದೆ. ಬಲದೇವನ ಸೋದರಳಿಯಂದಿರಾದ **ಶ್ರೀ ಬಸವಣ್ಣ**ನವರೂ ಸಹ ಈ ತರ್ದೆವಾಡಿ ನಾಡಿನಲ್ಲಿ **ಇಂಗಳೇಶ್ವರ-ಬಾಗೇವಾಡಿ** ಗ್ರಾಮದವರು. ಇವರು, ತಮ್ಮ ಸೋದರಮಾವನಾದ ಬಲದೇವನ ತರುವಾಯ ಬಿಜ್ಜಳರಾಜನಿಗೆ ಮುಖ್ಯ ಮಂತ್ರಿಯಾದರು. ಶ್ರೀ **ಬಸವಣ್ಣ**ನವರು ವೀರಶೈವಮತದ ಉದ್ಧಾರಕ್ಕೋಸ್ಕರವಾಗಿಯೇ ಅವತರಿಸಿದ್ದರಿಂದ ಇವರು ಮಂತ್ರಿಯಾದ ಮೇಲೆ **ವೀರಶೈವ ಮತಕ್ಕೆ** ಬಹಳೇ ಕಳೆಯೇರಿತು. ಈ ಕಾಲಕ್ಕೆ ಎಷ್ಟೋ ಜನ ಜೈನರು ವೀರಶೈವ ಮತವನ್ನು ಸ್ವೀಕರಿಸಿದ್ದರಿಂದ ಜೈನ-



ಶ್ರೀ ಬಸವಣ್ಣನವರು

ಸಮಾಜವು ಕಡಿಮೆಯಾಯಿತು. ಇದರಿಂದ ಜೈನನಾದ ಬಿಜ್ಜಳನ ಮನಸ್ಸು

ಬಸವಣ್ಣನವರೂ ಬಿಜ್ಜಳನೂ

ನೊಂದಿತು. ಇದೇ ವೇಳೆಯಲ್ಲಿ ಬಿಜ್ಜಳರಾಜನಿಗೆ **ಮಂಚಣ್ಣ**ನೆಂಬ ಉಪ-ಮಂತ್ರಿಯಿದ್ದನು. ಅವನು ಶ್ರೀಬಸವಣ್ಣನವರ ವೈರಿಯಾಗಿದ್ದರಿಂದ ಬಿಜ್ಜಳರಾಜನ ಬಳಿಗೆ ಹೋಗಿ, "ಬಸವಣ್ಣನು ತಮ್ಮ ಬೊಕ್ಕಸದೊಳಗಿನ ಹೇರಳವಾದ ಹಣವನ್ನು ವೆಚ್ಚಮಾಡಿ ತನ್ನ ವೀರಶೈವ ಮತವನ್ನು ಹಬ್ಬಿಸುತ್ತಾನೆ." ಎಂದು ಇಲ್ಲದ್ದೊಂದು ಹುಟ್ಟಿಸಿ, ಚಾಡಿಯನ್ನು ಹೇಳಲಾರಂಭಿಸಿದನು. ಇದರಿಂದಂತೂ ಬಿಜ್ಜಳರಾಜನ ಮನಸ್ಸು ಶ್ರೀಬಸವಣ್ಣನವರ ವಿಷಯವಾಗಿ ಮತ್ತಿಷ್ಟು ಕೆಟ್ಟು ಹೋಯಿತು.

ಬಿಜ್ಜಳನ ಕೊಲೆ

ಮುಂದೆ ಬಿಜ್ಜಳರಾಜನು, ತನ್ನ ರಾಜ್ಯದಲ್ಲಿ ಉಚ್ಚ-ನೀಚ ಜಾತಿಗಳಲ್ಲಿ ಲಗ್ನಸಂಬಂಧವನ್ನು ಮಾಡಿದರೆಂಬ ಕಾರಣವನ್ನು ಮುಂದೆ ಮಾಡಿ, **ಮಧುವಯ್ಯ, ಹರಳಯ್ಯ**ರೆಂಬ ಶಿವಶರಣರ ಕಣ್ಣುಗಳನ್ನು ಕೀಳಿಸಿದನು !! ಕೂಡಲೇ ಶ್ರೀಬಸವೇಶ್ವರರ ಶಿಷ್ಯರಲ್ಲಿ ಕೆಲವರು ಬಹಳ ಸಿಟ್ಟಿಗೆದ್ದು, ಬಿಜ್ಜಳನನ್ನು ಕೊಲ್ಲುವದಕ್ಕೆ ಅಣಿಯಾದರು ! ಆ ಕ್ಷಣವೇ ಶಾಂತಸ್ವಭಾವದ ಶ್ರೀ ಬಸವಣ್ಣನವರು ಕಲ್ಯಾಣ ಪಟ್ಟಣವನ್ನು ಬಿಟ್ಟುಕೊಟ್ಟು, ತಾವು ಪೂರ್ವದಲ್ಲಿ ತಪಶ್ಚರ್ಯೆಯನ್ನು ಮಾಡಿದ ಕೃಷ್ಣಾ, ಮಲಪ್ರಭಾ ನದಿಗಳ ಸಂಗಮಸ್ಥಳದಲ್ಲಿದ್ದ **ಸಂಗಮೇಶ್ವರ**ನ ದೇವಾಲಯಕ್ಕೆ ಬಂದು, ಮುಂದೆ ಸ್ವಲ್ಪ ದಿವಸಗಳಲ್ಲಿಯೇ ಆ ಕ್ಷೇತ್ರದಲ್ಲಿ ಸಮಾಧಿಸ್ಥರಾದರು. (ಕ್ರಿ. ಶ. ೧೧೬೬) ಇತ್ತ **ಕಲ್ಯಾಣ** ಪಟ್ಟಣದಲ್ಲಿ **ಜಗದ್ದೇವ**ನೆಂಬ ವೀರಶಿರೋಮಣಿಯಾದ ವೀರಶೈವನು, **ಮಲ್ಲಯ್ಯ, ಬೊಮ್ಮಯ್ಯ**ರೆಂಬ ಇಬ್ಬರು ವೀರಶೈವರನ್ನು ಜೊತೆಗೆ ಕರೆದುಕೊಂಡು ಅರಮನೆಯೊಳಗೆ ಹೊಕ್ಕನು. ಆ ಕಾಲಕ್ಕೆ ಬಿಜ್ಜಳನು ಓಲಗದಲ್ಲಿ ಮಂತ್ರಿಗಳೊಡನೆ ಕೇವಲ ರಾಜ್ಯಕಾರಭಾರದಲ್ಲಿ ತೊಡಗಿದ್ದನು. ಅಂಥ ವೇಳೆಯಲ್ಲಿ ಈ ಮೂವರೂ ಒಮ್ಮಿಂದೊಮ್ಮೆ ಆ ಓಲಗದೊಳಗೆ ನುಗ್ಗಿ, ತಮ್ಮ ಕತ್ತಿಗಳನ್ನು ಒರೆಯಿಂದ ಹೊರಗೆ ತೆಗೆದು, **ಬಿಜ್ಜಳ**ನನ್ನು ಇರಿದು ಕೊಂದರು. ಬಳಿಕ ಅವರು ಅಲ್ಲಿಂದ ರಾಜಬೀದಿಗೆ

ಬಂದು, ತಮ್ಮ ಕೈಯೊಳಗಿನ ಕತ್ತಿಗಳನ್ನು ಝುಳಿಪಿಸುತ್ತ ತಾವು ಮಾಡಿದ ಕೊಲೆಯ ಕಾರಣವನ್ನು ಸಾರಿಹೇಳಿದರು. ಮುಂದೆ ಎರಡೂ ಪಕ್ಷಗಳ ನಡುವೆ ಭಯಂಕರವಾದ ಯುದ್ಧವಾಗಿ ರಕ್ತದ ಕಾಲುವೆಗಳು ಹರಿದವು! (ಕ್ರಿ. ಶ. ೧೧೬೭).

ತದನಂತರ ಶ್ರೀ **ಅಲ್ಲಮಪ್ರಭುದೇವರು,** ಶ್ರೀ **ಚೆನ್ನಬಸವಣ್ಣ**ನವರು ಅನೇಕಜನ **ಶಿವಶರಣ**ರೊಡನೆ ಕಲ್ಯಾಣ ಪಟ್ಟಣದಿಂದ ಹೊರಟು, ಬೇರೆ ಬೇರೆ ಸ್ಥಳಗಳಲ್ಲಿ ಧರ್ಮೋಪದೇಶವನ್ನು **ಅಲ್ಲಮಪ್ರಭುದೇವರು** ಮಾಡುತ್ತ ಅಲ್ಲಲ್ಲಿಗೆ **ವಿರಕ್ತಮಠ**ಗಳನ್ನು **ಚೆನ್ನಬಸವಣ್ಣನವರು** ಸ್ಥಾಪಿಸುತ್ತ ಬೇರೆ ಬೇರೆ ದಿಕ್ಕಿಗೆ ನಡೆದರು. ಶ್ರೀ **ಅಲ್ಲಮಪ್ರಭುದೇವರೂ,** ಶ್ರೀ **ಅಕ್ಕ-ಮಹಾದೇವಿಯರೂ, ಶ್ರೀಶೈಲ**ಕ್ಕೆ ಹೋಗಿ, ಅಲ್ಲಿ **ಕದಳಿ-ವನ**ದಲ್ಲಿ ಸಮಾಧಿಸ್ಥರಾದರು. ಶ್ರೀ **ಚೆನ್ನಬಸವಣ್ಣ**ನವರು ಮುಂದೆ ಬಹು ದಿವಸ ಇದ್ದು, ವೀರಶೈವ ಮತಕ್ಕೆ ಸರ್ವಾಂಗ ಸುಂದರವಾದ ಪರಿಸ್ಥಿತಿಯನ್ನು ಏರ್ಪಡಿಸಿ, **ಉಳವಿ ಕ್ಷೇತ್ರ**ದಲ್ಲಿ ಸಮಾಧಿಸ್ಥರಾದರು.

ಕಲಚೂರಿ ರಾಜ್ಯದ ಕೊನೆ

ಬಿಜ್ಜಳನ ತರುವಾಯ ಅವನ ಮಕ್ಕಳಾದ **ರಾಯಮುರಾರಿ ಸೋವಿದೇವ, ಸಂಕಮ, ಆಹವಮಲ್ಲ, ಸಿಂಘಣ** ಈ ನಾಲ್ವರು ಅಪ್ರಸಿದ್ಧರಾಗಿ ಹಾಗೂ ಹೀಗೂ ಒಟ್ಟು ೧೫ ವರ್ಷ ಒಬ್ಬರ ನಂತರ ಒಬ್ಬರು ಅನುಕ್ರಮವಾಗಿ ರಾಜ್ಯವನ್ನಾಳಿದರು. ಅಷ್ಟರಲ್ಲಿ ಬನವಾಸಿಯಲ್ಲಿದ್ದ ಮುಮ್ಮಡಿ ತೈಲಪನ ಮಗನಾದ ೪ನೆಯ **ವೀರ ಸೋಮೇಶ್ವರ**ನು, ಶೌರ್ಯದಿಂದ ತನ್ನ ಚಾಳುಕ್ಯ ವಂಶದ ರಾಜ್ಯವನ್ನು ತಿರುಗಿ ಕಸಿದುಕೊಂಡನು. (ಕ್ರಿ. ಶ. ೧೧೮೩).

ಸಿಂಹಾವಲೋಕನವು :—ಸ್ವಲ್ಪ ಕಾಲದವರೆಗೆ ಬಾಳಿದ ಈ **ಕಲ-ಚೂರಿ** ಸಾಮ್ರಾಜ್ಯವು, ರಾಜಕೀಯ ದೃಷ್ಟಿಯಿಂದ ಅಷ್ಟೇನೂ ಮಹತ್ವದ್ದಾಗಿರದಿದ್ದರೂ ಧಾರ್ಮಿಕದೃಷ್ಟಿಯಿಂದ ಮಹತ್ವದ್ದಾಗಿದೆ. ಈ ಸಾಮ್ರಾಜ್ಯವು ಉದಯವಾಗುವದಕ್ಕಿಂತ ಮೊದಲೇ ಶ್ರೀ **ಬಸವೇಶ್ವರ**ರು ಧಾರ್ಮಿಕ ವಾತಾವರಣದಲ್ಲಿ


ತಪಶ್ಚಕ್ರವರ್ತಿಗಳಾಗಿದ್ದರು. ಇಂಥ ಮಹಾ ಪ್ರತಿಭಾಶಾಲಿಗಳ ಸಾಹಾಯ್ಯವನ್ನು **ಚತುರನಾದ ಬಿಜ್ಜಳನು** ತನ್ನ ಸಾಮ್ರಾಜ್ಯಸ್ಥಾಪನೆಯ ಕಾರ್ಯಕ್ಕೆ ತೆಗೆದುಕೊಳ್ಳದೆ ಬಿಡಲಿಲ್ಲ. ಆತನು ಮೊದಲು ಈ ಬಸವೇಶ್ವರರ ಸೋದರಮಾವನಾದ ಬಲದೇವನನ್ನು ತನ್ನ ಕಡೆಗೆ ಒಲಿಸಿಕೊಂಡು, ತನ್ನ ಮುಖ್ಯ ಮಂತ್ರಿಯನ್ನಾಗಿ ಮಾಡಿಕೊಂಡನು. ಮತ್ತು ಮುಂದೆ ಸ್ವಲ್ಪಕಾಲದಲ್ಲಿಯೇ ಬಲದೇವನ ತರುವಾಯ ಸ್ವತಃ ಶ್ರೀಬಸವೇಶ್ವರರಿಗೇನೇ ಮುಖ್ಯ ಪ್ರಧಾನ-ಪದವನ್ನು ಕೊಟ್ಟನು. ಇದರಿಂದ ಬಿಜ್ಜಳನ ಸಾಮ್ರಾಜ್ಯವೂ ಘನತೆಗೇರಿತು ; ವೀರಶೈವ ಮತೋದ್ಧಾರದ ಕಾರ್ಯವೂ ಚನ್ನಾಗಿ ನೆರವೇರಿತು. ಆದರೆ ಮುಂದೆ ನಾಲ್ಕೈದು ವರ್ಷಗಳಲ್ಲಿಯೇ **ಬಿಜ್ಜಳ** ರಾಜನಿಗೂ **ಶ್ರೀಬಸವಣ್ಣನವರಿಗೂ** ಮತಪ್ರಚಾರದ ವಿಷಯವಾಗಿ ಹಗೆತನವುಂಟಾದುದರಿಂದ **ಕಲಚೂರಿ** ಸಾಮ್ರಾಜ್ಯವು ಮುಳುಗುವ ಹೊತ್ತು ಬಂದಿತು. ಈ ವೀರಶೈವ ಮತೋದ್ಧಾರಕರೆಲ್ಲರೂ **ಭಕ್ತಿ, ಜ್ಞಾನ, ವೈರಾಗ್ಯ** ಪರವಾದ **ವೀರಶೈವ ಸಿದ್ಧಾಂತ**ಗಳನ್ನೂ **ನೀತಿ**ಯನ್ನೂ **ಸಮಾಜ ಸುಧಾರಣೆ**ಯ ವಿಷಯಗಳನ್ನೂ ಜನರು ಮಾತನಾಡುವ ಬಳಕೆಯ ಕನ್ನಡದಲ್ಲಿಯೇ ಬರೆದಿಟ್ಟು, ಪಂಡಿತ, ಪಾಮರರೆಲ್ಲರನ್ನೂ ಜ್ಞಾನಿಗಳನ್ನಾಗಿ ಮಾಡಿದರು. ಈ **ವಚನ** ಗ್ರಂಥಗಳಿಂದ ಕನ್ನಡ ಸಾಹಿತ್ಯದಲ್ಲಿ ಸುಂದರವಾದ ಗದ್ಯಶೈಲಿಯುಂಟಾಯಿತು.

೯ನೆಯ ಪ್ರಕರಣ

ಹೊಯ್ಸಳ ಯಾದವರಾಜರು ಸ್ವತಂತ್ರರಾದರು

ಸಳನೆಂಬುವನೇ ಈ ಮನೆತನಕ್ಕೆ ಮೂಲಪುರುಷನು. ಈತನು ಒಮ್ಮೆ ಅಡವಿಯಲ್ಲಿದ್ದ ತನ್ನ ಕುಲದೇವತೆಯಾದ **ವಾಸಂತಿಕಾದೇವಿಯ** ಪೂಜೆಗೋಸ್ಕರ ಅಲ್ಲಿ ಹೋದ ಕಾಲದಲ್ಲಿ ಒಮ್ಮಿಂದೊಮ್ಮೆ **ಹೊಯ್-ಸಳ** ಒಂದು **ಹುಲಿ**ಯು ಆ ಗುಡಿಯೊಳಗೆ ಬಂದಿತು! ಆಗ ಅಲ್ಲಿದ್ದ ಆಚಾರ್ಯನು, ಈ **ಸಳ**ನ ಕೈಯಲ್ಲಿ ಒಂದು **ಕಠಾರಿ**ಯನ್ನು ಕೊಟ್ಟು, "**ಹೊಯ್-ಸಳ**" ಎಂದು ಹೇಳಿದನು. ಕೂಡಲೇ ಆ ಗುರುವಿನ ಅಪ್ಪಣೆಯ ಪ್ರಕಾರ ಇವನು ಆ ಕಠಾರಿಯಿಂದ

ಇರಿದು, ಆ ಹುಲಿಯನ್ನು ಕೊಂದನು. ಅಂದಿನಿಂದ ಈ ಮನೆತನಕ್ಕೆ "ಹೊಯ್ಸಳ" ಎಂಬ ಅಡ್ಡಹೆಸರುಂಟಾಯಿತು.



ಸಳನು ಹುಲಿಯನ್ನು ಕಠಾರಿಯಿಂದ ಇರಿದು ಕೊಲ್ಲುತ್ತಿದ್ದಾನೆ.

ಈ ಹೊಯ್ಸಳಯಾದವರು, ಕ್ರಿ. ಶ. ೧೧ನೆಯ ಶತಮಾನದ ಆದಿಯಲ್ಲಿ ತಲೆಯೆತ್ತಿ, ಮೈಸೂರ ಪ್ರಾಂತದ ಮಲೆನಾಡಿನಲ್ಲಿ ೧೫೦ ವರ್ಷಗಳವರೆಗೆ ಕಲ್ಯಾಣ ಚಾಳುಕ್ಯರ ಮಾಂಡಲಿಕರಾಗಿ ಆಳಿದರು. ಮುಂದೆ ಚಾಳುಕ್ಯರ ಸಾಮ್ರಾಜ್ಯವು ಕ್ರಿ. ಶ. ೧೧೯೫ರಲ್ಲಿ ನಾಶವಾದನಂತರ ಇವರು ಸ್ವತಂತ್ರರಾಗಿ, ಆ ಚಾಳುಕ್ಯ ಸಾಮ್ರಾಜ್ಯದ ದಕ್ಷಿಣ ಭಾಗವನ್ನೆಲ್ಲ ಆಕ್ರಮಿಸಿದರು. ಈ ಹೊಯ್ಸಳ ರಾಜರಲ್ಲಿ **ವಿಷ್ಣುವರ್ಧನನು** ಹಾಗೂ ಅವನ ಮೊಮ್ಮಗನಾದ **ಇಮ್ಮಡಿ ಬಲ್ಲಾಳನು** ಇವರೇ ಇಬ್ಬರು ಹೆಸರಾದವರು.

ವಿಷ್ಣುವರ್ಧನನ ಮೊದಲಿನ ಹೆಸರು **ಬಿಟ್ಟಿದೇವನು.** ಮತ್ತು ಇವನು ಮೊದಲು **ಜೈನನಾಗಿದ್ದನು.** ಆದರೆ ಇತ್ತ **ಚೋಳ** ರಾಜ್ಯದಲ್ಲಿ ಕ್ರಿ. ಶ. ೧೦೧೭ರಲ್ಲಿ **ಶ್ರೀರಾಮಾನುಜಾಚಾರ್ಯರು** ಅವತರಿಸಿ,

ವಿಶಿಷ್ಟಾದ್ವೈತ ಮತವನ್ನು ಉದ್ಧಾರ ಮಾಡಿದರು. ಶೈವನಾದ ಕುಲೋತ್ತುಂಗ ಚೋಳರಾಜನು (ಕ್ರಿ. ಶ. ೧೦೭೦–೧೧೧೮) ಇವರಿಗೆ ತೊಂದರೆ ಪಡಿಸಿದ್ದರಿಂದ ಈ ಆಚಾರ್ಯರು ಚೋಳ ರಾಜ್ಯದಿಂದ **ಬಿಟ್ಟಿದೇವನು,** ದಕ್ಷಿಣ ಕರ್ನಾಟಕಕ್ಕೆ ಬಂದು, ಈ ಬಿಟ್ಟಿದೇವರಾಜನ **ಶ್ರೀರಾಮಾನುಜ** ಆಶ್ರಯವನ್ನು ಪಡೆದರು. (ಕ್ರಿ.ಶ. **೧೧೧೬**) ಆಗ ಈ **ಆಚಾರ್ಯರು** ಬಿಟ್ಟಿದೇವನು, ಶ್ರೀರಾಮಾನುಜಾಚಾರ್ಯರಿಂದ **ಶ್ರೀ**ವೈಷ್ಣವಮತವನ್ನು ಸ್ವೀಕರಿಸಿ, "**ವಿಷ್ಣುವರ್ಧನ**"ನೆಂಬ ಹೊಸ ಹೆಸರನ್ನು ಇಟ್ಟುಕೊಂಡನು. (ಕ್ರಿ. ಶ. **೧೧೧೭**) ಬಿಟ್ಟಿದೇವನು ಶ್ರೀ ವೈಷ್ಣವ ಮತವನ್ನು ಸ್ವೀಕರಿಸಿದರೂ ಇವನ ಹಿರಿಯ ಹೆಂಡತಿಯಾದ **ಶಾಂತಲದೇವಿಯು** ತಾನು ಸಾಯುವವರೆಗೂ ಜೈನಮತಸ್ಥಳಾಗಿಯೇ ಇದ್ದಳು. ಈಕೆಯು ಸತ್ತನಂತರ ಈ ವಿಷ್ಣುವರ್ಧನನು ಶ್ರೀವೈಷ್ಣವಮತಸ್ಥಳಾದ **ಲಕ್ಷ್ಮೀದೇವಿಯನ್ನು** ಮದುವೆಯಾದನು. ಈತನು **ಗಂಗವಾಡಿ, ತಳಕಾಡು, ನೊಳಂಬವಾಡಿ** ಮುಂತಾದ ನಾಡುಗಳನ್ನು ಗೆದ್ದು, "**ವೀರಗಂಗ, ವಿಕ್ರಮಗಂಗ, ತಳಕಾಡುಗೊಂಡ, ನೊಳಂಬವಾಡಿಗೊಂಡ, ತ್ರಿಭುವನಮಲ್ಲ**" ಎಂಬ ಬಿರುದುಗಳನ್ನು ಧರಿಸಿ, ಕ್ರಿ. ಶ. **೧೧೧೧** ರಿಂದ **೧೧೪೧**ರ ವರೆಗೆ ಆಳಿದನು.


ಶ್ರೀರಾಮಾನುಜಾಚಾರ್ಯರು

ಈತನು, ಚಾಳುಕ್ಯ ಚಕ್ರವರ್ತಿಯಾದ ೬ನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಹಾವಳಿಯನ್ನು ಮಾಡಲಾರಂಭಿಸಿದನು. ಕೂಡಲೇ ಆ ವಿಕ್ರಮಾಂಕ ಚಕ್ರವರ್ತಿಯು ತನ್ನ ಶೂರ ಸೇನಾಪತಿಯಾದ ಎಲಬುರ್ಗಿಯ ೨ನೆಯ **ಆಚುಗಿ**ರಾಯನೆಂಬ ಸಿಂದವಾಡಿಯ ಮಂಡಳೇಶ್ವರನನ್ನು ಇಲ್ಲಿಗೆ ಕಳಿಸಿದನು. ಆ ವೀರಶಿರೋಮಣಿಯಾದ ಆಚುಗಿರಾಯನು ಇಲ್ಲಿಗೆ

ಹೊಯ್ಸಳ ಯಾದವರಾಯರ ವಂಶಾವಳಿಯು.

(೧) ಸಳ, ಪೊಯ್ಸಳ, ಹೊಯ್ಸಳ (ಕ್ರಿ.ಶ. ೧೦೦೬)

(೨) ನೃಪಕಾಮ, ಕಾಮ-ಪೊಯ್ಸಳ, (ಕ್ರಿ.ಶ. ೧೦೨೨-೧೦೨೬)
ರಾಚಮಲ್ಲ-ಪೆರ್ಮಾಡಿ.

(೩) ವಿನಯಾದಿತ್ಯ, ತ್ರಿಭುವನಮಲ್ಲ-ಪೊಯ್ಸಳ (ಕ್ರಿ.ಶ ೧೦೪೭-೧೧೦೦)

ಎರೆಯಂಗ (ಯುವರಾಜ) (ಕ್ರಿ.ಶ. ೧೦೬೩-೧೦೯೫)

(೪) ಬಲ್ಲಾಳ. ೧
ತ್ರಿಭುವನಮಲ್ಲ-ಬಲ್ಲಾಳ ಪೊಯ್ಸಳ
(ಕ್ರಿ.ಶ. ೧೧೦೦-೧೧೦೬)

(೫) ಬಿಟ್ಟಿದೇವ, ಬಿಟ್ಟಿಗ
ವಿಷ್ಣುವರ್ಧನ
ವೀರಗಂಗ, ವಿಕ್ರಮಗಂಗ
ತ್ರಿಭುವನಮಲ್ಲ, ತಲಕಾಡುಗೊಂಡ
(ಕ್ರಿ.ಶ. ೧೧೦೬-೧೧೪೧)

ಉದಯಾದಿತ್ಯ
(ಕ್ರಿ.ಶ. ೧೧೨೩ರಲ್ಲಿ ಮರಣ)

(೬) ನರಸಿಂಹ, ಪ್ರತಾಪನರಸಿಂಹ.
ಜಗದೇಕಮಲ್ಲ-ನರಸಿಂಹ
(ಕ್ರಿ.ಶ. ೧೧೪೧-೧೧೭೩)

(೭) ಬಲ್ಲಾಳ ೨. ವೀರಬಲ್ಲಾಳ ೧.
ಶನಿವಾರಸಿದ್ಧಿ, ಗಿರಿದುರ್ಗಮಲ್ಲ, ಯಾದವನಾರಾಯಣ,
(ಕ್ರಿ.ಶ. ೧೧೭೩-೧೨೨೦)

ಸೋವಲದೇವಿ

(೮) ನರಸಿಂಹ ೨. ವೀರನರಸಿಂಹ ೧.
ಮಗರರಾಜ್ಯ-ನಿರ್ಮೂಲನ, ಪಾಂಡ್ಯ-ಭಿಕಾಪಟ್ಟ,
ಚೋಳರಾಜ್ಯಪ್ರತಿಷ್ಠಾಚಾರ್ಯ.
(ಕ್ರಿ.ಶ. ೧೨೨೦-೧೨೩೫)

(೯) ಸೋಮೇಶ್ವರ, ವೀರಸೋಮೇಶ್ವರ, ಸೋಯಿದೇವ
(ಕ್ರಿ.ಶ. ೧೨೩೩-೧೨೫೪)

(೧೦) ನರಸಿಂಹ ೩ (ಬಿಜ್ಜಲಾದೇವಿಯ ಮಗ) ವೀರನರಸಿಂಹ ೨.
(ಕ್ರಿ.ಶ. ೧೨೫೪-೧೨೯೧)

ರಾಮನಾಥ (ದೇವಲದೇವಿಯ ಮಗ)
ವೀರ-ರಾಮನಾಥ
(ಕ್ರಿ.ಶ. ೧೨೫೪-೧೨೯೫)

(೧೧) ಬಲ್ಲಾಳ ೩. ವೀರಬಲ್ಲಾಳ ೨.
(ಕ್ರಿ.ಶ. ೧೨೯೧-೧೩೪೨)

ವಿಶ್ವನಾಥ
(ಕ್ರಿ.ಶ. ೧೨೯೫-೧೨೯೬)

(೧೨). ಬಲ್ಲಾಳ ೪.
ವೀರ-ವಿರೂಪಾಕ್ಷಬಲ್ಲಾಳ
(ಕ್ರಿ.ಶ. ೧೩೪೩)

ಬಂದು ಈ ವಿಷ್ಣುವರ್ಧನನಿಗೆ ಚನ್ನಾಗಿ ಏಟುಕೊಟ್ಟು, ಇವನನ್ನು ಮೆತ್ತಗೆ ಮಾಡಿದನು. ಹಾಗೆಯೇ ಇವನ ಒಡನಾಡಿಗರಾದ **ಗೋವೆ, ಕೊಂಕಣ, ಪಾಂಡ್ಯ** ಅರಸರನ್ನೂ ಒಳಿತಾಗಿ ಥಳಿಸಿ **ವಿಷ್ಣುವರ್ಧನನು** ದನು! ಆಗ ಈ ವಿಷ್ಣುವರ್ಧನನು ವಿಕ್ರಮಾಂಕ **ಆಚುಗಿರಾಯನು** ಚಕ್ರವರ್ತಿಗೆ ಶರಣುಹೋದನು. ವಿಷ್ಣುವರ್ಧನನ ಮುಖ್ಯರಾಜಧಾನಿಯು **ದ್ವಾರಸಮುದ್ರ** ಪಟ್ಟಣವು. ಇದಲ್ಲದೆ **ತಳಕಾಡು, ಯಾದವಪುರ, ಬಂಕಾಪುರ** ಮುಂತಾದ ಪಟ್ಟಣಗಳು ಇವನ ಉಪರಾಜಧಾನಿಗಳಾಗಿದ್ದವು. ಇವನು ಕ್ರಿ. ವ. **೧೧೦೬** ರಿಂದ **೧೧೪೧**ರ ವರೆಗೆ **೩೫ ವರ್ಷ** ರಾಜ್ಯವನ್ನಾಳಿದನು. ತರುವಾಯ ಇವನ ಮಗನಾದ **೧ನೆಯ ನರಸಿಂಹನು** ಪಟ್ಟಕ್ಕೆ ಕುಳಿತನು. ಈ ನರಸಿಂಹನ ಮಗನೇ ಸುಪ್ರಸಿದ್ಧನಾದ ಇಮ್ಮಡಿ **ಬಲ್ಲಾಳನು.**

ಇಮ್ಮಡಿ ಬಲ್ಲಾಳ
ಕ್ರಿ. ವ. ೧೧೭೩-೧೨೨೦

ಇಮ್ಮಡಿ ಬಲ್ಲಾಳನು ಹೊಯ್ಸಳ ಅರಸರಲ್ಲಿ ಎಲ್ಲರಿಗಿಂತಲೂ ಬಹು ಶೂರನಾಗಿದ್ದುದರಿಂದ ಇವನಿಗೆ "**ವೀರ ಬಲ್ಲಾಳ**" ನೆಂಬ ಹೆಸರುಂಟಾಯಿತು. ಇಷ್ಟೇ ಅಲ್ಲ, ಇವನ ಕಾಲದಿಂದ ಈ ಹೊಯ್ಸಳ ಮನೆತನಕ್ಕೆ "**ಬಲ್ಲಾಳವಂಶ**" ವೆಂಬ ಹೆಸರು ಪ್ರಾಪ್ತವಾಯಿತು. ಈ ವೀರ ಬಲ್ಲಾಳನು, **ತಂತ್ರಪಾಲ ಹೆಮ್ಮಾಡಿ**ಯೆಂಬ ಮಂತ್ರಿಯನ್ನೂ **ಬಿಟ್ಟರಸ**ನೆಂಬ ಸೇನಾಪತಿಯನ್ನೂ ಜೊತೆಗೆ ಕರೆದುಕೊಂಡು ವಿಜಯಯಾತ್ರೆಗೆ ಹೊರಟು, **ಕೊಂಗಾಳ್ವ, ಚೆಂಗಾಳ್ವ** ಅರಸರನ್ನು ಗೆದ್ದನು. ಅಲ್ಲದೆ **ಪಾಂಡ್ಯ** ಅರಸನ **ಉಚ್ಚಂಗಿ**ಯ ಅಸಾಧ್ಯವಾದ ಕೋಟೆಯನ್ನು ಆಯಾಸವಿಲ್ಲದೆ ವಶಮಾಡಿಕೊಂಡನು. ಕೂಡಲೆ ಪಾಂಡ್ಯ ಅರಸನಾದ **ಕಾಮದೇವ**ನು ಈತನಿಗೆ ಶರಣು ಬಂದನು. (ಕ್ರಿ. ವ. **೧೧೭೭**) ಆ ಬಳಿಕ **ಕಳಚೂರ್ಯ** ರಾಜನಾದ **ಸಂಕಮ**ನನ್ನು ಕ್ರಿ. ವ. **೧೧೭೯**ರಲ್ಲಿ ಗೆದ್ದು, ಆ ಕಳಚೂರ್ಯ ರಾಜವಂಶದ "**ಗಿರಿದುರ್ಗಮಲ್ಲ, ಶನಿವಾರಸಿದ್ಧಿ**" ಎಂಬ ಬಿರುದುಗಳನ್ನು ಕಿತ್ತುಕೊಂಡು ತಾನು ಧರಿಸಿದನು. ಮುಂದೆ ಕ್ರಿ. ವ. **೧೧೮೯** ರಲ್ಲಿ ಚಾಳುಕ್ಯ ಚಕ್ರವರ್ತಿಯಾದ ೪ನೆಯ ಸೋಮೇಶ್ವರನ ವೀರಸೇನಾಪತಿ

ಯಾದ **ಬೊಮ್ಮ**ನನ್ನು ಸೋಲಿಸಿ, ಆಗಿನ ಕಾಲಕ್ಕಿದ್ದಷ್ಟು ಚಾಳುಕ್ಯ ಸಾಮ್ರಾಜ್ಯದ ದಕ್ಷಿಣಭಾಗವನ್ನೆಲ್ಲ ಕೈವಶಮಾಡಿಕೊಂಡನು. ನಂತರ ಕ್ರಿ. ಶ. ೧೧೯೧ರಲ್ಲಿ **ಸೊರಟೂರಿನ** ಹತ್ತರ (ಗದಗ ತಾಲೂಕ) **ದೇವಗಿರಿ** ಯಾದವ ರಾಜನಾದ **ಭಿಲ್ಲಮ**ನ ಸೈನ್ಯವನ್ನು ಸೋಲಿಸಿ, ಅದನ್ನು ಬೆನ್ನಟ್ಟಿ ಕೃಷ್ಣವೇಣಿ ನದಿಯತನಕ ಓಡಿಸಿದನು. ಆ ಮೇಲೆ ಕ್ರಿ ಶ. ೧೧೯೨ರಲ್ಲಿ **ಲಕ್ಕುಂಡಿ** (ಗದಗ ತಾಲೂಕ) ಎಂಬ ಗ್ರಾಮದ ಬಳಿಯಲ್ಲಿ ಆ ಭಿಲ್ಲಮನ ಮಗನಾದ **ಜೈತ್ರಸಿಂಹ**ನನ್ನೂ ಸೋಲಿಸಿದನು.

ಅದೇ ಕಾಲಕ್ಕೆ ಲಕ್ಕುಂಡಿ ಗ್ರಾಮದಲ್ಲಿ ಅರಮನೆಯನ್ನೂ ದೇವಾಲಯಗಳನ್ನೂ ಕಟ್ಟಿಸಿ, ಅದನ್ನು ತನ್ನ ಉಪರಾಜಧಾನಿಯನ್ನಾಗಿ ಮಾಡಿಕೊಂಡನು.

ರಾಜಧಾನಿಗಳು

ಇದೇ ಪ್ರಕಾರ ಧಾರವಾಡ ಜಿಲ್ಹೆಯ ಕೋಡ ತಾಲೂಕಿನಲ್ಲಿ ತುಂಗಭದ್ರಾ ನದಿಯ ತೀರದಲ್ಲಿರುವ '**ಹಳ್ಳೂರು**' ಎಂಬ ಗ್ರಾಮವನ್ನು ಇವನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು, ಕ್ರಿ. ಶ. **೧೨೦೦** ರಿಂದ **೧೨೧೧**ರ ವರೆಗೆ **೧೨ ವರ್ಷ** ಕದಲದೆ ಅಲ್ಲಿಯೇ ಇದ್ದನು. ಆ ಕಾಲಕ್ಕೆ ಈ ಹಳ್ಳೂರಿಗೆ **ವಿಜಯಪುರ, ವಿಜಯಸಮುದ್ರ, ಮಧುವನ** ಎಂಬ ಹೆಸರುಗಳಿದ್ದವು. ಈ ಪ್ರಕಾರ ಈ ವೀರ ಬಲ್ಲಾಳದೇವನು **೪೭ ವರ್ಷ**ಗಳ ವರೆಗೆ ಅತಿ ವೈಭವದಿಂದ ರಾಜ್ಯವನ್ನಾಳಿದನು. ಇವನ ಆಳಿಕೆಯಲ್ಲಿ

ಶ್ರೀಮಧ್ವಾಚಾರ್ಯರು

ಎಂದರೆ ಕ್ರಿ. ಶ. ೧೧೯೯ರಲ್ಲಿ **ಶ್ರೀಮಧ್ವಾಚಾರ್ಯ**ರು ಉಡುಪಿಯ ಹತ್ತರ **ಪಾಜಕಕ್ಷೇತ್ರ**ದಲ್ಲಿ ಅವತರಿಸಿ, **ದ್ವೈತಮತ**ವನ್ನು ಉದ್ಧಾರ ಮಾಡಿದರು. ಕ್ರಿ. ಶ. **೧೨೨೦**ರಲ್ಲಿ ಈ ಬಲ್ಲಾಳರಾಜನು ಮರಣಹೊಂದಿದನು. ಆ ಕಾಲಕ್ಕೆ ರಾಜಪುತ್ರನೂ ಸೇನಾಪತಿಯೂ ಆದ **ಕುವರ**

ಸ್ವಾಮಿಭಕ್ತಿ

ಲಕ್ಷ್ಮನು, ತನ್ನ ಸ್ವಾಮಿಯಾದ ವೀರಬಲ್ಲಾಳನು ಸತ್ತನಂತರ ಬದುಕಿರುವದು ನಾಚಿಕೆಗೇಡೆಂದು ತಿಳಿದು, ತನ್ನ ಹೆಂಡತಿಯೊಡನೆ ಪ್ರಾಣವನ್ನರ್ಪಿಸಿದನು! ಇದೇ ರೀತಿ ಅವನ ಕೈಯಕೆಳಗಿದ್ದ ಸಾವಿರಜನ ವೀರರೂ ಜೀವವನ್ನು ಕೊಟ್ಟರು!!



ಶ್ರೀಮಧ್ವಾಚಾರ್ಯರು

ಹೊಯ್ಸಳ ರಾಜ್ಯದ ಕೊನೆ — ಈ ವೀರ-ಬಲ್ಲಾಳನ ಕಾಲದಲ್ಲಿ ಚಾಳುಕ್ಯರ ಸಾಮ್ರಾಜ್ಯವು ಸಂಪೂರ್ಣವಾಗಿ ಮುಳುಗಿ ಹೋದುದರಿಂದ ಅಂದಿನಿಂದ ಹೊಯ್ಸಳರಾಜರು ಸ್ವತಂತ್ರರಾಗಿ ಮುಂದೆ ನಾಲ್ಕೈದು ಜನ ಅರಸರು ಕ್ರಿ. ಶ. ೧೩೧೦ರ ವರೆಗೆ ವೈಭವದಿಂದ ರಾಜ್ಯವನ್ನಾಳಿದರು; ಆಗಿನ ಕೊನೆಯ ಬಲ್ಲಾಳರಾಯನು ಹೇಡಿಯಾಗಿದ್ದುದರಿಂದ ಈ ರಾಜ್ಯವು **ಮಲೀಕ ಕಾಫೂರ**ನ ಬಾಯಿಗೆ ತುತ್ತಾಯಿತು!

೧೦ನೆಯ ಪ್ರಕರಣ

ದೇವಗಿರಿ ಯಾದವರಾಜರೂ ಸ್ವತಂತ್ರರಾದರು

ಸೇವುಣರು

ಹೊಯ್ಸಳ ಯಾದವರು ಕೇವಲ ದಕ್ಷಿಣ ಕನ್ನಡಿಗರಾಗಿದ್ದಂತೆ ದೇವಗಿರಿ ಯಾದವರು ಕೇವಲ ಉತ್ತರ ಕನ್ನಡಿಗರಾಗಿದ್ದರು. ಇವರ ರಾಜಧಾನಿಯಾದ **ದೇವಗಿರಿ**ಯು ಆಗಿನ (ಪ್ರಾಚೀನ) ಕರ್ನಾಟಕದಲ್ಲಿ ಕೇವಲ ಉತ್ತರ ಭಾಗದಲ್ಲಿದೆ. ಈ ಮನೆತನದ ಮೂಲಪುರುಷನಾದ **ದೃಢಪ್ರಹರ**ನ ಮಗನ ಹೆಸರು '**ಸೇವುಣಚಂದ್ರ**'ನೆಂದು ಇದ್ದು, ಈತನು ಬಹಳ ಹೆಸರುವಾಸಿ

ಯಾದುದರಿಂದ ಇವನ ಹೆಸರಿನಿಂದ ಈ ಮನೆತನವು ಪ್ರಸಿದ್ಧವಾಯಿತು. ಎಂದರೆ, ಈ ಯಾದವರಿಗೆ "**ಸೇವುಣ**" ರೆಂಬ ಅಡ್ಡಹೆಸರುಂಟಾಯಿತು. ಈ ಸೇವುಣವಂಶದ **೫ನೆಯ ಭಿಲ್ಲಮನು**, ಹೊಯ್ಸಳವಂಶದ ಇಮ್ಮಡಿ ಬಲ್ಲಾಳನ ಕಾಲಕ್ಕೆ ಇದ್ದನು. ಮುಂದೆ ಇವನು ಕ್ರಿ. ವ. ೧೧೮೯ರ ವರೆಗೆ ಆಗಿನ ಕಾಲಕ್ಕಿದ್ದಷ್ಟು ಚಾಳುಕ್ಯ ಸಾಮ್ರಾಜ್ಯದ ಉತ್ತರ ಭಾಗವನ್ನೆಲ್ಲ ಗೆದ್ದುಕೊಂಡನು.

ಚಾಳುಕ್ಯರು ಯಾದವರು

ಕಲ್ಯಾಣ ಚಾಳುಕ್ಯವಂಶದ **ಜಯಸಿಂಹ** ಚಕ್ರವರ್ತಿಯು (ಕ್ರಿ.ವ. ೧೦೧೮-೧೦೪೨) ತನ್ನ ಮಗಳಾದ **ಅವ್ವಲದೇವಿ**ಯನ್ನು ತನ್ನ ಮಾಂಡಲಿಕ ಅರಸನಾದ ಈ ಯಾದವ ವಂಶದ **ಮುಮ್ಮಡಿ ಭಿಲ್ಲಮ**ನಿಗೆ ಮದುವೆ ಮಾಡಿಕೊಟ್ಟನು. ಈ ಪ್ರಕಾರ ಕ್ರಿ. ವ. ೧೧೮೯ರ ವರೆಗೆ ಈ ದೇವಗಿರಿ ಯಾದವರು ಕಲ್ಯಾಣ ಚಾಳುಕ್ಯರ ಆಪ್ತರಾಗಿಯೂ ಮಾಂಡಲಿಕರಾಗಿಯೂ ಇದ್ದರು.

೫ನೆಯ ಭಿಲ್ಲಮನು (ಕ್ರಿ. ವ. ೧೧೮೭-೧೧೯೧)

೫ನೆಯ ಭಿಲ್ಲಮನು, ಇಮ್ಮಡಿ ಬಲ್ಲಾಳನಂತೆಯೇ ಶೂರನಾಗಿದ್ದನು. ಇವನು ಸಿಂಹಾಸನವನ್ನೇರಿದ ಕಾಲಕ್ಕೆ ದಕ್ಷಿಣದಲ್ಲಿ ಚಾಳುಕ್ಯ ಚಕ್ರವರ್ತಿಯಾದ **೪ನೆಯ ಸೋಮೇಶ್ವರನು** (ಕ್ರಿ. ವ. ೧೧೮೩-೧೧೮೯) ರಾಜ್ಯವನ್ನಾಳುತಿದ್ದನು. ಈ ಚಾಳುಕ್ಯರಾಜನು ತೀರ ಹೇಡಿಯಾಗಿದ್ದುದರಿಂದ ಈ ಭಿಲ್ಲಮನು ಚಾಳುಕ್ಯರಾಜ್ಯವನ್ನು ಕ್ರಮಕ್ರಮವಾಗಿ ಉತ್ತರದಿಂದ ಆಕ್ರಮಿಸುವದಕ್ಕೆ ತೊಡಗಿದನು. ಅದೇ ವೇಳೆಯಲ್ಲಿಯೇ ಹೊಯ್ಸಳ ರಾಜನಾದ ಇಮ್ಮಡಿ ಬಲ್ಲಾಳನೂ ಚಾಲುಕ್ಯ ರಾಜ್ಯವನ್ನು ದಕ್ಷಿಣದಿಂದ ಗೆದ್ದುಕೊಳ್ಳಲು ಪ್ರಾರಂಭಿಸಿದನು. ಈ ಪ್ರಕಾರ ಚಾಳುಕ್ಯ ಚಕ್ರವರ್ತಿಯು, ದೇವಗಿರಿ ಯಾದವರ ಹಾಗೂ ಹೊಯ್ಸಳ ಯಾದವರ ನಡುವೆ ಸಿಕ್ಕು ಒದ್ದಾಡುತ್ತಿರಲು, ಕೊನೆಗೆ ಕ್ರಿ. ವ. **೧೧೯೯** ರಲ್ಲಿ ಹೊಯ್ಸಳ ಯಾದವ ರಾಜನಾದ ಇಮ್ಮಡಿ ಬಲ್ಲಾಳನು, ಚಾಳುಕ್ಯ ಚಕ್ರವರ್ತಿಯ ಸೇನಾಪತಿಯಾದ **ಬೊಮ್ಮ**ನನ್ನು ಗೆದ್ದು, ಚಾಳುಕ್ಯರಾಜ್ಯದ ದಕ್ಷಿಣಭಾಗವನ್ನೆಲ್ಲ ವಶಮಾಡಿಕೊಂಡನು. ಮುಂದೆ ಕ್ರಿ. ವ. ೧೧೯೧ರಲ್ಲಿ

ದೇವಗಿರಿ ಯಾದವರ ವಂಶಾವಳಿಯು.

(೧) ದೃಢಪ್ರಹಾರ

(೨) ಸೇವುಣಚಂದ್ರ ೧

(೩) ಧಾಡಿಯಪ್ಪ ೧.

(೪) ಭಿಲ್ಲಮ ೧.

(೫) ರಾಜಗಿ, ಶ್ರೀರಾಜ.

(೬) ವಾದುಗಿ ಅಥವಾ ಬದ್ದಿಗ

(೭) ಧಾಡಿಯಪ್ಪ ೨.

(೮) ಭಿಲ್ಲಮ ೨ (ಹೆಂಡತಿ ಲಕ್ಷ್ಮಿಯವ್ವ)

(೯) ವೇಸುಗಿ ೧.

(೧೦) ಅರ್ಜುನ

(೧೧) ಭಿಲ್ಲಮ ೩ (ರಾಣಿ-ಅವ್ವಲದೇವಿ

(೧೨) ವಾದುಗಿ ೨.

(೧೩) ವೇಸುಗಿ ೨

(೧೪) ಭಿಲ್ಲಮ ೪

(೧೫) ಸೇವುಣಚಂದ್ರ ೨ (ಕ್ರಿ ಶ ೧೦೬೯)

(೧೬) ಪರಮ್ಮ (ಪೆರ್ಮ್ಮ)

(೧೭) ಸಿಂಘ

(೧೮) ಮಲ್ಲುಗಿ.

Children of ಮಲ್ಲುಗಿ:

- ಅಮರಗಾಂಗೇಯ
  - ಗೋವಿಂದರಾಜ
- ಅಮರಮಲ್ಲಗಿ
  - ಬಲ್ಲಾಳ
- (೧) ಭಿಲ್ಲಮ ೫ (ಕ್ರಿ ಶ ೧೧೮೭-೧೧೯೧)
  - (೨) ಜೈತುಗಿ, ಜೈತ್ರಪಾಲ. (ಕ್ರಿ ಶ ೧೧೯೧ ೧೨೧೦)
    - (೩) ಸಿಂಘಣ (ಕ್ರಿ ೧೨೧೦-೧೨೪೭)
      - ಜೈತುಗಿ, ಜೈತ್ರಪಾಲ
        - (೪) ಕೃಷ್ಣ, ಕನ್ನರ, ಕಂಧರ (ಕ್ರಿ ಶ ೧೨೪೭-೧೨೬೦)
          - (೬) ರಾಮಚಂದ್ರ, ರಾಮದೇವ (ಕ್ರಿ ಶ ೧೨೭೧ ೧೩೦೯)
            - (೭) ಶಂಕರದೇವ (ಕ್ರಿ ಶ ೧೩೦೯-೧೩೧೨)
              - ಹರಪಾಲ (ರಾಮದೇವನ ಅಳಿಯ) (ಕ್ರಿ ಶ ೧೩೧೮ರಲ್ಲಿ ಮುಸಲ್ಮಾನರಿಂದ ಕೊಲ್ಲಲ್ಪಟ್ಟನು)
        - (೫) ಮಹಾದೇವ (ಕ್ರಿ ಶ ೧೨೬೦-೧೨೭೧)

ಸೇವುಣವಂಶದ ಈ ಭಿಲ್ಲಮನು, ೨ ಲಕ್ಷ ಕಾಲಾಳುಗಳನ್ನೂ ೧೨ ಸಾವಿರ ರಾವುತರನ್ನೂ ತೆಗೆದುಕೊಂಡು, ಉತ್ತರದಿಂದ ರಾಜ್ಯವನ್ನು ಗೆಲ್ಲುತ್ತ **ದಕ್ಷಿಣಕ್ಕೆ ಬರುತ್ತಿದ್ದನು.** ಅದೇ ಕಾಲಕ್ಕೆ ಹೊಯ್ಸಳ ರಾಜನಾದ ವೀರ ಬಲ್ಲಾಳನು ದಕ್ಷಿಣದಿಂದ ರಾಜ್ಯವನ್ನು ಆಕ್ರಮಿಸಿಕೊಂಡು **ಉತ್ತರಕ್ಕೆ ಹೋಗುತ್ತಿದ್ದನು.** ಆಗ **ಸೊರಟೂರಿನ** ಹತ್ತರ ಒಬ್ಬರಿಗೊಬ್ಬರು ಭೆಟ್ಟಿಯಾದರು. ಒಡನೆಯೇ ಇವರಿಬ್ಬರ ನಡುವೆ ಭಯಂಕರವಾದ ಯುದ್ಧವಾಗಿ, ಭಿಲ್ಲಮನು ಸೋತು ರಣಭೂಮಿಯಲ್ಲಿ ಮರಣಹೊಂದಿದನು.

ಆ ಕ್ಷಣವೇ ವೀರಬಲ್ಲಾಳನು ಆನೆಯನ್ನೇರಿ, ಈ ಸೇವುಣ ಸೈನ್ಯವನ್ನು ನೂಕಿ, ಸೊರಟೂರಿಂದ ಕೃಷ್ಣವೇಣೀ ನದೀಯ ತನಕ ಬೆನ್ನಟ್ಟಿ

ಸೇವುಣರಿಗೆ ಅಪಜಯ

ಕೊಂದನು. ಈ ಪ್ರಕಾರ ರಾಜ್ಯವನ್ನು ಸಂಪಾದಿಸುವದಕ್ಕಾಗಿ ದೇವಗಿರಿ ಯಾದವರಿಗೂ ಹೊಯ್ಸಳ ಯಾದವರಿಗೂ ಹೋರಾಟವು ನಡೆದದ್ದರಿಂದ ಮುಂದಿನ ವರ್ಷವೇ ಎಂದರೆ ಕ್ರಿ. ವ. ೧೧೯೨ರಲ್ಲಿ ಪುನಃ ವೀರ ಬಲ್ಲಾಳನಿಗೂ ಈ ಭಿಲ್ಲಮನ ಮಗನಾದ **ಜೈತ್ರಪಾಲನಿಗೂ ಲಕ್ಕುಂಡಿಯ** ಹತ್ತರ ದೊಡ್ಡ ಯುದ್ಧವಾಯಿತು. ಇದರಲ್ಲಿಯೂ ಈ ದೇವಗಿರಿ ಯಾದವರೇ ಸೋತರು.

ಆದರೆ ಮುಂದೆ ಈ ಜೈತ್ರಪಾಲನ ಮಗನಾದ **ಸಿಂಘಣರಾಜನು** (ಕ್ರಿ. ವ. ೧೨೧೦—೧೨೪೭) ಮಾತ್ರ ಹೊಯ್ಸಳ ಅರಸರನ್ನು ಗೆದ್ದು, ಅವರ

ಸಿಂಘಣನು

ರಾಜ್ಯದ ಉತ್ತರ ಭಾಗವನ್ನೆಲ್ಲ ಕಸಿದುಕೊಂಡನು. ಹಾಗೂ ಆ ಪ್ರಾಂತಕ್ಕೆ **ಚಿಕ್ಕನ** ಮಗನಾದ **ಬೀಚಣ್ಣ**ನೆಂಬುವನನ್ನು ಅಧಿಕಾರಿಯನ್ನಾಗಿ ನೇಮಿಸಿದನು. ಈ ಬೀಚಣ್ಣನು ಬಹಳ ಶೂರನಾಗಿದ್ದನು. ಇವನು **ಸವದತ್ತಿಯ ರಟ್ಟ**ರಸರನ್ನೂ **ಗೋವೆಯ ಕದಂಬ**ರಾಜರನ್ನೂ **ಗುತ್ತಲದ ಗುಪ್ತ**ರಸರನ್ನೂ **ಉಚ್ಚಂಗಿಯ ಪಾಂಡ್ಯ**ರನ್ನೂ **ಹೊಯ್ಸಳ**ರನ್ನೂ ಸದೆಬಡೆದು, ಕಾವೇರಿ ನದಿಯ ತೀರದಲ್ಲಿ ದೊಡ್ಡದೊಂದು **ವಿಜಯಸ್ತಂಭ**ವನ್ನು ನಿಲ್ಲಿಸಿದನು. (ಕ್ರಿ. ವ. **೧೨೩೮**).


ಈ ಸಿಂಘಣನ ತರುವಾಯ **ಕೃಷ್ಣರಾಜ, ಮಹಾದೇವ, ರಾಮ-ದೇವ, ಶಂಕರದೇವ** ಮೊದಲಾದ ನಾಲ್ಕು ಜನ ಅರಸರು ಕ್ರಿ.ವ. ೧೩೧೨ರ ವರೆಗೆ ಅನುಕ್ರಮದಿಂದ ರಾಜ್ಯವನ್ನಾಳಿದರು. ದಿಲ್ಲಿಯ ಸುಲತಾನ ಖಿಲಜಿ ಅಲ್ಲಾವುದ್ದೀನನ ಸೇನಾಪತಿಯಾದ **ಮಲೀಕಕಾಫೂರನು** ಕ್ರಿ. ವ. **೧೩೦೬**ರಲ್ಲಿ **ರಾಮದೇವ** ರಾಜನನ್ನು ಗೆದ್ದನು. ಅಂದಿನಿಂದ ಮುಂದೆ ೬ ವರ್ಷ ಈ ಯಾದವರು ಅಲ್ಲಾವುದ್ದೀನನಿಗೆ ಅಂಕಿತರಾಗಿ ಆಳಿದರು. ಕೊನೆಗೆ **ಮಲೀಕಕಾಫೂರನು** ಕ್ರಿ. ವ. **೧೩೧೨**ರಲ್ಲಿ ಈ ದೇವಗಿರಿ ಯಾದವ ರಾಜ್ಯವನ್ನು ಸಂಪೂರ್ಣವಾಗಿ ನುಂಗಿ ನೀರು ಕುಡಿದನು ! ಇದರಿಂದ ಕರ್ನಾಟಕವು ಅನಾಥವಾಗಿ ಹೋಯಿತು !!



ಖಿಲಜಿ ಅಲ್ಲಾವುದ್ದೀನ

ಸಿಂಹಾವಲೋಕನವು :— ೧೪ನೆಯ ಶತಮಾನದ ಕೊನೆಯ ವರೆಗೆ ವೈಭವದಿಂದ ರಾಜ್ಯವನ್ನಾಳುತ್ತಿದ್ದ ಹೊಯ್ಸಳ ಯಾದವ, ದೇವಗಿರಿ ಯಾದವ ಮನೆತನಗಳು ಮುಸಲ್ಮಾನರ ಒಂದೇ ಹೊಡತಕ್ಕೆ ನೆಲಸಮವಾದವು ! ಈ ಕಾಲಕ್ಕೆ ಕನ್ನಡ ಜನರು ಸಾಮ್ರಾಜ್ಯದ ಸೊಕ್ಕಿನಿಂದ ಚಕ್ಕಂದದಲ್ಲಿ ಕಾಲಕಳೆಯುತ್ತಿದ್ದುದರಿಂದಲೇ ಇಷ್ಟು ಹೇಡಿಗಳಾಗಿದ್ದರು.

ಕ್ರಿ. ವ. ೧೨ನೆಯ ಶತಮಾನದಲ್ಲಿ **ಕಾಳಾಮುಖ**ರೆಂಬ ಶೈವಬ್ರಾಹ್ಮಣರು **ಬಳ್ಳಿಗಾವೆ, ಕುಬಟೂರು** (ಶಿವಮೊಗ್ಗಾ ಜಿಲ್ಹಾ) ಎಂಬ ಸ್ಥಳಗಳಲ್ಲಿ **ವಿಶ್ವವಿದ್ಯಾಲಯ**ಗಳನ್ನು ಸ್ಥಾಪಿಸಿ, **ಶೈವಮತ**ಕ್ಕೂ **ವೈದಿಕವಿದ್ಯೆ**ಗಳಿಗೂ ಉತ್ತೇಜನವನ್ನು ಕೊಟ್ಟರು. ಚಾಳುಕ್ಯರ ಕಾಲದಲ್ಲಿ ಹಾಗೂ ಹೊಯ್ಸಳರ ಕಾಲದಲ್ಲಿ ಕರ್ನಾಟಕದ ಶಿಲ್ಪವಿದ್ಯೆಯು ಬಹಳೇ ಘನತೆಗೇರಿತು. ಪ್ರಾಚೀನ ವಸ್ತುಸಂಶೋಧಕರಾದ ರಾವಬಹಾದ್ದೂರ ಶ್ರೀಮಾನ್ ಆರ್. ನರಸಿಂಹಾಚಾರ್ಯರವರು — "ವಾಸ್ತುವಿದ್ಯಾವಿಶಾರದರಾದ ಶಿಲ್ಪಿಗರು **ಇಟಗಿ, ಬೇಲೂರು, ಹಳೆಯಬೀಡು, ಸೋಮನಾಥಪುರ,** ಮುಂತಾದ ಸ್ಥಳಗಳಲ್ಲಿ ನಿರ್ಮಿಸಿರುವ ದೇವಾಲಯಗಳೂ ಕೆತ್ತಿರುವ ಮೂರ್ತಿಗಳೂ ಪರದೇಶದ ಶಿಲ್ಪಶಾಸ್ತ್ರಜ್ಞರನ್ನು ಆಶ್ಚರ್ಯರಸದಲ್ಲಿ ಮುಳುಗಿಸಿವೆ." ಎಂದು ಹೇಳಿದ್ದಾರೆ.



ಹಳೇಬೀಡಿನಲ್ಲಿರುವ ಹೊಯ್ಸಳೇಶ್ವರನ ದೇವಾಲಯ

೧೧ನೆಯ ಪ್ರಕರಣ

ಹೊಸದಾಗಿ ವಿಜಯನಗರ ಸಾಮ್ರಾಜ್ಯನ್ನು ಸ್ಥಾಪಿಸಿದರು

(ಕ್ರಿ. ಶ. ೧೩೩೬—೧೫೬೫)

ಬಿಕ್ಕಟ್ಟಿನ ಸಮಯ

ದಿಲ್ಲಿಯ ಸುಲತಾನ ಖಿಲಜಿ ಅಲ್ಲಾವುದ್ದೀನನ ಸೇನಾಪತಿಯಾದ **ಮಲೀಕಕಾಫೂರನು**, ಕ್ರಿ. ಶ. **೧೩೦೭**ರಲ್ಲಿ **ದೇವಗಿರಿ ಯಾದವ**ರಾಜ್ಯವನ್ನು ಪಾದಾಕ್ರಾಂತ ಮಾಡಿದನು. ಮುಂದೆ ಇವನು ಕ್ರಿ. ಶ. **೧೩೦೯**ರಲ್ಲಿ **ಓರಂಗಲ್ಲಿನ ಕಾಕತೀಯ** ರಾಜ್ಯಸಿಂಹಾಸನವನ್ನು ಬುಡಮೇಲು ಮಾಡಿ, ಹಾಗೆಯೇ ಮುಂದಕ್ಕೆ ಸಾಗಿ, ಕ್ರಿ. ಶ. **೧೩೧೦**ರಲ್ಲಿ **ಹೊಯ್ಸಳ ಯಾದವ** ರಾಜ್ಯವನ್ನು ನುಂಗಿ ನೀರು ಕುಡಿದನು! ಇಷ್ಟೇ ಅಲ್ಲ, ಮುಂದಕ್ಕೆ ರಾಮೇಶ್ವರದ ವರೆಗೆ ಸಾಗಿ ಹೋಗಿ, ದಕ್ಷಿಣ ಹಿಂದು

ಸ್ಥಾನದಲ್ಲಿ ಎಲ್ಲ ಕಡೆಗೂ ಕೊಲೆ, ಸುಲಿಗೆಗಳನ್ನು ಮಾಡುತ್ತ ಮುಸಲ್ಮಾನರ ದರ್ಪವನ್ನು ತೋರಿಸಿದನು. ಎಂದರೆ, ಅನೇಕ ರಾಜರನ್ನು ಸಿಂಹಾಸನದಿಂದ ತಳ್ಳುತ್ತ, ದೇವರ ಮೂರ್ತಿಗಳನ್ನು ಒಡೆಯುತ್ತ ಹಾಗೂ ಆಕಳುಗಳನ್ನು ಕೊಲ್ಲುತ್ತ ಸಾಗಿ, ಬಳಿಕ **ರಾಮೇಶ್ವರ ಕ್ಷೇತ್ರಕ್ಕೆ** ಹೋಗಿ ಅಲ್ಲಿ ಒಂದು ಮಶೀದೆಯನ್ನು ಕಟ್ಟಿಸಿದನು!! ಇದನ್ನೆಲ್ಲ ನೋಡಿ, ದಕ್ಷಿಣ ಹಿಂದುಸ್ಥಾನದ ಹಿಂದೂ ಜನರೆಲ್ಲರೂ ಹವ್ವಹಾರಿ ಕುಳಿತರು!

ಶ್ರೀವಿದ್ಯಾರಣ್ಯರು

ಇಂಥ ಬಿಕ್ಕಟ್ಟಿನ ಸಮಯದಲ್ಲಿ ಒಬ್ಬರು ಮಹಾಪುರುಷರು ಉದಯರಾದರು. ಅವರು ಯಾರೆಂದರೆ, **ಶ್ರೀ ವಿದ್ಯಾರಣ್ಯರು** ಇವರ ಮುಂಚಿನ ಹೆಸರು **ಮಾಧವಾಚಾರ್ಯರು**; ಇವರು ಘನ-ಪಂಡಿತರಾಗಿದ್ದರು. ಇವರ ಮನೆತನದವರು, ಮಧ್ಯ ಕರ್ನಾಟಕದಲ್ಲಿ ಆಳುತ್ತಿದ್ದ ಯಾದವವಂಶದ **ಸಂಗಮ** ರಾಜನ ಮನೆತನಕ್ಕೆ ವಂಶಪರಂಪರೆಯಾಗಿ ರಾಜಪುರೋಹಿತರೂ ಮಂತ್ರಿಗಳೂ ಆಗಿದ್ದರು. ಕ್ರಿ. ವ. ೧೩೧೮ರಲ್ಲಿ **ದಿಲ್ಲಿಯ ಸುಲತಾನನಾದ ಮುಬಾರಿಕನು**, ದೇವಗಿರಿ ಯಾದವ **ರಾಮದೇವ**ರಾಜನ ಅಳಿಯನಾದ **ಹರಪಾಲದೇವನ** ವೈದೊಗಲನ್ನು ಸುಲಿಸಿ. ಅವನನ್ನು ಕ್ರೂರತನದಿಂದ ಕೊಂದನು!!! ಆಗ ಕನ್ನಡಿಗರು ಚನ್ನಾಗಿ ಕಣ್ಣು ತೆರೆದರು; ಹಾಗೂ ಪೂರ್ವಕಾಲದಂತೆ ಶೂರತನದಿಂದ ಹೋರಾಡುವದಕ್ಕೆ ಅಣಿಯಾದರು. ಆ ಕಾಲಕ್ಕೆ ಆ **ಸಂಗಮ**ರಾಜನ ಮಕ್ಕಳಾದ **ಹರಿಹರ, ಕಂಪಣ್ಣ, ಬುಕ್ಕರಾಯ, ಮಾರಪ್ಪ, ಮುದ್ದಪ್ಪ** ಈ ಐದು ಜನ ರಾಜಪುತ್ರರು, ತಮ್ಮ ಕುಲಗುರುಗಳಾದ **ಮಾಧವಾಚಾರ್ಯರ** ಅಪ್ಪಣೆಯಂತೆ ಹಿಂದೂ ಧರ್ಮವನ್ನು ಸಂರಕ್ಷಿಸುವದಕ್ಕೋಸ್ಕರ ಎಂದರೆ "[೧] **ಗೋ-ದೇವ-ದ್ವಿಜ**"

---

೧. ಕಾಲಕ್ಕೆ ಮುಸಲ್ಮಾನರ ಹಾವಳಿಯಿಂದ ಗೋ ಎಂದರೆ ಆಕಳುಗಳ ಮೇಲೆಯೂ, ದೇವ ಎಂದರೆ ದೇವರಮೂರ್ತಿಗಳ ಮೇಲೆಯೂ ದ್ವಿಜ ಎಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಮೇಲೆಯೂ ಸಂಕಟವು ಬಂದೊದಗಿತ್ತು. ಅದ್ದರಿಂದ ಶ್ರೀ ವಿದ್ಯಾರಣ್ಯರು, ವಿದ್ಯಾನಗರವನ್ನು ನಿರ್ಮಿಸಿ, ಗೋ-ದೇವ-ದ್ವಿಜ ರಕ್ಷಣಾರ್ಥವಾಗಿ ಅಲ್ಲಿ ಹರಿಹರರಾಜನಿಗೆ ಪಟ್ಟಗಟ್ಟಿದರೆಂದು ಹೀಗೆ ಶಾಸನವಿದೆ:—

ನಿರ್ಮಾಯ ವಿದ್ಯಾನಗರಂ ನೃಪಂ ಹರಿಹರಾಭಿಧಂ ।
ಗೋದೇವದ್ವಿಜರಕ್ಷಾರ್ಥ ಮಭ್ಯಷಿಂಚನ್ನೃಪಾಸನೇ ॥

(ಶೃಂಗೇರಿ ಜಹಾಗೀರ ೧೧ನೆಯ ಶಾಸನ)

ರಕ್ಷಣಾರ್ಥವಾಗಿ ಕರ್ನಾಟಕ ಸಾಮ್ರಾಜ್ಯವನ್ನು ಸ್ಥಾಪಿಸುವದಕ್ಕೆ ಟೊಂಕ ಕಟ್ಟಿದರು. ಈ ದೊಡ್ಡ ಕಾರ್ಯವು ನೆರವೇರಬೇಕಾದರೆ, ದೇವರ ಕೃಪೆಯ ಹೊರತು ಗತ್ಯಂತರವಿಲ್ಲೆಂದು ತಿಳಿದು, ಮಾಧವಾಚಾರ್ಯರು, **ಪಂಪಾ** ಕ್ಷೇತ್ರದಲ್ಲಿ (ಹಂಪೆಯಲ್ಲಿ) ತಪಶ್ಚರ್ಯೆಯನ್ನು ಮಾಡಿ, ಈಶ್ವರಸಾಕ್ಷಾತ್ಕಾರವನ್ನು ಹೊಂದಿದರು. ಈ ಸುದ್ದಿಯು ಕರ್ನಾಟಕದ ತುಂಬಾ




ಶ್ರೀಸಾಯಣಾಚಾರ್ಯರು. ಶ್ರೀವಿದ್ಯಾರಣ್ಯರು. ಹರಿಹರರಾಯನು.

ಕೂಡಲೇ ಹಬ್ಬಿತು. ಆಗ ರಾಜ್ಯವನ್ನು ಕಳೆದುಕೊಂಡಿದ್ದ ಕರ್ನಾಟಕದೊಳಗಿನ ಸಣ್ಣದೊಡ್ಡ ಹಿಂದೂ ಅರಸರೆಲ್ಲರೂ ಈ ಮಹನೀಯರ ಬಳಿಯಲ್ಲಿ ಕರ್ನಾಟಕ ಸಾಮ್ರಾಜ್ಯ ಸ್ಥಾಪನೆಗೋಸ್ಕರವಾಗಿ ಬಂಗಾರದ ನಾಣ್ಯಗಳ ರಾಶಿರಾಶಿಯನ್ನೇ ತಂದು ಅರ್ಪಿಸಿದರು! ಈ ಪ್ರಕಾರ ಇವರ

ಸನ್ನಿಧಿಯಲ್ಲಿ ಬಂಗಾರದ ಮಳೆಯೇ ಆಯಿತೆಂದು ಹೇಳಬಹುದು. ಇಷ್ಟೇ ಅಲ್ಲ, **ಮಲೀಕಕಾಫೂರನ** ಹಾವಳಿಯಿಂದ ನಿರಾಶ್ರಿತರಾದ ಕರ್ನಾಟಕದಲ್ಲಿಯ ಸೇನಾಪತಿಗಳೂ ಸೈನಿಕರೂ ಈ **ಮಾಧವಾಚಾರ್ಯ**ರ ಆಶ್ರಯದಲ್ಲಿ ಬಂದು ನಿಲ್ಲಹತ್ತಿದರು. ಹೀಗೆ ಈ ಮಹಾಪುರುಷರ ಪ್ರಭಾವದಿಂದ ಸ್ವಲ್ಪ ಕಾಲದಲ್ಲಿಯೇ ಇವರ ಧ್ವಜದ ಕೆಳಗೆ ಚತುರಂಗ ಸೈನ್ಯವೂ ಸಿದ್ಧವಾಗಿ ನಿಂತಿತು. ಈ ರೀತಿ ಮಾಧವಾಚಾರ್ಯರು, ಸಂಗಮರಾಜನ ಮಕ್ಕಳಿಗೆ ಕರ್ನಾಟಕ ಸಾಮ್ರಾಜ್ಯಸ್ಥಾಪನೆಯ ಪೂರ್ವಸಿದ್ಧತೆಯನ್ನು ಮಾಡಿಕೊಟ್ಟು, **ಶೃಂಗೇರಿಮಠ**ದ ಕಡೆಗೆ ತೆರಳಿದರು. (ಕ್ರಿ. ವ. **೧೩೩೧**) ಆಗ ಅಲ್ಲಿ ಇವರ ತಮ್ಮಂದಿರಾದ **ಭೋಗನಾಥರು ವಿದ್ಯಾತೀರ್ಥ**ಸ್ವಾಮಿಗಳಿಂದ **ಸನ್ಯಾಸಾಶ್ರಮ**ವನ್ನು ಸ್ವೀಕರಿಸಿ, "**ಭಾರತೀತೀರ್ಥ**" ರೆಂಬ ಹೆಸರಿನಿಂದ **ಜಗದ್ಗು**ರುಗಳಾಗಿದ್ದರು. (ಕ್ರಿ. ವ. ೧೩೨೮) ಈ **ಮಾಧವಾಚಾರ್ಯ**ರೂ ಸಹ ಆ ವಿದ್ಯಾತೀರ್ಥಸ್ವಾಮಿಗಳಿಂದಲೇ **ಆಶ್ರಮ**ವನ್ನು ಸ್ವೀಕರಿಸಿ, "**ವಿದ್ಯಾರಣ್ಯ**" ರೆಂಬ ಹೆಸರನ್ನು ಪಡೆದು ಪುನಃ **ಹಂಪೆಗೆ** ಬಂದರು. (ಕ್ರಿ. ವ. **೧೩೩೧**) ಬಳಿಕ ಮುಂದೆ ಐದೇ ವರ್ಷಗಳಲ್ಲಿ ಅದೇ ಪಂಪಾಕ್ಷೇತ್ರದಲ್ಲಿ ತುಂಗಭದ್ರಾ ನದಿಯ ದಕ್ಷಿಣತೀರದಲ್ಲಿ **ವಿದ್ಯಾನಗರ**ವೆಂಬ ಹೊಸ ಪಟ್ಟಣವನ್ನು ಕಟ್ಟಿಸಿ, ಅಲ್ಲಿ **ಕರ್ನಾಟಕ ಸಿಂಹಾಸನ**ವನ್ನು ಸ್ಥಾಪಿಸಿದರು. ಮತ್ತು **ಸಂಗಮರಾಜನ** ಹಿರಿಯ ಮಗನಾದ **ಹರಿಹರನಿಗೆ ಪಟ್ಟಾಭಿಷೇಕ**ವನ್ನು ಮಾಡಿದರು. (ಕ್ರಿ. ವ. **೧೩೩೬**) ಅಂದಿನಿಂದ ಶೃಂಗೇರಿಮಠದ ಜಗದ್ಗುರುಗಳಿಗೆ "**ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ, ಶ್ರೀಮದ್ರಾಜಾಧಿರಾಜಗುರು**" ಎಂಬ ಬಿರುದು ಪ್ರಾಪ್ತವಾಯಿತು.

ಹರಿಹರನು ಕ್ರಿ. ವ. **೧೩೩೬**ರಿಂದ ೧೩೫೩ರ ವರೆಗೆ **೧೭ ವರ್ಷ** ಶೂರತನದಿಂದಲೂ ಜಾಣತನದಿಂದಲೂ ಹೊಸ ಹೊಸ ಪ್ರಾಂತಗಳನ್ನು ಆಕ್ರಮಿಸಿ, ರಾಜ್ಯವನ್ನು ವಿಸ್ತಾರಮಾಡಿದನು. ಉತ್ತರಕ್ಕೆ ಮಲಪ್ರಭಾನದಿಯವರೆಗೂ ಪಾದಾಕ್ರಾಂತಮಾಡಿದನು. ಇತ್ತ ದಕ್ಷಿಣಕ್ಕೆ **ಮೈಸೂರು** ಪ್ರಾಂತವನ್ನೆಲ್ಲ ಕೈವಶಮಾಡಿಕೊಂಡನು. ಇವನಂತೆಯೇ ಇವನ

ವಿಜಯನಗರ ರಾಜರ ವಂಶಾವಳಿಯು.



(೨) ಸಾಳುವ ವಂಶ.

(ಕ್ರಿ.ಶ. ೧೪೮೫-೧೪೯೬-೧೧ ವರ್ಷ)

(೧೦) ಸಾಳುವ ನರಸಿಂಹ
(ಕ್ರಿ.ಶ. ೧೪೮೫-೧೪೯೧)

(೧೧) ಇಮ್ಮಡಿ ನರಸಿಂಹ
— ಇಮ್ಮಡಿ ನರಸಿಂಗ-ಒಡೆಯರು
(ಕ್ರಿ.ಶ. ೧೪೯೧-೧೪೯೬)

---

(3) ತುಳುವ ವಂಶ

(ಕ್ರಿ.ಶ. ೧೪೯೬-೧೫೭೦, ೭೪ ವರ್ಷ)

ತಿಮ್ಮ
(ಹೆಂಡತಿ-ದೇವಕಿ)

ಈಶ್ವರ
(ಹೆಂಡತಿ-ಬುಕ್ಕಮ್ಮ)

(೧೨) ನರಸ, ನರಸಿಂಗ, ನರಸಿಂಹ.
(ಕ್ರಿ.ಶ. ೧೪೯೬-೧೫೦೩)

ತಿಪ್ಪಮ್ಮನಿಂದ
(೧೩) ವೀರನರಸಿಂಹ
ನರಸಿಂಹ
ಭುಜಬಲರಾಯ
(ಕ್ರಿ.ಶ. ೧೫೦೪-೧೫೦೯)

ನಾಗಲಾದೇವಿಯಿಂದ
(೧೪) ಕೃಷ್ಣರಾಯ
(ಕ್ರಿ.ಶ. ೧೫೦೯-೧೫೨೯)
ಮಗಳು
ತಿರುಮಲಾಂಬಾ
ಪತಿ-ರಾಮರಾಜ (ಅಳಿಯ)
(ಕರ್ನಾಟಕ ರಾಜವಂಶ ಅಥವಾ ಅರವೀಡು ರಾಜವಂಶ)

ಓಬಾಂಬಾದೇವಿಯಿಂದ
(೧೫) ಅಚ್ಯುತರಾಯ
(ಕ್ರಿ.ಶ. ೧೫೨೯-೧೫೪೨)
(೧೬) ವೆಂಕಟದೇವರಾಯ
(ಕ್ರಿ.ಶ. ೧೫೪೨)

ರಂಗ
(ಹೆಂಡತಿ-ತಿಮ್ಮಾಂಬಾ)
(೧೭) ಸದಾಶಿವರಾಯ
(ಕ್ರಿ.ಶ. ೧೫೪೩-೧೫೭೦)

---

(೪) ಅಳಿಯ ರಾಮರಾಜನ ವಂಶಾವಳಿ

ಎಂದರೆ
ಕರ್ನಾಟಕ ರಾಜವಂಶ
ಅಥವಾ
ಅರವೀಡು ರಾಜವಂಶ

ಬುಕ್ಕ; ಅರವೀಟಿ ಬುಕ್ಕ (ರಾಣಿ, ಬಲ್ಲಾಂಬಿಕಾ)
(ಸಾಳುವ ನರಸಿಂಹನ ಆಶ್ರಯದಾತ)

ರಾಮರಾಜ (ರಾಣಿ, ಲಕ್ಕಾಂಬಿಕಾ)

ಶ್ರೀರಂಗ (ರಾಣಿ-ತಿರುಮಲಾದೇವಿ)

ಅಳಿಯ ರಾಮರಾಜ (ರಾಕ್ಷಸ ತಂಗಡಗಿ ಯುದ್ಧದಲ್ಲಿ ಕ್ರಿ.ಶ. ೧೫೬೫ರಲ್ಲಿ ಮರಣ)
ಹೆಂಡತಿ-ತಿರುಮಲಾಂಬಾ (೧೫೩೦ರಲ್ಲಿ
ಕೃಷ್ಣರಾಯನ ಮಗಳು)
ಶ್ರೀರಂಗ
(೨೨) ವೆಂಕಟಪತಿರಾಯ ೨. ಪೆದ್ದವೆಂಕಟ
(ಕ್ರಿ.ಶ. ೧೬೩೦-೧೬೪೨)
ಚಿನ್ನವೆಂಕಟ
ಶ್ರೀರಂಗರಾಯ
(ನಂ. ೨೩)

(೧೮) ತಿರುಮಲರಾಯ
ರಾಣಿ-ವೆಂಗಲಾಂಬಾ
(ಕ್ರಿ.ಶ. ೧೫೭೦-೧೫೭೨)
(೧೯) ಶ್ರೀರಂಗರಾಯ ೧.
(ಕ್ರಿ.ಶ. ೧೫೭೨-೮೫)
(೨೦) ವೆಂಕಟಪತಿರಾಯ ೧
(ಕ್ರಿ.ಶ. ೧೫೮೬-೧೬೧೪)
ಶ್ರೀರಂಗ
(೨೧) ರಾಮದೇವ
ರಾಮಚಂದ್ರರಾಯ
(ಕ್ರಿ.ಶ. ೧೬೧೭-೧೬೩೨)

ವೆಂಕಟಾದ್ರಿ
ಅರವೀಟಿ
ರಂಗಪ್ಪರಾಜ
ಗೋಪಾಲರಾಜ
(ಹೆ. ಕಸ್ತೂರಿ)
(೨೩) ಶ್ರೀರಂಗರಾಯ ೩.
(ಕ್ರಿ.ಶ. ೧೬೪೨-೧೬೭೮)

ತಮ್ಮಂದಿರೆಲ್ಲರೂ ಪರಾಕ್ರಮಿಗಳಾಗಿದ್ದರು. ಮೊದಲನೆಯ ತಮ್ಮನಾದ **ಕಂಪಣ್ಣ**ನು ಪೂರ್ವಕ್ಕೆ **ನೆಲ್ಲೂರ, ಕಡಪಾ** ಪ್ರಾಂತಗಳನ್ನು ಗೆದ್ದನು. **ಬುಕ್ಕ**ನು ಮುಖ್ಯ ಸೇನಾಪತಿಯಾಗಿ ಅಣ್ಣನ ಬಳಿಯಲ್ಲಿಯೇ ಇದ್ದನು. ೩ನೆಯ ತಮ್ಮನಾದ **ಮಾರಪ್ಪ**ನು ಪಶ್ಚಿಮಕ್ಕೆ **ಬನವಾಸಿ** ನಾಡನ್ನು

ಹರಿಹರರಾಯ ಆಕ್ರಮಿಸಿದನು.[೧] ಈ ಪ್ರಕಾರ ಇವರಿಗೆ ದಿನದಿನಕ್ಕೆ ವಿಜಯವಾಗುತ್ತ ನಡೆದದ್ದರಿಂದ ಇವರ ರಾಜಧಾನಿಯಾದ **ವಿದ್ಯಾನಗರ**ಕ್ಕೆ **ವಿಜಯನಗರ**ವೆಂಬ ಹೆಸರು ಪ್ರಾಪ್ತವಾಯಿತು. ಇಷ್ಟೇ ಅಲ್ಲ, ಶ್ರೀ ವಿದ್ಯಾರಣ್ಯರ ಬೆಂಬಲದಿಂದ ಈ ರಾಜ್ಯವು ಸ್ವಲ್ಪ ಕಾಲದಲ್ಲಿಯೇ ಸಾಮ್ರಾಜ್ಯವಾಯಿತು. ಆಗ **ಹರಿಹರ, ಕಂಪಣ್ಣ, ಬುಕ್ಕಣ್ಣ** ಮೊದಲಾದ ಈ ಐದು ಜನ ಅಣ್ಣತಮ್ಮಂದಿರೂ ಶೃಂಗೇರಿಮಠಕ್ಕೆ ಹೋಗಿ, ಶ್ರೀವಿದ್ಯಾರಣ್ಯರ ತಮ್ಮಂದಿರಾದ **ಭಾರತೀ-ತೀರ್ಥಸ್ವಾಮಿ**ಗಳಿಗೆ ಭೂದಾನಗಳನ್ನು ಸಮರ್ಪಿಸಿದರು. (ಕ್ರಿ. ವ. ೧೩೪೬) ಇದಲ್ಲದೆ ಹರಿಹರನು, **ಶ್ರೀ ವಿರೂಪಾಕ್ಷದೇವರ ಗುಡಿ**ಯನ್ನು ಭವ್ಯವಾಗಿ ಕಟ್ಟಿಸಿ, ತನ್ನ ಗುರುಗಳಾದ ಶ್ರೀ ವಿದ್ಯಾರಣ್ಯರಿಂದ ಆಶೀರ್ವಾದವನ್ನು ಪಡೆದನು. ಈ ಹರಿಹರರಾಯನ ಆಳಿಕೆಯಲ್ಲಿ **ಓರಂಗಲ್ಲಿ**ನ ಅರಸುಮಗನಾದ **ಕೃಷ್ಣ**ನು, ವಿಜಯನಗರಕ್ಕೆ ಬಂದು, ಈತನನ್ನು ಆಶ್ರಯಿಸಿ, ಇವನ ಬೆಂಬಲದಿಂದ ಓರಂಗಲ್ಲಿನಲ್ಲಿದ್ದ ಮುಸಲ್ಮಾನರನ್ನು ಹೊಡೆದೋಡಿಸಿದನು. (ಕ್ರಿ. ವ. **೧೩೪೪**) ಹರಿಹರನಿಗೆ '**ಅರಿರಾಯ-ವಿಭಾಡ**' (ಎಂದರೆ ಶತ್ರುಗಳನ್ನು ಸಂಹರಿಸುವವನು), '**ಭಾಷೆಗೆ ತಪ್ಪುವ ರಾಯರ ಗಂಡ**' ಎಂಬ ಬಿರುದುಗಳಿದ್ದವು. ಇದಲ್ಲದೆ ಇವನನ್ನು **ಹುಕ್ಕರಾಯ**ನೆಂದೂ ಕರೆಯುತ್ತಿದ್ದರು. ಇವನು ಕ್ರಿ. ವ. **೧೩೫೩**ರಲ್ಲಿ ಮರಣಹೊಂದಿದನು. ಇದಕ್ಕಿಂತ ಮುಂಚೆಯೇ ಇವನ ಮಗನಾದ **ಸೋವಣ್ಣೊಡೆಯ**ನೂ ೧ನೆಯ ತಮ್ಮನಾದ **ಕಂಪಣ್ಣೊಡೆಯ**ನೂ

---

೧. ಹರಿಹರರಾಯನಿಗೆ ಶ್ರೀವಿದ್ಯಾರಣ್ಯರು ರಾಜಗುರುಗಳಾಗಿದ್ದರು ಕಂಪಣ್ಣನಿಗೆ ಸಾಯಣಾಚಾರ್ಯರು ಮುಖ್ಯಮಂತ್ರಿಯಾಗಿದ್ದರು. ಮಾರಪ್ಪನಿಗೆ ಚಾವುಂಡರಾಯನ ಮಗನಾದ ಇನ್ನೊಬ್ಬ ಮಾಧವನು ಮಂತ್ರಿಯಾಗಿದ್ದನು.


ತೀರಿಕೊಂಡಿದ್ದರು. ಆದ್ದರಿಂದ ೨ನೆಯ ತಮ್ಮನಾದ **ಬುಕ್ಕಣ್ಣನು** ಇವನ ತರುವಾಯ ಸಿಂಹಾಸನವನ್ನೇರಿದನು.

ಬಹಾಮನೀ ರಾಜ್ಯಸ್ಥಾಪನೆ

ಈ ಹರಿಹರನ ಆಳಿಕೆಯಲ್ಲಿ ಎಂದರೆ ಕ್ರಿ. ಶ. ೧೩೪೭ರಲ್ಲಿ **ಜಾಫರಖಾನನೆಂಬುವನು ಕಲಬುರ್ಗಿ**ಯಲ್ಲಿ **ಬಹಾಮನೀರಾಜ್ಯ**ವನ್ನು ಸ್ಥಾಪಿಸಿದನು. ಅದು ಹೇಗೆಂದರೆ, **ದಿಲ್ಲಿ** ಪಟ್ಟಣದಲ್ಲಿ **ಗಂಗೂ** ಎಂಬ ಬ್ರಾಹ್ಮಣನ ಮನೆಯಲ್ಲಿ **ಹಸನ**ನೆಂಬ ಮುಸಲ್ಮಾನನು ಆಳಾಗಿದ್ದನು. ಇವನು ತನ್ನ ಒಡೆಯನ ಭೂಮಿಯನ್ನು ಸಾಗುಮಾಡುತ್ತಿದ್ದಾಗ ಒಂದು ದಿನ ಆ ಹೊಲದಲ್ಲಿ ಬಂಗಾರದ ನಾಣ್ಯಗಳಿಂದ ತುಂಬಿದ ಹಂಡೆಯು ಸಿಕ್ಕಿತು. ಅದನ್ನು ಇವನು ನಂಬಿಗೆಯಿಂದ ತನ್ನ ಒಡೆಯನಾದ **ಗಂಗೂ ಬ್ರಾಹ್ಮಣನಿಗೆ** ತಂದುಕೊಟ್ಟನು. ಆಗ ಆ ಬ್ರಾಹ್ಮಣನು ಬಹಳ ಸಂತೋಷಬಟ್ಟನು. ಮತ್ತು ಕೂಡಲೆ ತನ್ನ ಮೇಲೆ ಪ್ರೀತಿಯುಳ್ಳಂಥ ದಿಲ್ಲಿಯ **ಸುಲತಾನ ಮಹಮ್ಮದ ತಘಲಕನ** ಕಡೆಗೆ ಹೋಗಿ ಅಲ್ಲಿ ತನ್ನ ಆಳುಮಗನನ್ನು ಹೊಗಳಿ, ಆ ಸುಲತಾನನಿಂದ **ಹಸನನಿಗೆ** ಹತ್ತು ಸಾವಿರ ರಾವುತರ ಒಡೆತನವನ್ನು ಕೊಡಿಸಿದನು. ಸುಲತಾನನು ಈ ಹಸನಸಾಹೇಬನನ್ನು ದಕ್ಷಿಣದ ಸುಭೇದಾರನ ಜೊತೆಗೆ ಕಳುಹಿಸಿದನು. ಆ ಕಾಲಕ್ಕೆ ಈ ಹಸನನಿಗೆ **ಜಾಫರಖಾನ**ನೆಂಬ ಬಿರುದು ದೊರೆಯಿತು. ದಕ್ಷಿಣದೇಶದಲ್ಲಿ ಎದ್ದ ಹಾವಳಿಯನ್ನು ನಿಲ್ಲಿಸುವದಕ್ಕಾಗಿ ಸುಲತಾನ ಮಹಮ್ಮದನು ಸ್ವತಃ ದಂಡೆತ್ತಿ ಬಂದನು. ಅಷ್ಟರಲ್ಲಿ ದಿಲ್ಲಿಯಲ್ಲಿ ಬಂಡಾಯವೆದ್ದ ಸುದ್ದಿಯು ತಿಳಿದು ಬಂದುದರಿಂದ ಈ ಕೆಲಸವನ್ನು ಹಾಗೆಯೇ ಬಿಟ್ಟುಕೊಟ್ಟು, ಬಾದಶಹನು ದಿಲ್ಲಿಗೆ ತೆರಳಿದನು. ಆಗ ಬಾದಶಹನ ಈ ಹಿಂದುಳಿದ ಸೈನ್ಯವನ್ನು ಈ **ಜಾಫರಖಾನನು** ಹೊಡೆದೋಡಿಸಿ, **ಬೀದರ** ಹಾಗೂ **ಕಂಧಾರ** ಇವೆರಡು ಕೋಟೆಗಳನ್ನು ವಶಮಾಡಿಕೊಂಡನು. ಇದೇ ಪ್ರಕಾರ **ದೌಲತಾಬಾದ** ಕೋಟೆಯನ್ನು ಗೆದ್ದುಕೊಂಡು **ಕಲಬುರ್ಗಿ**ಗೆ ಬಂದನು. ಈ ಪಟ್ಟಣಕ್ಕೆ '**ಹಸನಾಬಾದ**' ಎಂಬ ಹೆಸರನ್ನು ಇಟ್ಟು, ಇದನ್ನು ತನ್ನ **ರಾಜಧಾನಿ**ಯನ್ನಾಗಿ ಮಾಡಿ

ಬಹಾಮನೀ ಬಾದಶಹರ ವಂಶಾವಳಿಯು.

(೧೩೪೭–೧೫೨೬)



ಕೊಂಡು, “ **ಅಲ್ಲಾವುದ್ದೀನ-ಹಸನ** ” ಎಂಬ ಹೆಸರನ್ನು ಧರಿಸಿ, ರಾಜ್ಯವನ್ನಾಳಹತ್ತಿದನು. ಮತ್ತು ದಿಲ್ಲಿಯಲ್ಲಿ ತನಗೆ ಮೊದಲು ಉಪಕಾರ ಮಾಡಿದ ಗಂಗೂ ಬ್ರಾಹ್ಮಣನನ್ನು ಮರೆಯದೆ, ಅವನನ್ನು ದಿಲ್ಲಿಯಿಂದ ಕರೆಯಿಸಿ, ತನ್ನ ಬೊಕ್ಕಸದ ಅಧಿಕಾರಿಯನ್ನಾಗಿ ಮಾಡಿದನು. ಇಷ್ಟೇ ಅಲ್ಲ, ತನ್ನ ಹೆಸರಿನ ಮುಂದೆ “ **ಗಂಗೂ ಬಹಾಮನೀ** ” ಎಂಬ ಆ ಬ್ರಾಹ್ಮಣನ ಹೆಸರಿನ ಬಿರುದನ್ನು ಧರಿಸಿದನು. ಆದ್ದರಿಂದ ಈ ಅರಸು ಮನೆತನಕ್ಕೆ “ **ಬಹಾಮನೀವಂಶ** ” ವೆಂಬ ಹೆಸರುಂಟಾಯಿತು. ಮತ್ತು ಇವನ ಹೆಸರು “ **ಅಲ್ಲಾ-ಉದ್ದೀನ-ಹಸನ-ಗಂಗೂ-ಬಹಾಮನೀ** ” ಎಂದಾಯಿತು. ಈತನು ಜಾಣನೂ ಶೂರನೂ ಇದ್ದುದರಿಂದ ಸ್ವಲ್ಪ ವರ್ಷಗಳಲ್ಲಿಯೇ ಕೃಷ್ಣಾನದಿಯಿಂದ ಗೋದಾವರಿಯ ವರೆಗೆ ಉತ್ತರ ಕರ್ನಾಟಕವನ್ನೆಲ್ಲ ಆಕ್ರಮಿಸಿದನು. ಇದಲ್ಲದೆ ಗೋದಾವರಿಯಿಂದ ನರ್ಮದಾನದಿಯ ವರೆಗೆ ಮಹಾರಾಷ್ಟ್ರ ದೇಶವನ್ನೂ ಗೆದ್ದುಕೊಂಡನು. ಈ ಪ್ರಕಾರ ಬಹಾಮನೀ ರಾಜ್ಯಸ್ಥಾಪಕನಾದ ಈ **ಹಸನನು ೧೧ ವರ್ಷ**ಗಳ ವರೆಗೆ ನ್ಯಾಯದಿಂದಲೂ ನೀತಿಯಿಂದಲೂ ಹಾಗೂ ಒಳ್ಳೆಯ ಆಚಗಣೆಯಿಂದಲೂ ರಾಜ್ಯವನ್ನಾಳಿ ಕ್ರಿ. ವ. **೧೩೫೮**ರಲ್ಲಿ ಮರಣಹೊಂದಿದನು. ಇವನ ತರುವಾಯ ಈ ವಂಶದಲ್ಲಿ **೧೩ ಜನರು** ಚನ್ನಾಗಿ ರಾಜ್ಯವನ್ನಾಳಿದರು.

ಬುಕ್ಕರಾಯ

ಇತ್ತ ವಿಜಯನಗರದಲ್ಲಿ ಕ್ರಿ.ವ. **೧೩೫೩**ರಲ್ಲಿ ಹುಕ್ಕರಾಯನು ಮಡಿದ ಬಳಿಕ **ಬುಕ್ಕರಾಯನು** ಸಿಂಹಾಸನವನ್ನೇರಿ **೨೪ ವರ್ಷ** ಬಹಳ ವೈಭವದಿಂದ ರಾಜ್ಯವನ್ನಾಳಿದನು. ಇವನ ಕಾಲಕ್ಕೆ ವಿಜಯನಗರ ರಾಜ್ಯವು ಘನತೆಗೇರಿತು. “ **ರಾಜಾಧಿರಾಜ, ರಾಜಪರಮೇಶ್ವರ, ಪರರಾಯ ಭಯಂಕರ, ಹಿಂದೂರಾಯ ಸುರತ್ರಾಣ** ”[೧] ಎಂಬ ಬಿರುದುಗಳು ಇವನಿಗೆ ಉಂಟಾದವು. ಇವನ ಕಾಲದಲ್ಲಿಯೂ **ಶ್ರೀವಿದ್ಯಾರಣ್ಯರೇ ರಾಜಗುರುಗಳಾಗಿ**ದ್ದರು. ಈತನ ಮಕ್ಕಳಾದ **ಇಮ್ಮಡಿಹರಿಹರ, ವಿರೂಪಾಕ್ಷ, ಮಲ್ಲಿನಾಥ,**

---

೧. ಈ ಬುಕ್ಕರಾಯನು, ಹಿಂದೂರಾಜರೆಂಬ ದೇವತೆಗಳಿಗೆ ಇಂದ್ರನೋಪಾದಿಯಲ್ಲಿ ಇದ್ದನೆಂದು ಈ “ ಹಿಂದೂರಾಯ-ಸುರತ್ರಾಣ ” ಎಂಬ ಬಿರುದು ಹೇಳುತ್ತದೆ

ಇಮ್ಮಡಿ ಕಂಪಣ್ಣ ಮೊದಲಾದವರು ಬೇರೆ ಬೇರೆ ಪ್ರಾಂತಗಳಿಗೆ ಅಧಿಕಾರಿಗಳಾಗಿದ್ದರು. ಬುಕ್ಕರಾಜನ ದಂಡನಾಯಕನಾದ **ಬಸವಯ್ಯ**ನೆಂಬುವನು **ಲಿಂಗವಂತ**ನಿದ್ದನು. ದಳಪತಿಯಾದ **ಇರುಗ**ನೆಂಬುವನು **ಜೈನ**ನಿದ್ದನು. **ಇಮ್ಮಡಿ ಕಂಪಣ್ಣ**ನು ಒಮ್ಮೆ ತಂದೆಯ ಅಪ್ಪಣೆಯ ಪ್ರಕಾರ **ತೊಂಡಮಂಡಲ**ದ ಅರಸನಾದ **ಚಂಪರಾಯ**ನ ಮೇಲೆ ಸಾಗಿ ಹೋಗಿ, ಅವನನ್ನು ಹಣಿದು, ಬಳಿಕ ಅಲ್ಲಿಂದ **ಮಧುರೆ**ಗೆ ಹೋಗಿ ಅಲ್ಲಿಯ ಸುಲತಾನನನ್ನು ಕೊಂದನು. ಈ ಸಂಗತಿಯನ್ನು ಈ ಕಂಪಣ್ಣನ ರಾಣಿಯಾದ **ಗಂಗಾದೇವಿ**ಯು ತಾನು ಬರೆದ "**ವೀರಕಂಪಣರಾಯಚರಿತಂ**" ಎಂಬ ಸಂಸ್ಕೃತ ಗ್ರಂಥದಲ್ಲಿ ಹೇಳಿದ್ದಾಳೆ. ಬುಕ್ಕರಾಯನ ಆಳಿಕೆಯಲ್ಲಿ ಶ್ರೀವಿದ್ಯಾರಣ್ಯರೂ ಸಾಯಣಾಚಾರ್ಯರೂ **ವೇದಭಾಷ್ಯ** ಮೊದಲಾದ ಅನೇಕ ಗ್ರಂಥಗಳನ್ನು ಬರೆದರು. ಇವನು ಕ್ರಿ. ಶ. **೧೩೭೭**ರಲ್ಲಿ ಮರಣ ಹೊಂದಿದನು. ತರುವಾಯ ಇವನ ಹಿರಿಯ ಮಗನಾದ **ಇಮ್ಮಡಿ ಹರಿಹರನು** ಪಟ್ಟಕ್ಕೆ ಕುಳಿತನು.

ಇಮ್ಮಡಿ ಹರಿಹರನು

ಇಮ್ಮಡಿ ಹರಿಹರನು ಕ್ರಿ. ಶ. ೧೩೭೭ ರಿಂದ **೨೭ ವರ್ಷ** ಸಾರ್ವಭೌಮನಾಗಿ ಆಳಿದನು. ಇವನಿಗೆ "**ಪೂರ್ವ-ದಕ್ಷಿಣ ಪಶ್ಚಿಮ-ಸಮುದ್ರಾಧೀಶ್ವರ**" ಎಂಬ ಬಿರುದು ಪ್ರಾಪ್ತವಾಯಿತು; ಯಾಕೆಂದರೆ ಇವನ ಕಾಲಕ್ಕೆ ಕೃಷ್ಣಾನದಿಯ ದಕ್ಷಿಣಕ್ಕೆ ಇಡಿ ದಕ್ಷಿಣ ಹಿಂದುಸ್ಥಾನವೆಲ್ಲ ವಿಜಯನಗರಸಾಮ್ರಾಜ್ಯಕ್ಕೆ ಸೇರಿತು. ಇವನ ಕಾಲದಲ್ಲಿಯೂ **ಶ್ರೀವಿದ್ಯಾರಣ್ಯರೇ ರಾಜಗುರು**ಗಳಾಗಿದ್ದರು. ಆದರೆ ಅವರು ಆಗ ಮುದುಕರಾದುದರಿಂದ ಅವರ ತಮ್ಮಂದಿರಾದ **ಸಾಯಣಾಚಾರ್ಯ**ರು ಮಂತ್ರಿಯ ಕೆಲಸವನ್ನು ಮಾಡುತ್ತಿದ್ದರು ಶ್ರೀವಿದ್ಯಾರಣ್ಯರು ಕ್ರಿ. ಶ. **೧೩೮೬**ನೆಯ ಎಂದರೆ **ಶಕವರ್ಷದ ೧೩೦೮**ನೆಯ ಕ್ಷಯನಾಮ ಸಂವತ್ಸರದ ಜ್ಯೇಷ್ಠ ಬಹುಳ ತ್ರಯೋದಶಿ ಶನಿವಾರ ದಿವಸ **ಪಂಪಾ-ಕ್ಷೇತ್ರ**ದಲ್ಲಿ ಸಮಾಧಿಸ್ಥರಾದರು. ಈ ಮಹನೀಯರು ಕ್ರಿ. ಶ. **೧೩೩೬** ರಿಂದ **೧೩೮೬**ರ ವರೆಗೆ **೫೦ ವರ್ಷ**ಗಳ ವರೆಗೆ ಹೋರಾಡಿ, ಕರ್ನಾಟಕ

ಸಾಮ್ರಾಜ್ಯವನ್ನು ಸ್ಥಾಪಿಸಿ, ಹಿಂದೂಧರ್ಮವನ್ನು ಮುಸಲ್ಮಾನರ ಹಾವಳಿಯಿಂದ ಸಂರಕ್ಷಿಸಿದರು. ಹಾಗೂ ಅನೇಕ ಗ್ರಂಥಗಳನ್ನು ಬರೆದರು. ಇವರ ಅಧ್ಯಕ್ಷತೆಯಲ್ಲಿ **ಹುಕ್ಕರಾಯ, ಬುಕ್ಕರಾಯ, ಇಮ್ಮಡಿಹರಿಹರ** ಈ ಪ್ರಕಾರ ಮೂರು ಮಂದಿ ಅರಸರು ರಾಜ್ಯವನ್ನಾಳಿದರು. ಈ **ಇಮ್ಮಡಿ ಹರಿಹರನು** ಶ್ರೀವಿದ್ಯಾರಣ್ಯರ ನೆನವರಿಕೆಗೋಸ್ಕರ **ವಿದ್ಯಾರಣ್ಯಪುರ**ವನ್ನು ಕಟ್ಟಿಸಿ, ಅದರ ಒಂದು ನೂರು ಹೊಲಗಳನ್ನು ಶೃಂಗೇರಿಯ ಬ್ರಾಹ್ಮಣರಿಗೆ ದಾನಮಾಡಿದನು. ಈತನು ಕ್ರಿ. ವ. ೧೪೦೪ರಲ್ಲಿ ಮರಣ ಹೊಂದಿದನು.

ದುರ್ಗಾದೇವಿಯ ದುಷ್ಕಾಳ

ಇವನ ಆಳಿಕೆಯ ಕೊನೆಯಲ್ಲಿ ಎಂದರೆ **ಬಹಾಮನೀ** ವಂಶದ **ಫಿರೋಜಶಹನ** (ಕ್ರಿ. ವ. ೧೩೯೭-೧೪೨೨) ಆಳಿಕೆಯ ಆರಂಭದಲ್ಲಿ, ಕೃಷ್ಣಾ-ಗೋದಾವರಿ ನದಿಗಳ ನಡುವಿನ ಉತ್ತರ ಕರ್ನಾಟಕದಲ್ಲಿ ಎಂದರೆ ಬಹಾಮನೀ ರಾಜ್ಯದಲ್ಲಿ ಕ್ರಿ. ವ. **೧೩೯೬**ರಿಂದ **೧೪೦೮**ರ ವರೆಗೆ **೧೨ ವರ್ಷ**ಗಳಲ್ಲಿ ಸ್ವಲ್ಪವೂ ಕೂಡ ಮಳೆಯಾಗದೆ **ಭಯಂಕರ**ವಾದ **ಬರಗಾಲ**ವೊದಗಿತು! ಇದರಿಂದ ಅಸಂಖ್ಯ ಜನರು ಕೂಳಿಲ್ಲದೆ ನೀರಿಲ್ಲದೆ ಸತ್ತರು. ಅಗ ಆ ಪ್ರದೇಶವೆಲ್ಲ ನಿರ್ಜನವಾಯಿತು!! ಗ್ರಾಮಗಳೆಲ್ಲ ಹಾಳಾದವು ಕೆಲವು ಕಡೆಗೆ ಊರಿಗೆ ಮೂರು ನಾಲ್ಕು ಮಂದಿ ಹಾಗೂ ಹೀಗೂ ಬದುಕಿದರು. ಈ ಪ್ರಕಾರ ಕೃಷ್ಣಾ-ಗೋದಾವರಿಗಳ ನಡುವಿನ ಉತ್ತರ ಕರ್ನಾಟಕದ ಕನ್ನಡಿಗರು ಈ ಬರಗಾಲದಿಂದ ಎಲ್ಲರೂ ಸತ್ತುಹೋದರು! ಈ ಭಯಂಕರವಾದ ಬರಗಾಲವು, ಬಹಾಮನೀ ರಾಜ್ಯದ ಇತಿಹಾಸದಲ್ಲಿ "**ದುರ್ಗಾದೇವಿಯ ದುಷ್ಕಾಳ**" ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಅಗ ಬಹಾಮನೀ ಬಾದಶಹನು ಗೋದಾವರಿ-ನರ್ಮದಾ ನದಿಗಳ ನಡುವಿರುವ ತನ್ನ ಮಹಾರಾಷ್ಟ್ರ ದೇಶದ ಪ್ರಜೆಗಳು, ಈ ಹಾಳು ಬಿದ್ದಂಥ ಉತ್ತರ ಕರ್ನಾಟಕ ಪ್ರದೇಶದಲ್ಲಿ ಒಕ್ಕಲಾಗಿ ನಿಲ್ಲುವಂತೆ ಅವರಿಗೆ ಕಟ್ಟಪ್ಪಣೆಯನ್ನು ಮಾಡಿದನು. ಅದೇ ಪ್ರಕಾರ ಆ ಮಹಾರಾಷ್ಟ್ರ ದೇಶದ ಎಷ್ಟೋ ಜನರು ಇಲ್ಲಿ ಬಂದು ನೆಲೆಯಾಗಿ ನಿಂತರು.

ಹೀಗಾದುದರಿಂದ ಗೋದಾವರಿ ನದಿಯತನಕ ಇದ್ದ ಪ್ರಾಚೀನ ಕರ್ನಾಟಕವು ಅಳಿದು ಹೋಗಿ, ಆ ಸ್ಥಳದಲ್ಲಿ ಹೊಸ ಮಹಾರಾಷ್ಟ್ರ ದೇಶವು ತಲೆದೋರಿತು.

ಇಮ್ಮಡಿ ಹರಿಹರನ ತರುವಾಯ ಇವನ ಹಿರಿಯ ಮಗನಾದ **ಇಮ್ಮಡಿ ಬುಕ್ಕರಾಯನು** ಸಿಂಹಾಸನವನ್ನೇರಿದನು. ಇವನು **೨ ವರ್ಷ** ರಾಜ್ಯವನ್ನಾಳಿ ಕ್ರಿ. ವ. **೧೪೦೬**ರಲ್ಲಿ ಮರಣಹೊಂದಿದನು. ಆ ಬಳಿಕ ಇವನ ತಮ್ಮನಾದ **೧ನೆಯ ದೇವರಾಯನು** ಪಟ್ಟಕ್ಕೆ ಕುಳಿತನು.

೧ನೆಯ ದೇವರಾಯ

೧ನೆಯ ದೇವರಾಯನು ಕ್ರಿ. ವ. **೧೪೦೬**ರಿಂದ **೧೪೧೬**ರ ವರೆಗೆ **೧೦ ವರ್ಷ** ಪ್ರಜೆಗಳಿಗೆ ಹಿತವಾಗುವಂತೆ ಚೆನ್ನಾಗಿ ರಾಜ್ಯವನ್ನಾಳಿದನು, ಇವನು ವಿಜಯನಗರದ ಸುತ್ತಲೂ ಕೋಟೆಯ ಗೋಡೆಗಳನ್ನು ಕಟ್ಟಿಸಿ, ರಾಜಧಾನಿಯ ಭದ್ರತೆಯನ್ನೂ ಸೌಂದರ್ಯವನ್ನೂ ಹೆಚ್ಚಿಸಿದನು ಹಾಗೂ ತುಂಗ-ಭದ್ರಾ ನದಿಗೆ ಒಡ್ಡುಹಾಕಿ, ವಿಜಯನಗರದೊಳಗೆ ೧೫ ಮೈಲುಗಳ ವರೆಗೆ ಕಾಲುವೆಯನ್ನು ಒಯ್ದು, ಪಟ್ಟಣದಲ್ಲೆಲ್ಲ ನೀರಿನ ಅನುಕೂಲತೆಯನ್ನುಂಟು ಮಾಡಿದನು ಶ್ರೀವಿದ್ಯಾರಣ್ಯರ ತಂಗಿಯಾದ **ಸಿಂಗಲೆಯ** ಮಗನಾದ **ಲಕ್ಷ್ಮೀಧರನು** ಈ ದೇವರಾಯನ ಮುಖ್ಯ ಮಂತ್ರಿಯಾಗಿದ್ದನು ಈ ದೇವರಾಯನ ೨ನೆಯ ಮಗನಾದ **ವಿಜಯ-ರಾಯನ** ಪುತ್ರನೇ ಸುಪ್ರಸಿದ್ಧನಾದ **ಪ್ರೌಢ ದೇವರಾಯನು.**

ಪ್ರೌಢ ದೇವರಾಯ

ಈ **ಇಮ್ಮಡಿ ದೇವರಾಯನು** ಅಥವಾ **ಪ್ರೌಢ ದೇವರಾಯನು** ಈ **ಸಂಗಮವಂಶದ** ಅರಸರಲ್ಲಿ ಬಹಳೇ ಹೆಸರಾದವನು. ಈತನು ಕ್ರಿ. ವ. **೧೪೧೯**ರಿಂದ **೧೪೪೬**ರ ವರೆಗೆ **೨೭ ವರ್ಷ** ರಾಜ್ಯವನ್ನಾಳಿದನು. ಇವನ ಕಾಲಕ್ಕೆ ವಿಜಯನಗರ ಸಾಮ್ರಾಜ್ಯದ ವೈಭವವು ಶಿಖರಕ್ಕೆ ಹೋಗಿ ಮುಟ್ಟಿತು. ಈ ಪ್ರೌಢದೇವರಾಯನು **ವೀರಶೈವಮತಕ್ಕೆ** ಬಹಳ ಉತ್ತೇಜನವನ್ನು ಕೊಟ್ಟನು. ಇವನ ಓಲಗದಲ್ಲಿ ವೀರಶೈವನಾದ **ಲಕ್ಕಣ್ಣ ದಂಡೇಶನು** ಮಹಾಪ್ರಧಾನನಾಗಿದ್ದನು. ಅಲ್ಲದೆ ಕನ್ನಡ

ಕವಿಯೂ ಆಗಿದ್ದನು. ಆತನು "**ಶಿವತತ್ವ ಚಿಂತಾಮಣಿ**" ಯೆಂಬ ವೀರಶೈವಮತ ಗ್ರಂಥವನ್ನು ಬರೆದಿದ್ದಾನೆ. ಇದೇ ಪ್ರಕಾರ **ಜಕ್ಕಣಾರ್ಯ**ನೆಂಬ ವೀರಶೈವನು ಈ ದೇವರಾಯನ ಓಲಗದಲ್ಲಿ ದಂಡನಾಯಕನಾಗಿಯೂ ಕನ್ನಡ ಕವಿಯಾಗಿಯೂ ಇದ್ದನು. ಆ ಜಕ್ಕಣಾರ್ಯನು "**ನೂರೊಂದುಸ್ಥಲ**" ವೆಂಬ ವೀರಶೈವಮತ ಗ್ರಂಥವನ್ನು ಬರೆದಿದ್ದಾನೆ. ಇದೇ ಕಾಲದಲ್ಲಿ ವಿಜಯನಗರದಲ್ಲಿದ್ದ ೧೦೧ ಜನ ವೀರಶೈವ ವಿರಕ್ತರಲ್ಲಿ **ಚಾಮರಸ**ನೆಂಬ ಕನ್ನಡ ಕವಿಯು ಹೆಸರಾಗಿದ್ದನು. ಆತನು **ಅಲ್ಲಮಪ್ರಭುದೇವರ ಚರಿತ್ರ**ವನ್ನು ಬರೆದಿದ್ದಾನೆ. ಈ ಗ್ರಂಥವನ್ನು ಪ್ರೌಢದೇವರಾಯನು ನೋಡಿ, ಮೆಚ್ಚಿ, ಕಂಕಣವನ್ನೂ ತ್ರಿಸರವನ್ನೂ ಕೊಟ್ಟು ಮನ್ನಿಸಿದನು. ರಾಜಮಾನ್ಯವಾದ ಈ ಗ್ರಂಥವು ತೆಲಗು ಭಾಷೆಯಲ್ಲಿಯೂ ತಮಿಳು ಭಾಷೆಯಲ್ಲಿಯೂ ಪದ್ಯರೂಪವಾಗಿ ಭಾಷಾಂತರ ಮಾಡಲ್ಪಟ್ಟಿತು! ಇದೇ ಕಾಲಕ್ಕೆ **ಕುಮಾರವ್ಯಾಸ**ನೆಂಬ ಬ್ರಾಹ್ಮಣ ಕವಿಯು ಕನ್ನಡದಲ್ಲಿ **ಭಾರತಗ್ರಂಥ**ವನ್ನು ಬರೆದನು. ಇದನ್ನು **ಚಂದ್ರಾತ್ಮಜ**ನೆಂಬ ಮಹಾರಾಷ್ಟ್ರ ಕವಿಯು ಮರಾಠಿಯಲ್ಲಿ ಭಾಷಾಂತರ ಮಾಡಿದ್ದಾನೆ.


ಇವನ ಆಳಿಕೆಯಲ್ಲಿ ಕ್ರಿ. ಶ. ೧೪೨೦ರಲ್ಲಿ ಬಂದಿದ್ದ **ಇಟಲಿ** ದೇಶದ **ನಿಕೋಲೋಕೊಂಟಿ**ಯೆಂಬುವನೂ ಕ್ರಿ. ಶ. **೧೪೪೩**ರಲ್ಲಿ ಇರಾಣದೇಶದ ರಾಜನ ರಾಯಭಾರಿಯಾಗಿ ಬಂದಿದ್ದ **ಅಬ್ದುಲ್‌ರಝಾಕ**ನೂ ವಿಜಯನಗರ ಪಟ್ಟಣವನ್ನು ಬಹು ಸೊಗಸಾಗಿ ವರ್ಣಿಸಿದ್ದಾರೆ. ಅವರಲ್ಲಿ **ನಿಕೋಲೋಕೊಂಟಿ**ಯೆಂಬುವನು ವಿಜಯನಗರ ಪಟ್ಟಣದ ಪರಿಘವು ೬೦ ಮೈಲು ಇರುತ್ತದೆಂದು ಹೇಳಿ, ಈ ಪಟ್ಟದಲ್ಲಿ ಪ್ರತಿವರ್ಷ ನೆರವೇರುವ ಉತ್ಸವಗಳನ್ನು ವಿಶೇಷವಾಗಿ ಬಣ್ಣಿಸಿದ್ದಾನೆ. ಆದರೆ **ಅಬ್ದುಲ್‌ರಝಾಕ**ನು ಈ ಪಟ್ಟಣವನ್ನೂ ರಾಜ್ಯವನ್ನೂ ಚನ್ನಾಗಿ ವರ್ಣಿಸಿದ್ದಾನೆ. ಹೇಗೆಂದರೆ, "ಎಪ್ರೇಲ ತಿಂಗಳ ಕೊನೆಗೆ ನಾವು ವಿಜಯನಗರಕ್ಕೆ ಹೋಗಿ ಮುಟ್ಟಿದೆವು. ಅರಸನು ನಮ್ಮನ್ನು ಇದಿರುಗೊಳ್ಳಲಿಕ್ಕೆ ಬಹಳೇ ಜನ ಪರಿವಾರದವರನ್ನು ಕಳಿಸಿ, ಬಹು ಮನೋಹರವಾದ ಹಾಗೂ

ವಿಜಯನಗರದ ವರ್ಣನೆ

ವಿಶಾಲವಾದ ಮನೆಯಲ್ಲಿ ನಮ್ಮನ್ನು ಇಳಿಸಿದನು. ಈ ವಿಜಯನಗರ ಸಾಮ್ರಾಜ್ಯದ ವಿಸ್ತಾರವು ಕೃಷ್ಣಾ ನದಿಯಿಂದ ಕನ್ಯಾಕುಮಾರಿ ಭೂಶಿರದ ವರೆಗೆ ಇದೆ. ಈ ಪಟ್ಟಣದಲ್ಲಿ ಸಾವಿರಾರು ಅದ್ಭುತವಾದ ಆನೆಗಳನ್ನು ನಾವು ನೋಡಬಹುದು. ಈ ರಾಜನ ಬಳಿಯಲ್ಲಿ ಹನ್ನೊಂದು ಲಕ್ಷ ಸೈನ್ಯವಿದೆ ಇಂಥ ಬಲಿಷ್ಠನಾದ ಸಾರ್ವಭೌಮನು ಇಡಿ ಹಿಂದುಸ್ಥಾನ ದಲ್ಲಿ ಇನ್ನೊಬ್ಬನಿಲ್ಲ.

ವಿಜಯನಗರದಂಥ ಸುಂದರವಾದ ಹಾಗೂ ದೊಡ್ಡದಾದ ಇನ್ನೊಂದು ಪಟ್ಟಣವನ್ನು ಕಣ್ಣು ಎಂದೂ ನೋಡಿಲ್ಲ; ಇಂಥ ಇನ್ನೊಂದು ಪಟ್ಟಣವು ಭೂಮಿಯ ಮೇಲೆ ಒಂದು ಕಡೆಗಾದರೂ ಇರುತ್ತದೆಂದು ಇನ್ನೂ ವರೆಗೂ ಕಿವಿಯು ಕೇಳಿಲ್ಲ. ಈ ಪಟ್ಟಣದ ಸುತ್ತುಮುತ್ತಲೂ ಒಂದರ ಹೊರಗೆ ಮತ್ತೊಂದು ಈ ರೀತಿ ಏಳು ಕೋಟೆಯ ಗೋಡೆಗಳಿವೆ. ಮೊದಲನೆಯ ಕೋಟೆಯ ಹೊರಮಗ್ಗಲು ಮನುಷ್ಯನ ಎತ್ತರ ಕಲ್ಲುಗಳನ್ನು ನಿಲ್ಲಿಸಿರು ತ್ತಾರೆ. ಇವುಗಳನ್ನು ಒಂದರ ಮಗ್ಗಲಿಗೊಂದು ಅರ್ಧನೆಲ್ಲದಲ್ಲಿ ಹೂಳಿ, ಅರ್ಧ ಮೇಲೆ ಕಾಣುವಂತೆ ಮಾಡಿರುತ್ತಾರೆ. ಆದ್ದರಿಂದ ಕಾಲಾಳುಗಳು ಇಲ್ಲವೆ ರಾವುತರು ಸುಲಭವಾಗಿ ಇದನ್ನು ದಾಟಿ ಹೋಗಲಿಕ್ಕೆ ಬರುವಂತಿಲ್ಲ. ಏಳನೆಯ ಕೋಟೆಯು ಉತ್ತರಕ್ಕಿದ್ದು, ಅದರಲ್ಲಿ ಅರಸನ **ಅರಮನೆ** ಯುಂಟು. ಮೊದಲನೆಯ ಕೋಟೆಯ ಪೂರ್ವದ ಮಹಾದ್ವಾರಕ್ಕೂ ಪಶ್ಚಿಮದ ಮಹಾದ್ವಾರಕ್ಕೂ ಏಳೆಂಟು ಮೈಲು ಅಂತರವಿದೆ. ದಕ್ಷಿಣೋ ತ್ತರ ಮಹಾದ್ವಾರಗಳ ನಡುವಿನ ಅಂತರವೂ ಇಷ್ಟೇ ಇದೆ. ಮೊದಲನೆಯ ಹಾಗೂ ಮೂರನೆಯ ಕೋಟೆಗಳ ನಡುವಿನ ಪ್ರದೇಶದಲ್ಲಿ ಫಲವೃಕ್ಷಗಳಿಂದ ಶೋಭಿಸುವ ತೋಟಗಳೂ ಬೆಳೆಗಳಿಂದ ತುಂಬಿದ ಹೊಲಗಳೂ ಕಾಣಿಸು ತ್ತಿದ್ದವು. ಮೂರನೆಯ ಕೋಟೆಯ ಒಳಮಗ್ಗಲು ರಾಜಬೀದಿಗಳಲ್ಲಿ ಅಂಗಡಿಗಳ ಸಾಲುಗಳನ್ನೂ ಪೇಟೆಯನ್ನೂ ಅಸಂಖ್ಯ ಜನರ ದಟ್ಟಣೆ ಯನ್ನೂ ಕಂಡೆನು. ಅರಮನೆಯ ಬಳಿಯಲ್ಲಿ ಎದುರುಬದುರು ನಾಲ್ಕು ಪೇಟೆಗಳಿವೆ. ಅರಮನೆಯ ಮುಖಮಂಟಪವು ಉತ್ತರಕ್ಕೆ ಇದೆ. ಅರಸನ ಮುಖ್ಯ ಸಭಾಮಂದಿರವು, ಎಲ್ಲ ಕಟ್ಟಡಗಳಿಗಿಂತ ಎತ್ತರವಾಗಿದೆ. ಪೇಟೆಯು

ಬೀದಿಗಳು ಅಗಲವಾಗಿಯೂ ಉದ್ದವಾಗಿಯೂ ಇವೆ. ಈ ಪಟ್ಟಣದಲ್ಲಿ ಗುಲಾಬಿ ಹೂವುಗಳ ವ್ಯಾಪಾರವು ಎತ್ತನೋಡಿದತ್ತ ಕಾಣಬರುತ್ತದೆ. ಈ ಹೂವುಗಳ ಮೇಲೆ ಇಲ್ಲಿಯ ಜನರ ಪ್ರೀತಿಯು ಹೆಚ್ಚು. ಹರಳುಕಲ್ಲಿನ ವ್ಯಾಪಾರಸ್ಥರು, ಮುತ್ತು, ರತ್ನ, ವಜ್ರ, ವೈಡೂರ್ಯ, ಮಾಣಿಕ್ಯ ಮುಂತಾದವುಗಳನ್ನು ಅಂಜಿಕೆಯಿಲ್ಲದೆ ಬೈಲು ಅಂಗಡಿಗಳಲ್ಲಿ ಇಟ್ಟುಕೊಂಡು ದಿನಾಲು ಮಾರುತ್ತಾರೆ. ಈ ಸೊಗಸಾದ ಪಟ್ಟಣದಲ್ಲಿ ಎಲ್ಲ ಕಡೆಗೂ ನುಣುಪಾದ ಕಲ್ಲುಗಳಿಂದ ಕಟ್ಟಿದ ಕಾಲುವೆಗಳಲ್ಲಿ ತುಂಗಭದ್ರೆಯ ನಿರ್ಮಲವಾದ ನೀರು ಸಳಸಳನೆ ಹರಿಯುತ್ತದೆ. ಅರಮನೆಯಲ್ಲಿ ಬೆಳ್ಳಿಬಂಗಾರಗಳ ಗಟ್ಟಿಗಳಿಂದ ತುಂಬಿದ ಎಷ್ಟೋ ನೆಲಮನೆಗಳಿರುತ್ತವೆ. ಅರಮನೆಯ ಬಳಿಯಲ್ಲಿ ಸುತ್ತುಮುತ್ತು ದಿವಾಣಖಾನೆ, ದಪ್ತರಖಾನೆ, **ಗಜಶಾಲೆ,**



ವಿಜಯನಗರದ ಗಜಶಾಲೆ


ಹಯಶಾಲೆ, ಟಂಕಶಾಲೆ ಮುಂತಾದ ಮಂದಿರಗಳಿವೆ. ಟಂಕಸಾಲೆಯ ಎದುರಿಗೆ **ಮುಖ್ಯಾಧಿಕಾರಿಯ** ಮನೆಯಿದೆ. ಅಲ್ಲಿ ಯಾವಾಗಲೂ ೧೨ ಸಾವಿರ ಕಟ್ಟಾಳುಗಳು ಕಾವಲು ಮಾಡುತ್ತಿದ್ದಾರೆ. ಈ ಪಟ್ಟಣದ ಜನಸಂಖ್ಯೆಯು ಅಪರಿಮಿತವಾಗಿದೆ."

ಈ ಪ್ರೌಢದೇವರಾಯನ ಆಶ್ರಯದಲ್ಲಿ ಕನ್ನಡ ಕವಿಗಳಲ್ಲದೆ **ಕಲ್ಲಿನಾಥಾಚಾರ್ಯ**ನೆಂಬ **ಸಂಸ್ಕೃತ** ಕವಿಯೂ ಇದ್ದನು. ಇವನು ಶಾರ್ಙ್ಗದೇವನ "**ಸಂಗೀತರತ್ನಾಕರ**"ವೆಂಬ ಗ್ರಂಥಕ್ಕೆ ಟೀಕೆಯನ್ನು ಬರೆದಿದ್ದಾನೆ. ಈ ದೇವರಾಯನು ಕ್ರಿ. ವ. ೧೪೪೬ರಲ್ಲಿ ಮರಣಹೊಂದಿದನು. ತರುವಾಯ ಇವನ ಹಿರಿಯ ಮಗನಾದ **ಮಲ್ಲಿಕಾರ್ಜುನ**ನು ಸಿಂಹಾಸನವನ್ನೇರಿದನು.


ಸಂಗಮ ವಂಶದ ಕೊನೆ

ಮಲ್ಲಿಕಾರ್ಜುನನು **೨೧ ವರ್ಷ** ಸುಖದಿಂದ ರಾಜ್ಯವನ್ನಾಳಿ, ಕ್ರಿ. ವ. ೧೪೬೭ರಲ್ಲಿ ತೀರಿಕೊಳ್ಳಲು, ಈತನ ಮಲತಮ್ಮನಾದ **ವಿರೂಪಾಕ್ಷರಾಯ**ನು ಪಟ್ಟಕ್ಕೆ ಕುಳಿತನು. ಈ ವಿರೂಪಾಕ್ಷನು ಹೇಡಿಯಾಗಿದ್ದುದರಿಂದ **೧೧ ವರ್ಷ** ಹಾಗೂ ಹೀಗೂ ರಾಜ್ಯವನ್ನಾಳುತ್ತಿರಲು, ಇವನ ಶೂರಸೇನಾಪತಿಯಾದ **ಸಾಳುವ ನರಸಿಂಹ**ನು ಈತನನ್ನು ಸಿಂಹಾಸನದಿಂದ ತಳ್ಳಿ ತಾನು ಪಟ್ಟವೇರಿದನು. (ಕ್ರಿ. ವ ೧೪೭೮) ಇಲ್ಲಿಗೆ **ಸಂಗಮ ವಂಶವು ಮುಗಿಯಿತು; ಸಾಳುವ ವಂಶವು ಪ್ರಾರಂಭ**ವಾಯಿತು. ಈ ಸಾಳುವ ನರಸಿಂಹನ ಚಾಳಿಯು ಅಂಟುರೋಗದಂತೆ ಎಲ್ಲ ಕಡೆಗೂ ಹಬ್ಬಿತು! ಎಂದರೆ ಈ ಕಾಲಕ್ಕಿದ್ದ ಬಹಾಮನೀ ಸುಲತಾನನಾದ **೨ನೆಯ ಮುಹಮ್ಮದಶಹ**ನ (ಕ್ರಿ. ವ. ೧೪೬೩-೧೪೮೨) **ಸುಭೇದಾರ**ರೂ ಸಹ ಈ ಸಾಳುವ ನರಸಿಂಹನ ಅನುಕರಣವನ್ನೇ ಮಾಡಿದರು. **ತಾತ್ಪರ್ಯ**ವೇನೆಂದರೆ, ಈ ಸುಭೇದಾರರು ತಮ್ಮ ಬಾದಶಹನನ್ನು ಮೂಲೆಗೊತ್ತಿ ಬಹಾಮನೀ ರಾಜ್ಯವನ್ನು ಮುರಿದು, **ಐದು ತುಂಡು**ಗಳನ್ನು ಮಾಡಿ, ತಮ್ಮೊಳಗೆ ಹಂಚಿಕೊಂಡರು.

ಬಹಾಮನೀ ವಂಶದ ಈ ೨ನೆಯ ಮುಹಮ್ಮದಶಹನು ಆಳುವಕಾಲದಲ್ಲಿ ಅವನ ಓಲಗದಲ್ಲಿ ಸುಪ್ರಸಿದ್ಧ ಮಹಾತ್ಮನಾದ **ವಜೀರ ಮುಹಮ್ಮದ ಗವಾನ**ನು ಮಂತ್ರಿಯಾಗಿದ್ದನು. ಈ ಮಹಾಪುರುಷನು ಬಹು ರಾಜನೀತಿನಿಪುಣನೂ, ಉದಾರನೂ, ನ್ಯಾಯಪ್ರಿಯನೂ, ಕರ್ತವ್ಯದಕ್ಷನೂ



ವಿಜಯನಗರ-ಸಾಮ್ರಾಜ್ಯವು
ಮತ್ತು
ಬಹಾಮನೀ ರಾಜ್ಯವು.
ಅಹಮ್ಮದನಗರ
ಗೋವೆ
ವಿಜಯನಗರ
ಹೊನ್ನಾವರ
ಭಟಕಳ
ಬಂಗಾಲ
ಉಪಸಾಗರ
ಕಂಡಿ


ವಿಜಯನಗರ — ಸಾಮ್ರಾಜ್ಯವು.
- ಮತ್ತು -
ಬಹಾಮನೀ ರಾಜ್ಯವು ಮುರಿದು, ಉಂಟಾದ
ಐದು ಸ್ವತಂತ್ರ ರಾಜ್ಯಗಳು.
ಬೀದರ
ಗೋವಳಕೊಂಡ
ವಿಜಾಪುರ
ಗೋವೆ
ವಿಜಯನಗರ
ಬಂಗಾಲ ಉಪಸಾಗರ
Shri Co

ಹಾಗೂ ಒಳ್ಳೆಯ ರಾಜನಿಷ್ಠನೂ ಆಗಿದ್ದನು. ಈತನು ರಾಜ್ಯಕಾರಭಾರದಲ್ಲಿ ಚನ್ನಾಗಿ ಸುಧಾರಣೆಯನ್ನು ಮಾಡಿ, ಬಹಾಮನೀ ರಾಜ್ಯದ ವೈಭವವನ್ನು ಬೆಳಿಸಿದನು. ಆಗ ಮಹಮ್ಮದಶಹನು—"ದೇವರ ಕೃಪೆಯಿಂದ ಮಹಮ್ಮದ ಗವಾನನಂಥ ಮಂತ್ರಿಯು ನನಗೆ ದೊರೆತಿದ್ದಾನೆ"ಂದು ಅನ್ನುತ್ತಿದ್ದನು. ಈ ಶಹನ ಸುಭೇದಾರರು, ಸಾಳುವ ನರಸಿಂಹನಂತೆ ತಮ್ಮ ಒಡೆಯನ ರಾಜ್ಯವನ್ನು ನುಂಗುವದಕ್ಕೆ ಹವಣಿಸುತ್ತಿದ್ದರು. ಆದರೆ ಈ ಶ್ರೇಷ್ಠ ಮಂತ್ರಿಯು ಇರುವವರೆಗೆ ತಮ್ಮ ಕೋರಿಕೆಯು ಈಡೇರುವದಿಲ್ಲೆಂದು ತಿಳಿದು, ಇವನನ್ನು ಕೊಲ್ಲಿಸುವ ಪ್ರಯತ್ನದಲ್ಲಿ ತೊಡಗಿದರು. ಈ ಗವಾನನು ಸುನೀಪಂಥದ ಮುಸಲ್ಮಾನನಾಗಿದ್ದರಿಂದ ಆ ಸುಭೇದಾರರು ಶಿಯಾಪಂಥದವರನ್ನು ತಮ್ಮ ಕಡೆಗೆ ಒಲಿಸಿಕೊಂಡು ಒಳಸಂಚನ್ನು ಮಾಡಿದರು. ಒಂದು ದಿವಸ ಸುಲತಾನ ೨ನೆಯ ಮುಹಮ್ಮದಶಹನು ಸರಾಯಿ ಕುಡಿದು ಗುಂಗಿನಲ್ಲಿ ಕುಳಿತಿರುವಾಗ್ಗೆ, ಶಿಯಾಪಂಥದ ಕೆಲವು ಮುಸಲ್ಮಾನರು, ವಜೀರ ಗವಾನನ ವಿಷಯವಾಗಿ ಇಲ್ಲದ್ದೊಂದು ಹುಟ್ಟಿಸಿ ಹೇಳಿ, ಆ ಗವಾನನ ಮೇಲೆ ಸಿಟ್ಟೇಳುವಂತೆ ಆ ಸುಲತಾನನ ಮನಸ್ಸನ್ನು ಕೆಡಿಸಿದರು. ಈ ಕೂಡಲೇ ಸುಲತಾನನು, ನಿರಪರಾಧಿಯಾದ ವಜೀರ ಮುಹಮ್ಮದ ಗವಾನನ್ನು ಕರೆಯಿಸಿ, ಅವಿವೇಕತನದಿಂದ ಅವನನ್ನು ಕೊಲ್ಲಿಸಿದನು!! (ಕ್ರಿ. ವ. ೧೪೮೧) ಕೊಲ್ಲುವ ಸಮಯದಲ್ಲಿ ಮಹಾತ್ಮನಾದ ವಜೀರ ಗವಾನನು, ತಾನು ನಿರ್ದೋಷಿಯಾಗಿದ್ದೇನೆಂದು ಎಷ್ಟು ಸಿದ್ಧ ಮಾಡಿಕೊಟ್ಟರೂ ಸುಲತಾನನು ಕೇಳಲಿಲ್ಲ. ಆಗ ಈ ವಜೀರನು ಸುಲತಾನನನ್ನು ಕುರಿತು ಸ್ಪಷ್ಟವಾಗಿ ಹೇಳಿದ್ದೇನೆಂದರೆ, "ನಿಮ್ಮ ಈ ಕೃತಿಯಿಂದ ನಿಮ್ಮ ಹೆಸರಿಗೆ ಕಲಂಕಹತ್ತುವದಿಷ್ಟೇ ಅಲ್ಲ, ನಿಮ್ಮ ರಾಜ್ಯವೂ ಹಾಳಾಗುವದು." ಈ ನುಡಿಯು ಸುಳ್ಳಾಗಲಿಲ್ಲ; ಮರುವರ್ಷವೇ ಸುಲತಾನನು ಮಡಿದನು! (ಕ್ರಿ. ವ. ೧೪೮೨) ಆ ಬಳಿಕ ಸಿಂಹಾಸನವನ್ನೇರಿದ ಇವನ ಮಗನಾದ ೨ನೆಯ ಮುಹಮ್ಮೂದಶಹನ ಆಳಿಕೆಯಲ್ಲಿ (ಕ್ರಿ.ವ. ೧೪೮೨ ರಿಂದ ಕ್ರಿ. ವ. ೧೫೧೮) ಶಿಯಾ—ಸುನೀಪಂಥಗಳ ಮುಸಲ್ಮಾನರ ನಡುವೆ

ಬಹಾಮನೀರಾಜ್ಯದ ಕ್ರಾಂತಿಯು

ಭಯಂಕರವಾದ ಯುದ್ಧವಾಗಿ ರಕ್ತದ ಕಾಲುವೆಗಳು ಹರಿದವು!! ಅಲ್ಲಲ್ಲಿಯ ಸುಭೇದಾರರು ಸ್ವತಂತ್ರರಾದರು!!! **ಸಾರಾಂಶ,** ಬಹಾಮನೀ ರಾಜ್ಯವು ಹಾಳಾಗಿ, ಅದರಲ್ಲಿ (೧) **ವರ್ಹಾಡದ ಇಮಾದಶಾಹೀ**(ಕ್ರಿ.ವ. ೧೪೮೪-೧೫೭೨), (೨) **ವಿಜಾಪುರದ ಆದಿಲಶಾಹೀ** (ಕ್ರಿ ವ. ೧೪೮೯-೧೬೮೬), (೩) **ಅಹಮ್ಮದನಗರದ ನಿಜಾಮಶಾಹೀ**(ಕ್ರಿ. ವ. ೧೪೯೦-೧೬೩೩), (೪) **ಬೀದರದ ಬೇರೀದಶಾಹೀ** (ಕ್ರಿ. ವ. ೧೪೯೨-೧೬೫೭), (೫) **ಗೋವಳಕೊಂಡದ ಕುತುಬಶಾಹೀ** (ಕ್ರಿ. ವ. ೧೫೧೨ ೧೬೮೭) ಎಂಬ **ಐದು ರಾಜ್ಯಗಳು** ತಲೆದೋರಿದವು.

ಇತ್ತ ವಿಜಯನಗರದಲ್ಲಿ ಸಾಳುವ ನರಸಿಂಹನು, ಕ್ರಿ. ವ. **೧೪೭೮** ರಿಂದ **೧೪೯೩**ರ ವರೆಗೆ **೧೫ ವರ್ಷ** ಪ್ರಜೆಗಳಿಗೆ ಹಿತವಾಗುವಂತೆ ಉತ್ತಮ ರೀತಿಯಿಂದ ರಾಜ್ಯವನ್ನಾಳಿದನು. ನಂತರ ಇವನ ಮಗನಾದ **ಇಮ್ಮಡಿ ನರಸಿಂಹನು** ಪಟ್ಟಕ್ಕೆ ಕುಳಿತನು. (ಕ್ರಿ. ವ. **೧೪೯೩-೧೪೯೬**) ಇವನು ದುರ್ಬಲನಾದ್ದರಿಂದ ಇವನ ಸೇನಾಪತಿಯಾದ **ತುಳುವವಂಶದ ನರಸನು** ಕ್ರಿ. ವ. **೧೪೯೬**ರಲ್ಲಿ ಇವನನ್ನು ಪಟ್ಟದಿಂದ ತಳ್ಳಿ, ತಾನು ಚಕ್ರವರ್ತಿಯಾದನು. ಇಲ್ಲಿಗೆ **ಸಾಳುವ ವಂಶವು ಮುಗಿಯಿತು; ತುಳುವ ವಂಶವು ಪ್ರಾರಂಭವಾಯಿತು.**

ತುಳುವ ವಂಶದ **ನರಸರಾಜನು** ಕ್ರಿ. ವ. **೧೪೯೬**ರಿಂದ **೧೫೦೩**ರ ವರೆಗೆ **೭ ವರ್ಷ** ಸುಖದಿಂದ ರಾಜ್ಯವನ್ನಾಳಿದನು. ಇವನ ಆಳಿಕೆಯಲ್ಲಿ ಕ್ರಿ. ವ. **೧೪೯೮**ರಲ್ಲಿ **ಪೋರ್ತಗಾಲ** ದೇಶದಿಂದ **ಪೋರ್ತಗೀಜರು ವಾಸ್ಕೋಡಿಗಾಮಾ** ಎಂಬುವನು ಹಿಂದುಸ್ಥಾನದ **ಬಂದದ್ದು** ಮಾರ್ಗವನ್ನು ಗೊತ್ತುಹಚ್ಚುವದಕೋಸ್ಕರ ಹೊರಟು ಕೊನೆಗೆ ಹಿಂದುಸ್ಥಾನದ **ಕಾಲಿಕತ್ತ** ಬಂದರಕ್ಕೆ ಬಂದು ಇಳಿದನು. ಆಗ **ಕಾಲಿಕತ್ತದ ಸಾಮೋರಿನ್ನ** ರಾಜನು ಆತನನ್ನು ಯಿಂದ ಮನ್ನಿಸಿದನು. ಮುಂದೆ ಕ್ರಿ. ವ. **೧೫೧೦**ರಲ್ಲಿ **ಅಲ್ಫಾನ್ಸೋ ಕರ್ಕ**ನು ಬಂದು **ಗೋವೆಯ**ನ್ನು ಕೈವಶಮಾಡಿಕೊಂಡನು.

ನರಸರಾಜನ ತರುವಾಯ ಅವನ ಹಿರಿಯ ಮಗನಾದ **ವೀರ-ನರಸಿಂಹನು ೪ ವರ್ಷ** ರಾಜ್ಯವನ್ನಾಳಿದನು. (ಕ್ರಿ. ವ. ೧೫೦೫–೧೫೦೯.) ಆ ಬಳಿಕ ಸುಪ್ರಸಿದ್ಧನಾದ **ಕೃಷ್ಣದೇವರಾಯನು** ಕ್ರಿ. ವ. **೧೫೦೯ರಿಂದ ೧೫೨೯ರ ವರೆಗೆ ೨೦ ವರ್ಷ** ಅತಿ ವೈಭವದಿಂದ ರಾಜ್ಯವನ್ನಾಳಿದನು. ಇವನ ತಂದೆಯಾದ ನರಸರಾಜನಿಗೆ ಪಟ್ಟದ ರಾಣಿಯಾದ **ತಿಪ್ಪಾಂಬಿಕೆಯಿಂದ ವೀರನರಸಿಂಹನೂ**, ೨ನೆಯ ಹೆಂಡತಿಯಾದ **ನಾಗಾಂಬಿಕೆಯಿಂದ** ಈ **ಕೃಷ್ಣದೇವರಾಯನೂ**, ೩ನೆಯ ಹೆಂಡತಿಯಾದ **ಓಬಾಂಬಿಕೆ**ಯಿಂದ **ಅಚ್ಯುತರಾಯನೂ ರಂಗರಾಯನೂ** ಈ ಪ್ರಕಾರ ನಾಲ್ಕು ಜನ ಗಂಡು ಮಕ್ಕಳಿದ್ದರು. ಇವರಲ್ಲಿ ಈ ಕೃಷ್ಣದೇವರಾಯನು ಚಿಕ್ಕತನದಿಂದಲೂ ಧೀರೋದಾತ್ತ ಸ್ವಭಾವದವನೂ ಚಲುವನೂ ಆಗಿದ್ದರಿಂದ ಈತನ ಮೇಲೆ ನರಸರಾಜನು ಬಹಳ ಪ್ರೀತಿಯನ್ನು ಮಾಡುತ್ತಿದ್ದನು. ಇದನ್ನು ನೋಡಿ, ಪಟ್ಟದ ರಾಣಿಯಾದ ತಿಪ್ಪಾಂಬಿಕೆಯು ಸವತಿಮತ್ಸರ ಬುದ್ಧಿಯಿಂದ ಈ ಕೃಷ್ಣನನ್ನು ಕೊಲ್ಲಿಸಬೇಕೆಂದು ಗಂಡನ ಮನಸ್ಸನ್ನು ತಿರುಗಿಸ ಹತ್ತಿದಳು. ಆಗ **ತಿಮ್ಮರಸ**ನೆಂಬುವನು ಈ ಹುಡುಗನನ್ನು ಗುಪ್ತಸ್ಥಳದಲ್ಲಿಟ್ಟು, ಸಾಕಿ ಸಲಹಿ, ಈತನನ್ನು ದೊಡ್ಡವನನ್ನಾಗಿ ಮಾಡಿದನು. ಈ ಉಪಕಾರಕ್ಕೋಸ್ಕರ ಕೃಷ್ಣದೇವರಾಯನು ಆ **ತಿಮ್ಮರಸ**ನನ್ನು ತನ್ನ ಮಂತ್ರಿಯನ್ನಾಗಿ ಮಾಡಿಕೊಂಡನು. ಮತ್ತು ಆ ಮಂತ್ರಿಯ ಮಾತಿನಂತೆ ನಡೆಯುತ್ತಿದ್ದನು. ಅಲ್ಲದೆ ಆತನನ್ನು ರಾಯನು **ಅಪ್ಪಾಜಿ**ಯೆಂದು ಕರೆಯುತ್ತಿದ್ದನು.


ಕೃಷ್ಣದೇವರಾಯನ ವಿಜಯಯಾತ್ರೆ

ಕೃಷ್ಣದೇವರಾಯನು ಮೊದಲು **ಓರಿಸಾ** ಪ್ರಾಂತವನ್ನು ಗೆದ್ದುಕೊಂಡನು. (ಕ್ರಿ. ವ. **೧೫೧೩**) ಬಳಿಕ ತುಂಗಭದ್ರಾ, ಕೃಷ್ಣಾ ಇವೆರಡು ನದಿಗಳ ನಡುವಿನ ಬೆಳೆಯುಳ್ಳ ಪ್ರದೇಶವಾದ **ರಾಯಚೂರು, ಮುದಗಲ್ಲು** ಪರಗಣೆಗಳನ್ನು ಗೆಲ್ಲುವದಕ್ಕಾಗಿ ಕ್ರಿ. ವ. **೧೫೨೦**ರಲ್ಲಿ ಹತ್ತು ಲಕ್ಷ ಸೈನ್ಯವನ್ನು ತೆಗೆದುಕೊಂಡು ಹೊರಟನು. ಆಗ **ವಿಜಾಪುರ**ದ

ಇಸ್ಮಾಯಿಲ ಅದಿಲಶಹನು ದಂಡೆತ್ತಿ ಬಂದನು. ರಾಯಚೂರ ಬಳಿಯಲ್ಲಿ ಮೇ ತಿಂಗಳ ೧೯ನೆಯ ತಾರೀಖಿನ ಬೆಳಿಗ್ಗೆ ಎರಡೂ ಸೈನ್ಯದವರು ಒಬ್ಬರಿಗೊಬ್ಬರು ತಾಗಿದರು. ಭಯಂಕರವಾದ ಯುದ್ಧವು ಪ್ರಾರಂಭವಾಯಿತ. ಕೃಷ್ಣದೇವರಾಯನು ಆದಿಲಶಹನ ಸೈನ್ಯವನ್ನು ಚನ್ನಾಗಿ ಹಣಿದು, ಅವರನ್ನು ಹಿಂದಕ್ಕೆ ಅಟ್ಟಿದನು. ಆಗ ಅದಿಲಶಹನು ಹಿಂಭಾಗದಲ್ಲಿ ಕಾದಿಟ್ಟ ತೋಫುಗಳನ್ನು ಹಾರಿಸಲಾರಂಭಿಸಿದನು. ಇದರಿಂದ ಹಿಂದೂ ಸೈನ್ಯದಲ್ಲಿ ಬಹಳ ಮಂದಿ ಸತ್ತದ್ದರಿಂದ ಉಳಿದವರಲ್ಲಿ ಕೆಲವರು ಹಿಂದಿರುಗಿ ಓಡಹತ್ತಿದರು. ಇಂಥ ಬಿಕ್ಕಟ್ಟಿನ ಸಮಯದಲ್ಲಿ ಕೃಷ್ಣದೇವರಾಯನು ಎಳ್ಳಷ್ಟಾದರೂ ಎದೆಗುಂದದೆ, ತನ್ನ ಮಿಕ್ಕ ಸೈನ್ಯವನ್ನೂ ಸೇನಾಪತಿಗಳನ್ನೂ ಹುರಿದುಂಬಿಸಿ, ಹೆಬ್ಬುಲಿಯಂತೆ ಶತ್ರುಗಳ ಮೇಲೆ ಅಪ್ಪಳಿಸಿದನು! ಈ ಆವೇಶದ ಹೊಡತವನ್ನು ತಡೆಯಲಾರದೆ ಶತ್ರುಗಳು ಓಡಿದರು. ರಾಯನು ಆ ಶತ್ರುಸೈನ್ಯವನ್ನು ನದಿಯ ವರೆಗೆ ಬೆನ್ನಟ್ಟಿ ಕೊಂದು, ಪೂರ್ಣಜಯವನ್ನು ಹೊಂದಿದನು. ಆದಿಲಶಹನು ತನ್ನ ಜೀವವನ್ನು ಉಳಿಸಿಕೊಳ್ಳುವದಕ್ಕಾಗಿ ಆನೆಯ ಮೇಲೆ ಕುಳಿತುಕೊಂಡು ಓಡಿಹೋದನು. ಇಷ್ಟೇ ಅಲ್ಲ, ಕೃಷ್ಣದೇವರಾಯನು ಇರುವ ವರೆಗೂ ಈ ಇಸ್ಮಾಯಿಲ ಆದಿಲಶಹನು ವಿಜಯನಗರವೆಂದರೆ ಗದಗದ ನಡುಗುತ್ತಿದ್ದನು. !

ಕೃಷ್ಣದೇವರಾಯನ ಕಟ್ಟಡಗಳು

ಕೃಷ್ಣದೇವರಾಯನು, ವಿರೂಪಾಕ್ಷದೇವಾಲಯದ ಪೂರ್ವೋತ್ತರ ಮಹಾದ್ವಾರಗಳ ಮೇಲೆ ಗೋಪುರಗಳನ್ನು ಕಟ್ಟಿಸಿದ್ದಲ್ಲದೆ ಕೃಷ್ಣಸ್ವಾಮಿಯ, ಹಜಾರರಾಮಸ್ವಾಮಿಯ ಹಾಗೂ ವಿಜಯ ವಿಠ್ಠಲದೇವರ ಗುಡಿಗಳನ್ನೂ ಕಟ್ಟಿಸಿದನು. ಒಮ್ಮೆ ಕುಹುಯೋಗವು ಒದಗಿದಾಗ ಈ ಕೃಷ್ಣದೇವರಾಯನು, ಸೋಸಲೆಯ ಮಠದ ವ್ಯಾಧ್ಯ ಮಠದ ಶ್ರೀವ್ಯಾಸರಾಯ ಸ್ವಾಮಿಗಳನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ, ಮುತ್ತು ರತ್ನಗಳಿಂದ ಅವರಿಗೆ ಅಭಿಷೇಕವನ್ನು ಮಾಡಿಸಿದನು. ಆಗ ಈ ಸ್ವಾಮಿಗಳು ಆ ಯೋಗವು ಮುಗಿಯುವವರೆಗೆ ರಾಜ್ಯವಾಳಿದರು.



ಹಂಪಿ ಕ್ಷೇತ್ರವು

ಇವನ ಆಶ್ರಯದಲ್ಲಿ **ತಿಮ್ಮಣ್ಣ**ನೆಂಬ ಬ್ರಾಹ್ಮಣ ಕವಿಯು ಕನ್ನಡದಲ್ಲಿ **ಉತ್ತರಭಾರತ**ವನ್ನು ಬರೆದಿದ್ದಾನೆ. ಎಂದರೆ ಶಾಂತಿಪರ್ವವೊದಲುಗೊಂಡು ೭ ಪರ್ವಗಳನ್ನು ರಚಿಸಿದ್ದಾನೆ. ಇದೇ ಸುಮಾರಕ್ಕೆ ವಿಜಯನಗರದಲ್ಲಿದ್ದ ಸುಪ್ರಸಿದ್ಧರಾದ ದ್ವೈತಮತದ ಶ್ರೀ **ಪುರಂದರ ದಾಸರು** ಕನ್ನಡದಲ್ಲಿ ಅನೇಕ ಪದಕಗಳನ್ನು ರಚಿಸಿದರು. ಈ ಕೃಷ್ಣದೇವರಾಯನ ಮಂತ್ರಿಯಾದ ತಿಮ್ಮರಸನು ಅಚ್ಚ ಕನ್ನಡಿಗನಾಗಿದ್ದರೂ ಆ ಮಂತ್ರಿಯ ಅಳಿಯನಾದ **ನಂದಿಯಾಳ ಅಪ್ಪಯ್ಯನು ಅಚ್ಚ ತೆಲುಗು** ಮನಷ್ಯನಾಗಿದ್ದನು. **ಮಾದಯ್ಯಾಗಾರಿ ಮಲ್ಲನ್ನ**ನೆಂಬ ಕವಿಯು, ತಾನು ರಚಿಸಿದ "**ರಾಜ-ಶೇಖರ-ಚರಿತ್ರ**" ವೆಂಬ ತೆಲುಗು ಕಾವ್ಯವನ್ನು ತಿಮ್ಮರಸು ಮಂತ್ರಿಯ ಅಳಿಯನಾದ ಈ ನಂದಿಯಾಳ ಅಪ್ಪಯ್ಯನಿಗೆ ಅರ್ಪಣಮಾಡಿದ್ದಾನೆ ಈ ತೆಲುಗು ಅಳಿಯನ ಒತ್ತಾಯಕ್ಕಾಗಿ ತಿಮ್ಮರಸನು ನಾಲ್ಕು ಜನ[೧] ತೆಲುಗು

ಕವಿಗಳು

---

೧. ಕೃಷ್ಣದೇವರಾಯನ ಆಶ್ರಯದಲ್ಲಿ ಈ ಪ್ರಕಾರ ಎಂಟು ಜನ ತೆಲುಗು ಕವಿಗಳಿದ್ದರೆಂಬು ವೊದಲಿನ ಜನರ ಕಲ್ಪನೆಯು.

(೧) ತೆನ್ನಾಲಿ ರಾಮಕೃಷ್ಣ (ಕಾಣ್ವಶಾಖೆಯ ಬ್ರಾಹ್ಮಣ)
(೨) ಅಲಸಾನಿ ಪೆದ್ದನ್ನಾ (ಆಪಸ್ತಂಬ ,,)
(೩) ನಂದಿ ತಿಮ್ಮನ್ನಾ (,, ,,)
(೪) ಮಾದಯ್ಯಾಗಾರಿ ಮಲ್ಲನ್ನಾ (ವೀರಶೈವ, ಲಿಂಗವಂಶ)
(೫) ಧೂರ್ಜಟಿ (ಆಪಸ್ತಂಬ ಬ್ರಾಹ್ಮಣ)

ಕವಿಗಳಿಗೆ ಕೃಷ್ಣದೇವರಾಯನಿಂದ ಆಶ್ರಯ ಕೊಡಿಸಿದನು. ಈ ತೆಲುಗು ಕವಿಗಳಲ್ಲಿ **ತೆನ್ನಾಲಿ ರಾಮಕೃಷ್ಣ**ನೆಂಬ ಕವಿಯು ಬಹು **ವಿನೋದಗಾರ**ನಾಗಿದ್ದನು.



ಶ್ರೀ ಪುರಂದರದಾಸರು

ಕ್ರಿ. ಶ. ೧೫೨೦ರಲ್ಲಿ ರಾಯಚೂರಿನ ಯುದ್ಧದಲ್ಲಿ ವಿಜಯವನ್ನು ಹೊಂದಿ, ವಿಜಯನಗರಕ್ಕೆ ತಿರುಗಿ ಬಂದ ಬಳಿಕ ಕೃಷ್ಣದೇವರಾಯನು ತನ್ನ **ತಿರುಮಲ**ನೆಂಬ ಚಿಕ್ಕ ವಯಸ್ಸಿನ-ಮಗನನ್ನು ಪಟ್ಟಕ್ಕೆ ಕುಳ್ಳಿರಿಸಿದನು. ಆದರೆ ತುಸು ದಿವಸಗಳಲ್ಲಿಯೇ ಕೆಲವರು ಆ ರಾಜಪುತ್ರನಿಗೆ **ವಿಷ**ವನ್ನು ಹಾಕಿ ಅವನನ್ನು ಕೊಂದರು! ಈ ವಿಷಪ್ರಯೋಗದ ಕೆಲಸದಲ್ಲಿ ತನ್ನ ಮಂತ್ರಿಯಾದ ತಿಮ್ಮರಸನು ಕೈ ಹಾಕಿದ್ದಾನೆಂಬುದು ತಿಳಿದು ಬಂದ ಕೂಡಲೇ ಕೃಷ್ಣದೇವರಾಯನು ಅವನನ್ನೂ ಅವನ ಕುಟುಂಬದವರನ್ನೂ ಸೆರೆ ಹಿಡಿದನು. ಅವರಲ್ಲಿ ತಿಮ್ಮರಸನ ಒಬ್ಬ ಮಗನು, ಆ ಸೆರೆಮನೆಯೊಳಗಿಂದ ತಪ್ಪಿಸಿಕೊಂಡು, ಓಡಿಹೋಗಿ **ಸೊಂಡೂರು** ಗುಡ್ಡದಲ್ಲಿ ಅಡಗಿಕೊಂಡನು. ಹೀಗೆ ಓಡಿಹೋದ ಸುದ್ದಿಯನ್ನು ಕೇಳಿ, ಕೃಷ್ಣದೇವರಾಯನು ಮತ್ತಿಷ್ಟು ಸಿಟ್ಟಿಗೆದ್ದು, ತಿಮ್ಮರಸನನ್ನೂ ಅವನ ತಮ್ಮನನ್ನೂ

---

(೬) ಅಯ್ಯಲರಾಜೂ ರಾಮಭದ್ರ (ಆಪಸ್ತಂಭ ಬ್ರಾಹ್ಮಣ)
(೭) ರಾಮರಾಜು ಭೂಷಣವ್ (,, ,,)
(೮) ಪಿಂಗಳಿ ಸೂರನ್ನಾ (,, ,,)

ಇವರಲ್ಲಿ ಮೊದಲಿನ ನಾಲ್ಕು ಜನ ಕವಿಗಳು ಮಾತ್ರ ಕೃಷ್ಣದೇವರಾಯನ ಆಶ್ರಯದಲ್ಲಿದ್ದರೆಂದೂ ಮಿಕ್ಕ ನಾಲ್ಕು ಜನ ಕವಿಗಳು ಕೃಷ್ಣದೇವರಾಯನ ಕಾಲದಿಂದ ಈಚೆಗೆ ಆಗಿಹೋದರೆಂದೂ ಆಂಧ್ರ ಇತಿಹಾಸ ಸಂಶೋಧಕರು ನಿರ್ಣಯಿಸಿದ್ದಾರೆ.

ಹಾಗೂ ಅವನ ಇನ್ನೊಬ್ಬ ಮಗನನ್ನೂ ತನ್ನೆದುರಿಗೆ ನಿಲ್ಲಿಸಿ, ಅವರೆಲ್ಲರ ಕಣ್ಣುಗಳನ್ನು ಕೀಳಿಸಿದನು !!! ಅಂದಿನಿಂದ ಓಲಗದಲ್ಲಿ ತೆಲುಗು ಕವಿಗಳ ಗೌರವವು ಕಡಿಮೆಯಾಯಿತು. ಆಗ ಓಲಗದಲ್ಲಿದ್ದ **ಅಲಸಾನಿ ಪೆದ್ದನ್ನಾ, ನಂದಿ ತಿಮ್ಮನ್ನಾ** ಇವರಿಬ್ಬರು ತೆಲುಗು ಕವಿಗಳು, ಕೃಷ್ಣದೇವರಾಯನ ಪ್ರೀತಿಯನ್ನು ಪುನಃ ಸಂಪಾದಿಸಿಕೊಳ್ಳುವದಕ್ಕಾಗಿ "**ಆಮುಕ್ತಮಾಲ್ಯದ ಅಥವಾ ವಿಷ್ಣುಚಿತ್ತೀಯ**" ಎಂಬುದೊಂದು ಕಾವ್ಯವನ್ನು ರಚಿಸಿ, ಅದನ್ನು ಕೃಷ್ಣದೇವರಾಯನ ಹೆಸರಿನಿಂದ ಪ್ರಸಿದ್ಧಮಾಡಿದರು. ಆದರೂ ಈ ಕನ್ನಡ ರಾಯನ ಮನಸ್ಸು ಅವರ ಕಡೆಗೆ ತಿರುಗಲಿಲ್ಲ.

ಈ ರಾಯನಿಗೆ "**ಕನ್ನಡರಾಯ**" **ಕನ್ನಡರಾಜ್ಯರಮಾರಮಣ**" ಎಂಬ ಬಿರುದುಗಳಿದ್ದವು. ಈತನಿಗೆ **ತಿರುಮಲಾಂಬಾ** ಎಂಬ ಮಗಳಿದ್ದಳು. ಈಕೆಯನ್ನು ಕರ್ನಾಟಕ ರಾಜವಂಶಸ್ಥನಾದ **ರಾಮರಾಯನಿಗೆ** ಮದುವೆ ಮಾಡಿಕೊಟ್ಟನು. ಈ **ಕೃಷ್ಣದೇವರಾಯನು** ಕ್ರಿ. ವ. **೧೫೨೯** ರಲ್ಲಿ ಮರಣಹೊಂದಿದ ಬಳಿಕ ಇವನ ಮಲತಮ್ಮನಾದ **ಅಚ್ಯುತರಾಯನು** ಪಟ್ಟಕ್ಕೆ ಕುಳಿತನು.

ಅಳಿಯ ರಾಮರಾಯನ ಪ್ರಾಬಲ್ಯ

ಅಚ್ಯುತರಾಯನು, ತೀರ ಕೈಲಾಗದವನಿದ್ದುದರಿಂದ ಅಳಿಯ **ರಾಮರಾಜನೇ** ಪ್ರಬಲನಾಗುತ್ತ ನಡೆದನು. ಮುಂದೆ ಕ್ರಿ. ವ. **೧೫೪೨**ರಲ್ಲಿ ಅಚ್ಯುತರಾಯನು ಮರಣ ಹೊಂದಿದನು. ನಂತರ ಅವನ ಮಗನಾದ **ವೆಂಕಟದೇವರಾಯನು** ಪಟ್ಟಕ್ಕೆ ಕುಳಿತನು. ತುಸು ದಿವಸಗಳಲ್ಲಿಯೇ ಈತನೂ ಮರಣಹೊಂದಿದನು. ಆ ಬಳಿಕ ಅಚ್ಯುತರಾಯನ ತಮ್ಮನ ಮಗನಾದ **ಸದಾಶಿವರಾಯನನ್ನು** ಹೆಸರಿಗೆ ಮಾತ್ರ ಸಿಂಹಾಸನದ ಮೇಲೆ ಕುಳ್ಳಿರಿಸಿ, ಅಳಿಯ **ರಾಮರಾಯನು** ವಿಜಯನಗರ ಸಾಮ್ರಾಜ್ಯದ ಸರ್ವ ಅಧಿಕಾರಗಳನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. (ಕ್ರಿ. ವ. **೧೫೪೩**).

ಅಳಿಯ ರಾಮರಾಯನ ಶೂರತನದಿಂದ ವಿಜಯನಗರ ಸಾಮ್ರಾಜ್ಯವು ಅತ್ಯಂತ ಘನತೆಗೇರಿತು. ಈ ಕಾಲಕ್ಕೆ ಅಹಮ್ಮದನಗರದ ನಿಜಾಮ

ಶಹನೂ, ವಿಜಾಪುರದ ಆದಿಲಶಹನೂ ಹಾಗೂ ಗೋವಳಕೊಂಡದ ಕುತುಬಶಹನೂ ತಮ್ಮತಮ್ಮೊಳಗೆ ಒಬ್ಬರಿಗೊಬ್ಬರು ಹೊಟ್ಟೆಕಿಚ್ಚಿನಿಂದ ಬಡೆದಾಡುತ್ತಿದ್ದರು. ಆಗ ಪ್ರತಿಯೊಬ್ಬ **ಶಹನು**, ಈ ರಾಮರಾಯನ ಸಾಹಾಯ್ಯವನ್ನು ತೆಗೆದುಕೊಂಡು ಇನ್ನೊಬ್ಬ **ಶಹನನ್ನು** ಹಣಿಯುತ್ತಿದ್ದನು. ಇದರಿಂದ ರಾಮರಾಯನು ಮತ್ತಿಷ್ಟು ಪ್ರಬಲನಾಗುವದಕ್ಕೆ ಅನುವು ಉಂಟಾಯಿತು. ಹಾಗೂ ಈ ಮುಸಲ್ಮಾನ ಅರಸರೆಲ್ಲರೂ ಬಡೆದಾಡಿ ಹಣ್ಣುಗಾಯಿ ನೀರುಗಾಯಿ ಆದರು. ಇದೇ ಕಾಲಕ್ಕೆ ಅತ್ತ ಉತ್ತರ ಹಿಂದುಸ್ಥಾನದಲ್ಲಿ ಸುಪ್ರಸಿದ್ಧ ಮೊಗಲ ಬಾದಶಹನಾದ **ಜಲಾಲುದ್ದೀನ ಮುಹಮ್ಮದ ಅಕಬರನು** ಕ್ರಿ. ಶ. **೧೫೫೬ರಲ್ಲಿ ದಿಲ್ಲಿಯಲ್ಲಿ** ಸಿಂಹಾಸನವನ್ನೇರಿದನು. ಅವನು ಮಹಾ ಪರಾಕ್ರಮಶಾಲಿಯೂ ಮಹತ್ವಾಕಾಂಕ್ಷೆಯುಳ್ಳವನೂ ರಾಜನೀತಿ ಕುಶಲನೂ ಆಗಿದ್ದರಿಂದ ಇಡಿ ಹಿಂದುಸ್ಥಾನ ದೇಶವನ್ನು ಯುಕ್ತಿಪ್ರಯುಕ್ತಿಯಿಂದ ಗೆದ್ದುಕೊಂಡು ಮೊಗಲಸಾಮ್ರಾಜ್ಯವನ್ನು ಸ್ಥಾಪಿಸಬೇಕೆಂದು ಗೊತ್ತುಮಾಡಿದ್ದನು. ಆದ್ದರಿಂದ ಅಕಬರನು ದಕ್ಷಿಣ ಹಿಂದುಸ್ಥಾನದ ಈ ಪರಿಸ್ಥಿತಿಯನ್ನು ನೋಡಿ, ಇದರಲ್ಲಿ ಮನಸ್ಸುಹಾಕಿ, ವಿಜಯನಗರಸಾಮ್ರಾಜ್ಯವನ್ನು

ಅಕಬರನ ಕಾರಸ್ಥಾನ

ಒಕ್ಕಲಿಕ್ಕುವದಕ್ಕಾಗಿ ಈ ದಕ್ಷಿಣ ಹಿಂದುಸ್ಥಾನದ ಮುಸಲ್ಮಾನ ರಾಜರನ್ನು ಒಟ್ಟುಗೂಡಿಸಿದನು. ಹಾಗೂ ಈ ಕಾರ್ಯಕ್ಕೆ ತಾನೂ ಬೆಂಬಲವನ್ನು ಕೊಟ್ಟನು. ಆಗ ಅಹಮ್ಮದನಗರದ **ಹುಸೇನ-ನಿಜಾಮಶಹನು** ತನ್ನ ಮಗಳಾದ **ಚಾಂದಬೀಬಿಯನ್ನು** ವಿಜಾಪುರದ **ಅಲ್ಲೀ ಆದಿಲಶಹನಿಗೆ** ಮದುವೆಮಾಡಿಕೊಟ್ಟು ಒಕ್ಕಟ್ಟನ್ನು ಬೆಳಸಿದನು; ಮೊದಲಿನ ಹಗೆತನವನ್ನು ಮರೆತನು.



ಅಲ್ಲೀ ಆದಿಲಶಹ

ಆದಿಲಶಾಹೀ ಬಾದಶಹರ ವಂಶಾವಳಿಯು.

(ಕ್ರಿ. ವ. ೧೪೮೯–೧೬೮೬)

- (೧) ಯುಸುಫ ಆದಿಲಶಹ (೧೪೮೯–೧೫೧೦)
  - (೨) ಇಸ್ಮಾಯಿಲ ಆದಿಲಶಹ (೧೫೧೦–೧೫೩೪)
    - ಮಲ್ಲೂ ಆದಿಲಶಹ (೧೫೩೪–೧೫೩೫)
    - (೩) ಇಬ್ರಾಹೀಮ ಆದಿಲಶಹ I (೧೫೩೫–೧೫೫೭)
      - (೪) ಅಲ್ಲೀ ಆದಿಲಶಹ I (೧೫೫೭–೧೫೮೦)
      - ತಹಮಾಸ್ಪ ಆದಿಲಶಹ
        - (೫) ಇಬ್ರಾಹೀಮ ಆದಿಲಶಹ II (೧೫೮೦–೧೬೨೭)
          - (೬) ಮಹಮ್ಮದ ಆದಿಲಶಹ (೧೬೨೭–೧೬೫೭)
            - (೭) ಅಲ್ಲೀ ಆದಿಲಶಹ II (೧೬೫೭–೧೬೭೨)
              - (೮) ಸಿಕಂದರ ಅಲ್ಲೀ ಆದಿಲಶಹ (೧೬೭೨–೧೬೮೬)

ಮೊಗಲ ಬಾದಶಹರ ವಂಶಾವಳಿಯು.

(೧) ಬಾಬರ (ಕ್ರಿ. ಶ. ೧೫೨೬–೧೫೩೦)

(೨) ಹುಮಾಯೂನ (೧೫೩೦–೧೫೫೬)

(೩) ಅಕಬರ (೧೫೫೬–೧೬೦೫)

(೪) ಜಹಾಂಗೀರ (೧೬೦೫–೧೬೨೭)

(೫) ಶಹಾಜಹಾನ (೧೬೨೭–೧೬೫೮)

(೬) ಔರಂಗಜೇಬ (೧೬೫೮–೧೭೦೭)

- (೭) ಬಹಾದೂರಶಹಾ (೧೭೦೭–೧೭೧೨)
- ಅಜೀಮ
- ಅಕಬರ
- ಕಾಮಬಕ್ಷ

ವಿಜಯನಗರದ ಅಳಿಯ **ರಾಮರಾಜನ** ಸನ್ನಿಧಿಯಲ್ಲಿದ್ದಂಥ **ರಾಮಾಜಿ ತಿರುಮಲ ಹರಿಕಾರೆ** ಎಂಬ **ಬಖರಕಾರನು** ತಾನು ಬರೆದ **"ರಾಮರಾಯನ ಬಖೈರು"** ಎಂಬ ಗ್ರಂಥದಲ್ಲಿ ಹೇಳಿದ್ದೇನೆಂದರೆ, "ಮೊಗಲ ಬಾದಶಹನಾದ ಜಲಾಲುದ್ದೀನ ಅಕಬರನೂ, ನಿಜಾಮುಶಹನೂ, ಕುತುಬಶಹನೂ **ಜಾಲನಾಪುರದಲ್ಲಿ** ಕಲೆತು, ಕರ್ನಾಟಕ ರಾಜ್ಯದ ಮೇಲೆ ದಂಡೆತ್ತಿ ಹೋಗುವದನ್ನು ನಿಶ್ಚಯಿಸಿದರು." ಅದೇ ಪ್ರಕಾರ ನಿಜಾಮುಶಹ, ಕುತುಬಶಹ, ಆದಿಲಶಹ, ಜಲಾಲುದ್ದೀನ ಅಕಬರ, ಇಮಾದ-ಉಲ್ಮುಲ್ಕ ಈ ಐದು ಜನ ಬಾದಶಹರು ತಮ್ಮತಮ್ಮ ಸೈನ್ಯದೊಂದಿಗೆ **ನಾಲತವಾಡದ** ಕಡೆಗೆ ಬಂದು ಇಳಿದರು. ಇತ್ತ ರಾಮರಾಯನು **ರಾಕ್ಷಸತಂಗಡಿಯ**[೧] ಹತ್ತರದ ಬೈಲಿನಲ್ಲಿ ಸಕಲ ಸೈನ್ಯದೊಂದಿಗೆ ಇಳಿದು, ಅಲ್ಲಿ ರಣ ಘಂಟೆಗಳನ್ನು ಹೊಡಿಸಿ, **ರಣಸ್ತಂಭ**ವನ್ನು ಕಟ್ಟಿಸಿದನು. ರಣಸ್ತಂಭದ ಬಳಿಯಲ್ಲಿ ಸೈನ್ಯವು ಸಿದ್ಧವಾಯಿತು.



ಚಾಂದಬೀಬಿ

---

೧. ಈ ರಾಕ್ಷಸ ತಂಗಡಿಗಿಯ ಯುದ್ಧಕ್ಕೆ "ತಾಳೀಕೋಟಿಯ ಯುದ್ಧ" ಎಂಬ ತಪ್ಪು ಹೆಸರು ವಾಡಿಕೆಯಾಗಿದೆ. ತಾಳಿಕೋಟಿಯ ದಕ್ಷಿಣಕ್ಕೆ ೨೫ ಮೈಲಿನ ಮೇಲೆ ರಾಕ್ಷಸ ತಂಗಡಿಗಿ-ನಾಲತವಾಡಗಳ ಮಧ್ಯದಲ್ಲಿ ಈ ಯುದ್ಧವಾಯಿತೆಂದು 'ರಾಮರಾಯನಬಖೈರು' ಎಂಬ ಪುಸ್ತಕದಲ್ಲಿ ಸ್ಪಷ್ಟವಾಗಿ ಬರೆದಿದೆ. ಈ ಗ್ರಾಮಗಳು ವಿಜಾಪುರ ಜಿಲ್ಹೆಯ ಮುದ್ದೇಬಿಹಾಳ ತಾಲೂಕಿನಲ್ಲಿ ಕೃಷ್ಣಾನದಿಯ ಉತ್ತರ ದಂಡೆಯ ಮೇಲೆ ಇವೆ. ತಂಗಡಿಗಿಯ ಬೈಲಿನಲ್ಲಿ ಈ ಯುದ್ಧದ ಎರಡು ರಣಸ್ತಂಭಗಳನ್ನು ಈಗಲೂ ನೋಡಬಹುದು

ಶತ್ರುಸೈನ್ಯವೂ ಬಂದಿತು; ಕೂಡಲೆ ಯುದ್ಧವು ಪ್ರಾರಂಭವಾಯಿತು. ಹೀಗೆ **೨೭ ದಿವಸಗಳ ವರೆಗೆ ಭಯಂಕರವಾದ ಯುದ್ಧವು ನಡೆಯಿತು.** ಕಡೆಯ ದಿನ ಪ್ರಾತಃಕಾಲ ಮೊದಲುಗೊಂಡು ರಾತ್ರಿ **ರಾಕ್ಷಸತಂಗಡಿಗಿ** ಒಂಭತ್ತು ತಾಸುಗಳ ವರೆಗೆ ಹೋರಾಡಿದರು. ಈ **ಮಹಾಯುದ್ಧ** ವೇಳೆಯಲ್ಲಿ **ರಾಮರಾಯನು** ರೋಷಾವೇಶದಿಂದ **ರಾಜಹಂಸಾನ್ವಿತ ಗಜದ** ಮೇಲೆ ಕುಳಿತು, ಸಕಲ ಸೈನ್ಯದಿಂದೊಡಗೂಡಿ ರಣಭೂಮಿಗೆ ಹೊರಟನು. ಎಡಬಲದಲ್ಲಿ ದೊಡ್ಡ ದೊಡ್ಡ ಅಂಬಾರಿಯ ಆನೆಗಳು, ಹಿಂಪೆ ಭೇರಿ, ತುತೂರಿ, ಕೊಳಲು, ತಪ್ಪಟಿ, ಸ್ವನಾಯಿ, ಬಜಂತ್ರಿ ಮೊದಲಾದ ವಾದ್ಯಗಳು ಇವುಗಳಿಂದ ಕೂಡಿ, ಆ ಮುಸಲ್ಮಾನರ ಸಂಗಡ ಯುದ್ಧಮಾಡ ತೊಡಗಿದನು. ಮುಸಲ್ಮಾನರ ಸೈನ್ಯವೂ ಅಪಾರವಾಗಿತ್ತು. ಆದರೇನು? ಕರ್ನಾಟಕ ಸೈನ್ಯದ ಹೊಡತವನ್ನು ತಡೆಯಲಾರದೆ ಮುಸಲ್ಮಾನ ಸೈನಿಕರಲ್ಲಿ ಓಡಿಹೋದವರ ಸಂಖ್ಯೆಗೆ ಮಿತಿಯೇ ಇಲ್ಲ. **ಸಾರಾಂಶ,** ಮುಸಲ್ಮಾನರಿಗೆ ಸಂಪೂರ್ಣವಾಗಿ ಅಪಜಯವಾಯಿತು. ಕೂಡಲೆ ಬಾದಶಹರ ದಂಡು ಎರಡು ಹರದಾರಿ ಹಿಂದಕ್ಕೆ ಓಡಿಹೋಗಿ ನಿಂತಿತು. ತನಗೆ ಜಯವಾಯಿತೆಂಬ ಆನಂದದಿಂದ ರಾಮರಾಯನ ಸೈನ್ಯವು ಪಾಳೆಯಕ್ಕೆ ಹಿಂದಿರುಗಿತು. ಇನ್ನು ಮೇಲೆ ಶತ್ರುಗಳು ತಮ್ಮ ಮೇಲೆ ಕೈಮಾಡರೆಂದೂ ಅವರು ಪೂರಾ ಬಲಹೀನರಾಗಿರುವರೆಂದೂ ತಿಳಿದು, ರಾಮರಾಯನು ಉದಾಸೀನದಿಂದ ಇದ್ದನು. ಹಾಗೂ ಈತನ ಸೈನಿಕರೆಲ್ಲರೂ ಮೈಮರೆತು ಚಕ್ಕಂದದಿಂದ ಕಾಲಕಳೆಯಹತ್ತಿದರು.

ಹೀಗೆ ಮೈಮರೆತು ಕುಳಿತ ವೇಳೆಯಲ್ಲಿ ಒಟ್ಟುಗೂಡಿ ಬಂದ ಐದೂ ಮಂದಿ ಬಾದಶಹರ ಸೈನ್ಯವು ಒಮ್ಮಿಂದೊಮ್ಮೆ ಈ ಹಿಂದೂ ಸೈನ್ಯವನ್ನು ಮುತ್ತಿತು! ರಾಮರಾಯನ ಪಾಳೆಯವೆಲ್ಲ ಲೂಟಿಯಾಗಿ ಹೋಯಿತು!! ರಾಮರಾಜನ ಸೈನ್ಯದಲ್ಲುಂಟಾದ ಗಜಬಿಜಿಯನ್ನು ಹೇಳತೀರದು. ಆದರೇನು? ಯುದ್ಧವು ನಡೆಯುತ್ತಲೇ ಇತ್ತು. ಈ ಗೊಂದಲದಲ್ಲಿಯೇ

ರಾಮರಾಯನು ಅಲ್ಲೀ ಆದಿಲಶಹನನ್ನು ಕರೆದು—"ನೀನು ನನ್ನ ಮಗ[1]ನಾಗಿ ಈ ಪ್ರಕಾರ ನಡೆಯುವದು ಯುಕ್ತವಲ್ಲ. **ಸಾಕಿ ಸಲಹಿದ ತಂದೆಗೆ ಹೀಗೆ ಘಾತಮಾಡಿದ ಪಿತೃದ್ರೋಹಿ!** ಆದದ್ದು ಆಗಿ ಹೋಯಿತು; ಈಗಾದರೂ ನನಗೊಂದು ಉಪಕಾರವನ್ನು ಮಾಡು. ಏನೆಂದರೆ, ನನ್ನನ್ನು ವೈರಿಗಳ ಕೈಗೆ ಕೊಟ್ಟು ತಲೆಹೊಯಿಸಬೇಡ; ನೀನೇ ನನ್ನನ್ನು ಫಿರಂಗಿಯಿಂದ ಹೊಡೆದು ಕೊಲ್ಲು." ಎಂದು ಹೇಳಿ, ದೇವರ ಧ್ಯಾನವನ್ನು ಮಾಡುತ್ತ ನಿಂತನು. ಆದಿಲಶಹನು ಸ್ವಲ್ಪ ವಿಚಾರ ಮಾಡಿ, ಕೊನೆಗೆ ಫಿರಂಗಿಯನ್ನು ಹಾರಿಸಿ, ರಾಮರಾಯನ ತಲೆಯನ್ನು ಹೊಯಿದನು! ಈ ಸುದ್ದಿಯನ್ನು ಕೇಳಿ ಮಿಕ್ಕ ನಾಲ್ಕು ಮಂದಿ ಬಾದಶಹರು ಸಂತೋಷಭರಿತರಾದರು. ಆ ಬಳಿಕ ಕರ್ನಾಟಕ ಸೈನ್ಯವು ಚದರಿತು. ಕಳೆದುಳಿದ ಸೈನ್ಯವು ವಿಜಯನಗರಕ್ಕೆ ಓಡಿತು.

ಮಗನಾದ ರಾಮರಾಯನು ಸತ್ತ ಸುದ್ದಿಯು ಅರಮನೆಗೆ ಬರುತ್ತಲೇ ತಾಯಿಯವರು ಪ್ರಾಣತ್ಯಾಗವನ್ನು ಮಾಡಿದರು. ಮೂರು ಮಂದಿ **ಹೆಂಡಂದಿರು** ತಮ್ಮ ವಸ್ತ್ರಾಭರಣಗಳನ್ನೆಲ್ಲ ದೇವರಿಗೆ ಸಮರ್ಪಿಸಿ, **ವಿಷ ಕುಡಿದು** ಪ್ರಾಣಗಳನ್ನು ನೀಗಿದರು. ಅಷ್ಟರಲ್ಲಿ ನಾಲ್ಕು ಮಂದಿ ಬಾದಶಹರೂ ವಿಜಯನಗರಕ್ಕೆ ಬಂದು, ಅಲ್ಲಿದ್ದ ಬದುಕು ಖಜಾನೆಗಳನ್ನು ದೋಚಿ, ಅಪರಿಮಿತ ದ್ರವ್ಯವನ್ನು ಗಜ-ತುರಗ-ರಥಾದಿಗಳಲ್ಲಿ ಹೇರಿಕೊಂಡು ತಮ್ಮತಮ್ಮ ಸ್ಥಾನಗಳಿಗೆ ಹೊರಟು ಹೋದರು (ಕಿ.ಶ. ೧೫೬೫).

ಈ ರಾಕ್ಷಸತಂಗಡಿಗಿಯ ಮಹಾಯುದ್ಧದಿಂದ ಕರ್ನಾಟಕದ ಸ್ವಾತಂತ್ರ್ಯವೈಭವವು ನಷ್ಟವಾಗಿ ಹೋಯಿತು.

---

೧. ವಿಜಾಪುರದ ಅಲ್ಲೀ ಆದಿಲಶಹನು ರಾಮರಾಯನನ್ನು ತಂದೆಯ ಸಮಾನನೆಂದು ತಿಳಿದು, ಅದರಂತೆ ನಡೆಯುತ್ತಿದ್ದನು. ಈ ವಿಷಯವಾಗಿ 'ರಾಮರಾಯನ ಬಖೈರಿ'ನಲ್ಲಿ ಹೀಗೆ ಸ್ಪಷ್ಟವಾಗಿ ಬರೆದಿದೆ. ಮಿಕ್ಕ ನಾಲ್ಕು ಮಂದಿ ಬಾದಶಹರು, "ರಾಮರಾಯನ ಮೇಲೆ ಯುದ್ಧಕ್ಕೆ ಹೋಗೋಣ, ನೀನು ನಿನ್ನ ಸೈನ್ಯವನ್ನು ತೆಗೆದುಕೊಂಡು ಬಾ" ಎಂದು ಆದಿಲಶಹನನ್ನು ಕರೆದರೆ, ಆತನು ಉತ್ತರಕೊಟ್ಟದ್ದೇನೆಂದರೆ, "ರಾಮರಾಯನ ಮೇಲೆ ನಾನು ಕೈಯೆತ್ತಬಾರದು. ನಾನು ಆತನ ಮಗನೆನಿಸಿಕೊಂಡಿದ್ದೇನೆ. ಸರ್ವಥಾ ಸ್ವಾಮಿ

ಈ ಪ್ರಕಾರ ಅಳಿಯ ರಾಮರಾಯನು ಮರಣ ಹೊಂದಿದ ಕೂಡಲೆ ಅವನ ತಮ್ಮನಾದ **ತಿರುಮಲರಾಯನು**, ವಿಜಯನಗರದಿಂದ ಅಗಣಿತ ದ್ರವ್ಯವನ್ನು ಆನೆಗಳ ಮೇಲೆ ಹೇರಿಕೊಂಡು, ತನ್ನ ಪರಿವಾರದೊಡನೆ **ಸದಾಶಿವರಾಯನನ್ನು** ಕರೆದುಕೊಂಡು, **ಪೆನುಗೊಂಡೆಗೆ** ಹೋದನು. ಹಾಗೂ ಅಲ್ಲಿ **ರಾಜಸಿಂಹಾಸನವನ್ನು ಸ್ಥಾಪಿಸಿದನು**. ಮುಂದೆ ಕ್ರಿ. ಶ. **೧೫೬೭**ರಲ್ಲಿ ಸದಾಶಿವರಾಯನು ತೀರಿಕೊಂಡ ಬಳಿಕ **ತಿರುಮಲರಾಯನು** ತಾನೇ ಪಟ್ಟಕ್ಕೆ ಕುಳಿತನು. ಇಲ್ಲಿಗೆ **ತುಳುವ ವಂಶವು ಮುಗಿಯಿತು; ಕರ್ನಾಟಕ ರಾಜವಂಶವು ಪ್ರಾರಂಭವಾಯಿತು**. ಇವನ ತರುವಾಯ **೧ನೆಯ ಶ್ರೀರಂಗರಾಯ** (ಕ್ರಿ. ಶ. ೧೫೭೨–೧೫೮೫), **೧ನೆಯ ವೆಂಕಟಪತಿರಾಯ** (ಕ್ರಿ. ಶ. ೧೫೮೬–೧೬೧೪) ಮೊದಲಾದ **ಐದು ಜನ ಅರಸರು** ಕ್ರಿ. ಶ. **೧೬೬೪**ರ ವರೆಗೆ ಹಾಗೂ ಹೀಗೂ ರಾಜ್ಯವನ್ನಾಳಿದರು. ಈ ೧ನೆಯ ವೆಂಕಟಪತಿರಾಯನು ಕ್ರಿ. ಶ. **೧೫೯೨**ರಲ್ಲಿ ಪೆನುಗೊಂಡೆಯನ್ನು ಬಿಟ್ಟು, **ಚಂದ್ರಗಿರಿಯನ್ನು** ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಇವನ ಬಳಿಯಲ್ಲಿದ್ದ **ಎಚ್ಚಮ್ಮನಾಯಕ**ನೆಂಬ ದಂಡನಾಯಕನು ಬಹು ಶೂರನೂ ಸ್ವಾಮಿಭಕ್ತನೂ ಆಗಿದ್ದನು.

ಸಿಂಹಾವಲೋಕನವು:—ತೈತ್ತಿರೀಯ ಶಾಖೆಯ **ಬೋಧಾಯನ** ಸೂತ್ರದ **ಕನ್ನಡಿಗ** ಬ್ರಾಹ್ಮಣರಾದ **ಶ್ರೀವಿದ್ಯಾರಣ್ಯರು** ಕ್ರಿ. ಶ. **೧೩೧೮**ರಿಂದ ಮುಂದೆ ಹದಿನೆಂಟೇ ವರ್ಷಗಳಲ್ಲಿ **ವಿಜಯನಗರ** ಸಾಮ್ರಾಜ್ಯವನ್ನು ಸ್ಥಾಪಿಸಿ, ಮುಸಲ್ಮಾನರ ಹಾವಳಿಯಿಂದ ಹಿಂದೂಧರ್ಮವನ್ನು ಕಾಪಾಡಿದರು. ಈ ಸಾಮ್ರಾಜ್ಯದಲ್ಲಿ ಎಲ್ಲ ಧರ್ಮ-ಮತಗಳಿಗೂ ಸಮಾನದೃಷ್ಟಿಯಿಂದ ಉತ್ತೇಜನವು ದೊರೆಯಿತು. ಈ ಕಾಲದಲ್ಲಿ ರಾಜನು ಬೆಳಿಗ್ಗೆ ಓಲಗಕ್ಕೆ ಬಂದು, ಅಲ್ಲಿ ಪ್ರಜೆಗಳ ಸುಖದುಃಖಗಳನ್ನು ತಾನೇ ವಿಚಾರಿಸುತ್ತಿದ್ದನು. ಅರಸನ ಕೈಕೆಳಗೆ **ಮಹಾಪ್ರಧಾನ**ನೆಂಬ ಒಬ್ಬ ಮುಖ್ಯ ಮಂತ್ರಿಯು ಇರುತ್ತಿದ್ದನು. ಈ ಮಹಾಪ್ರಧಾನ

ದ್ರೋಹವನ್ನು ಮಾಡಲಾಗದು" ಆದರೆ ಇತರ ಬಾದಶಹರು ಒತ್ತಾಯಪಡಿಸಿದ್ದರಿಂದ ಆತನು ಯುದ್ಧಕ್ಕೆ ಬಂದನು ಬಂದರೂ ಕೊನೆಯ ದಿವಸದ ವರೆಗೂ ತಟಸ್ಥನಾಗಿಯೇ ಇದ್ದನು ಕೊನೆಯ ದಿವಸ ಬಹಳ ಒತ್ತಾಯಪಡಿಸಿದ್ದರಿಂದ ಆ ದಿನ ಮಾತ್ರ ರಾಮರಾಯನ ಮೇಲೆಯುದ್ಧಕ್ಕೆ ಬಂದಿದ್ದನು.

ನಲ್ಲದೆ ಇನ್ನೂ **ಏಳು ಜನ ಮಂತ್ರಿಗಳಿರುತ್ತಿದ್ದರು.** ರಾಜ್ಯದಲ್ಲಿ ದೊಡ್ಡ ದೊಡ್ಡ ಭಾಗಗಳನ್ನು ಮಾಡಿ, ಪ್ರತಿಯೊಂದು ಭಾಗಕ್ಕೂ ಒಬ್ಬೊಬ್ಬ **ದಂಡ-ನಾಯಕ**ನೆಂಬ ಅಧಿಕಾರಿಯನ್ನು ನೇಮಿಸುತ್ತಿದ್ದರು. ಆಯಾ ಭಾಗಗಳಲ್ಲಿದ್ದ ಸಾಮಂತ (ಎಂದರೆ, ಮಾಂಡಲಿಕ) ರಾಜರ ಮೇಲೆ ದಂಡನಾಯಕನೇ ವಿಚಾರಣೆಯನ್ನು ಮಾಡುತ್ತಿದ್ದನು. ಆದ್ದರಿಂದ ಇವನಿಗೆ " **ಮಹಾಸಾಮಂತಾಧಿಪತಿ**" ಎಂಬ ಹೆಸರಿತ್ತು. ಕೆಲವು ಕಡೆಗೆ ಇವನನ್ನು " **ಹೆಗ್ಗಡೆ** " ಎಂದೂ ಕರೆಯುತ್ತಿದ್ದರು. ರಾಜ್ಯದೊಳಗೆ ೧೦ ರಿಂದ ೪೦ **ಗ್ರಾಮ**ಗಳಿಗೆ ಒಂದು **ಹೋಬಳಿ**ಯೆಂದೂ, ೪ ರಿಂದ ೧೦ ಹೋಬಳಿಗಳಿಗೆ ಒಂದು **ಗಡಿ**ಯೆಂದೂ, ೧೦ ರಿಂದ ೨೦ ಗಡಿಗಳಿಗೆ ಒಂದು **ನಾಡು** ಎಂದೂ ಭಾಗ ಮಾಡಿದ್ದರು. ಪ್ರತಿಯೊಂದು ಗ್ರಾಮದಲ್ಲಿ **ಗೌಡ, ಶಾನಭೋಗ, ಜೋಯಿಸ, ಬುದ್ಧಿವಂತ, ಬಣಕಾರ, ಬಡಿಗ, ಕಮ್ಮಾರ, ಓಲೆಯಕಾರ** ಮೊದಲಾದ ೧೨ ಜನ **ಆಯಗಾರರು** ತಮ್ಮ ತಮ್ಮ ಕೆಲಸಗಳನ್ನು ಚನ್ನಾಗಿ ನೆರವೇರಿಸಿ, ಗ್ರಾಮದ ಪ್ರಜೆಗಳನ್ನು ಸರಿಯಾಗಿ ಕಾಪಾಡುತ್ತಿದ್ದರು. ಭೂಮಿಯ ಹುಟ್ಟುವಳಿಯ **ಆರನೆಯ ಪಾಲ**ನ್ನು (ಅಥವಾ ಇಂತಿಷ್ಟನೆಯ ಪಾಲನ್ನು) ನಾಣ್ಯದ ರೂಪದಿಂದ ಇಲ್ಲವೆ ಕಾಳಿನ ರೂಪದಿಂದ ರೈತರು ತೆರಿಗೆಯನ್ನು ಕೊಡುತ್ತಿದ್ದರು.

೧೨ನೆಯ ಪ್ರಕರಣ

ಮುಸಲ್ಮಾನರು, ಮೈಸೂರ ಅರಸರು, ಮರಾಟೆರು ಆಳಿದರು

(ಕ್ರಿ. ವ ೧೫೬೬ ರಿಂದ ೧೬೧೩ರ ವರೆಗೆ)

ಕ್ರಿ. ವ. **೧೫೬೫**ರಲ್ಲಿ ಒದಗಿದ **ರಾಕ್ಷಸತಂಗಡಿಗಿಯ** ಮಹಾ-**ಯುದ್ಧ**ದಿಂದ ವಿಜಯನಗರ ಸಾಮ್ರಾಜ್ಯವು ಅಳಿದು ಹೋಗಿ, ಕರ್ನಾಟಕದ ಅವನತಿಯು ಪ್ರಾರಂಭವಾಯಿತು. ವಿಜಾಪುರದ ಆದಿಲಶಾಹಿ ಮನೆತನದ ಮೂಲಪುರುಷನಾದ **ಯುಸುಫ ಆದಿಲಶಹ**ನು, (ಕ್ರಿ ವ. ೧೪೮೯–೧೫೧೦) **ಮುಕುಂದರಾಯ**ನೆಂಬ ಮರಾಟ ಸರದಾರನ ತಂಗಿಯನ್ನು ಮದುವೆ ಮಾಡಿಕೊಂಡು, ಈ ಪಟ್ಟದರಸಿಯ ಒಲವಿನಂತೆ

ನಡೆಯುತ್ತಿದ್ದನು. ಆದ್ದರಿಂದ ಈ ರಾಣಿಯ ಇಚ್ಛೆಯಂತೆ ತನ್ನ ರಾಜ್ಯದಲ್ಲಿ ಮರಾಟ ಜನರಿಗೆ ದೊಡ್ಡ ದೊಡ್ಡ ಅಧಿಕಾರಸ್ಥಾನಗಳನ್ನು ಕೊಟ್ಟನು! ಮತ್ತು ತನ್ನ ರಾಜ್ಯಕಾರಭಾರದ ಎಲ್ಲ ಕಾಗದಪತ್ರಗಳು

ಮರಾಟರು ಮುಂದೆ ಬಂದರು

ಮರಾಠಿ ಭಾಷೆಯಲ್ಲಿರುವಂತೆ ಏರ್ಪಡಿಸಿದನು. ಇಷ್ಟೇ ಅಲ್ಲ, ತನ್ನ ತರುವಾಯ ಈ ರಾಣಿಯ ಮಗನಾದ **ಇಸ್ಮಾಯಿಲ ಆದಿಲಶಹನೇ** ಸಿಂಹಾಸನವನ್ನೇರ ಬೇಕೆಂದು ಗೊತ್ತುಮಾಡಿದನು. ಇದನ್ನು ನೋಡಿ, ಇದರಂತೆಯೇ ಅಹಮ್ಮದನಗರದ **ಬುರ್ಹಾಣ ನಿಜಾಮಶಹನೂ** (ಕ್ರಿ. ವ. ೧೫೦೮–೧೫೫೩) ತನ್ನ ರಾಜ್ಯದಲ್ಲಿ ಮರಾಟರಿಗೆ ಆಶ್ರಯವನ್ನು ಕೊಟ್ಟನು. ಈ ಪ್ರಕಾರ ೧೬ನೆಯ ಶತಮಾನದ ಆರಂಭದಿಂದ **ಮರಾಟರು** ಮುಸಲ್ಮಾನ ರಾಜರ ಆಶ್ರಯದಿಂದ ರಾಜಕೀಯ ಶಿಕ್ಷಣವನ್ನೂ ಯುದ್ಧಶಿಕ್ಷಣವನ್ನೂ ಹೊಂದಿ, ಮೆಲ್ಲಮೆಲ್ಲನೆ ಮುಂದಕ್ಕೆ ಬರಲಾರಂಭಿಸಿದರು.

ಯುಸುಫ ಆದಿಲಶಹನ ತರುವಾಯ, ಮೊದಲೇ ಗೊತ್ತುಮಾಡಿದಂತೆ **ಇಸ್ಮಾಯಿಲ ಆದಿಲಶಹನು** ಸಿಂಹಾಸನವನ್ನೇರಿ, **೨೪ ವರ್ಷ** ಚನ್ನಾಗಿ ರಾಜ್ಯವನ್ನಾಳಿದನು. (ಕ್ರಿ. ವ. ೧೫೧೦–

ಅಲ್ಲೀ ಆದಿಲಶಹ

೧೫೩೪) ನಂತರ ಇವನ ಹಿರಿಯ ಮಗನಾದ **ಮಲ್ಲೂ** ಎಂಬುವನು ಸಿಂಹಾಸನದ ಮೇಲೆ ಕುಳಿತನು. ಆದರೆ ಇವನು ದುಷ್ಟನಿದ್ದುದರಿಂದ ಇವನನ್ನು ಸಿಂಹಾಸನದಿಂದ ತಳ್ಳಿ, ಇವನ ತಮ್ಮನಾದ **ಇಬ್ರಾಹೀಮನನ್ನು** ಪಟ್ಟಕ್ಕೆ ಕುಳ್ಳಿರಿಸಿದರು. (ಕ್ರಿ ವ. **೧೫೩೫**) ಇವನು **೨೩ ವರ್ಷ** ರಾಜ್ಯವನ್ನಾಳಿ ಕ್ರಿ. ವ. **೧೫೫೭**ರಲ್ಲಿ ಮರಣಹೊಂದಿದನು. ಇವನ ಆಳಿಕೆಯಲ್ಲಿ **ವೀರಶೈವ** ಮತದ ವಿಟ್ಟಪ್ಪನೆಂಬ ಸರದಾರನು **ಕೊಕಟನೂರದ** ದೇಶಮುಖಿಯನ್ನು ಸಂಪಾದಿಸಿದನು. ಇವನೇ **ಶಿರಸಂಗಿಯ ದೇಸಾಯರ ಮೂಲಪುರುಷನು.** ಆ ಬಳಿಕ ಹಿರಿಯ ಮಗನಾದ **ಅಲ್ಲೀ ಆದಿಲಶಹನು** ಪಟ್ಟಕ್ಕೆ ಕೂತನು (ಕ್ರಿ. ವ. **೧೫೫೭**) ಈತನು ರಾಕ್ಷಸತಂಗಡಿಗಿಯ ಯುದ್ಧಕ್ಕೆ ಹೋಗಿ ಬಂದ ನಂತರ ಕ್ರಿ. ವ. **೧೫೭೨**ರಲ್ಲಿ **ಅದವಾನಿಯ** ಕೋಟೆಯನ್ನು ಕೈವಶ ಮಾಡಿಕೊಂಡನು.


ವಿಜಯನಗರ ಸಾಮ್ರಾಜ್ಯವು ಹಾಳಾದ ಮೇಲೆ ಚಿಕ್ಕದೊಡ್ಡ ಮಾಂಡಲಿಕ ಅರಸರೂ ಪಾಳೆಯಗಾರರೂ ತಮ್ಮ ತಮ್ಮ ಪ್ರಾಂತಗಳಲ್ಲಿ ಸ್ವತಂತ್ರರಾಗಿರಲು, ಇವನು ಅವರ ಮೇಲೆ ದಂಡೆತ್ತಿ ಹೋಗಿ, ಅವರನ್ನು ಸೋಲಿಸಿ, ತನ್ನ ಅಂಕಿತರನ್ನಾಗಿ ಮಾಡಿದನು. ಮುಂದೆ ಕ್ರಿ. ವ. ೧೫೮೦ರಲ್ಲಿ ಮರಣಹೊಂದಿದನು.

ಚಾಂದಬೀಬಿ,
II **ಇಬ್ರಾಹೀಮ**

ಮರಣ ಸಮಯದಲ್ಲಿ ಈ ಅಲ್ಲೀ ಆದಿಲಶಹನು ಹೇಳಿದಂತೆ ಆತನ ತಮ್ಮನ ಮಗನಾದ **ಇಮ್ಮಡಿ ಇಬ್ರಾಹೀಮನನ್ನು** ಸಿಂಹಾಸನದ ಮೇಲೆ ಕುಳ್ಳಿರಿಸಿದರು. (ಕ್ರಿ. ವ. ೧೫೮೦) ಆಗ ಈತನು ಒಂಭತ್ತು ವರ್ಷದ ಹುಡುಗನಿದ್ದುದರಿಂದ ಇವನ ದೊಡ್ಡಪ್ಪನಾದ **ಚಾಂದಬೀಬಿಯು ಕಾಮಿಲಖಾನ**ನೆಂಬ ವಜೀರನ ನೆರವಿನಿಂದ ರಾಜ್ಯಕಾರಭಾರವನ್ನು ಮಾಡಹತ್ತಿದಳು. **ಚಾಂದಬೀಬಿಯು** ಶೂರಳೂ ನ್ಯಾಯ, ನೀತಿಗಳಲ್ಲಿ ದಕ್ಷಳೂ ಆಗಿದ್ದಳು. ಆದರೆ ಕಾಮಿಲಖಾನನು ದುಷ್ಟಬುದ್ಧಿಯಿಂದ ಈ ರಾಜ್ಯವನ್ನೇ ನುಂಗಬೇಕೆಂದು ಹವಣಿಸಿದನು. ಆದ್ದರಿಂದ ಅವನನ್ನು ಸೆರೆಮನೆಯಲ್ಲಿಟ್ಟು, ಚಾಂದಬೀಬಿಯು **ಕಿಶ್ವರಖಾನ**ನೆಂಬ ಮಂತ್ರಿಯ ಕಡೆಗೆ ರಾಜ್ಯಕಾರಭಾರವನ್ನೆಲ್ಲ ಒಪ್ಪಿಸಿದಳು. ಇವನೂ ಸಹ ಮಹಾ ದುಷ್ಟನಾಗಿದ್ದನು. ಇವನು ಸ್ವತಃ ಚಾಂದಬೀಬಿಯನ್ನೇ ಸೆರೆಹಿಡಿದು, ಆಕೆಯನ್ನು **ಸಾತಾರೆಯ** ಕೋಟೆಯಲ್ಲಿಟ್ಟು, ಮನಬಂದಂತೆ ಪ್ರಜೆಗಳನ್ನು ಪೀಡಿಸಹತ್ತಿದನು. ಆಗ ಜನರು ಇವನ ಉಪಟಳವನ್ನು ತಡೆಯಲಾರದೆ ಇವನನ್ನು ಕೊಲ್ಲುವದಕ್ಕೆ ಪ್ರಯತ್ನ ಮಾಡಲು, ಗುಪ್ತರೀತಿಯಿಂದ ಇವನು ಅಹಮ್ಮದನಗರಕ್ಕೆ ಓಡಿಹೋದನು. ಆ ಬಳಿಕ ಪ್ರಜೆಗಳು ಚಾಂದಬೀಬಿಯನ್ನು ಸಾತಾರೆಯ ಸೆರೆಮನೆಯಿಂದ ಬಿಡುಗಡೆಮಾಡಿ, ಆಕೆಯ ಕೈಯಲ್ಲಿ ರಾಜ್ಯದಾಡಳಿತೆಯನ್ನು ಒಪ್ಪಿಸಿದರು. ಇದೇ ವೇಳೆಯಲ್ಲಿ ಅಹಮ್ಮದನಗರದ ನಿಜಾಮಶಹನೂ, ಗೋವಳಕೊಂಡದ ಕುತುಬಶಹನೂ ವಿಜಾಪುರದ ಮೇಲೆ ದಂಡೆತ್ತಿ ಬಂದರು. ಆಗ **ದಿಲಾವರಖಾನ**ನೆಂಬ ಶೂರ ಸರದಾರನೂ **ಅಬ್ದುಲ ಹುಸೇನ**ನೆಂಬುವನೂ ಶತ್ರುಗಳನ್ನು ಹೊಡೆ

ದೋಡಿಸಿ, ವಿಜಾಪುರವನ್ನು ಕಾಪಾಡಿದರು. ಮುಂದೆ ದಿಲಾವರಖಾನನೇ ಈ ಇಬ್ರಾಹೀಮ ಆದಿಲಶಹನ ಮುಖ್ಯ ಪ್ರಧಾನನಾದನು. ಕ್ರಿ-ವ. **೧೫೯೬** ರಲ್ಲಿ ಈ ಆದಿಲಶಹನು, ಗೋವಳಕೊಂಡದ **ಮುಹಮ್ಮದ ಕುತುಬಶಹನ** ಮಗಳನ್ನು ಮದುವೆ ಮಾಡಿಕೊಂಡನು. ಮುಂದೆ **೩೦** ವರ್ಷ ಪ್ರಜೆಗಳಿಗೆ ಹಿತವಾಗುವಂತೆ ರಾಜ್ಯವನ್ನಾಳಿ ಕ್ರಿ. ವ. **೧೬೨೬**ರಲ್ಲಿ ಮರಣ ಹೊಂದಿದನು. ಈ ಇಮ್ಮಡಿ ಇಬ್ರಾಹೀಮ ಆದಿಲಶಹನ ಆಳಿಕೆಯಲ್ಲಿ ಕ್ರಿ. ವ. **೧೫೮೧**ರಲ್ಲಿ **ಕಾಣ್ವ**ಶಾಖೆಯ ಬ್ರಾಹ್ಮಣನಾದ **ಗುತ್ತಳದೇಸಾಯಿ ಹನುಮಂತಗೌಡ**ನು ಶೂರತನವನ್ನು ತೋರಿಸಿ, ಹಾವನೂರ ಸಂಸ್ಥಾನವನ್ನು ಸಂಪಾದಿಸಿದನು. ಇವನೇ **ಅಗಡಿ ದೇಸಾಯರ ಮೂಲಪುರುಷನು.** ಈ ಇಬ್ರಾಹೀಮನ ತರುವಾಯ ಇವನ ಮಗನಾದ **ಮುಹಮ್ಮದ**ನು ಗದ್ದುಗೆಯನ್ನೇರಿದನು. (ಕ್ರಿ. ವ. **೧೬೨೬**)


ಮುಹಮ್ಮದಶಹನು ಬಹಳ ಸೊಗಸುಗಾರನಾದ್ದರಿಂದ ರಾಜ್ಯಕಾರಭಾರವನ್ನೆಲ್ಲ **ಮುರಾರಿರಾಯ**ನೆಂಬ ಮಂತ್ರಿಯ ಕೈಯಲ್ಲಿ ಕೊಟ್ಟು, ತಾನು ಯಾವಾಗಲೂ ಮನೋಹರವಾದ ಕಟ್ಟಡಗಳಿಂದ ವಿಜಾಪುರದ



ಗೋಲ ಗುಮುಟ

ಸೌಂದರ್ಯವನ್ನು ಹೆಚ್ಚಿಸುವದರಲ್ಲಿಯೇ ಇರುತ್ತಿದ್ದನು. ಇವನು ಕಟ್ಟಿಸಿದ **ಗೋಲ ಗುಮುಟ, ಇಬ್ರಾಹಿಮು ರೋಜಾ, ಆಸಾರ ಮಹಾಲು** ಮೊದಲಾದ ಕಟ್ಟಡಗಳು ಹೊಗಳತಕ್ಕಂಥವಾಗಿವೆ. ಇದಲ್ಲದೆ ಪಟ್ಟಣದಲ್ಲಿ ನಳಗಳನ್ನು ಹಾಕಿಸಿ, ನೀರಿನ ಅನುಕೂಲತೆಯನ್ನು ಮಾಡಿದನು. ಅಷ್ಟರಲ್ಲಿ ದಿಲ್ಲಿಯ ಮೊಗಲ ಬಾದಶಹನಾದ **ಶಹಾಜಹಾನನು** ದಕ್ಷಿಣ ಹಿಂದುಸ್ಥಾನಕ್ಕೆ ಬಂದು, ಅಹಮ್ಮದನಗರದ ನಿಜಾಮುಶಾಹಿ ರಾಜ್ಯವನ್ನು ಗೆದ್ದುಕೊಂಡನು. (ಕ್ರಿ. ವ. ೧೬೩೩) ಈ ಬಳಿಕ ವಿಜಾಪುರದ ಆದಿಲಶಾಹಿ ರಾಜ್ಯದ ಮೇಲೆ ಸಾಗಿ ಬಂದನು. ಆಗ ಈ ಮಹಮ್ಮದಶಹನು ಹೆದರಿ ಪ್ರತಿ

ಮಹಮ್ಮದಶಹ
ಕ್ರಿ ವ. ೧೬೨೭-೧೬೫೬



ಇಬ್ರಾಹಿಮು ರೋಜಾ

ವರ್ಷ ೨೦ ಲಕ್ಷ ಹೊನ್ನು ಕಪ್ಪಕೊಡುತ್ತೇನೆಂದು ಆತನ ಸಂಗಡ ಒಪ್ಪಂದವನ್ನು ಮಾಡಿಕೊಂಡನು. (ಕ್ರಿ. ವ. ೧೬೩೬) ಇವನ ಆಳಿಕೆಯಲ್ಲಿ **ಶಹಾಜಿ ಭೋಸಲೆ**ಯೆಂಬ ಮರಾಟ ಸರದಾರನು ಕ್ರಿ. ವ. ೧೬೩೭ರಲ್ಲಿ **ಪುಣೆ, ಸುಪೆ** ಇವೆರಡು ಪರಗಣೆಗಳ ಜಹಾಗೀರನ್ನು ಸಂಪಾದಿಸಿದನು. ಆ ಬಳಿಕ **ಶಹಾಜಿಯು** ದಕ್ಷಿಣ ಕರ್ನಾಟಕಕ್ಕೆ ದಂಡೆತ್ತಿ ಹೋಗಿ, ಅನೇಕ ಜನ ಪಾಳೆಯಗಾರರನ್ನು ಗೆದ್ದು, ಹೊಸ ಪ್ರಾಂತವನ್ನೂ ಹಣವನ್ನೂ ಸಂಪಾದಿಸಿ, ಆದಿಲಶಾಹಿಯು ರಾಜ್ಯವೈಭವವನ್ನು ಬೆಳಸಿದನು. ಆದ್ದರಿಂದ


ಮಹಮ್ಮದ ಆದಿಲಶಹನು, ಶಹಾಜಿಗೆ **ಕೊಲ್ಲಾರ, ಸಿರಾ, ಬೆಂಗಳೂರು, ಹೊಸಕೋಟೆ, ಬಾಳಾಪುರ** ಮುಂತಾದ ಪರಗಣೆಗಳನ್ನು ಉಂಬಳಿ ಹಾಕಿಕೊಟ್ಟನು. ಈ ಶಹನು **೩೦ ವರ್ಷ** ರಾಜ್ಯವಾಳಿದನು.

ಮೈಸೂರ ಅರಸರು


ಇತ್ತ **ಮೈಸೂರ** ಅರಸರು, ವಿಜಯನಗರ ಸಾಮ್ರಾಜ್ಯವು ನಷ್ಟವಾದ ಮೇಲೆ ಸ್ವತಂತ್ರರಾದರು. ಅವರಲ್ಲಿಯೂ **ರಾಜಒಡೆಯರು** ಕ್ರಿ. ವ. **೧೫೭೮**ರಲ್ಲಿ ಸಿಂಹಾಸನವನ್ನೇರಿ ಅನೇಕ ಸ್ಥಳಗಳನ್ನು ಗೆದ್ದು, ತಮ್ಮ ದೇಶವನ್ನು ಹೆಚ್ಚಿಸಿ, ಧರ್ಮದಿಂದಲೂ ಪ್ರೀತಿಯಿಂದಲೂ ಪ್ರಜೆಗಳನ್ನು ಸಂರಕ್ಷಣೆ ಮಾಡಿ ಹೆಸರಾದರು. ಕ್ರಿ. ವ. **೧೬೧೦**ರಲ್ಲಿ **ಶ್ರೀರಂಗಪಟ್ಟಣ**ದಲ್ಲಿದ್ದ ಚಂದ್ರಗಿರಿಯ ವೆಂಕಟಪತಿರಾಯನ ಸುಭೇದಾರನಾದ ಶ್ರೀರಂಗರಾಯನಿಗೆ **ಬೆನ್ನುಫಣಿ** ಎಂಬ **ರೋಗ**ವುಂಟಾಗಲು, ಆತನು ತನ್ನ ದೇಶಕೋಶಗಳನ್ನೆಲ್ಲ ಈ ರಾಜಒಡೆಯರಿಗೆ ಕೊಟ್ಟು, **ತಲಕಾಡಿಗೆ** ಹೋಗಿ ಮರಣಹೊಂದಿದನು. ಈ ಪ್ರಕಾರ ಶ್ರೀರಂಗಪಟ್ಟಣವು ತಮ್ಮ ಕೈಸೇರಿದ ಕೂಡಲೆ ರಾಜಒಡೆಯರು ಮೈಸೂರನ್ನು ಬಿಟ್ಟು, **ಶ್ರೀರಂಗಪಟ್ಟಣ**ವನ್ನೇ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಮುಂದೆ ಇವರ ಕ್ರಿ. ವ. **೧೬೧೭**ರಲ್ಲಿ ಮರಣಹೊಂದಿದ ಬಳಿಕ ಇವರ ಮಗನ ಮಗನಾದ **ಚಾಮರಾಜಒಡೆಯ**ರಿಗೆ ಪಟ್ಟವಾಯಿತು. ಈ ಚಾಮರಾಜರು **೨೦ ವರ್ಷ** ಚನ್ನಾಗಿ ರಾಜ್ಯವನ್ನಾಳಿ ಕ್ರಿ. ವ. **೧೬೩೭**ರಲ್ಲಿ ತೀರಿಕೊಂಡರು. ಇವರ ಆಳಿಕೆಯಲ್ಲಿ ಹೆಗ್ಗಡ ದೇವನಕೋಟೆ, ಚನ್ನಪಟ್ಟಣ, ನಾಗಮಂಗಲ, ಕಾನಕಾನಹಳ್ಳಿ, ಚನ್ನರಾಯಪಟ್ಟಣ ಈ ಸ್ಥಳಗಳು ಮೈಸೂರು ಸೀಮೆಗೆ ಸೇರಿದವು.

ಅತ್ತ ಮಹಾರಾಷ್ಟ್ರ ದೇಶದಲ್ಲಿ ಮರಾಟ ಸರದಾರನಾದ **ಭೋಸಲೆ** ವಂಶದ **ಶಹಾಜಿ**ರಾಯನಿಗೆ **ಶಿವನೇರಿಕೋಟೆ**ಯಲ್ಲಿ ಕ್ರಿ. ವ. **೧೬೨೭**ನೆಯ **ಎಪ್ರೇಲ ೧೦ನೆಯ ತಾರೀಖಿಗೆ ಜಿಜಾಬಾಯಿ**ಯ ಹೊಟ್ಟೆಯಲ್ಲಿ **ಶಿವಾಜಿ**ಯೆಂಬ ಒಬ್ಬ ಮಗನು ಹುಟ್ಟಿದನು. ಶಹಾಜಿಯು **ದಾದಾಜಿ-ಕೊಂಡದೇವ**ನೆಂಬ ಬ್ರಾಹ್ಮಣನನ್ನು ಶಿವಾಜಿಗೆ ವಿದ್ಯೆಯನ್ನು ಕಲಿಸುವದಕ್ಕೆ

ಮೈಸೂರ ಅರಸರ ವಂಶಾವಳಿಯು.



ಸಾತಾರೆಯ ಛತ್ರಪತಿಯ ವಂಶಾವಳಿಯು.



ನೇಮಿಸಿದನು. ಈ ಕೊಂಡದೇವನು ಶಿವಾಜಿಗೆ ಸೈನ್ಯದ ರಚನೆಯನ್ನು ಮಾಡುವದು, ಗುರಿಯನ್ನು ಹೊಡೆಯುವದು, ಕುದುರೆಯನ್ನೇರುವದು ಮುಂತಾದ ಯುದ್ಧಶಾಸ್ತ್ರವನ್ನು ಕಲಿಸಿದನು. ಹಾಗೂ ಭಾರತ, ರಾಮಾಯಣಗಳಲ್ಲಿದ್ದ ವೀರಚರಿತ್ರಗಳನ್ನು ಹೇಳಿ ಶಿವಾಜಿಯನ್ನು ಹುರಿದುಂಬಿಸಿದನು. ಇದಲ್ಲದೆ

ಶಿವಾಜಿ


ಅಂದಿಗೆ ೭೦ ವರ್ಷಗಳ ಹಿಂದೆ ವಿಜಯನಗರದಂಥ ಬಲಾಢ್ಯವಾದ ಹಿಂದೂ ಸಾಮ್ರಾಜ್ಯವು, ಮುಸಲ್ಮಾನರಿಂದ ಹೇಗೆ ಹಾಳಾಯಿತೆಂಬ ಸಂಗತಿ ಯನ್ನೂ ತಿಳಿಸಿದನು. ಆದುದರಿಂದ ಆ ಚಿಕ್ಕ ವಯಸ್ಸಿನಲ್ಲಿಯೇ ಶಿವಾಜಿಯ ಮನಸ್ಸಿನಲ್ಲಿ, ಮುಸಲ್ಮಾನರನ್ನು ಹಣಿದು, ಹಿಂದೂ ರಾಜ್ಯವನ್ನು ಪುನಃ ನೆಲೆಗೊಳಿಸಬೇಕೆಂಬ ಕೋರಿಕೆ ಯುಂಟಾಯಿತು. ಆ ಕಾಲಕ್ಕೆ ವಿಜಾಪುರದ ಆದಿಲಶಹ, ಗೋವಳಕೊಂಡದ ಕುತುಬಶಹ, ಅಹಮ್ಮದನಗರದ ನಿಜಾಮುಶಹ ಮುಂತಾದ ಮುಸಲ್ಮಾನರ ಅರಸು ಮನೆತನಗಳು ಕಳೆಗುಂದುತ್ತ ನಡೆದದ್ದರಿಂದ ಶಿವಾಜಿಯು ಬಯಕೆಯು ಈಡೇರುವದಕ್ಕೆ ಅನುವು ದೊರೆಯಿತು. ಕ್ರಿ. ಶ. ೧೬೪೭ರಲ್ಲಿ **ದಾದಾಜಿ ಕೊಂಡದೇವನು** ಮರಣಹೊಂದಿದ ಬಳಿಕ ಇಪ್ಪತ್ತು ವರ್ಷ ವಯಸ್ಸಿನ ತರುಣ ಶಿವಾಜಿಯು ಸ್ವತಃ **ಪುಣೆ, ಸುಪೆ** ಇವೆರಡು



ಕುದುರೆಯನ್ನೇರಿದ ಶಿವಾಜಿಯು

ಜಹಾಗೀರುಗಳ ರಾಜ್ಯಕಾರಭಾರವನ್ನು ಮಾಡಲಾರಂಭಿಸಿದನು. ಮತ್ತು **ಮಾವಳೇ** ಜನರನ್ನು ತನ್ನ ಸೈನಿಕರನ್ನಾಗಿ ಮಾಡಿಕೊಂಡು, **ತೋರಣ-ಕೋಟೆ**ಯನ್ನು ಗೆದ್ದುಕೊಂಡನು. (ಕ್ರಿ. ಶ. ೧೬೪೭) ಈ ಕೋಟೆಯಲ್ಲಿ ಶಿವಾಜಿಗೆ ಹೇರಳವಾದ ದ್ರವ್ಯವು ಸಿಕ್ಕಿತು. ಇದರಿಂದ ರಾಜ್ಯಸ್ಥಾಪನೆಯ

ಕಾರ್ಯಕ್ಕೆ ಬಹಳ ಅನುಕೂಲವಾಯಿತು. ಆಗ ಶಿವಾಜಿಯು ವಿಜಾಪುರ ರಾಜ್ಯದೊಳಗಿನ ಅನೇಕ ಕೋಟೆಗಳನ್ನು ಗೆದ್ದುಕೊಂಡನು. ಕೊಂಕಣದಲ್ಲಿ **ರಾಯಗಡ**ವೆಂಬ ಕೋಟೆಯನ್ನು ಚನ್ನಾಗಿ ಕಟ್ಟಿಸಿ, ಅದನ್ನು ತನ್ನ ನೆಲೆವೀಡನ್ನಾಗಿ ಮಾಡಿಕೊಂಡನು. (ಕ್ರಿ. ವ. **೧೬೪೯**) ಮುಂದೆ ಆರು ವರ್ಷಗಳ ವರೆಗೆ ತಾನು ಸಂಪಾದಿಸಿದ ರಾಜ್ಯವನ್ನು ಸ್ಥಿರಪಡಿಸಿದನು. **ಹರಿಹರರಾಯನಿಗೆ ಶ್ರೀವಿದ್ಯಾರಣ್ಯರು** ರಾಜಗುರುಗಳಾಗಿದ್ದಂತೆ **ಈ** ಛತ್ರಪತಿ ಶಿವ**ರಾಯನಿಗೆ ಶ್ರೀರಾಮದಾಸರು** ರಾಜಗುರುಗಳಾಗಿದ್ದರು



ಶ್ರೀರಾಮದಾಸರು

ಕ್ರಿ. ವ. ೧೬೫೫ರ ಮುಂದೆ ಶಿವಾಜಿಯು ಹೊಸ ರಾಜ್ಯವನ್ನು ಸಂಪಾದಿಸುವ ತನ್ನ ಕಾಯಕವನ್ನು ಪುನಃ ನಡಿಸಿದನು. ಆಗ ವಿಜಾಪುರದಲ್ಲಿ ಆಳುತ್ತಿದ್ದ **ಇಮ್ಮಡಿ ಅಲ್ಲೀ ಆದಿಲಶಹ**ನು (ಕ್ರಿ ವ. ೧೬೫೬–೧೬೭೨) **ಅಫಜುಲಖಾನ**ನೆಂಬ ಶೂರ ಸರದಾರನನ್ನು ಶಿವಾಜಿಯನ್ನು ಹಿಡಿದು ತರುವದಕ್ಕೆ ಕಳಿಸಿದನು. **ಈ ಖಾನನ** ಸಂಗಡ ಕಾಳಗ ಮಾಡುವದಕ್ಕೆ ಸಾಮರ್ಥ್ಯವಿಲ್ಲದ್ದರಿಂದ ಶಿವಾಜಿಯು— "ಒಪ್ಪಂದವನ್ನು ಮಾಡಿಕೊಳ್ಳುವದಕ್ಕೆ ಏಕಾಂತದಲ್ಲಿ ತಮ್ಮ ಭೆಟ್ಟಿಗೆ ಬರುತ್ತೇನೆಂ"ದು ಸವಿಮಾತುಗಳಿಂದ **ಖಾನ**ನಿಗೆ ಹೇಳಿ ಕಳಿಸಿ, ಕೈಯಲ್ಲಿ ಹುಲಿಯುಗುರುಗಳನ್ನು ಹಾಕಿಕೊಂಡು ಅಲ್ಲಿಗೆ ಹೋದನು.

ಶಿವಾಜಿಯು ಬಂದ ಕೂಡಲೆ ಸ್ವತಃ **ಖಾನ**ನು ಇವನನ್ನು ಹಿಡಿಯುವದಕ್ಕೆ ಹೋದನು. ಆ ಕೂಡಲೇ ಶಿವಾಜಿಯು ತನ್ನ ಕೈಯೊಳಗಿನ ಹುಲಿಯುಗುರುಗಳನ್ನು ಆ **ಖಾನ**ನ ಹೊಟ್ಟೆಯಲ್ಲಿ ಚುಚ್ಚಿ ಅವನನ್ನು ಕೊಂದು, ಅವನ ದಂಡನ್ನು ಹೊಡೆದೋಡಿಸಿದನು. (ಕ್ರಿ. ವ. **೧೬೫೯**)

ಅಫಜುಲ-

ಖಾನನ ಕೊಲೆ

ಮುಂದೆ ಕ್ರಿ. ವ. **೧೬೬೪**ನೆಯ ಫೇಬ್ರುವಾರಿ ತಿಂಗಳಲ್ಲಿ **ಶಹಾಜಿ**ಯನ್ನು ಶಿವಮೊಗ್ಗಾ ಜಿಲ್ಹೆಯ ಚನ್ನಗಿರಿ ತಾಲೂಕಿನ **ಹೊದಿಗೆರೆ** ಗ್ರಾಮದ

ಪಾಳೆಯಗಾರನು ಕೊಂದನು. ಇದೇ ಗ್ರಾಮದ ಕುದುರೆಯ ಲಾಯದ ಹೊಲದಲ್ಲಿ ಶಹಾಜಿಯ ಶವವನ್ನು ದಹನ ಮಾಡಿದ ಸ್ಥಳದಲ್ಲಿ ಶಿವಾಜಿ ಮಹಾರಾಜನು ಛತ್ರಿಯನ್ನು ಕಟ್ಟಿಸಿ, ಅದಕ್ಕೆ ದಿನಾಲು ನಂದಾದೀಪವು ನಡೆಯುವಂತೆ ಹತ್ತರವೇ ಇದ್ದ **ಯರಗಾಟಿನಹಳ್ಳಿ**ಯೆಂಬ ಗ್ರಾಮವನ್ನು ಉಂಬಳಿ ಹಾಕಿ ಕೊಟ್ಟನು. ಶಹಾಜಿಯ ಛತ್ರಿಯನ್ನು ಆ ಗ್ರಾಮದಲ್ಲಿ ಈಗಲೂ ನೋಡಬಹುದು. ತಂದೆಯು ಮರಣ ಹೊಂದಿದ ನಂತರ

ಶಿವಾಜಿಯ ರಾಜ್ಯಾಭಿಷೇಕ

ಶಿವಾಜಿಯು ತಾನು ಸ್ವತಂತ್ರ ರಾಜನೆಂದು ಡಂಗುರವನ್ನು ಹೊಡಿಸಿ, ಟಂಕಶಾಲೆಯನ್ನು ಏರ್ಪಡಿಸಿ, ತನ್ನ ಹೆಸರಿನ ನಾಣ್ಯಗಳನ್ನು ಮುದ್ರಿಸಿದನು. (ಕ್ರಿ ವ. ೧೬೬೪) ಆ ಬಳಿಕ ಕ್ರಿ. ವ. ೧೬೭೦ಗಲ್ಲಿ **ಸುರತ** ಪಟ್ಟಣವನ್ನೂ ಕ್ರಿ. ವ. **೧೬೭೩**ರಲ್ಲಿ **ಹುಬ್ಬಳ್ಳಿ** ಪಟ್ಟಣವನ್ನೂ ಸುಲಿದು, ವಿಪುಲವಾದ ದ್ರವ್ಯವನ್ನು ಸಂಪಾದಿಸಿದನು. ಮುಂದೆ ಕ್ರಿ. ವ. **೧೬೭೪**ರಲ್ಲಿ **ರಾಜ್ಯಾಭಿಷೇಕ**ವನ್ನು ಮಾಡಿಸಿಕೊಂಡನು. ತರುವಾಯ ಕ್ರಿ. ವ. ೧೬೭೭ರಲ್ಲಿ **ತಂಜಾವರ**ದಲ್ಲಿದ್ದ ಮಲತಮ್ಮನಾದ **ವೆಂಕೋಜಿ**ಯ ಕಡೆಗೆ ಹೋಗಿ, ಅವನ ರಾಜ್ಯದಲ್ಲಿ ಪಾಲನ್ನು ತೆಗೆದುಕೊಂಡು, ಸ್ವದೇಶ ಕಡೆಗೆ ಹೊರಳಿದನು.

ಶಿವಾಜಿಯು ಬರುವಾಗ್ಗೆ ಮಾರ್ಗದಲ್ಲಿ ಧಾರವಾಡದ ಉತ್ತರಕ್ಕೆ ೧೮ ಮೈಲುಗಳ ಮೇಲೆ ಇರುವ **ಬೆಳವಡಿ** ಗ್ರಾಮದ ಹತ್ತರ ದೊಡ್ಡ ಸೈನ್ಯದೊಡನೆ ಬಂದು ಇಳಿದನು. ಈ ಬೆಳವಡಿಯಲ್ಲಿ **ಈಶಪ್ರಭು ದೇಸಾಯಿ** ಎಂಬ ಸಂಸ್ಥಾನಿಕನಿದ್ದನು. ಈತನು **ವೀರಶೈವ** ಮತದವನಾಗಿದ್ದನು. ಶಿವಾಜಿಯ ದಂಡಾಳುಗಳು ಕೆಲವರು **ಬೆಳವಡಿ** ಊರೊಳಗೆ ಹೊಕ್ಕು, ತಮ್ಮ ದರ್ಪವನ್ನು ತೋರಿಸಲಿಕ್ಕೆ ಹೋದರು. ಆಗ ಈಶಪ್ರಭುವಿನ ದಂಡಾಳುಗಳು, ಆ ಶಿವಾಜಿಯ ಸೈನಿಕರಲ್ಲಿ ಕೆಲವರನ್ನು ಹೊಡೆದು ಕೊಂದರು. ಈ ಸಂಗತಿಯು ಶಿವಾಜಿಗೆ ತಿಳಿದ ಕೂಡಲೆ ಅವನು, ೩೦ ಸಾವಿರ ರಾವುತರಿಂದಲೂ ೪೦ ಸಾವಿರ ಕಾಲಾಳುಗಳಿಂದಲೂ ಕೂಡಿದಂಥ ತನ್ನ ಸೈನ್ಯದೊಡನೆ ಹೋಗಿ, **ಬೆಳವಡಿ ಕೋಟೆ**ಗೆ ಮುತ್ತಿಗೆಯನ್ನು

ಚೆಳವಡಿ ಮಲ್ಲವ್ವ

ಹಾಕಿದನು- ಆಗ ಈಶಪ್ರಭುವು ಎಳ್ಳಷ್ಟಾದರೂ ಹೆದರದೆ, ಕೋಟೆಯ ಬಾಗಿಲುಗಳನ್ನು ಇಕ್ಕಿಸಿ, ಯುದ್ಧಕ್ಕೆ ಸಿದ್ಧನಾದನು. ಕೆಲವು ದಿವಸಗಳ ವರೆಗೆ ಮುತ್ತಿಗೆಯು ಹಾಗೆಯೇ ಇದ್ದಿತು. ಆ ಕಾಲಕ್ಕೆ ಶಿವಾಜಿಯ ಸೇನಾಪತಿಯಾದ **ದಾದಾಜಿ ರಘುನಾಥ ಮಹಾಡ**ಕರ ಎಂಬುವನು, ಕಪಟದಿಂದ ಕೋಟೆಯೊಳಗಿನ ಮನೆಗಳಿಗೆ ಒಮ್ಮಿಂದೊಮ್ಮೆ ಬೆಂಕಿಯನ್ನು ಹಚ್ಚಿಸಿದನು. ಆಗ ಕೋಟೆಯೊಳಗಿನ ದಂಡಾಳುಗಳು ಆ ಬೆಂಕಿಯನ್ನು ನಂದಿಸುವದಕ್ಕೆ ತೊಡಗಿದರು. ಆ ಸಂಧಿಯನ್ನು ಸಾಧಿಸಿ, ಶಿವಾಜಿಯ ಸೈನಿಕರು ಕೋಟೆಗೆ ಲಗ್ಗೆ ಏರಿ ಒಳಗೆ ನುಗ್ಗಿದರು. ಕೂಡಲೇ ಶಿವಾಜಿಯ ದಂಡಾಳುಗಳಿಗೂ ಈಶಪ್ರಭುವಿನ ಸೈನಿಕರಿಗೂ ಕೈಗೆ ಕೈಹತ್ತಿ ಕಾಳಗವೆಸಗಿತು. ಈ ತುಮುಲ ಯುದ್ಧದಲ್ಲಿ ಯುದ್ಧಮಾಡುತ್ತ ಮಾಡುತ್ತ ಈಶಪ್ರಭುವು ಮರಣ ಹೊಂದಿದನು. ತಮ್ಮ ಒಡೆಯನು ಮಡಿದ ಕೂಡಲೇ ಆ ಈಶಪ್ರಭುವಿನ ದಂಡಾಳುಗಳು ದಿಕ್ಕುಪಾಲಾಗಿ ಓಡಲಾರಂಭಿಸಿದರು. ಈ ಸ್ಥಿತಿಯನ್ನು ನೋಡಿದಾಕ್ಷಣವೇ ಈಶಪ್ರಭುವಿನ ಹೆಂಡತಿಯಾದ **ಮಲ್ಲವ್ವಾಬಾಯಿ**ಯು, ಪತಿಯ ಮರಣದಿಂದುಂಟಾದ ದುಃಖವನ್ನು ನುಂಗಿಕೊಂಡು, ಮಹಾ ವೀರಾವೇಶವನ್ನು ತಾಳಿ, ದುರ್ಗಾದೇವಿಯಂತೆ ಬೇಗನೆ ರಣಭೂಮಿಗೆ ಬಂದು, ಆ ಗಂಡನ ಖಡ್ಗವನ್ನು ಕೈಯಲ್ಲಿ ತೆಗೆದುಕೊಂಡು, ಅದೇ ಕುದುರೆಯನ್ನೇರಿ, ಓಡಿಹೋಗುತ್ತಿದ್ದ ತನ್ನ ದಂಡಾಳುಗಳನ್ನು ಕುರಿತು ಗದ್ದರಿಸಿದಳು! ಆಗ ಆ ಸೈನಿಕರೆಲ್ಲರೂ ತಮ್ಮ ರಾಣಿಯ ರೋಷಾವೇಶದ ಧ್ವನಿಯನ್ನು ಕೇಳಿದಾಕ್ಷಣವೇ ಎಲ್ಲರೂ ಹುರಿದುಂಬಿ, ಓಡಿ ಬಂದು ಯುದ್ಧಕ್ಕೆ ಅಣಿಯಾದರು. ಆ ಕಾಲಕ್ಕೆ ಈ ವೀರ ಸ್ತ್ರೀಯು ಅತ್ಯಂತ ಶೂರತನದಿಂದ ಯುದ್ಧಮಾಡಿ, ಶಿವಾಜಿಯ ಸೈನ್ಯವನ್ನೆಲ್ಲ ಸಂಹರಿಸಿ, ಅವನನ್ನು ಸೋಲಿಸಿ, ಕೋಟೆಯಿಂದ ಹೊರಗೆ ಅಟ್ಟಿದಳು!! ಬಳಿಕ ಕೋಟೆಯ ಬಾಗಿಲನ್ನು ಇಕ್ಕಿಸಿ, ಎಲ್ಲ ಕಡೆಗೂ ಭದ್ರತೆಯನ್ನು ಮಾಡಿಕೊಂಡಳು. ಹಾಗೂ ಗಂಡನ ಉತ್ತರ ಕ್ರಿಯೆಗಳನ್ನು ಮಾಡಿದಳು.

ಮಲ್ಲವ್ವನ ಶೌರ್ಯ

ಈ ಪ್ರಕಾರ ತಾನು ಸ್ತ್ರೀಯಳಿಂದ ಸೋಲಿಸಲ್ಪಟ್ಟಿದ್ದರಿಂದ ಶಿವಾಜಿಯು ಬಹಳ ನೊಂದುಕೊಂಡನು. ಆದುದರಿಂದ ಅವನು ಈ ಬೆಳವಡಿಯ ಕೋಟೆಯನ್ನು ಕೈವಶಮಾಡಿಕೊಳ್ಳದೆ, ಮುಂದಕ್ಕೆ ಸಾಗುವದಿಲ್ಲೆಂದು ಪ್ರತಿಜ್ಞೆಯನ್ನು ಮಾಡಿ, ಹೊಸ ಸೈನ್ಯವನ್ನು ತರಿಸಿ, ಈ ಕೋಟೆಯ ಮುತ್ತಿಗೆಯನ್ನು ಸ್ಥಿರಪಡಿಸಿದನು. ಮುಂದೆ ಶಿವಾಜಿಗೂ ಮಲ್ಲವ್ವಬಾಯಿಗೂ ಎಡೆಬಿಡದೆ ೨೭ ದಿವಸಗಳವರೆಗೆ ಯುದ್ಧವು ನಡೆಯಿತು. ಮಲ್ಲವ್ವಬಾಯಿಯು ಬಹಳ ಕಲಿತನದಿಂದ ಕಾದಿದಳು! ಆದ್ದರಿಂದ ಶಿವಾಜಿಯು ೨೭ ದಿವಸ ಹೋರಾಡಿದರೂ ಅವನಿಗೆ ಬೆಳವಡಿ ಕೋಟೆಯನ್ನು ಕೈವಶಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಆದರೆ ಅಷ್ಟರಲ್ಲಿ ಇತ್ತ ಕೋಟೆಯೊಳಗಿನ ಅನ್ನಸಾಮಗ್ರಿಯು ತೀರಿಹೋಯಿತು; ಹಾಗೂ ಮದ್ದು ಗುಂಡುಗಳೂ ತೀರಿದವು. ಆದರೂ ಈ ವೀರಸ್ತ್ರೀಯು ಎದೆಗುಂದಲಿಲ್ಲ. ಕೂಡಲೇ ತನ್ನ ಸೈನಿಕರನ್ನು ಕರೆದು,



ಮಲ್ಲವ್ವಬಾಯಿಯು ಶಿವಾಜಿಯೊಡನೆ ವೀರತನದಿಂದ ಕಾದುತ್ತಿದ್ದಾಳೆ

“ಇನ್ನು ಮೇಲೆ ಇಲ್ಲಿ ನಿಂತು ಯುದ್ಧ ಮಾಡುವದು ಶಕ್ಯವಿಲ್ಲ. ನಾವು ಉಪವಾಸದಿಂದ ಬೆಂದು ಬೆಂಡಾಗಿ ಶತ್ರುಗಳ ಕೈಗೆ ಸಿಗುವದಕ್ಕಿಂತ ಕೋಟೆಯ ಬಾಗಿಲನ್ನು ತೆರೆದು, ಆ ಶತ್ರುಗಳ ಸಂಗಡ ಹೋರಾಡಿ, ರಣಭೂಮಿಯಲ್ಲಿ ಮಡಿದು, ವೀರಸ್ವರ್ಗವನ್ನು ಹೊಂದುವದೇ ಉತ್ತಮ ಮಾರ್ಗವೆಂ”ದು ಅವರಿಗೆ ಉಪದೇಶ ಮಾಡಿದಳು. ಅದೇ ಪ್ರಕಾರ ಅವರೂ ಸಿದ್ಧರಾದರು. ಕೂಡಲೆ ಆ ವೀರ ಅಬಲೆಯು ತನ್ನ ದಂಡಾಳುಗಳನ್ನು ಕರೆದುಕೊಂಡು, ಕೋಟೆಯ ಬಾಗಿಲನ್ನು ತೆರೆದು, ಶಿವಾಜಿಯ ಸೇನಾ ಸಮುದ್ರದ ಮೇಲೆ ಪಕ್ಕನೆ ಎರಗಿದಳು! ಮತ್ತು ಜೀವದ ಹಂಗು ದೊರೆದು, ಭಯಂಕರವಾದ ರೋಷಾವೇಶದಿಂದ ಯುದ್ಧಮಾಡಿ, ಶಿವಾಜಿಯ ದಂಡಾಳುಗಳನ್ನು ಎಷ್ಟೋ ಸಾರೆ ಹಿಮ್ಮೆಟ್ಟಿಸಿದಳು; ಎಷ್ಟೋ ಜನರನ್ನು ಸಂಹರಿಸಿದಳು. ಈ ರೀತಿ ಇಡಿ ದಿವಸ ಅತ್ಯಂತ ತುಮುಲ ಯುದ್ಧವನ್ನು ಮಾಡಿದಳು. ಆದ್ದರಿಂದ ಆಕೆಯ ಅತ್ಯಲ್ಪ ಸೈನ್ಯವನ್ನು ಸಹ ಸೋಲಿಸುವದು ಶಿವಾಜಿಗೆ ಸಾಧ್ಯವಾಗಲಿಲ್ಲ. ಕೊನೆಗೆ ಆಕೆಯ ಶೂರ ಸೈನಿಕರಲ್ಲಿ ಕೆಲವರು ಮರಣ ಹೊಂದಿದರು. ಶಿವಾಜಿಯ ಸೇನಾಪತಿಯು, ಆಕೆಯ ಕುದುರೆಯ ಹಿಂದೆ ಹೋಗಿ, ಅದರ ಹಿಂಗಾಲನ್ನು ಕಡಿದನು. ಆಗ ಮಲ್ಲವ್ವನು ತಟ್ಟನೆ ಕೆಳಗೆ ಹಾರಿ ಯುದ್ಧಮಾಡಲಾರಂಭಿಸಿದಳು. ಈ ಹೋರಾಟದಲ್ಲಿ ಆಕೆಯ ಕೈಗೆ ದೊಡ್ಡ ಗಾಯವಾಗಿ ಎಚ್ಚರದಪ್ಪಿ ಕೆಳಗೆ ಬಿದ್ದಳು. ಅಂಥ ಸ್ಥಿತಿಯಲ್ಲಿಯೇ ಆ ಕ್ಷಣವೇ ಶಿವಾಜಿಯ ಸೇನಾಪತಿಯು ಆಕೆಯನ್ನು ಮೇಣೆಯಲ್ಲಿ ಹಾಕಿಸಿ, ಹೊರಿಸಿಕೊಂಡು, ಶಿವಾಜಿಯ ಹತ್ತರ ಒಯ್ದನು. ಆಗ ಆಕೆಯ ನೆತ್ತಿಗೆ ನೀರು ತಟ್ಟಿ, ಸ್ವಲ್ಪ ಗಾಳಿಯನ್ನು ಬೀಸಿದ ಬಳಿಕ ಎಚ್ಚತ್ತಳು.

ಹುಡಿಯಲ್ಲಿ ಮುಳುಗಿದ ಮತ್ತು ರಕ್ತದಿಂದ ನೆನೆದ ಆ ವೀರಾಂಗನೆಯನ್ನು ನೋಡಿದ ಕೂಡಲೆ ಶಿವಾಜಿಯ ಮನಸ್ಸು ಕರಗಿತು. ಅವನು ಆಕೆಯ ವಿಷಯವಾಗಿ ಅತ್ಯಂತ ಪೂಜ್ಯಭಾವವನ್ನು ತಾಳಿ, ಆ ಮಹನೀಯಳನ್ನು ಕುರಿತು :-“ ನೀವು ನನ್ನ ಶತ್ರುಗಳಾಗಿದ್ದರೂ ನಿಮ್ಮ ಶೂರತನವನ್ನು ನೋಡಿ, ನಾನು ಅತಿಶಯ ಆಶ್ಚರ್ಯಚಕಿತನಾಗಿರುತ್ತೇನೆ.” ಎಂದು ಬಹಳ

ರೀತಿಯಿಂದ ಆಕೆಯನ್ನು ಹೊಗಳಿ, ಆಕೆಯ ದೇಶಗತಿಯ ಗ್ರಾಮುಗಳೊಳಗಿನ ಎರಡು ಗ್ರಾಮುಗಳನ್ನು ಆ ವೀರ ಅಬಲೆಗೆ ಉಂಬಳಿಯಾಗಿ ಬಿಟ್ಟದ್ದಲ್ಲದೆ ಉಡುಗರೆಗಳನ್ನು ಕೊಟ್ಟು, ಯೋಗ್ಯ ಮರ್ಯಾದೆಯಿಂದ ಆಕೆಯನ್ನು ಬೆಳವಡಿಗೆ ಕಳುಹಿಸಿ ಕೊಟ್ಟನು. (ಕ್ರಿ. ವ. ೧೬೭೮).

ಶಿವಾಜಿಯು ದೊಡ್ಡ ಮನಸ್ಸು

ಶಿವಾಜಿಯು ಮುಂದೆ ಬಹಳ ದಿವಸ ಬದುಕಲಿಲ್ಲ. ಎರಡೇ ವರ್ಷಗಳಲ್ಲಿ ಎಂದರೆ ಕ್ರಿ. ವ. ೧೬೮೦ರಲ್ಲಿ ರಾಯಗಡದಲ್ಲಿ ಮರಣ ಹೊಂದಿದನು. ಈ ಮಹಾಪುರುಷನು ಮುಸಲ್ಮಾನರ ಹಾವಳಿಯಿಂದ ಹಿಂದೂ ಧರ್ಮವನ್ನು ಕಾಪಾಡಿ, "**ಗೋ-ಬ್ರಾಹ್ಮಣ-ಪ್ರತಿಪಾಲಕ**" ಎಂಬ ಬಿರುದನ್ನು ಪಡೆದನು.

ಆದಿಲಶಾಹಿಯು ಹಾಗೂ ಕುತುಬಶಾಹಿಯು ಕೊನೆಯು

ಇತ್ತ ವಿಜಾಪುರದಲ್ಲಿ **ಇಮ್ಮಡಿ ಅಲ್ಲೀ ಆದಿಲಶಹನು** ಕ್ರಿ. ವ. ೧೬೫೬ರಲ್ಲಿ ಸಿಂಹಾಸನವನ್ನೇರಿ ೧೬ ವರ್ಷ ರಾಜ್ಯವನ್ನಾಳಿ, ಕ್ರಿ. ವ. ೧೬೭೨ರಲ್ಲಿ ಮರಣ ಹೊಂದಿದನು. ಇವನು ಕ್ರಿ. ವ. ೧೬೬೦ರಲ್ಲಿ ಧಾರವಾಡದ ಕೋಟೆಯ ಎರಡನೆಯ ಅಗಸೆಯನ್ನು ಹೊಸದಾಗಿ ಕಟ್ಟಿಸಿದನು. ಇವನ ತರುವಾಯ ಮಗನಾದ **ಸಿಕಂದರ ಅಲ್ಲೀ ಆದಿಲಶಹನು** ಪಟ್ಟಕ್ಕೆ ಕುಳಿತನು. ಈ **ಸಿಕಂದರನು ೪ ವರ್ಷದ** ಹುಡುಗನಿದ್ದುದರಿಂದ **ಖವಾಸಖಾನನೆಂಬುವನು** ರಾಜ್ಯ ಕಾರಭಾರವನ್ನು ಮಾಡುತ್ತಿದ್ದನು. ಆಗ ಅರಮನೆಯಲ್ಲಿ ಒಳಜಗಳಗಳುಂಟಾದ್ದರಿಂದ ಶತ್ರುಗಳಿಗೆ ಅನುವು ದೊರೆಯಿತು ಈ ಸುಸಂಧಿಯನ್ನು ನೋಡಿ, ದಿಲ್ಲಿಯ ಮೊಗಲ ಬಾದಶಹನಾದ **ಔರಂಗಜೇಬನು** ವಿಜಾಪುರದ ಮೇಲೆ ದಂಡೆತ್ತಿ ಬಂದು, ಆದಿಲಶಾಹಿಯ ರಾಜ್ಯವನ್ನು ಗೆದ್ದು ಅದನ್ನು ಮೊಗಲ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. (ಕ್ರಿ. ವ. **೧೬೮೬**) ಈ ಸಿಕಂದರನಿಗೆ ಪ್ರತಿವರ್ಷ ಒಂದು ಲಕ್ಷ ರೂಪಾಯಿ ಕೊಡುವದನ್ನು ಗೊತ್ತುಮಾಡಿ, ಅವನನ್ನು **ಔರಂಗಾಬಾದ**ದಲ್ಲಿ ಸೆರೆಯಲ್ಲಿಟ್ಟನು. **೧೯೭ ವರ್ಷಗಳ ವರೆಗೆ ನಡೆದಂಥ ಈ ಆದಿಲಶಾಹಿಯ ರಾಜ್ಯವು ಇಲ್ಲಿಗೆ**

ಸಮಾಪ್ತವಾಯಿತು. ಇದೇ ಪ್ರಕಾರ ಮುಂದಿನ ವರ್ಷವೇ **ಔರಂಗಜೇಬನು**, **ಗೋವಳಕೊಂಡದ ಕುತುಬಶಾಹಿಯ** ರಾಜ್ಯವನ್ನು ಗೆದ್ದು, ಅದನ್ನು **ಮೊಗಲಸಾಮ್ರಾಜ್ಯಕ್ಕೆ** ಸೇರಿಸಿಕೊಂಡನು (ಕ್ರಿ.ವ. ೧೬೮೭).

ಸಂಭಾಜಿಯೂ ಕಲುಷನೂ

ಅತ್ತ ಶಿವಾಜಿಯ ತರುವಾಯ ಆತನ ಹಿರಿಯ ಮಗನಾದ **ಸಂಭಾಜಿಯು** ಪಟ್ಟಕ್ಕೆ ಕುಳಿತನು. (ಕ್ರಿ. ವ. ೧೬೮೧) ಇವನು ತಂದೆಗಿಂತ ಒಂದು ಪಾಲು ಹೆಚ್ಚು ಶೂರನೂ ಧರ್ಮಾಭಿಮಾನಿಯೂ ಆಗಿದ್ದನು. ಆದರೆ ಮುಂದೆ ಇವನು, **ಕಲುಷ**ನೆಂಬ ಕನೋಜ ಬ್ರಾಹ್ಮಣನ ಸಹವಾಸದಿಂದ ದುಷ್ಟ ವ್ಯಸನಗಳಿಗೆ ಗುರಿಯಾಗಿ, ಅವಿವೇಕಿಯೂ ಕ್ರೂರನೂ ಆದನು. ಶಿವಾಜಿಯ ಕಾಲದಲ್ಲಿದ್ದ ಪ್ರಧಾನರಲ್ಲಿ ಕೆಲವರನ್ನು ಹೊರಗೆ ಅಟ್ಟಿದನು; ಕೆಲವರನ್ನು ಆನೆಯ ಕಾಲಿನಿಂದ ತುಳಿಸಿ, ಕ್ರೂರತನದಿಂದ ಕೊಲ್ಲಿಸಿದನು! ಆ **ಕಲುಷ**ನನ್ನು ತನ್ನ ಮುಖ್ಯ ಪ್ರಧಾನನನ್ನಾಗಿ ನೇಮಿಸಿಕೊಂಡು, ಸರ್ವ ಅಧಿಕಾರಗಳನ್ನೂ ಅವನ ಕೈಯಲ್ಲಿ ಕೊಟ್ಟನು. ಸಂಭಾಜಿಯೂ ಕಲುಷನೂ ಕೊಂಕಣದಲ್ಲಿದ್ದ **ಸಂಗಮೇಶ್ವರ**

ಸಂಭಾಜಿಯ ಕೊಲೆ

ಗ್ರಾಮದಲ್ಲಿ ಸರಾಯಿ ಕುಡಿದು ಗುಂಗಿನಲ್ಲಿ ಮಲಗಿಗಲು, **ತಕರೀಬಖಾನ**ನೆಂಬ ಮುಸಲ್ಮಾನ ಅಧಿಕಾರಿಯು ಒಮ್ಮಿಂದೊಮ್ಮೆ ಅಲ್ಲಿಗೆ ಹೋಗಿ, ಅವರಿಬ್ಬರನ್ನು ಹಿಡಿದು, **ತುಳಾಪುರ**ದಲ್ಲಿ ಔರಂಗಜೇಬನ ಪಾಳಯಕ್ಕೆ ತಂದನು. ಆಗ ಔರಂಗಜೇಬನು ಸಂಭಾಜಿಗೆ—"ನೀನು ಮುಸಲ್ಮಾನನಾಗೆಂ"ದು ಹೇಳಿದನು. ಆ ಮಾತಿಗೆ ಸಂಭಾಜಿಯು ಸಿಟ್ಟಿಗೆದ್ದು, ಮುಸಲ್ಮಾನೀ ಧರ್ಮವನ್ನು ಹಳಿದು, ಹೀಗೆ ನುಡಿದನು:— "ನಿಮ್ಮ ಮಗಳನ್ನು ನನಗೆ ಮದುವೆಮಾಡಿ ಕೊಟ್ಟರೆ, ನಾನು ಮುಸಲ್ಮಾನನಾಗುತ್ತೇನೆ." ಈ ಮಾತನ್ನು ಕೇಳಿದ ಕೂಡಲೇ ಔರಂಗಜೇಬನು ಬಹಳ ರೇಗಿ, ಸಂಭಾಜಿಯ ನಾಲಿಗೆಯನ್ನು ಕೊಯಿಸಿ, ಕ್ರೂರತನದಿಂದ ಅವನನ್ನು ಕೊಲ್ಲಿಸಿದನು. (ಕ್ರಿ. ವ. ೧೬೮೯) ಆ ಬಳಿಕ **ರಾಯಗಡ**ವನ್ನು ಕೈವಶಮಾಡಿಕೊಂಡು, ಅಲ್ಲಿದ್ದ ಸಂಭಾಜಿಯ ಹೆಂಡತಿಯಾದ **ಯೇಸೂಬಾಯಿ**ಯನ್ನೂ ಹಾಗೂ ಒಂಭತ್ತು ವರ್ಷದ ಮಗನಾದ **ಶಿವಾಜಿ**ಯನ್ನೂ

ಸೆರೆ ಹಿಡಿದುಕೊಂಡು ದಿಲ್ಲಿಗೆ ಒಯ್ದನು. ಮುಂದೆ ಕ್ರಿ. ವ. ೧೭೦೭ರಲ್ಲಿ ಔರಂಗಜೇಬನು ಸಾಯುವ ವರೆಗೆ ೧೮ ವರ್ಷ ಇವರಿಬ್ಬರೂ ದಿಲ್ಲಿಯಲ್ಲಿ ಸೆರೆಮನೆಯಲ್ಲಿದ್ದರು. ಔರಂಗಜೇಬನು ಈ ಹುಡುಗನನ್ನು ಶಾಹೂ[೧] (ಸಜ್ಜನ) ಎಂದು ಕರೆಯುತ್ತಿದ್ದನು.

ರಾಜಾರಾಮನ ಆಳಿಕೆ

ಸಂಭಾಜಿಯ ಮಲತಮ್ಮನಾದ ರಾಜಾರಾಮನು ರಾಯಗಡ ರಾಜಧಾನಿಯು ಮೊಗಲರ ಕೈಸೇರಿದ್ದನ್ನು ನೋಡಿ, ರಾಮಚಂದ್ರ ನೀಲಕಂಠ **ಅಮಾತ್ಯ, ಸಂತಾಜಿ ಘೋರಪಡೆ, ಧನಾಜಿ ಜಾಧವ** ಮೊದಲಾದ ಶೂರ ಸರದಾರರ ಸಾಹಾಯ್ಯದಿಂದ "ಜಿಂಜಿ"[೨] ಎಂಬಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿಕೊಂಡು, ಶಿವಾಜಿಯಂತೆ ಉತ್ತಮ ರೀತಿಯಿಂದ ರಾಜ್ಯವನ್ನಾಳಹತ್ತಿದನು. ಈತನು ಉತ್ತರ ಕರ್ನಾಟಕದಿಂದ ಖಾನದೇಶದ ಉತ್ತರ ಸೀಮೆಯ ವರೆಗೆ ರಾಜ್ಯವನ್ನು ಆಕ್ರಮಿಸಿದನು. ಆದರೆ ಮುಂದೆ ಕ್ರಿ. ವ ೧೬೯೮ರಲ್ಲಿ ಔರಂಗಜೇಬನ ಸರದಾರನು ಜಿಂಜಿಯನ್ನು ಕೈವಶ ಮಾಡಿಕೊಂಡನು. ಆ ಬಳಿಕ ರಾಜಾರಾಮನು, ಸಾತಾರೆಯಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿ, ಮುಂದೆ ಎರಡೇ ವರ್ಷ ರಾಜ್ಯವನ್ನಾಳಿ, ಕ್ರಿ. ವ. ೧೭೦೦ರಲ್ಲಿ ಮರಣ ಹೊಂದಿದನು.

ರಾಜಾರಾಮನು ಮರಣಹೊಂದಿದ ಬಳಿಕ ಅವನ ಹಿರಿಯ ಮಗನಾದ ಇಮ್ಮಡಿ ಶಿವಾಜಿಯು, ಪಟ್ಟಕ್ಕೆ ಕುಳಿತನು. ಕಾಲಕ್ಕೆ ಇವನು ಹತ್ತು ವರ್ಷದ ಹುಡುಗನಿದ್ದುದರಿಂದ ಈ ಸಂಧಿಯನ್ನು ಸಾಧಿಸಿ,

---

೧. ಫಾರ್ಶಿ ಭಾಷೆಯಲ್ಲಿ 'ಸಭ್ಯ,ವಿತ' ಎಂಬ ಅರ್ಥಕ್ಕೆ 'ಸಾಹೂ' ಎಂಬ ಶಬ್ದವಿದೆಯೇ ಹೊರತು 'ಶಾಹೂ' ಎಂಬ ಶಬ್ದವಿಲ್ಲ. ಸಂಭಾಜಿಯು ತನ್ನ ಮಗನಿಗೆ ತನ್ನ ಅಜ್ಜನ ಹೆಸರಾದ "ಶಹಾಜಿ" ಎಂಬ ಹೆಸರನ್ನು ಇಟ್ಟಿದ್ದನು. ಮಗನನ್ನು ಪ್ರೀತಿಯಿಂದ ಕರೆಯುವಾಗ 'ಶಹಾಜಿ' ಎಂಬುದು, 'ಶಾಹೂ' ಎಂಬ ಸಂಕ್ಷಿಪ್ತ ರೂಪವನ್ನು ಹೊಂದಿತು. ಆದ್ದರಿಂದ ಔರಂಗಜೇಬನು ಈ ಹುಡುಗನಿಗೆ "ಶಾಹೂ" ಎಂಬ ಹೆಸರನಿಟ್ಟಿದ್ದೂ ಸುಳ್ಳು, ಮತ್ತು ಈ ಬಾಲಕನಿಗೆ 'ಶಿವಾಜಿ' ಎಂಬ ಹೆಸರಿದ್ದುದ್ದೂ ಸುಳ್ಳು ಎಂದು ಮಹಾರಾಷ್ಟ್ರ-ಇತಿಹಾಸ-ಸಂಶೋಧಕರಾದ ಕೈ. ಶ್ರೀ. ವಿ. ಕಾ. ರಾಜವಾಡೆ ಇವರಭಿಪ್ರಾಯವಿದೆ.

೨. ಜಿಂಜಿ ಗ್ರಾಮವು ಮದ್ರಾಸ ಇಲಾಖೆಯಲ್ಲಿ ತಂಜಾವರದ ಉತ್ತರಕ್ಕೆ ಇದೆ.

ಸವಣೂರ ನವಾಬ, ಒಂಟಿಮುರಿ ದೇಸಾಯಿ, ಕಿತ್ತೂರ ದೇಸಾಯಿ ಮೊದಲಾದವರು ಸ್ವತಂತ್ರರಾದರು. ಮುಂದೆ ಕ್ರಿ. ವ. ೧೭೦೭ರಲ್ಲಿ ದಿಲ್ಲಿಯಲ್ಲಿ **ಔರಂಗಜೇಬ** ಬಾದಶಹನು ಮರಣಹೊಂದಿದನು. ಆಬಳಿಕ ಅವನ ಮಗನಾದ **ಅಜೀಮುಶಹನು**, ಸಂಭಾಜಿಯ ಮಗನಾದ **ಶಾಹೂ**ನನ್ನು ಸೆರೆಮನೆಯಿಂದ ಬಿಡುಗಡೆ ಮಾಡಿ, ಮಹಾರಾಷ್ಟ್ರ ದೇಶಕ್ಕೆ ಕಳಿಸಿಕೊಟ್ಟನು. ನಂತರ ಶಾಹೂನು ಸಾತಾರೆಗೆ ಬಂದು, ಮರಾಟ ಸರದಾರರ ಬೆಂಬಲದಿಂದ ಇಮ್ಮಡಿ ಶಿವಾಜಿಯನ್ನು ತಳ್ಳಿ, ತಾನು ಸಿಂಹಾಸನವನ್ನೇರಿದನು. (ಕ್ರಿ. ವ. ೧೭೦೮) ಆದರೆ ಇವನು, ಔರಂಗಜೇಬ ಬಾದಶಹನ ಅಂತಃಪುರದಲ್ಲಿ ೧೮ ವರ್ಷ ಚಕ್ಕಂದದಿಂದ **ಬೆಳೆದ**ದ್ದರಿಂದ ಬಹು ಸೋಮಾರಿಯೂ ಪ್ರತಾಪಹೀನನೂ ಆಗಿದ್ದನು. ಆದುದರಿಂದ ಈ **ಶಾಹೂ** ಮಹಾರಾಜನು, **ಬಾಳಾಜಿ ವಿಶ್ವನಾಥ**ನೆಂಬ ಕೊಂಕಣಸ್ಥ ಬ್ರಾಹ್ಮಣನನ್ನು **ಪೇಶವೆ** (ಎಂದರೆ ಮುಖ್ಯ ಪ್ರಧಾನಿ) ಯನ್ನಾಗಿ ಮಾಡಿ, ರಾಜ್ಯದ ಎಲ್ಲ ಅಧಿಕಾರಗಳನ್ನು ಅವನ ಕೈಯಲ್ಲಿ ಕೊಟ್ಟನು. (ಕ್ರಿ. ವ. ೧೭೧೪) ಹಾಗೂ ತಾನು ಚಕ್ಕಂದದಿಂದ ಕಾಲಕಳೆಯ ಹತ್ತಿದನು. ಅಂದಿನಿಂದ **ಪೇಶವೆಯ ಆಳಿಕೆಯು** ಪ್ರಾರಂಭವಾಯಿತು.

ಪೇಶವೆಯ ಆಳಿಕೆಯ ಆರಂಭ

ವಿಜಾಪುರದಲ್ಲಿ **ಸಿಕಂದರ ಆದಿಲಶಹನು**(ಕ್ರಿ.ವ. ೧೬೭೨–೧೬೮೬) ರಾಜ್ಯವನ್ನಾಳುತ್ತಿದ್ದಾಗ **ಕರೀಮುಖಾನನೆಂಬುವನು**, **ಬಂಕಾಪುರ** ಪ್ರಾಂತದ ಅಧಿಪತಿಯಾಗಿದ್ದನು. ಇವನೇ **ಸವಣೂರ ನವಾಬರ ಮೂಲಪುರುಷನು.** ವಿಜಾಪುರದ ಆದಿಲಶಾಹಿಯ ರಾಜ್ಯವು ಮೊಗಲರ ಕೈಸೇರಿದ ಬಳಿಕ ಇವನ ಮಗನಾದ **ಅಬ್ದುಲ ರಾವೂತಖಾನನು** ಔರಂಗಜೇಬನ ದಂಡಿನಲ್ಲಿ ಪ್ರಸಿದ್ಧಿಗೆ ಬಂದುದರಿಂದ ಬಾದಶಹನು ಈ ರಾವೂಫಖಾನನಿಗೆ ಮತ್ತೂ ಕೆಲವು ಪ್ರಾಂತಗಳನ್ನು ಕೊಟ್ಟನು. ಆದ್ದರಿಂದ **ನವಲಗುಂದ, ಹಾವನೂರು, ಶಿರಹಟ್ಟಿ, ಡಂಬಳ** ಈ ನಾಲ್ಕು ಪರಗಣೆಗಳ ದೇಸಾಯಿಯರು ಈ **ಖಾನನಿಗೆ**

ಸವಣೂರ ಸಂಸ್ಥಾನದ ಸ್ಥಾಪನೆಯು

ಅಂಕಿತರಾದರು. (ಕ್ರಿ. ವ. **೧೭೦೦**) ಮುಂದೆ ಈ ರಾವೂಫಖಾನನು ಬಂಕಾಪುರವನ್ನು ಬಿಟ್ಟು, **ಸವಣೂರ**ನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು.

ಮೈಸೂರು ಸಂಸ್ಥಾನದ **ಚಾಮರಾಜ ಒಡೆಯರು**, ಕ್ರಿ. ವ. **೧೬೩೭**ರಲ್ಲಿ ಮರಣಹೊಂದಲು, ರಾಜಒಡೆಯರ ಹಿರಿಯ ಹೆಂಡತಿಯ ಮಗನಾದ **ಇಮ್ಮಡಿ ರಾಜಒಡೆಯ**ರಿಗೆ ಪಟ್ಟವಾ **ಕಂಠೀರವ-ನರಸ** ಯಿತು. ಆದರೆ ಇವರಿಗೂ ದಳವಾಯಿಯಾದ **ರಾಜಒಡೆಯರು** **ವಿಕ್ರಮರಾಯ**ನಿಗೂ ಮನಸ್ತಾಪ ಹುಟ್ಟಿದ್ದರಿಂದ ಆ ದಳವಾಯಿಯು ತುಸು ದಿವಸಗಳಲ್ಲಿಯೇ ಈ ದೊರೆಗಳನ್ನು **ವಿಷಪ್ರಯೋಗ**ದಿಂದ ಕೊಲ್ಲಿಸಿದನು. (ಕ್ರಿ. ವ. ೧೬೩೮) ಬಳಿಕ **ಬಿಟ್ಟಿದ ಚಾಮರಾಜ ಒಡೆಯರ** ಮಗನಾದ **ಕಂಠೀರವನರಸರಾಜ-ಒಡೆಯ**ರಿಗೆ ಪಟ್ಟವನ್ನು ಕಟ್ಟಿದರು. ಈ ಕಂಠೀರವ ನರಸರಾಜ ಒಡೆಯರು, ಬಹಳ ಶೂರರೂ ರಾಜನೀತಿನಿಪುಣರೂ ಆಗಿದ್ದರು. ಹಿಂದಿನಂತೆಯೇ ಆ ದಳವಾಯಿ ವಿಕ್ರಮರಾಯನು, ಈ ಒಡೆಯರ ಮೇಲೆಯೂ ದ್ವೇಷಮಾಡಹತ್ತಿದನು. ಕೂಡಲೇ ಈ ದೊರೆಗಳು ಆ ವಿಕ್ರಮರಾಯನನ್ನು ಕೊಲ್ಲಿಸಿದರು. ಕ್ರಿ. ವ. **೧೬೩೮**ರಲ್ಲಿ ವಿಜಾಪುರದ **ರಣದುಲ್ಲಾ-ಖಾನ**ನೆಂಬ ಸರದಾರನು ೪೦ ಸಾವಿರ ಸೈನ್ಯದೊಡನೆ ಬಂದು, **ಶ್ರೀರಂಗಪಟ್ಟಣ**ದ ಕೋಟೆಗೆ ಮುತ್ತಿಗೆಯನ್ನು ಹಾಕಿದನು. ಆಗ ನರಸರಾಜ ಒಡೆಯರು, ಬಹಳ ಶೂರತನದಿಂದ ಯುದ್ಧವನ್ನು ಮಾಡಿ, ಶತ್ರುಸೈನ್ಯವನ್ನು ಹೊಡೆದೋಡಿಸಿದರು. ಆದ್ದರಿಂದ **ಖಾನ**ನು ಹೆದರಿ, ಒಡೆಯರ ಸಂಗಡ ಒಪ್ಪಂದವನ್ನು ಮಾಡಿಕೊಂಡು ಹೋದನು. ಆ ಮೇಲೆ ಒಡೆಯರು, ಹಳ್ಳಿಪಳ್ಳಿಗಳಲ್ಲಿ ದುಡ್ಡಿನ ಸೊಕ್ಕಿನಿಂದ ಪುಂಡಾಟವನ್ನು ಮಾಡುತ್ತಿದ್ದ ಗೌಡ ಮೊದಲಾದವರ ಹಾವಳಿಯನ್ನು ನಿಲ್ಲಿಸುವದಕ್ಕಾಗಿ, ಅವರ ಬಳಿಯಲ್ಲಿದ್ದ ಹೆಚ್ಚಿನ ಹಣವನ್ನೆಲ್ಲ **ಕಾಣಿಕೆ**ಯೆಂದು ತೆಗೆದುಕೊಂಡರು. ಹಾಗೂ ಆ ಹಣದಿಂದ **ಬೆಂಗಳೂರ** ಪಟ್ಟಣ, **ಮೈಸೂರ** ಪಟ್ಟಣಗಳ ಕೋಟೆಗಳನ್ನು ಭದ್ರಪಡಿಸಿದರು. ಇದಲ್ಲದೆ ಇವರು ಒಂದು ಟಂಕಸಾಲೆ

ಯನ್ನು ಏರ್ಪಡಿಸಿ, ಅಲ್ಲಿ **ಕಂಠೀರವರಾಯ ಹಣ, ಕಂಠೀರವರಾಯ ವರಹ** ಎಂಬ ನಾಣ್ಯಗಳನ್ನು ಮುದ್ರಿಸಿ, ಅವುಗಳನ್ನು ಪ್ರಚಾರದಲ್ಲಿ ತಂದರು. ಈ ದೊರೆಗಳ ಕಾಲದಲ್ಲಿ **ಕುಣಿಗಲು, ಸತ್ಯಮಂಗಲ** ಮುಂತಾದ ಸ್ಥಳಗಳು ಮೈಸೂರು ಸೀಮೆಗೆ ಸೇರಿದವು. ಇವರು ಕ್ರಿ. ಶ. **೧೬೫೯**ರಲ್ಲಿ ಮರಣ ಹೊಂದಿದರು ಆ ಬಳಿಕ ಇವರ ದತ್ತಕ ಮಗನಾದ **ದೊಡ್ಡ ದೇವರಾಜ ಒಡೆಯರು** ಸಿಂಹಾಸನವನ್ನೇರಿ, **೧೩ ವರ್ಷ** ರಾಜ್ಯವನ್ನಾಳಿ ಕ್ರಿ. ಶ. **೧೬೭೨**ರಲ್ಲಿ ತೀರಿಕೊಂಡರು. ಇವರು ತಮ್ಮ ರಾಜ್ಯದ ಮುಖ್ಯ ಮಾರ್ಗಗಳಲ್ಲಿ **ಅನ್ನಸತ್ರ**ಗಳನ್ನಿರಿಸಿ, ಅಲ್ಲಲ್ಲಿ ಜನರು ಇಳಿದುಕೊಳ್ಳುವದಕ್ಕೆ ಕಲ್ಲುಮಂಟಪಗಳನ್ನು ಕಟ್ಟಿಸಿದರು.

ಈ ದೊಡ್ಡ ದೇವರಾಜ ಒಡೆಯರು ಮರಣಹೊಂದಿದ ಬಳಿಕ ಇವರ ದತ್ತಕ ಮಗನಾದ **ಚಿಕ್ಕದೇವರಾಜ ಒಡೆಯರು** ಪಟ್ಟಕ್ಕೆ ಕುಳಿತರು.

ಚಿಕ್ಕದೇವರಾಜ ಒಡೆಯರು

ಮೈಸೂರು ಅರಸರಲ್ಲಿ ಇವರು ಎಲ್ಲರಿಗಿಂತಲೂ ಶ್ರೇಷ್ಠರು. ಇವರ ಕಾಲದಲ್ಲಿ ಈ ಮೈಸೂರು ಸಂಸ್ಥಾನವು ಮೊದಲಿಗಿಂತಲೂ ಪ್ರಬಲವಾದ ಸ್ಥಿತಿಗೆ ಬಂದಿತು. ಈ ಒಡೆಯರು ರಾಜ್ಯಕಾರಭಾರದಲ್ಲಿ ಅನೇಕ ಹೊಸ ಏರ್ಪಾಡುಗಳನ್ನು ಮಾಡಿದರು. ಅಲ್ಲದೆ ಮೊಗಲರ ಸಂಗಡ ಚಾತುರ್ಯದಿಂದ ಸ್ನೇಹವನ್ನು ಬೆಳಸಿ, ತಮ್ಮ ಅಧಿಕಾರವನ್ನು ಭದ್ರಪಡಿಸಿಕೊಂಡರು. ಮತ್ತು ಬೆಂಗಳೂರು, ತುಮಕೂರು, ಚಿಕ್ಕಮಗಳೂರು, ತಿರುಚನಾಪಳ್ಳಿ ಮುಂತಾದ ಸ್ಥಳಗಳನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಿಕೊಂಡರು.

ಈ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಹೊಸದಾಗಿ ಕೆಲವು ಕರಿಗೆಗಳು ಏರ್ಪಟ್ಟವು. ಇದರಿಂದ ರೈತರಿಗೆ ಅಸಮಾಧಾನವುಂಟಾಯಿತು.

ಚಿಕ್ಕದೇವರಾಜರ ರಾಜ್ಯಕಾರಭಾರ

" ಕಾಡು ಭೂಮಿಯನ್ನು ಬಸವಣ್ಣನು ಉಳುತ್ತಾನೆ. ದೇವೇಂದ್ರನು ಮಳೆಯನ್ನು ಕರೆಯುತ್ತಾನೆ. ನೀವು ಕಷ್ಟಪಟ್ಟು, ಬೆಳೆ ಮಾಡಿ, ಇವರಿಗೇತಕ್ಕೆ ಕರಿಗೆಯನ್ನು ಕೊಡಬೇಕು ? " ಎಂದು ಪುಂಡ ಜನರು ರೈತರಿಗೆ ಹೇಳತೊಡಗಿದರು. ಆಗ ಈ ದೊರೆಗಳ ಮಂತ್ರಿಯಾಗಿದ್ದ

ಜೈನರ ವಿಶಾಲಾಕ್ಷ ಪಂಡಿತನು, ಆ ಪುಂಡ ಜನರಲ್ಲಿ ಕೆಲವರನ್ನು ಕೊಲ್ಲಿಸಿದನು. ಇದರಿಂದ ರೈತರು ಹೆದರಿ ಹೊಸ ತೆರಿಗೆಗಳನ್ನು ಕೊಡುತ್ತ ಬಂದರು. ಆದರೆ ಮುಂದೆ ತುಸು ದಿವಸಗಳಲ್ಲಿಯೇ ಮಿಕ್ಕ ಪುಂಡ ಜನರು ಆ ವಿಶಾಲಾಕ್ಷ ಪಂಡಿತನನ್ನು ಹೊಡೆದುಕೊಂದು ಹಾಕಿದರು. ತರುವಾಯ ಚಿಕ್ಕದೇವರಾಜ ಒಡೆಯರು **ತಿರುಮಲ ಆಯ್ಯಂಗಾರ**ನೆಂಬುವನನ್ನು ಮಂತ್ರಿಯನ್ನಾಗಿ ಮಾಡಿಕೊಂಡರು. ಈ ದೊರೆಗಳು ಮೊಗಲ ರಾಜ್ಯಪದ್ಧತಿಯಂತೆ **೧೮ ಕಚೇರಿ**ಗಳನ್ನು ಏರ್ಪ ಡಿಸಿದರು. ಈ ಏರ್ಪಾಡಿನ ಕುರುಹು, ಬೆಂಗಳೂರಲ್ಲಿರುವ **ಅಠರಾ ಕಚೇರಿ**ಯ ರೂಪದಿಂದ ಈಗಲೂ ಕಾಣಿಸುತ್ತದೆ. ಇದಲ್ಲದೆ ಇವರು, ಮೈಸೂರು ದೇಶವನ್ನು **೮೪ ಗಡಿ**ಗಳನ್ನಾಗಿ (ಎಂದರೆ, ಭಾಗಗಳನ್ನಾಗಿ) ವಿಂಗಡಿಸಿ, ಪ್ರತಿಯೊಂದು ಭಾಗದಲ್ಲಿಯೂ ಪೋಲೀಸ ಅಧಿಕಾರಿಗಳನ್ನೂ ಮುಲ್ಕಿ ಅಧಿಕಾರಿಗಳನ್ನೂ ನೇಮಿಸಿದರು. ಈ ಒಡೆಯರು, ಪ್ರತಿದಿನವೂ ಎರಡು ಸಾವಿರ ವರಹಗಳು ಅರಮನೆಯ ಬೊಕ್ಕಸಕ್ಕೆ ಸೇರಿದ ಹೊರತು ಊಟ ಮಾಡುತ್ತಿರಲಿಲ್ಲ. ಹೀಗೆ ಬಹಳ ಹಣವನ್ನು ಕೂಡಿಸಿದ ಕಾರಣ, ಇವರನ್ನು "**ನವಕೋಟಿ ನಾರಾಯಣ**" ಎಂಬುದಾಗಿ ಜನರು ಹೊಗ ಳುತ್ತಿದ್ದರು. ಈ ಚಿಕ್ಕದೇವರಾಜ ಒಡೆಯರೂ ತಿರುಮಲ ಆಯ್ಯಂಗಾರ ಮಂತ್ರಿಯೂ ಕನ್ನಡದಲ್ಲಿ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಇದಲ್ಲದೆ ಈ ಒಡೆಯರು ಅನೇಕ ಕನ್ನಡ ಕವಿಗಳಿಗೆ ಪೋಷಕರಾಗಿದ್ದರು. ಈ ದೊರೆ ಗಳು ಕ್ರಿ. ವ. **೧೭೦೪**ರಲ್ಲಿ ತೀರಿಕೊಂಡರು. ಈ ಚಿಕ್ಕದೇವರಾಜ ಒಡೆ ಯರ ತರುವಾಯ ಪಟ್ಟಕ್ಕೆ ಬಂದ ದೊರೆಗಳು ದುರ್ಬಲರಾಗಿದ್ದುದರಿಂದ ರಾಜ್ಯಾಧಿಕಾರವೆಲ್ಲ ಮೊದಲು ದಳವಾಯಿಗಳ ಕೈಸೇರಿತು; ಬಳಿಕ **ಹೈದ ರಲ್ಲಿ**ಯ ಪಾಲಾಯಿತು. ಚಿಕ್ಕದೇವರಾಜರ ತರುವಾಯ ಅವರ ಮಗ ನಾದ **ಕಂಠೀರವರಾಜರು** ಕ್ರಿ. ವ. ೧೭೦೪ರಲ್ಲಿ ಸಿಂಹಾಸನವನ್ನೇರಿ **೯ ವರ್ಷ** ರಾಜ್ಯವನ್ನಾಳಿ, ಕ್ರಿ. ವ. **೧೭೧೩**ರಲ್ಲಿ ಮರಣಹೊಂದಿದರು. ಇವರು **ಮೂಕ**ರಾಗಿದ್ದರಿಂದ ದಳವಾಯಿಗಳು ಪ್ರಬಲರಾಗುವದಕ್ಕೆ ಅನುವು ದೊರೆಯಿತು.

೧೪ನೆಯ ಪ್ರಕರಣ

ಪೇಶವೆಯುವರು, ಹೈದರ-ಟೀಪೂ ಸುಲತಾನರು, ಇಂಗ್ಲಿಷರು ಆಳಿದರು.

(ಕ್ರಿ. ವ. ೧೭೧೩ ರಿಂದ ೧೮೧೮ರ ವರೆಗೆ)


ಇಂಗ್ಲಿಷರು ಮುಂದೆ ಬಂದರು

ಇತ್ತ ಹಿಂದುಸ್ಥಾನದಲ್ಲಿ ಹಿಂದೂ ಜನರೂ ಮುಸಲ್ಮಾನರೂ ರಾಜ್ಯವನ್ನಾಳುತ್ತಿರಲು, ಅತ್ತ ಇಂಗ್ಲಂಡದಲ್ಲಿ ಕ್ರಿ. ವ. ೧೬೦೦ರಲ್ಲಿ ಇಂಗ್ಲಿಷ ಜನರು "**ಈಸ್ಟ ಇಂಡಿಯಾ**" ಕಂಪನಿಯನ್ನು ಸ್ಥಾಪಿಸಿಕೊಂಡು, **ಎಲಿಜಾಬೇಥ** ರಾಣಿಯಿಂದ ವ್ಯಾಪಾರ ಮಾಡುವ **ಸನ**ದನ್ನು ಸಂಪಾದಿಸಿದರು. ಹಾಗೂ ಹಿಂದುಸ್ಥಾನಕ್ಕೆ ಬಂದು, **ಸುರತ**, **ಖಂಬಾಯತ** ಮುಂತಾದ ಸ್ಥಳಗಳಲ್ಲಿ ಅಂಗಡಿಗಳನ್ನು ಏರ್ಪಡಿಸಿ, ವ್ಯಾಪಾರಮಾಡಹತ್ತಿದರು. (ಕ್ರಿ. ವ. **೧೬೧೪**) ಇವರಿಗಿಂತ ಮೊದಲೇ **ಪೋರ್ತಗೀಜ** ಜನರೂ **ಡಚ್ಚ** ಜನರೂ ವ್ಯಾಪಾರ ಮಾಡುವದಕ್ಕಾಗಿ ಹಿಂದುಸ್ಥಾನಕ್ಕೆ ಬಂದಿದ್ದರು. ಇವರ ನಂತರ **ಫ್ರೆಂಚ** ಜನರೂ ಬಂದರು. ಆದರೆ ಇವರೆಲ್ಲರಿಗಿಂತ ಇಂಗ್ಲಿಷರು ವ್ಯಾಪಾರದಲ್ಲಿ ಮುಂದೆ ಹೋದದ್ದಲ್ಲದೆ, ರಾಜ್ಯಸಂಪಾದನೆಯ ಕಾರ್ಯದಲ್ಲಿಯೂ ಮೆಲ್ಲಮೆಲ್ಲನೆ ಜಯಶಾಲಿಗಳಾಗುತ್ತ ನಡೆದರು.

ಬಾಳಾಜಿ ವಿಶ್ವನಾಥ

ಬಾಳಾಜಿ ವಿಶ್ವನಾಥನು, ಕೊಂಕಣದಲ್ಲಿ **ಶ್ರೀವರ್ಧನ** ಗ್ರಾಮದ **ಕುಲಕರ್ಣಿ**ಯಾಗಿದ್ದನು. ಮುಂದೆ ಇವನು **ದೇಶದ** ಮೇಲೆ ಬಂದು, ಕೆಲವು ವರ್ಷಗಳ ವರೆಗೆ ಮರಾಟರ ರಾಜ್ಯದಲ್ಲಿ ನವಕರಿಯನ್ನು ಮಾಡಿ, **ಸರಸುಭೇದಾರ**ನಾದನು. ಮುಂದೆ ತನ್ನ ಸದ್ಗುಣಗಳಿಂದ ಏರುತ್ತೇರುತ್ತ **ಶಾಹೂ** ರಾಜನ **ಮುಖ್ಯ ಪ್ರಧಾನ**ನಾದನು ಎಂದರೆ **ಪೇಶವೆ**ಯಾದನು. (ಕ್ರಿ. ವ. **೧೭೧೪**) ಇವನೇ **ಪೇಶವೆಯುವರ ಮೂಲ ಪುರುಷನು.** ಇವನು ಮೊಗಲ ರಾಜ್ಯದಲ್ಲಿ **ಚೌಥಾಯಿ** (ಎಂದರೆ ತೆರಿಗೆಯ ನಾಲ್ಕನೆಯ ಪಾಲು), **ಸರದೇಶಮುಖಿ** (ಎಂದರೆ ತೆರಿಗೆಯ

ಪೇಶವೆಯವರ ವಂಶಾವಳಿಯು.



ಹೈದರಾಬಾದ ನಿಜಾಮನ ವಂಶಾವಳಿಯು.

(೧) ನಿಜಾಮುಉಲ್ಮುಲ್ಕ	(ಕ್ರಿ. ಶ. ೧೭೧೩–೧೭೪೮)
(೨) ನಾಸಿರಜಂಗ	(,, ೧೭೪೮–೧೭೫೦)
(೩) ಮುಜಫರಜಂಗ	(,, ೧೭೫೦–೧೭೫೨)
(೪) ಸಲಾಬತಜಂಗ	(,, ೧೭೫೨–೧೭೬೧)
(೫) ನಿಜಾಮ ಅಲ್ಲಿ	(,, ೧೭೬೧–೧೮೦೩)
(೬) ಸಿಕಂದರ ಜಾ ಹಮೀರ	(,, ೧೮೦೩–೧೮೨೮)
(೭) ನಾಸಿರ ಉದ್ದೌಲಾ	(,, ೧೮೨೮–೧೮೫೭)
(೮) ಅಫಜುಲ ಉದ್ದೌಲಾ	(,, ೧೮೫೭–೧೮೬೯)
(೯) ಮೀರ ಮಹಬೂಬ ಅಲ್ಲಿ	(,, ೧೮೬೯–೧೯೧೧)
(೧೦) ಮೀರ ಉಸ್ಮಾನ ಅಲ್ಲಿ (ಈಗಿನ ನಿಜಾಮ ಸಾಹೇಬರು)	(,, ೧೯೧೧ರಲ್ಲಿ ಪಟ್ಟಕ್ಕೆ ಕುಳಿತಿರುತ್ತಾರೆ)

ಹತ್ತನೆಯ ಪಾಲು) ಎಂಬೆರಡು ಉತ್ಪನ್ನದ ಬಾಬುಗಳನ್ನು ಮೊಗಲ ಬಾದಶಹನಿಂದ ಸಂಪಾದಿಸಿದನು. (ಕ್ರಿ. ವ. ೧೭೧೭) ಮತ್ತು **ಶಾಹೂ** ಮಹಾರಾಜನ ತಾಯಿಯಾದ **ಯೇಸೂಬಾಯಿಯನ್ನು** ದಿಲ್ಲಿಯ ಸೆರೆಮನೆಯೊಳಗಿಂದ ಬಿಡಿಸಿ, **ಸಾತಾರೆಗೆ** ಕರೆದುಕೊಂಡು ಬಂದನು. (ಕ್ರಿ. ವ. ೧೭೧೯) ಮರುವರ್ಷವೇ ಕ್ರಿ. ವ. ೧೭೨೦ರಲ್ಲಿ ಮರಣ ಹೊಂದಿದನು. ಬಳಿಕ ಇವನ ಮಗನಾದ **ಹಿರಿಯ ಬಾಜೀರಾಯನು** ಪೇಶವೆ ಆದನು.



ಹಿರಿಯ ಬಾಜೀರಾಯನು

ಹಿರಿಯ ಬಾಜೀರಾಯನು

ಹಿರಿಯ ಬಾಜೀರಾಯನು ಶಾಹೂ ರಾಜನನ್ನು ಹೆಸರಿಗೆ ಮಾತ್ರ ಸಿಂಹಾಸನದ ಮೇಲೆ ಕುಳ್ಳಿರಿಸಿ, ಎಲ್ಲ ರಾಜ್ಯಕಾರಭಾರಗಳನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ಇವನು ಬಹು ರಾಜನೀತಿ ನಿಪುಣನೂ ಶೂರನೂ ಆಗಿದ್ದನು. ಇವನ ಕಾಲದಲ್ಲಿ ಮರಾಟರ ರಾಜ್ಯವು ಬಹಳ ಘನತೆಗೇರಿತು. ಈತನು ತನ್ನ ಕೈಕೆಳಗಿನ ಸರದಾರರ ಶೂರತನವನ್ನು ಹೊಗಳಿ, ಅವರಿಗೆ ಉತ್ತೇಜನವನ್ನು ಕೊಡುತ್ತಿದ್ದನು. ಇವನ ಆಳಿಕೆಯಲ್ಲಿಯೇ **ಶಿಂದೆ, ಹೋಳಕರ, ಗಾಯಕವಾಡ, ವಿಂಚೂರಕರ, ಪವಾರ, ಕದಮ** ಮೊದಲಾದ ಪ್ರಮುಖ ಮರಾಟ ಸರದಾರರು ಮುಂದೆ

ಬಂದರು. ಇವನು ಕ್ರಿ. ವ. ೧೭೨೦ರಿಂದ ೧೭೪೦ರ ವರೆಗೆ ೨೦ ವರ್ಷ ಚೆನ್ನಾಗಿ ರಾಜ್ಯವಾಳಿದನು. ಪುಣೆಯಲ್ಲಿ **ಶನಿವಾರದ ವಾಡೆಯನ್ನು** ಕಟ್ಟಿಸಿದನು.

ನಿಜಾಮು ಉಲ್ಮುಲ್ಕನು

ಔರಂಗಜೇಬನ ಕೈಕೆಳಗೆ ರಾಜನೀತಿಯಲ್ಲಿ ಜಾಣನಾದಂಥ **ನಿಜಾಮುಉಲ್ಮುಲ್ಕನು** ಔರಂಗಜೇಬನು ಮಡಿದ ಬಳಿಕ ದಕ್ಷಿಣ ಹಿಂದುಸ್ಥಾನಕ್ಕೆ ಬಂದು, **ಔರಂಗಾಬಾದದಲ್ಲಿ** ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿದನು. (ಕ್ರಿ. ವ. ೧೭೨೪) ಮುಂದೆ ಇವನ ರಾಜಧಾನಿಯು **ಹೈದರಾಬಾದ** ಪಟ್ಟಣವಾಯಿತು. ಈಗಿನ **ನಿಜಾಮುಸಾಹೇಬರ ಮೂಲ ಪುರುಷನು** ಇವನೇ. ಬಾಜೀರಾಯನು ಕ್ರಿ. ವ. ೧೭೩೮ರಲ್ಲಿ ನಿಜಾಮುಉಲ್ಮುಲ್ಕನನ್ನು **ಭೋಪಾಳ** ಎಂಬಲ್ಲಿ ಪೂರ್ಣವಾಗಿ ಸೋಲಿಸಿ, ಅವನ ಕೆಲವು ಪರಗಣೆಗಳನ್ನು ಕೈವಶ ಮಾಡಿಕೊಂಡನು. ಮುಂದೆ ಕ್ರಿ. ವ. ೧೭೪೦ರಲ್ಲಿ ಬಾಜೀರಾಯನು ಮರಣ ಹೊಂದಿದನು. ಆ ಬಳಿಕ ಇವನ ಮಗನಾದ **ನಾನಾಸಾಹೇಬನು** (ಎಂದರೆ ಬಾಳಾಜಿಯು) **ಪೇಶವೆ**ಯಾದನು.



ನಿಜಾಮು ಉಲ್ಮುಲ್ಕ

ನಾನಾಸಾಹೇಬ

ಈ **ನಾನಾಸಾಹೇಬನ** ಆಳಿಕೆಯಲ್ಲಿ **ಶಾಹೂ** ಮಹಾರಾಜನು ಕ್ರಿ. ವ. ೧೭೪೯ರಲ್ಲಿ ಮರಣ ಹೊಂದಿದನು. ಅವನಿಗೆ ಮಕ್ಕಳಿಲ್ಲದ್ದರಿಂದ **ಕೊಲ್ಹಾಪುರದ ತಾರಾಬಾಯಿಯ** ಮೊಮ್ಮಗನಾದ **ರಾಮರಾಜನನ್ನು ಸಾತಾರೆಯ** ಸಿಂಹಾಸನದ ಮೇಲೆ ಕುಳ್ಳಿರಿಸಿ, ನಾನಾಸಾಹೇಬನು ಸಾತಾರೆಯನ್ನು ಬಿಟ್ಟು, ಪುಣೆಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು, ಸ್ವತಂತ್ರ ರೀತಿಯಿಂದ ರಾಜ್ಯವನ್ನಾಳಹತ್ತಿದನು.

ಇತ್ತ ಮೈಸೂರಲ್ಲಿ **ಕಂಠೀರವ ನರಸರಾಜರ** ತರುವಾಯ ಇವರ ಮಗನಾದ **ದೊಡ್ಡ ಕೃಷ್ಣರಾಜ ಒಡೆಯರು** ಸಿಂಹಾಸನವನ್ನೇರಿದರು.

(ಕ್ರಿ. ವ. ೧೭೧೩) ಆದರೆ ಇವರು ತೀರ ಕೈಲಾಗದವರಿದ್ದುದರಿಂದ ರಾಜ್ಯಾಧಿಕಾರವೆಲ್ಲ **ದಳವಾಯಿಯಾದ ದೇವರಾಜಯ್ಯನ** ಕೈಸೇರಿತು.

ದಳವಾಯಿಗಳ ಆಳಿಕೆ

ಈ ಕೃಷ್ಣರಾಜ ಒಡೆಯರು ಕ್ರಿ. ವ. **೧೭೩೧**ರಲ್ಲಿ ಮರಣ ಹೊಂದಿದರು. ಇವರಿಗೆ ಮಕ್ಕಳಿಲ್ಲದ್ದರಿಂದ **ದಳವಾಯಿ ದೇವರಾಜಯ್ಯನು ಚಾಮರಾಜ**ರೆಂಬುವರನ್ನು ದತ್ತಕ ಮಾಡಿಸಿ, ಅವರಿಗೆ ಪಟ್ಟವನ್ನು ಕಟ್ಟಿ, ತಾನೇ ಎಲ್ಲ ರಾಜ್ಯಕಾರಭಾರವನ್ನು ಮಾಡಹತ್ತಿದನು. ಮೈಸೂರು ರಾಜ್ಯದಲ್ಲಿ ಕ್ರಿ. ವ. **೧೭೦೪**ರಿಂದ **ದಳವಾಯಿಗಳ ಆಳಿಕೆಯು ಪ್ರಾರಂಭ**ವಾಗಿ, **ಈ ೭ನೆಯ ಚಾಮರಾಜ ಒಡೆಯರ** ಕಾಲಕ್ಕೆ ಅದು ಶಿಖರಕ್ಕೆ ಹೋಗಿ ಮುಟ್ಟಿತು. ಆದುದರಿಂದ ಸ್ವಾಭಿಮಾನಿಗಳಾದ ಈ ಚಾಮರಾಜ ಒಡೆಯರು **ದಳವಾಯಿಯಾದ ದೇವರಾಜಯ್ಯ**ನನ್ನೂ ಆತನಿಗೆ ಸಹಾಯಕನಾದ **ಸರ್ವಾಧಿಕಾರಿಯಾದ ನಂಜರಾಜಯ್ಯ**ನನ್ನೂ ಕೆಲಸದಿಂದ ದೂರಮಾಡಿ, ಆ ಕೆಲಸಗಳ ಮೇಲೆ ಬೇರೆ ಜನರನ್ನು ನೇಮಿಸಿಕೊಂಡು, ಸ್ವತಃ ತಾವೇ ಯೋಗ್ಯ ರೀತಿಯಿಂದ ರಾಜ್ಯಕಾರಭಾರವನ್ನು ಮಾಡಲಾರಂಭಿಸಿದರು. ಮುಂದೆ ಎರಡು ವರ್ಷಗಳ ಮೇಲೆ ಈ ದೇವರಾಜಯ್ಯನೂ ನಂಜರಾಜಯ್ಯನೂ ಸೇರಿ, ಈ ಚಾಮರಾಜ ದೊರೆಗಳನ್ನೂ ಅವರ ಕುಟುಂಬದವರನ್ನೂ ಸೆರೆಹಿಡಿಸಿ, **ಕಬ್ಬಾಳ ದುರ್ಗ**ಕ್ಕೆ ಕಳುಹಿಸಿ, ತಾವು ಸ್ವತಂತ್ರರಾದರು. ತುಸು ದಿವಸಗಳಲ್ಲಿಯೇ ಈ ದೊರೆಗಳು ಆ ದುರ್ಗದಲ್ಲಿ ತೀರಿಕೊಂಡರು. (ಕ್ರಿ. ವ. ೧೭೩೪) ಬಳಿಕ ಈ ದಳವಾಯಿಗಳು **ದೊಡ್ಡ ಕೃಷ್ಣರಾಜರ** ಹೆಂಡಂದಿರಾದ **ದೇವರಾಜಮ್ಮಣ್ಣಿ**ಯವರಿಗೆ **ಇಮ್ಮಡಿ ಕೃಷ್ಣರಾಜ ಒಡೆಯರ**ನ್ನು ದತ್ತಕ ಮಗನನ್ನಾಗಿ ಮಾಡಿ, ಎಂದಿನಂತೆ ತಾವೇ ರಾಜ್ಯವನ್ನಾಳಹತ್ತಿದರು. ಕ್ರಿ. ವ. **೧೭೩೯**ರಲ್ಲಿ ನಂಜರಾಜಯ್ಯನು, ಸಾಯುವ ಕಾಲಕ್ಕೆ ತನ್ನಲ್ಲಿದ್ದ ೮ ಲಕ್ಷ ರೂಪಾಯಿಗಳನ್ನು ಸ್ವಾಮಿಭಕ್ತಿಯಿಂದ ಅರಮನೆಗೆ ಒಪ್ಪಿಸಿ ಪ್ರಾಣಬಿಟ್ಟನು. ತರುವಾಯ ಸರ್ವಾಧಿಕಾರಿಯ ಕೆಲಸವನ್ನು ದಳವಾಯಿ ದೇವರಾಜಯ್ಯನ ತಮ್ಮನಾದ **ಕರಾಚೂರಿ ನಂಜರಾಜಯ್ಯನು** ಸ್ವೀಕರಿಸಿದನು. ಆಗ ಈ ಅಣ್ಣತಮ್ಮಂದಿರು ಮೈಸೂರು ರಾಜರೇ ಆಗಿದ್ದರೆಂದು ಹೇಳಬಹುದು. ಈ

ನಂಜರಾಜಯ್ಯನು ಕ್ರಿ. ವ. ೧೭೪೯ರಲ್ಲಿ **ದೇವನಹಳ್ಳಿಗೆ** ಹೈದರನನ್ನು ಜೊತೆಗೆ ಕರೆದುಕೊಂಡು ಹೋಗಿ, ಆ ಸ್ಥಳವನ್ನು ಕೈವಶಮಾಡಿಕೊಂಡನು. ಅಲ್ಲಿ ಹೈದರನು ಶೂರತನದಿಂದ ಹೋರಾಡಿದ್ದರಿಂದ ಅವನನ್ನು **೫೦ ಕುದುರೆ, ೨೦೦ ಕಾಲಾಳುಗಳ** ಮೇಲೆ ಅಧಿಕಾರಿಯನ್ನಾಗಿ ಮಾಡಿದನು. ಇದೇ **ಹೈದರನ ಉದಯಕಾಲವು.**

ಹೈದರ

ಹೈದರನು, ಬೂದಿಕೋಟೆಯಲ್ಲಿ ಕ್ರಿ. ವ. **೧೭೨೦**ರಲ್ಲಿ ಹುಟ್ಟಿದನು. ಈತನ ತಂದೆಯು ಹೆಸರು **ಫತ್ತೇಮುಹಮ್ಮದನು.** ಈ ಫತ್ತೇ ಮುಹಮ್ಮದನಿಗೆ **ಸೀರ್ಯದ ನವಾಬನು ಕೋಲಾರದ ಫೌಜದಾರನ** ಕೆಲಸವನ್ನು ಕೊಟ್ಟು, ಇದಕ್ಕೋಸ್ಕರ ಇವನಿಗೆ **ಈ ಬೂದಿಕೋಟೆ**ಯನ್ನು ಉಂಬಳಿ ಹಾಕಿಕೊಟ್ಟನು. ಮುಂದೆ ಕ್ರಿ. ವ. **೧೭೨೮**ರಲ್ಲಿ ಈ ಫತ್ತೇ ಮುಹಮ್ಮದನು ತೀರಿಕೊಂಡನು. ಆಗ ಇವನ ಹೆಂಡತಿಯು ತನ್ನ ಮಗನಾದ **ಹೈದರನನ್ನು** ಕರೆದುಕೊಂಡು **ಬೆಂಗಳೂರಿಗೆ** ಬಂದಳು. **ಹೈದರನು** ದೊಡ್ಡವನಾದ ಮೇಲೆ ಸೈನ್ಯದಲ್ಲಿ ನೇರಿದನು. ಈ **ಹೈದರನು** ತೋರಿಸಿದ ಶೌರ್ಯಕ್ಕೆ ಮೆಚ್ಚಿ, ನಂಜರಾಜಯ್ಯನು ಇವನನ್ನು **ದಿಂಡಿಗಲ್ಲಿನಲ್ಲಿ ಫೌಜದಾರನನ್ನಾಗಿ** ಮಾಡಿದನು. (ಕ್ರಿ. ವ. ೧೭೫೭) ಅದೇ ವರ್ಷ **ಪೇಶವೆ ನಾನಾಸಾಹೇಬನು** ದಂಡೆತ್ತಿ ಬಂದು, **ಶ್ರೀರಂಗಪಟ್ಟಣಕ್ಕೆ** ಮುತ್ತಿಗೆಯನ್ನು ಹಾಕಿದನು. ಆಗ ನಂಜರಾಜಯ್ಯನು ಹೆದರಿ, ಆತನಿಗೆ ೩೨ ಲಕ್ಷ ರೂಪಾಯಿಗಳನ್ನು ಕೊಡುವದಕ್ಕೆ ಒಪ್ಪಿಕೊಂಡನು. ಆದರೆ ಇಷ್ಟು ಹಣವು ಬೊಕ್ಕಸದಲ್ಲಿ ಇಲ್ಲದ್ದರಿಂದ ೬ ಲಕ್ಷ ರೂಪಾಯಿಗಳ ಮುತ್ತು, ರತ್ನಗಳನ್ನು ಕೊಟ್ಟು, ಉಳಿದ ೨೬ ಲಕ್ಷ ರೂಪಾಯಿಗಳಿಗೆ



ಹೈದರ ಅಲ್ಲಿಯು

ನಾಗಮಂಗಲ ಮುಂತಾದ ೧೩ ಗಡಿಗಳನ್ನು ಭೋಗ್ಯದಡವು ಮಾಡಿಕೊಟ್ಟನು. ಆಗ ನಾನಾಸಾಹೇಬನು ಈ ೧೩ ಗಡಿಗಳನ್ನು ಕಾವಾಡುವ ದಕೋೀಸ್ಕರ ಒಬ್ಬ ಸರದಾರನನ್ನು ನೇಮಿಸಿ ತಿರುಗಿ ಬಂದನು. [illegible] ಬಳಿಕ ಹೈದರನು ತನ್ನ ಸೈನ್ಯದೊಡನೆ ಬಂದು, ಈ ಮರಾಟ ಸರದಾರನನ್ನು ಹೊಡೆದೋಡಿಸಿ, ಈ ೧೩ ಗಡಿಗಳನ್ನು ಪುನಃ ಸ್ವೈವಶ ಮಾಡಿಕೊಂಡನು. ಮುಂದೆ ಕ್ರಿ. ವ ೧೭೫೯ರಲ್ಲಿ ಮರಾಟ ಸರದಾರರು ತಮ್ಮ ಗಡಿಗಳನ್ನು ಪುನಃ ಸ್ವಾಧೀನಪಡಿಸಿಕೊಳ್ಳುವದಕ್ಕಾಗಿ ದಂಡೆತ್ತಿ ಬಂದರು. ಆಗ ಹೈದರನು ಚನ್ನಾಗಿ ಯುದ್ಧಮಾಡಿ ಮರಾಟರನ್ನು ದಣಿಸಿದನು. ಆದರೂ ಕೊನೆಗೆ ೧೬ ಲಕ್ಷ ರೂಪಾಯಿಗಳನ್ನು ಕೊಟ್ಟು, ಮಿಕ್ಕ ೧೬ ಲಕ್ಷ ರೂಪಾಯಿಗಳಿಗೆ ಹೈದರನು ತಾನೇ ಹೊಣೆಯಾದನು. ಆದ್ದರಿಂದ ಈ ೩ ಗಡಿಗಳು ಹೈದರನ ಕೈಸೇರಿದವು. ಮತ್ತು ಆಗ ನಂಜರಾಜಯ್ಯನು ಹೈದರನ ಸಾಹಸಕ್ಕೆ ಮೆಚ್ಚಿ, ಅವನಿಗೆ "**ಬಹಾದ್ದೂರ**" ಎಂಬ ಬಿರುದನ್ನು ಕೊಟ್ಟನು.

ಹೈದರನ ಏಳಿಗೆ

ದೊಡ್ಡ ಕೃಷ್ಣರಾಜ ಒಡೆಯರ ಪಟ್ಟದರಸಿಯರಾದ ದೇವರಾಜಮ್ಮಣ್ಣಿಯವರು, ಹೈದರನು ಬಲಿಷ್ಠನೆಂದು ತಿಳಿದು, **ಖಂಡೇರಾಯನ** ಸಾಹಾಯ್ಯದಿಂದ ಆ ಹೈದರನ ಕೈಯಲ್ಲಿ ಎಲ್ಲ ಅಧಿಕಾರಗಳನ್ನು ಕೊಟ್ಟರು. ಹಾಗೂ ನಂಜರಾಜಯ್ಯನ ಕೈಯೊಳಗಿನ ಅಧಿಕಾರವನ್ನು ತಪ್ಪಿಸಿದರು ಇದರಿಂದ ಹೈದರನ ಏಳಿಗೆಗೆ ಬಹಳೇ ಅನುಕೂಲ ಕಾಲವು ಪ್ರಾಪ್ತವಾಯಿತು. ಆಗ ಹೈದರನು ತನಗೆ ಸಹಾಯಕನಾಗಿದ್ದ ಖಂಡೇರಾಯನನ್ನು ಹಿಡಿದು, ಬೆಂಗಳೂರ ಸೆರೆಮನೆಯಲ್ಲಿಟ್ಟನು. ಇಷ್ಟೇ ಅಲ್ಲ, ಅರಮನೆಯ ವೆಚ್ಚಕ್ಕೆ ೩ ಲಕ್ಷ ವರಹಗಳ ಸೀಮೆಯನ್ನು ಮಾತ್ರ ಬಿಟ್ಟು, ಮಿಕ್ಕ ಸೀಮೆಯನ್ನು ತನ್ನ ವಶಕ್ಕೆ ಇಟ್ಟುಕೊಂಡು, ರಾಜ್ಯಕಾರಭಾರಗಳನ್ನೆಲ್ಲ ಸ್ವತಂತ್ರ ರೀತಿಯಿಂದ ತಾನೇ ಮಾಡಲಾರಂಭಿಸಿದನು. **ಸಾರಾಂಶ**, ಮೈಸೂರು ರಾಜ್ಯಕ್ಕೆ **ಹೈದರನು** ಅರಸನಾದನು. (ಕ್ರಿ. ವ. ೧೭೬೦).

ಹೈದರನು ಕ್ರಿ.ವ. ೧೭೬೧ರಲ್ಲಿ ವೇಶವೆಯ ಸೀರಾ ಪರಗಣೆಯನ್ನು ಕೈವಶಮಾಡಿಕೊಂಡನು. [illegible] ಬಳಿಕ ಹರಪನಹಳ್ಳಿ, ರಾಯದುರ್ಗ,

ಚಿತ್ರದುರ್ಗಗಳ ಪಾಳೆಯಗಾರರಿಂದ ಕಪ್ಪಕಾಣಿಕೆಯ ಹಣವನ್ನು ತೆಗೆದುಕೊಂಡನು. ಈ ಮೇಲೆ ಕ್ರಿ. ವ. **೧೭೬೩**ರಲ್ಲಿ ಇಕ್ಕೇರಿಯ ರಾಜ್ಯದೊಳಗೆ ಪ್ರವೇಶಮಾಡಿ, ಅದರ ರಾಜಧಾನಿಯಾದ **ಬಿದನೂರ**

ಹೈದರನ ಆಳಿಕೆ ಕಡೆಗೆ ದಂಡೆತ್ತಿ ಹೊರಟನು. ಆಗ **ಬಿದನೂರ**ಲ್ಲಿ ಆಳು

ಕ್ರಿ. ವ. ೧೭೬೦-೧೭೬೩ ತ್ತಿದ್ದ **ವೀರಮ್ಮಾಜಿ**ಯು, ಹೈದರನು ತನ್ನ ರಾಜಧಾನಿಯ ಮೇಲೆ ದಂಡೆತ್ತಿ ಬರುತ್ತಾನೆಂಬುದನ್ನು ಕೇಳಿ, ಗಾಬರಿಯಾಗಿ, ಆತನು ಹಿಂದಕ್ಕೆ ಹೋದರೆ ೭೨ ಲಕ್ಷ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳಿ ಕಳುಹಿಸಿದಳು. ಆದರೆ ಹೈದರನು ಈ ಮಾತಿಗೆ ಒಪ್ಪಲಿಲ್ಲ. ಕೂಡಲೇ ವೀರಮ್ಮಾಜಿಯು **ಬಳ್ಳಾಳರಾಯನ ದುರ್ಗ**ಕ್ಕೆ ಓಡಿಹೋದಳು. **ಬಸವಪ್ಪನಾಯಕ**ನ ಕಾಲದಲ್ಲಿ ಸರ್ವಾಧಿಕಾರಿಯಾಗಿದ್ದ **ಲಿಂಗಣ್ಣ**ನೆಂಬುವನು ಹೈದರನ ಕಡೆಗೆ ಸೇರಿಕೊಂಡು, ಆತನ ಸೈನ್ಯವನ್ನು ಕಳ್ಳದಾರಿಯಿಂದ **ಬಿದನೂರ ಕೋಟೆ**ಯೊಳಗೆ ಕರೆದುಕೊಂಡು ಹೋದನು. ಆದರೆ ಪಟ್ಟಣದಲ್ಲಿ ಜನರೇ ಇರಲಿಲ್ಲ. ನಿವಾಸಿಗಳೆಲ್ಲರೂ ತಮ್ಮ ತಮ್ಮ ಮಕ್ಕಳು ಮರಿಗಳು ಸಹಿತವಾಗಿ ಓಡಿಹೋಗಿ ಅಡವಿಯಲ್ಲಿ ಅಡಗಿಕೊಂಡಿದ್ದರು. ಇದಲ್ಲದೆ ವೀರಮ್ಮಾಜಿಯು **ಅರಮನೆಗೆ ಬೆಂಕಿ**ಯನ್ನು ಹಚ್ಚಿಸಿ ಹೋಗಿದ್ದಳು. ಹೈದರನು ಆ ಬೆಂಕಿಯನ್ನು ಆರಿಸಿ, ಪಟ್ಟಣವನ್ನೆಲ್ಲ ಲೂಟಿಮಾಡಿಸಲು, ಸುಮಾರು **ಹನ್ನೆರಡು ಕೋಟಿ ರೂಪಾಯಿ**ಗಳ ವರೆಗೆ ಸಿಕ್ಕಿತು. ಅನಂತರ ಹೈದರನು ಕೆಲವು ಸೈನ್ಯವನ್ನು ಕಳುಹಿಸಿ, **ಮಂಗಳೂರು, ಹೊನ್ನಾವರ** ಮುಂತಾದ ಸ್ಥಳಗಳನ್ನು ಗೆದ್ದುಕೊಂಡು, ಬಳ್ಳಾಳರಾಯನ ದುರ್ಗದಲ್ಲಿದ್ದ ವೀರಮ್ಮಾಜಿಯನ್ನು ಸೆರೆಹಿಡಿಸಿ **ಮದ್ದಗಿರಿ**ಗೆ ಕಳುಹಿಸಿದನು. ಬಳಿಕ ಬಿದನೂರಿಗೆ "**ಹೈದರ ನಗರ**" ವೆಂದು ಹೆಸರನ್ನಿಟ್ಟು, ಅಲ್ಲಿ ಒಂದು ಟಂಕಸಾಲೆಯನ್ನಿಡಿಸಿ, "**ಹೈದರಿ-ವರಹ**" ಎಂಬ ನಾಣ್ಯಗಳನ್ನು ಮಾಡಿಸಿ, ತನ್ನ ರಾಜ್ಯದಲ್ಲೆಲ್ಲ ಅವುಗಳನ್ನು ಉಪಯೋಗಿಸುವಂತೆ ಪ್ರಜೆಗಳಿಗೆ ಕಟ್ಟಪ್ಪಣೆಯನ್ನು ಮಾಡಿದನು.

ಬಿದನೂರು ಕೈಸೇರಿದ ನಂತರ ಹೈದರನು, **ಹೈದರಾಬಾದ**ದ

ನಿಜಾಮನ ಸಂಗಡವೂ **ಮರಾಟಿಗರ** ಸಂಗಡವೂ ಸ್ನೇಹವನ್ನು ಮಾಡಿಕೊಳ್ಳುವದು ಯೋಗ್ಯವೆಂದು ಎಣಿಸಿ, ತನ್ನ ಕಡೆಯ ರಾಯಭಾರಿಗಳನ್ನು ಅಲ್ಲಿಗೆ ಕಳುಹಿಸಿದನು. ಹೈದರಾಬಾದಿನಲ್ಲಿ ಹೈದರನ ಕಾರ್ಯವು ಕೈಗೂಡಿ, ಅಲ್ಲಿಯ ನಿಜಾಮನೊಡನೆ ಸ್ನೇಹವಾಯಿತು. ಆದರೆ ಪುಣೆಯಲ್ಲಿ ನಾನಾಸಾಹೇಬನ ತರುವಾಯ ಪೇಶವೆಯಾಗಿದ್ದ **ಮಾಧವರಾಯನು** ಹೈದರನ ಯಾವ ಮಾತಿಗೂ ಕಿವಿಗೊಡಲಿಲ್ಲ. ಆಗ ಹೈದರನು, ಮರಾಟಿಗರ ಮೇಲೆ ಮೊದಲು ತಾನೇ ದಂಡೆತ್ತಿ ಹೋಗುವದು ಅನುಕೂಲವೆಂದು ಆಲೋಚಿಸಿ, ಸೈನ್ಯವನ್ನು ತೆಗೆದುಕೊಂಡು ಹೊರಟು, **ಸವಣೂರ ನವಾಬನನ್ನು** ಹಣಹಾಕಿ, ಅವನಿಂದ ೨ ಲಕ್ಷ ರೂಪಾಯಿಗಳ ದಂಡವನ್ನು ತೆಗೆದುಕೊಂಡನು. ಮುಂದೆ **ಧಾರವಾಡದ** ವರೆಗೆ ಹೋಗಿ, ಆ ಸ್ಥಳವನ್ನು ಗೆದ್ದುಕೊಂಡು **ಬಿದನೂರಿಗೆ** ಹಿಂದಿರುಗಿದನು.

ಇತ್ತ ಮಹಾರಾಷ್ಟ್ರದಲ್ಲಿ **ಮಾಧವರಾಯನು** ಪೇಶವೆಯ ಪದವನ್ನು ಸ್ವೀಕರಿಸಿದಾಗ್ಗೆ ಆತನು **೧೬ ವರ್ಷದ** ಹುಡುಗನಿದ್ದನು. ಅದುದರಿಂದ ಅವನ ಕಕ್ಕನಾದ **ರಘುನಾಥರಾಯನು ಮಾಧವರಾಯನೂ**, ೨ ವರ್ಷ ರಾಜ್ಯಕಾರಭಾರವನ್ನು ಮಾಡಿದನು.

ಹೈದರನು

ಆ ಮೇಲೆ ಮಾಧವರಾಯನು **ನಾನಾಫಡಣೀಸನ** ಸಾಹಾಯ್ಯದಿಂದ ರಾಜ್ಯವನ್ನಾಳಹತ್ತಿದನು. ನಾನಾಫಡಣೀಸನು ಬಹು ರಾಜನೀತಿನಿಪುಣನಾಗಿದ್ದನು. ಮಾಧವರಾಯನು ಕ್ರಿ. ಶ. **೧೭೬೩**ರಲ್ಲಿ **'ರಾಕ್ಷಸಭುವನ'** ಎಂಬಲ್ಲಿ ನಿಜಾಮನನ್ನು ಸೋಲಿಸಿದನು. ಮುಂದೆ ಕ್ರಿ. ಶ. **೧೭೬೪**ರಲ್ಲಿ ಈ ಮಾಧವರಾಯನು, ಹೈದರನ ಪುಂಡಾಟಿಕೆಯನ್ನು ನಿಲ್ಲಿಸುವದಕ್ಕಾಗಿ ನಾಲ್ವತ್ತು ಸಾವಿರ ಸೈನ್ಯದೊಡನೆ **ಬಿದನೂರ** ಕಡೆಗೆ ಹೊರಟನು. ಆಗ ಹೈದರನು ೩೨ ಲಕ್ಷ ರೂಪಾಯಿಗಳನ್ನು ಕೊಟ್ಟು, ಮಾಧವ-



ರಘುನಾಥರಾಯ (ರಾಘೋಬಾ)

ರಾಯನ ಸಂಗಡ ಒಪ್ಪಂದ ಮಾಡಿಕೊಂಡನು. (ಕ್ರಿ. ವ. ೧೭೬೫) ಮುಂದೆ ೧೭೬೬ರಲ್ಲಿ ಹೈದರನು **ಕಾಲಿಕತ್ತದ** ರಾಜ್ಯವನ್ನು ಗೆದ್ದುಕೊಂಡು ಅದನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡನು. ಇದೇ ವರ್ಷದಲ್ಲಿ **ಇಮ್ಮಡಿ ಕೃಷ್ಣರಾಜ ಒಡೆಯರು** ತೀರಿಹೋದರು. ಆದುದರಿಂದ ಹೈದರನು ಅವರ ಹಿರಿಯ ಮಗನಾದ **ನಂಜರಾಜ ಒಡೆಯರಿಗೆ** ಪಟ್ಟಾಭಿಷೇಕ ಮಾಡಿಸಿದನು. ಆದರೆ ಮರುವರ್ಷ ಕ್ರಿ. ವ. ೧೭೬೭ರಲ್ಲಿ ಹೈದರನು **ಶ್ರೀರಂಗಪಟ್ಟಣಕ್ಕೆ** ಬಂದು, ಅರಮನೆಯಲ್ಲಿದ್ದ ಉತ್ತಮೋತ್ತಮವಾದ ಪದಾರ್ಥಗಳನ್ನೆಲ್ಲ ದೋಚಿಕೊಂಡ, ದೊರೆಗಳ ವೆಚ್ಚಕ್ಕೆ ಬಿಟ್ಟಿದ್ದ ೩ ಲಕ್ಷ ವರಹಗಳ ಸೀಮೆಯನ್ನೂ ಸಹ ತನ್ನ ವಶಕ್ಕೆ ತೆಗೆದುಕೊಂಡು, ಅರಮನೆಯಲ್ಲೆಲ್ಲ ತನ್ನ ಕಡೆಯ ಜನರನ್ನು ನೇಮಿಸಿದನು.

ಹೈದರನ ಏಳಿಗೆಯನ್ನು ನೋಡಿ, **ಪುಣೆಯ ಪೇಶವೆಯೂ ಹೈದರಾಬಾದಿನ ನಿಜಾಮುಅಲ್ಲಿಯೂ** ಇಂಗ್ಲಿಷರೂ ಸೇರಿ, ಈ ಹೈದರನನ್ನು ಚೆನ್ನಾಗಿ ಹೆಣಹಾಕಬೇಕೆಂದು ಗೊತ್ತು ಮಾಡಿದರು.

ಇಂಗ್ಲಿಷರೂ ಹೈದರನೂ

ಆದರೆ ಪೇಶವೆ ಮಾಧವರಾಯನು ತಾನೊಬ್ಬನೇ ಸೈನ್ಯದೊಡನೆ ಹೊರಟು, **ಸೀರಾ** ಪಟ್ಟಣಕ್ಕೆ ಬಂದು, ಅದನ್ನು ಗೆದ್ದುಕೊಂಡು, ಹೈದರನಿಂದ **೩೫ ಲಕ್ಷ** ರೂಪಾಯಿಗಳ ಕಪ್ಪಕಾಣಿಕೆಯನ್ನು ತೆಗೆದುಕೊಂಡು, ಪುಣೆಗೆ ತೆರಳಿದನು. (ಕ್ರಿ. ವ. ೧೭೬೭) ಮಾಧವರಾಯನು ಹೀಗೆ ಹೊರಟುಹೋದ ದಿವಸವೇ ನಿಜಾಮನೂ ಇಂಗ್ಲಿಷರೂ **ಕೋಲಾರದ** ಬಳಿಗೆ ಬಂದು ಸೇರಿದರು. ಹೈದರನು ಉಪಾಯದಿಂದ ನಿಜಾಮನನ್ನು ತನ್ನ ಕಡೆಗೆ ಮಾಡಿಕೊಂಡನು. ಅನಂತರ ಇಬ್ಬರೂ ಸೇರಿ ಇಂಗ್ಲಿಷರ ಮೇಲೆ ಸಾಗಿಹೋದರು! ಆದರೆ ಈ ಯುದ್ಧದಲ್ಲಿ ಇಂಗ್ಲಿಷರಿಗೆ ಜಯವು ದೊರೆಯಿತು. ಇಷ್ಟರಲ್ಲಿಯೇ ಮುಂಬಯಿಯಿಂದ ಹೊರಟಿದ್ದ ಇಂಗ್ಲಿಷರದೊಂದು ಹಡಗುಪಡೆಯು ಹೋಗಿ, ಮೈಸೂರ ರಾಜ್ಯಕ್ಕೆ ಸೇರಿದ **ಮಂಗಳೂರು, ಹೊನ್ನಾವರ** ಮೊದಲಾದ ಸ್ಥಳಗಳನ್ನು ಆಕ್ರಮಿಸಿತು. ಹೈದರನು ಕೂಡಲೆ ಸೈನ್ಯದೊಡನೆ ಹೊರಟು, ಇಂಗ್ಲಿಷರ ದಂಡು ಆಕ್ರಮಿಸಿದ್ದ ಸ್ಥಳಗಳನ್ನು ಪುನಃ

ಕೈವಶಮಾಡಿಕೊಂಡನು. ಈ ಸಮಯದಲ್ಲಿ ಮದ್ರಾಸ ಕಡೆಯಿಂದ ಹೊರಟಿದ್ದ ಇಂಗ್ಲಿಷರ ಸೈನ್ಯವು, ಘಟ್ಟವನ್ನು ಹತ್ತಿ **ಹೊಸಕೋಟೆಯ** ಬಳಿಯಲ್ಲಿ ಬಂದು ಇಳಿಯಿತು. ಈ ವರ್ತಮಾನವನ್ನು ಕೇಳಿ ಹೈದರನು ತನ್ನ ಸೈನ್ಯವನ್ನು ತೆಗೆದುಕೊಂಡು ಹೊರಟು, ಆ **ಕರ್ನಲ್ ವುಡ್ಡನ** ಸೈನ್ಯವನ್ನು ಎರಡು ಸ್ಥಳಗಳಲ್ಲಿ ಸೋಲಿಸಿದನು. ಮತ್ತು **ಸತ್ಯಮಂಗಲ, ಕೋಯಮುತ್ತೂರು** ಮೊದಲಾದ ಸ್ಥಳಗಳನ್ನು ಪಾದಾಕ್ರಾಂತ ಮಾಡಿದನು. ಅಲ್ಲಿಂದ ಹೊರಟು ದಾರಿಯಲ್ಲಿದ್ದ ಊರುಗಳನ್ನೆಲ್ಲ ಲೂಟಿ ಮಾಡಿಸುತ್ತ **ತಂಜಾವೂರ** ಮಾರ್ಗವಾಗಿ **ಮದ್ರಾಸದ** ಮೇಲೆ ಏರಿ ಹೋದನು. ಆಗ ಇಂಗ್ಲಿಷರು ಹೈದರನ ಸಂಗಡ ಒಪ್ಪಂದವನ್ನು ಮಾಡಿಕೊಂಡರು. ಏನೆಂದರೆ:— (೧) ಈ ಯುದ್ಧವು ಪ್ರಾರಂಭವಾಗುವದಕ್ಕೆ ಮುಂಚೆ ಇದ್ದಂತೆ ಅವರವರ ಸೀಮೆಗಳು, ಅವರವರಿಗೇ ಇರತಕ್ಕದ್ದು, (೨) ಪರರಾಜರು ಜಗಳಕ್ಕೆ ಕೆಣಕಿದಾದ ಒಬ್ಬರಿಗೊಬ್ಬರು ಸಾಹಾಯ್ಯವನ್ನು ಮಾಡತಕ್ಕದ್ದು. (ಕ್ರಿ. ವ. **೧೭೬೯**).

ಈ ಒಪ್ಪಂದದಿಂದ ತನಗೆ ಬೆಂಬಲವುಂಟಾಯಿತೆಂದು ತಿಳಿದು, ಹೈದರನು ಪೇಶವೆಗೆ ಕೊಡತಕ್ಕ ಕಪ್ಪವನ್ನು ನಿಲ್ಲಿಸಿದನು. ಆದುದರಿಂದ

ತ್ರಿಯಂಬಕ ಮಾಮಾ

ಪೇಶವೆ ಮಾಧವರಾಯನು ಕ್ರಿ. ವ. **೧೭೭೦**ರಲ್ಲಿ ಮೈಸೂರು ಸಂಸ್ಥಾನದ ಮೇಲೆ ದಂಡೆತ್ತಿ ಬಂದನು. ಮತ್ತು **ಕೋಲಾರ, ನಿಜಗಲ್ಲು** ಕೋಟೆಗಳನ್ನು ವಶಮಾಡಿಕೊಂಡನು. ಬಳಿಕ ಮಾಧವರಾಯನಿಗೆ ಜಡ್ಡಾದುದರಿಂದ ದಂಡಿನ ಮುಖ್ಯಾಧಿಕಾರವನ್ನು **ತ್ರಿಯಂಬಕ ಮಾಮಾನಿಗೆ** ವಹಿಸಿ, ಅವನು ಪುಣೆಗೆ ಹೊರಟು ಹೋದನು. ಆ ಮೇಲೆ ತ್ರಿಯಂಬಕ ಮಾಮಾನು ಹೈದರನ ಬೆನ್ನಟ್ಟಿ ಕೊನೆಗೆ ಶ್ರೀರಂಗಪಟ್ಟಣಕ್ಕೆ ಮುತ್ತಿಗೆಯನ್ನು ಹಾಕಿದನು. ಆಗ ಹೈದರನು **೩೦ ಲಕ್ಷ** ರೂಪಾಯಿಗಳನ್ನು ಕೊಟ್ಟಿದ್ದಲ್ಲದೆ ಮುಂದೆ ಪ್ರತಿವರ್ಷ ಪೇಶವೆಗೆ **೧೧ ಲಕ್ಷ** ರೂಪಾಯಿ ಕಪ್ಪ ಕೊಡುತ್ತೇನೆಂದು ಒಪ್ಪಿಕೊಂಡನು. (ಕ್ರಿ. ವ. **೧೭೭೨**)

ಇದೇ ವರ್ಷದಲ್ಲಿ ಮಹಾರಾಷ್ಟ್ರದಲ್ಲಿ ಪೇಶವೆ ಮಾಧವರಾಯನು ಮರಣಹೊಂದಿದನು. ತರುವಾಯ ಅವನ ತಮ್ಮನಾದ **ನಾರಾಯಣ ರಾಯನು** ಪೇಶವೆಯ ಸ್ಥಾನವನ್ನು ಸ್ವೀಕರಿಸಿದನು. ಆದರೆ ಇದು **ರಘುನಾಥರಾಯನ** ಹೆಂಡತಿಯಾದ **ದುಷ್ಟ ಆನಂದಿಬಾಯಿಗೆ** ಸಹನವಾಗಲಿಲ್ಲ. ತನ್ನ ಗಂಡನಿಗೆ ಪೇಶವೆಯ ಸ್ಥಾನವು ದೊರೆಯಬೇಕೆಂಬ ಆಶೆಯಿಂದ ಆಕೆಯು ಈ ನಾರಾಯಣರಾಯನನ್ನು **ಸುಮೇರಸಿಂಗ** ನಿಂದ ಕೊಲ್ಲಿಸಿದಳು! (ಕ್ರಿ. ವ. ೧೭೭೩) **ರಘುನಾಥರಾಯನು** ಪೇಶವೆಯಾದನು. ಆದರೆ **ನಾನಾಫಡಣೀಸ, ಸಖಾರಾಮ ಬಾಪೂ** ಮೊದಲಾದ **ಹನ್ನೆರಡು ಜನ ಪ್ರಮುಖರು** ಸೇರಿ, ರಘುನಾಥ ರಾಯನನ್ನು ಪೇಶವೆಯ ಸ್ಥಾನದಿಂದ ತಳ್ಳಿದರು. ಈ ಕಾಲಕ್ಕೆ ನಾರಾಯಣರಾಯನ ಹೆಂಡತಿಯು ಬಸುರು ಇದ್ದುದರಿಂದ ಈ "**ಬಾರಾಭಾಯಿ**"ಗಳು ಎಂದರೆ **ಹನ್ನೆರಡು ಜನ ಪ್ರಮುಖರು** ತಾವೇ ರಾಜ್ಯಕಾರಭಾರವನ್ನು ನಡಿಸಿದರು. ಅಷ್ಟರಲ್ಲಿ ಆಕೆಯು ಗಂಡು ಮಗನನ್ನು ಹಡೆದಳು. ಈ ಮಗುವಿಗೆ **ಸವಾಯಿ ಮಾಧವರಾಯನೆಂದು** ಹೆಸರಿಟ್ಟು, ಈತನ ಹೆಸರಿನಿಂದ ಅವರು ಆಡಳಿತವನ್ನು ನಡಿಸಿದರು. ಆ ಹನ್ನೆರಡು ಜನರಲ್ಲಿ **ನಾನಾಫಡಣೀಸನೇ** ಪ್ರಮುಖನಾಗಿದ್ದುದರಿಂದ ಮುಂದಿನ ೧೫೨೦ ವರ್ಷಗಳ ರಾಜ್ಯ ದಾಡಳಿತಕ್ಕೆ "**ನಾನಾಫಡಣೀಸನ ಆಳಿಕೆ**" ಯೆಂದು ಕರೆದರೆ ಚೆನ್ನಾಗಿ ಒಪ್ಪುತ್ತದೆ. ಇತ್ತ ರಘುನಾಥರಾಯನು ಪೇಶವೆಯ ಸ್ಥಾನವನ್ನು ಪುನಃ

ಪೇಶವೆಯವರ ಒಳ-ಜಗಳ



ನಾನಾಫಡಣವೀಸನು

ಸಂಪಾದಿಸುವದಕ್ಕೋಸ್ಕರ ಸುರತ ಪಟ್ಟಣಕ್ಕೆ ಹೋಗಿ ಇಂಗ್ಲಿಷರ ಸಾಹಾಯ್ಯವನ್ನು ಕೋರಿದನು. ಆದರೆ ಚತುರನಾದ ನಾನಾಫಡಣೀಸನ ಆಳಿಕೆಯಲ್ಲಿ ಇಂಗ್ಲಿಷರು ಹಿಡಿದ ಈ ಕಾರ್ಯವು ಕೈಗೂಡಲಿಲ್ಲ.

ಇತ್ತ ಹೈದರನು, ಹೊಸ ಹೊಸ ಪ್ರಾಂತಗಳನ್ನು ಆಕ್ರಮಿಸುತ್ತ ನಡೆದನು. ಈತನು ಕ್ರಿ. ವ. ೧೭೭೩ರಲ್ಲಿ ಕೊಡಗು ದೇಶಕ್ಕೆ ನುಗ್ಗಿ, ಅಲ್ಲಿ ೭೦೦ ಜನರನ್ನು ಕೊಂದು, ಆ ಪ್ರಾಂತವನ್ನು ಪಾದಾಕ್ರಾಂತ ಮಾಡಿದನು. ಮತ್ತು ಅಲ್ಲಿಯ ದೊರೆಯನ್ನು ಶ್ರೀರಂಗಪಟ್ಟಣದಲ್ಲಿ ಸೆರೆಯಲ್ಲಿಟ್ಟನು. ಅದೇ ಪ್ರಕಾರ ಬಳ್ಳಾರಿ ಪ್ರಾಂತವನ್ನೂ ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡನು. (ಕ್ರಿ. ವ. ೧೭೭೫) ಆ ಬಳಿಕ ಹೈದರನು ಕ್ರಿ. ವ. ೧೭೭೬ರಲ್ಲಿ ಗುತ್ತೀ ಪ್ರಾಂತಕ್ಕೆ ಹೋಗಿ, ಅದನ್ನೂ ಕೈವಶಮಾಡಿಕೊಂಡನು. ಇದೇ ಮೇರೆಗೆ ಚಿತ್ರದುರ್ಗವನ್ನೂ ಕಡಪೆಯನ್ನೂ ಗೆದ್ದು, ಅವುಗಳನ್ನು ಮೈಸೂರು ರಾಜ್ಯಕ್ಕೆ ಸೇರಿಸಿಕೊಂಡನು.

ಕ್ರಿ. ವ. ೧೭೭೦ರಲ್ಲಿ ಸಂಜರಾಜ ಒಡೆಯರು ಮರಣಹೊಂದಿದ ಬಳಿಕ ಅವರ ತಮ್ಮಂದಿರಾದ ಚಾಮರಾಜ ಒಡೆಯರಿಗೆ ಹೈದರನು ಪಟ್ಟವನ್ನು ಕಟ್ಟಿದನು. ಈ ಹೈದರನ ಆಳಿಕೆಯಲ್ಲಿ ಇವರು ಹೆಸರಿಗೆ ಮಾತ್ರ ದೊರೆಗಳಾಗಿದ್ದರು. ಈ ಚಾಮರಾಜ ದೊರೆಗಳೂ ಕ್ರಿ. ವ. ೧೭೭೬ ರಲ್ಲಿ ತೀರಿಹೋದರು. ಇವರಿಗೆ ಮಕ್ಕಳಿರಲಿಲ್ಲ. ಆದುದರಿಂದ ಹೈದರನು, ಮೈಸೂರು ರಾಜವಂಶಕ್ಕೆ ಸೇರಿದ ಚಿಕ್ಕ ಚಿಕ್ಕ ಅರಸು ಮಕ್ಕಳುಗಳನ್ನು ಶ್ರೀರಂಗಪಟ್ಟಣಕ್ಕೆ ಕರೆಯಿಸಿದನು. ಮತ್ತು ಅಲ್ಲಿ ತನ್ನ ಮನೆಯಲ್ಲಿ ಒಂದು ಸಭೆಯನ್ನು ಮಾಡಿಸಿ, ಒಂದು ಕಡೆಯಲ್ಲಿ ಖರ್ಜೂರ, ದ್ರಾಕ್ಷೆ, ಸಕ್ಕರೆಗಳನ್ನೂ ವಿಧವಿಧವಾದ ಹಣ್ಣುಗಳನ್ನೂ ಮತ್ತೊಂದು ಕಡೆಯಲ್ಲಿ ಅನೇಕ ವಿಧವಾದ ಬಟ್ಟೆಗಳನ್ನೂ ಆಭರಣಗಳನ್ನೂ ಇನ್ನೊಂದು ಕಡೆಯಲ್ಲಿ ಆಟದ ಸಾಮಾನುಗಳನ್ನೂ ಕನ್ನಡಿಯನ್ನೂ ಮತ್ತು ಕಠಾರಿಯನ್ನೂ ಇಡಿಸಿ, ಬೇಕಾದವರು ಬೇಕಾದದ್ದನ್ನು ತೆಗೆದುಕೊಳ್ಳಿರೆಂದು ಆ ಹುಡುಗರಿಗೆ ಹೇಳಿದನು. ಅವರವರು ತಮಗೆ ತಮಗೆ

ರಾಜಪುತ್ರರ ದೈವ-ಪರೀಕ್ಷೆ

ಬೇಕಾದದ್ದನ್ನು ಆರಿಸಿ ತೆಗೆದುಕೊಂಡರು. ಅವರಲ್ಲಿ ಅರಿಕುಠಾರದ ದೇವರಾಜೇ ಅರಸಿನವ ಮೂರ ವರ್ಷದ ಬಾಲಕನು ಮಾತ್ರ ಬಲಗೈಯಿಂದ ಕಠಾರಿಯನ್ನೂ ಎಡಗೈಯಿಂದ ಕನ್ನಡಿಯನ್ನೂ ತೆಗೆದುಕೊಂಡನು. ಆಗ ಹೈದರನು ಇವನೇ ರಾಜ್ಯವನ್ನಾಳಲು ತಕ್ಕವನೆಂದು ತಿಳಿದು, ಈ ರಾಜಪುತ್ರನಿಗೆ ಚಾಮರಾಜ ಒಡೆಯರೆಂಬ ಹೆಸರಿನ್ನಿಟ್ಟು ಈತನನ್ನು ಪಟ್ಟಕ್ಕೆ ಕುಳ್ಳಿರಿಸಿದನು.

ಪೇಶವೆ ಮಾಧವರಾಯನು ಮೈಸೂರು ರಾಜ್ಯದ ಮೇಲೆ ದಂಡೆತ್ತಿ ಬಂದಾಗ, ಹೈದರನು ೧೭೬೯ನೆಯ ಇಸವಿಯ ಒಪ್ಪಂದದ ಪ್ರಕಾರ ಇಂಗ್ಲಿಷರ ಸಾಹಾಯ್ಯವನ್ನು ಕೋರಿದನು. ಆದರೆ ಆ ಒಪ್ಪಂದದಂತೆ ಇಂಗ್ಲಿಷರು ಹೈದರನಿಗೆ ನೆರವಾಗಲಿಲ್ಲ. ಆದುದರಿಂದ ಹೈದರನು ಇಂಗ್ಲಿಷರ ಮೇಲೆ ದ್ವೇಷಮಾಡಲಾರಂಭಿಸಿದನು. ಅದಕ್ಕೋಸ್ಕರ ಇವನು ಫ್ರೆಂಚ ಜನರನ್ನು ತನ್ನ ಸೈನ್ಯದಲ್ಲಿಟ್ಟುಕೊಂಡನು. ಇತ್ತ ಇಂಗ್ಲಿಷರು ರಘುನಾಥರಾಯನ ಪಕ್ಷವನ್ನು ಸ್ವೀಕರಿಸಿದ್ದರಿಂದ ಪುಣೆಯ ಪೇಶವೆಯವರೂ ಇಂಗ್ಲಿಷರಿಗೆ ಶತ್ರುಗಳಾಗಿದ್ದರು. ಈ ಪ್ರಕಾರ ಇವರಿಬ್ಬರೂ ಇಂಗ್ಲಿಷರ ಮೇಲೆ ಶಸ್ತ್ರವನ್ನು ಹಿಡಿದರು. ಹೈದರನು ಕ್ರಿ. ಶ. ೧೭೮೦ನೆಯ ಜುಲೈ ತಿಂಗಳಲ್ಲಿ ಸೈನ್ಯವನ್ನು ತೆಗೆದುಕೊಂಡು ಮದ್ರಾಸದ ಕಡೆಗೆ ಯುದ್ಧಕ್ಕೆ ಹೊರಟನು. ಮುಂದೆ ಪಾಲಿಲೂರ ಹತ್ತರ ಗುಂಟೂರು ಕಡೆಯಿಂದ ಹೊರಟು ಬರುತ್ತಿದ್ದ ಇಂಗ್ಲಿಷರ ಸೈನ್ಯದ ಮೇಲೆ ಬಿದ್ದು, ಅದನ್ನು ಸಂಪೂರ್ಣವಾಗಿ ಸೋಲಿಸಿದನು. ಇಷ್ಟೇ ಅಲ್ಲ, ಸೇನಾಪತಿಯಾದ ಬೇಲೀ ಎಂಬುವನನ್ನೂ, ೩೦೦ ಜನ ಸೋಲ್ಜರುಗಳನ್ನೂ ಕೈಸೆರೆ ಹಿಡಿದನು. ಈ ಸುದ್ದಿಯು ತಿಳಿದ ಕೂಡಲೇ ಬಂಗಾಲದಲ್ಲಿದ್ದ ಗವರ್ನರ ಜನರಲ್ಲನಾದ ವಾರನ್ ಹೆಸ್ಟಿಂಗ್ಸಸಾಹೇಬನು ಸರ ಆಯರಕೂಟನೆಂಬ ಪ್ರಸಿದ್ಧನಾದ ಸೇನಾಪತಿಯೊಡನೆ ಪ್ರಚಂಡವಾದ ಸೈನ್ಯವನ್ನು ಹೈದರನ ಮೇಲೆ ಕಳುಹಿಸಿಕೊಟ್ಟನು. ಆಗ ಪೋರ್ಟೋನೋವೊ, ಸೋಲಿಮಗಡ, ಶಲಚೇರಿ ಈ ಮೂರು ಸ್ಥಳಗಳಲ್ಲಿ ನಡೆದ ಕದನಗಳಲ್ಲಿ ಹೈದರಿಗೆ ಸೋಲುಂಟಾಯಿತು.

(ಕ್ರಿ. ವ. ೧೭೮೧) ಮಾರುವರ್ಷ ಕ್ರಿ. ವ. ೧೭೮೨ರಲ್ಲಿ ಹೈದರನು ಮರಣ ಹೊಂದಿದನು. ಈ ಹೈದರನಿಗೆ ಓದುವದಕ್ಕೂ ಬರೆಯುವದಕ್ಕೂ ಬಾರ ದಿದ್ದರೂ ಈತನು ಕನ್ನಡ, ಹಿಂದುಸ್ಥಾನಿ, ಮರಾಠಿ, ತೆಲುಗು, ತಮಿಳು ಭಾಷೆಗಳಲ್ಲಿ ಚೆನ್ನಾಗಿ ಮಾತನಾಡುತ್ತಿದ್ದನು. ಯುರೋಪಿ ಯನ್ನರ ಯುದ್ಧಪದ್ಧತಿಯನ್ನು ಪ್ರಚಾರದಲ್ಲಿ ತಂದು, ಇಂಗ್ಲಿಷರ ಸಂಗಡ ಆ ಪದ್ಧತಿಯಿಂದ ಹೋರಾಡಿದ ಮೊದಲನೆಯ ಹಿಂದೀ ವೀರಪುರುಷ ನೆಂದರೆ ಈ ಹೈದರನೇ ಸರಿ.

ಟೀಪೂಸುಲ್ತಾನ, ಇಂಗ್ಲಿಷರು ಪೇಶವೆಯುವರು

ಹೈದರನ ತರುವಾಯ ಅವನ ಮಗನಾದ ಟೀಪೂ ಸುಲತಾನನು ಸಿಂಹಾಸನವನ್ನೇರಿದನು. ಇಷ್ಟರಲ್ಲಿಯೇ ಮುಂಬಯಿಯಿಂದ ಹೊರಟಿದ್ದ ಇಂಗ್ಲಿಷರ ಸೈನ್ಯವು ಬಂದು, ಬಿದನೂರು, ಮಂಗಳೂರು ಸ್ಥಳಗಳನ್ನು ಕೈವಶಮಾಡಿಕೊಂಡಿತು. ಕೂಡಲೇ ಟೀಪೂ ಸುಲತಾನನು ಅಲ್ಲಿಗೆ ದಂಡೆತ್ತಿ ಹೋಗಿ, ಬಿದನೂರು, ಮಂಗಳೂರುಗಳನ್ನು ತಿರುಗಿ ಗೆದ್ದುಕೊಂಡನು. ಇಷ್ಟೇ ಅಲ್ಲ, ಅಲ್ಲಿಯ ಇಂಗ್ಲಿಷರನ್ನು ಹಿಡಿದು ಸೆರೆಯಲ್ಲಿಟ್ಟನು. ಆಗ ಇಂಗ್ಲಿಷರು ಟೀಪೂ ಸುಲತಾನನ ಸಂಗಡ ಒಪ್ಪಂದವನ್ನು ಮಾಡಿಕೊಂಡರು. (ಕ್ರಿ. ವ. ೧೭೮೪) ಇದಕ್ಕೆ ಮಂಗಳೂರಿನ ಒಪ್ಪಂದ ವೆಂದು ಹೆಸರು. ತದನಂತರ ಉತ್ತರದಲ್ಲಿ ಹಾವನೂರು, ನರಗುಂದ, ಕಿತ್ತೂರ ಸಂಸ್ಥಾನಗಳನ್ನು ಗೆದ್ದುಕೊಂಡು, ಟೀಪೂ ಸುಲತಾನನು, ಪೇಶವೆಯ ರಾಜ್ಯವನ್ನು ಹಾಳುಮಾಡಿದನು. (ಕ್ರಿ. ವ. ೧೭೮೭) ಆ ಕ್ಷಣವೇ ಪೇಶವೆಯುವರು ಟೀಪೂಸುಲ- ತಾನನ ಮೇಲೆ ಯುದ್ಧಕ್ಕೆ ಬರಲು, ಅವನು ಹೆದರಿ ಅವರ ಸಂಗಡ ಒಪ್ಪಂದವನ್ನು ಮಾಡಿಕೊಂಡು, ಪ್ರತಿವರ್ಷ ಪೇಶವೆಯುವರಿಗೆ ೪೫ ಲಕ್ಷ ರೂಪಾಯಿ ಕಪ್ಪಕೊಡುವದಲ್ಲದೆ



ಟೀಪೂ ಸುಲತಾನನು

ಹಾವನೂರು, ನರಗುಂದ, ಕಿತ್ತೂರ ಸಂಸ್ಥಾನಗಳನ್ನು ತಿರುಗಿ ಬಿಟ್ಟುಕೊಟ್ಟನು.

ಟೀಪೂಸುಲ್ತಾನನಿಗೂ ಇಂಗ್ಲಿಷರಿಗೂ ಪುನಃ ಯುದ್ಧ

ಬಳಿಕ ಟೀಪೂ ಸುಲ್ತಾನನು ಕ್ರಿ. ವ. **೧೭೮೯**ರಲ್ಲಿ **ಅನಂತ-ಶಯನ**ವನ್ನು ಕೈವಶಮಾಡಿಕೊಂಡನು. ಅನಂತಶಯನದ ದೊರೆಯು ಇಂಗ್ಲಿಷರ ಆಶ್ರಯದಲ್ಲಿದ್ದುದರಿಂದ ಅವರು ಆತನಿಗೆ ನೆರವಾಗುವದಕ್ಕೆ ಹೋದರು. ಪೇಶವೆಯವರಿಗೂ ನಿಜಾಮನಿಗೂ ಟೀಪೂ ಸುಲ್ತಾನನ ಪ್ರಾಬಲ್ಯವನ್ನು ಅಡಗಿಸಬೇಕೆಂದು ಮನಸ್ಸಿದ್ದುದರಿಂದ ಅವರಿಬ್ಬರೂ ಇಂಗ್ಲಿಷರೊಡನೆ ಸೇರಿದರು. ಇಂಗ್ಲಿಷರ ಸೈನ್ಯದವರು **ತಿರುಚನಾಪಳ್ಳಿ**ಯಿಂದ ಹೊರಟು, **ಕೊಯಮುತ್ತೂರು** ಮುಂತಾದ ಕೆಲವು ಸ್ಥಳಗಳನ್ನು ಆಕ್ರಮಿಸಿದರು.



ಲಾರ್ಡ ಕಾರ್ನವಾಲೀಸ

ಅಷ್ಟರಲ್ಲಿ ಗವ್ಹರ್ನರ ಜನರಲ್ಲನಾದ **ಲಾರ್ಡ ಕಾರ್ನವಾಲೀಸನು** ಕಲಕತ್ತೆಯಿಂದ ಮದ್ರಾಸಿಗೆ ಬಂದು, ದಂಡಿನ ಮುಖ್ಯಾಧಿಕಾರವನ್ನು ವಹಿಸಿ, ಕ್ರಿ. ವ. **೧೭೯೧**ರಲ್ಲಿ ಬೆಂಗಳೂರಿಗೆ ಹೋಗಿ ಅದನ್ನು ಪಾದಾಕ್ರಾಂತ ಮಾಡಿದನು. ಆ ಮೇಲೆ ಪೇಶವೆ, ನಿಜಾಮರ ಸೈನ್ಯಗಳೊಡನೆ **ಶ್ರೀರಂಗ-ಪಟ್ಟಣ**ವನ್ನು ಮುತ್ತಿದನು. ಆಗ ಟೀಪೂ ಸುಲತಾನನು ಉಪಾಯಗಾಣದೆ ಗತಿಗೆಟ್ಟು, ಶತ್ರುಗಳೊಡನೆ ಹೀಗೆ ಒಪ್ಪಂದವನ್ನು ಮಾಡಿಕೊಳ್ಳಬೇಕಾಯಿತು. (೧) ಮೈಸೂರು ರಾಜ್ಯದಲ್ಲಿ ಅರ್ಧ ರಾಜ್ಯವನು ಈ ಮೂರು ಜನ ಶತ್ರುಗಳಿಗೆ ಬಿಟ್ಟುಕೊಡಬೇಕು. (೨) ಯುದ್ಧದ ವೆಚ್ಚಕ್ಕೋಸ್ಕರ **೩ ಕೋಟಿ ೩೦ ಲಕ್ಷ** ರೂಪಾಯಿಗಳನ್ನು ಕೊಡಬೇಕು. (ಕ್ರಿ. ವ. ೧೭೯೨) ಈ ಪ್ರಕಾರ ಒಪ್ಪಂದವಾದುದರಿಂದ ಪೇಶವೆಯವರಿಗೆ ಅವರ ರಾಜ್ಯದ ಗಡಿಯಿಂದ ತುಂಗಭದ್ರಾ ನದಿಯುವರೆಗಿನ ನಾಡು ಸಿಕ್ಕಿತು.

ಬಳ್ಳಾರಿ, ಕಡಪೆ ಪ್ರಾಂತಗಳು ನಿಜಾಮನ ವಶವಾದವು. ಇಂಗ್ಲಿಷರಿಗೆ ಮಲೆಯಾಳ, ದಿಂಡಿಗಲ್ಲು, ಕೊಡಗು ಮುಂತಾದ ಪ್ರಾಂತಗಳು ಸೇರಿದವು. ಇಂಗ್ಲಿಷರು ಕೊಡಗು ಪ್ರಾಂತವನ್ನು ಅಲ್ಲಿಯ ಮುಂಚಿನ ಅರಸನಿಗೆ ಕೊಟ್ಟರು.

"**ಮೈಸೂರು ಹುಲಿ**" ಎನಿಸಿಕೊಂಡಿದ್ದ ಟೀಪೂ ಸುಲ್ತಾನನು, ಅರ್ಧ ರಾಜ್ಯವನ್ನು ಕಳೆದುಕೊಂಡದ್ದರಿಂದಲೂ ಯುದ್ಧದ ವೆಚ್ಚಕ್ಕೋಸ್ಕರ ಶತ್ರುಗಳಿಗೆ ಹೆಚ್ಚು ಹಣ ಕೊಟ್ಟದ್ದರಿಂದಲೂ ಬಹಳ ಚಿಂತೆಯಲ್ಲಿ ಮುಳುಗಿ, ಕೆಲವು ದಿವಸಗಳ ವರೆಗೆ ಅರಮನೆಯನ್ನು ಬಿಟ್ಟು ಹೊರಗೆ ಬರಲಿಲ್ಲ. ಇಷ್ಟೆಲ್ಲ ಹಾನಿಯು ಇಂಗ್ಲಿಷರಿಂದಲೇ ಆಯಿತೆಂದು ತಿಳಿದು, ಅವರನ್ನು ಈ ದೇಶದಿಂದ ಹೊರಗೆ ಹಾಕಬೇಕೆಂದು ಪುನಃ ಧೈರ್ಯದಿಂದ ಪ್ರಯತ್ನ ಮಾಡತೊಡಗಿದನು. ಅದುದರಿಂದ ಇವನು **ಫ್ರಾನ್ಸ** ದೇಶದ **ಚಕ್ರವರ್ತಿ**ಯಾಗಿದ್ದ **ನೆಪೋಲಿಯನ್ ಬೋನಾಪಾರ್ಟ**ನ ಸಂಗಡ ಒಪ್ಪಂದವನ್ನು ಮಾಡಿ, ತನ್ನ ಸೈನ್ಯದಲ್ಲಿ **೧೪ ಸಾವಿರ ಫ್ರೆಂಚ ಜನರನ್ನು** ಇಟ್ಟುಕೊಂಡು ಹೊಸ ಸೈನ್ಯವನ್ನು ಏರ್ಪಡಿಸಿದನು. ಇತ್ತ ಹೊರಗೆ ಇಂಗ್ಲಿಷರ ಸಂಗಡ ಗೆಳೆಯರಂತೆ ನಟಿಸುತ್ತಿದ್ದನು.

ಆಗ ಗವ್ಹರ್ನರ ಜನರಲ್ಲನಾಗಿದ್ದ **ಲಾರ್ಡ ವೆಲ್ಲಸ್ಲಿ**ಯು, ಈ ಟೀಪೂ ಸುಲತಾನನ ಈ **ಗತ್ತ**ನ್ನು ಕಂಡುಹಿಡಿದು, ಇವನ ಸಂಗಡ ಯುದ್ಧವನ್ನು ಮಾಡುವ ಏರ್ಪಾಡು ಮಾಡಿದನು. ಎಂದರೆ, **ಜನ**ರಲ್ಲ **ಹ್ಯಾರಿಸನ** ಕೂಡ **೨೦ ಸಾವಿರ ಸೈನ್ಯವನ್ನು** ಕೊಟ್ಟು, ಟೀಪೂ ಸುಲ್ತಾನನ ಮೇಲೆ ಯುದ್ಧಕ್ಕೆ ಕಳುಹಿಸಿದನು. ಇಂಗ್ಲಿಷರು, **ಸಿದ್ಧೇಶ್ವರನ ಬೆಟ್ಟ**ದ ಹತ್ತರ ಒಂದು ಸಾರೆ, **ಮಳವಳ್ಳಿ**ಯ ಬಳಿಯಲ್ಲಿ ಒಂದು ಸಾರೆ, ಹೀಗೆ **ಎರಡು ಸಾರೆ** ಟೀಪೂ ಸುಲ್ತಾನನ್ನು ಸೋಲಿಸಿ, ಕ್ರಿ. ವ. ೧೭೯೯ನೆಯ ಎಪ್ರೇಲ ೧೬ನೆಯ ತಾರೀಖಿನ ದಿವಸ **ಶ್ರೀರಂಗಪಟ್ಟಣ**ಕ್ಕೆ ಮುತ್ತಿಗೆಯನ್ನು ಹಾಕಿದರು. ಮುಂದೆ **೧೯ ದಿವಸ** ಭಯಂಕರವಾದ ಯುದ್ಧವನ್ನು ಮಾಡಿ, ಮೇ ೪ನೆಯ ತಾರೀಖಿನ ಹಗಲು ಒಂದೂವರೆ ಘಂಟೆಗೆ

ಮೈಸೂರಿನ ಕೊನೆಯ ಯುದ್ಧ

ಇಂಗ್ಲಿಷರು ಲಗ್ಗೆಹತ್ತಿದರು. ಆ ವೇಳೆಯಲ್ಲಿ ಟೀಪೂ ಸುಲ್ತಾನನು ಊಟ ಮಾಡುತ್ತ ಕುಳಿತಿದ್ದನು. ಮಧ್ಯಾಹ್ನಕಾಲವಾದುದರಿಂದ ಸೈನ್ಯದಲ್ಲಿ ಅನೇಕರು ಊಟದಲ್ಲಿಯೂ ನಿದ್ದೆಯಲ್ಲಿಯೂ ಮೈಮರೆತಿದ್ದರು. ಇಂಗ್ಲಿಷರು ಲಗ್ಗೆಹತ್ತಿದರೆಂಬ ಸುದ್ದಿಯನ್ನು ಕೇಳಿದಾಕ್ಷಣವೇ ಟೀಪೂನು ಕೈಗಳನ್ನು ತೊಳೆದುಕೊಂಡು, ಲಗ್ಗೆ ಹತ್ತಿದ ಕಡೆಗೆ ಹೊರಟನು. ಆದರೆ ಶತ್ರುಗಳು



ಟೀಪೂ ಸುಲತಾನನ ಕೊನೆಯ ಪ್ರಯತ್ನ

ತನ್ನ ಕಡೆಯ ಜನರನ್ನು ಮೀರಿ ಬರುತ್ತಿರುವದನ್ನು ಕಂಡು, ಹಾಗೆಯೇ ಹಿಂದಿರುಗಿ, ಉತ್ತರದ ಬಾಗಿಲದ ಹತ್ತರ ಹೋದನು. ಅಲ್ಲಿ ಬಹು ಜನರು ಸತ್ತು ಬಿದ್ದಿದ್ದರು. ಮಿಕ್ಕ ಜನರು ನೂಕುನುಗ್ಗಾಗುತ್ತಿದ್ದರು. ಈ ಗದ್ದಲದಲ್ಲಿ **ಟೀಪೂನಿಗೆ ಗುಂಡು ತಗಲಿ** ಆತನು ನೆಲಕ್ಕೆ ಉರುಳಿದನು! ಮರುದಿವಸ ಇಂಗ್ಲಿಷರು ಟೀಪೂ ಸುಲತಾನನ ಶವವನ್ನು ಸಮಸ್ತ ಮಾನಮರ್ಯಾದೆಗಳಿಂದ ಹೈದರನ ಗೋರಿಯ ಹತ್ತರ ಹುಗಿಸಿದರು. '**ಮೈಸೂರು ಹುಲಿ**" ಎಂದೆನಿಸಿಕೊಂಡಿದ್ದ ಟೀಪೂ ಸುಲತಾನನ ರಾಜ್ಯವು ಇಂಗ್ಲಿಷರಿಗೆ ವಶವಾಯಿತು. ತಾನು ಸಂಪಾದಿಸಿದ ರಾಜ್ಯವನ್ನು ತನ್ನ ಮಗನಾದ ಟೀಪೂವು ಕಳೆದುಕೊಳ್ಳುತ್ತಾನೆಂದು ಹೈದರನು ಹೇಳುತ್ತಿದ್ದನು!

ಇಂಗ್ಲಿಷರು ಟೀಪೂವಿನ ಹೆಂಡಂದಿರು ಮಕ್ಕಳನ್ನು ವೇಲೂರಿಗೆ, ಕಳಿಸಿ, ಚಾಮರಾಜ ಒಡೆಯರ ಮಗನಾದ **ಮುಮ್ಮಡಿ ಕೃಷ್ಣರಾಜ**ನೆಂಬ [redacted] ವರ್ಷದ ಹುಡುಗನನ್ನು ಪಟ್ಟಕ್ಕೆ ಕುಳ್ಳಿರಿಸಿದರು. ಮತ್ತು ಹೈದರ, ಟೀಪೂ ಇವರ ಕಾಲದಿಂದಲೂ ಅಧಿಕಾರಸ್ಥಾನದಲ್ಲಿದ್ದ **ಪೂರ್ಣಯ್ಯ**ನನ್ನೇ ಈ ಸಂಸ್ಥಾನಕ್ಕೆ ದಿವಾಣನನ್ನಾಗಿ ಮಾಡಿದರು. ಗುತ್ತಿ, **ಗುರುಮಕೊಂಡ** ಮುಂತಾದ ಪ್ರಾಂತಗಳನ್ನು **ನಿಜಾಮನಿಗೆ** ಕೊಟ್ಟು, **ಕೊಯಮುತ್ತೂರು, ಮಂಗಳೂರು** ಪ್ರಾಂತಗಳನ್ನು ತವ್ವು ಗಿಟ್ಟುಕೊಂಡು, ಇಂಗ್ಲಿಷರು ಉಳಿದ ರಾಜ್ಯವನ್ನೆಲ್ಲ ಉದಾರ ಬುದ್ಧಿಯಿಂದ ಈ ಮುಮ್ಮಡಿ ಕೃಷ್ಣರಾಜರಿಗೆ ಕೊಟ್ಟರು.


ಮುಮ್ಮಡಿ ಕೃಷ್ಣರಾಜ ಒಡೆಯರವರು

ಟೀಪೂ ಸುಲ್ತಾನನು ಬಹು ಶೂರನೂ ಧೈರ್ಯಶಾಲಿಯೂ ಆಗಿದ್ದನು; ಆದರೆ ಅವನಲ್ಲಿ ಅಹಂಕಾರವೂ ಅನ್ಯಮತಗಳಲ್ಲಿ ದ್ವೇಷವೂ ತನ್ನ ಮತದಲ್ಲಿ ಅಭಿಮಾನವೂ ಹೆಚ್ಚಾಗಿದ್ದವು. ಆದುದರಿಂದ ಅವನು ಕೊಡಗು ಪ್ರಾಂತದಲ್ಲಿ ಬಹು ಜನರನ್ನು ಮುಸಲ್ಮಾನರನ್ನಾಗಿ ಮಾಡಿದನು.

ಇತ್ತ ಪುಣೆ ಪಟ್ಟಣದಲ್ಲಿ **ಸವಾಯಿ ಮಾಧವರಾಯ**ನು, ನಾನಾಫಡಣೀಸನ ತೊಂದರೆಗೆ ಬೇಸತ್ತು, **ಶನಿವಾರವಾಡೆ**ಯಲ್ಲಿ ಉಪ್ಪರಿಗೆಯಿಂದ ಕೆಳಗೆ ಹಾರಿ ಜೀವಕೊಟ್ಟನು. (ಕ್ರಿ. ಶ. ೧೭೯೫) ಈತನಿಗೆ ಮಕ್ಕಳಿಲ್ಲದ್ದರಿಂದ ನಾನಾಫಡಣೀಸನು **ರಘುನಾಥರಾಯ**ನ ಮಗನಾದ **ಇಮ್ಮಡಿ ಬಾಜೀರಾಯ**ನಿಗೆ ಪಟ್ಟವನ್ನು ಕಟ್ಟಿದನು. ಈ ಬಾಜೀರಾಯನು ಹೇಡಿಯಾಗಿದ್ದುದಲ್ಲದೆ ರಾಜಕೀಯ ಜ್ಞಾನವು ಇವನಿಗೆ ಸ್ವಲ್ಪಾದರೂ ಇದ್ದಿಲ್ಲ.

ಆದುದರಿಂದಲೇ ನಾನಾಫಡಣೀಸನ ಮನಸ್ಸಿನಲ್ಲಿ ಇವನಿಗೆ ಪೇಶವೆಯ ಸ್ಥಾನವನ್ನು ಕೊಡುವ ಇಚ್ಛೆಯಿದ್ದಿಲ್ಲ. ನಿರ್ವಾಹವಿಲ್ಲದೆ ಕೊಡಬೇಕಾಯಿತು. ಇದಕ್ಕೋಸ್ಕರ ಬಾಜೀರಾಯನ ಮನಸ್ಸಿನಲ್ಲಿ ನಾನಾಫಡಣೀಸನ ವಿಷಯವಾಗಿ ಹಗೆತನವಿದ್ದುದರಿಂದ ಆತನನ್ನು ಸೆರೆಹಿಡಿಸುವದಕ್ಕಾಗಿ ಬಾಜೀರಾಯನು **ಸಿಂದೆ ದೌಲತರಾಯನಿಗೆ**

೨ನೆಯ ಬಾಜೀರಾಯನು ೨ ಕೋಟಿ ರೂಪಾಯಿ ಕೊಡುತ್ತೇನೆಂದು ಹೇಳಿದನು. ಅದೇ ಪ್ರಕಾರ ಚಾತುರ್ಯದಿಂದ **ನಾನಾಫಡಣೀಸನನ್ನು** ಸೆರೆಹಿಡಿದು, ಸಿಂದೆ ದೌಲತರಾಯನು ೨ ಕೋಟಿ ರೂಪಾಯಿಗಳನ್ನು ಕೊಡಿರೆಂದು ಕೇಳಿದನು. ಆಗ ಬಾಜೀರಾಯನು ಹೇಳಿದ್ದೇನೆಂದರೆ, "ನೀವು **ಪುಣೆ** ಪಟ್ಟಣವನ್ನು ಸುಲಿದುಕೊಂಡು ನಿಮ್ಮ ದುಡ್ಡನ್ನು ತೆಗೆದುಕೊಳ್ಳಿರಿ!" ಈ ಹುಚ್ಚುದೊರೆಯ ಅಪ್ಪಣೆಯಂತೆಯೇ ದೌಲತರಾಯನು ಪುಣೆ ಪಟ್ಟಣದಲ್ಲಿದ್ದ ಸೆಟ್ಟಿ ಸಾವುಕಾರರ ಮನೆಗಳನ್ನು **ಲೂಟಿ** ಮಾಡಿ, ತನ್ನ ದುಡ್ಡನ್ನು ತುಂಬಿಕೊಂಡನು. ಈ ರೀತಿ ಸ್ವತಃ ರಾಜನೇ ಪ್ರಜೆಗಳ ಸುಲಿಗೆಯನ್ನು ಮಾಡಿಸಿದ್ದರಿಂದ ಈ ಬಾಜೀರಾಯನು ಪ್ರಜೆಗಳಿಗೆ ಬಹಳ ಬೇಸರಾದನು. ನಾನಾಫಡಣೀಸನು ಮುಂದೆ ಸ್ವಲ್ಪ ದಿವಸಗಳಲ್ಲಿಯೇ ಎಂದರೆ ಕ್ರಿ-ಶ. ೧೮೦೦ರಲ್ಲಿ ಮರಣಹೊಂದಿದನು. ಪುಣೆಯ ರಾಜ್ಯಕಾರಭಾರದಲ್ಲಿ ನಾನಾಫಡಣೀಸನು ಇರುವವರೆಗೆ ಅಲ್ಲಿ ಇತರರಿಗೆ ರಾಜ್ಯಕಾರಸ್ಥಾನವನ್ನು ಮಾಡುವದಕ್ಕೆ ಅನುವು ದೊರೆಯಲಿಲ್ಲ. ನಾನಾಫಡಣೀಸನ ನಂತರ ಪೇಶವೆ ಬಾಜೀರಾಯನ ವಿರುದ್ಧವಾಗಿ ಎಲ್ಲರೂ ದಾಳಿಯನ್ನೆಬ್ಬಿಸಿದರು. ಉತ್ತರ ಕರ್ನಾಟಕದಲ್ಲಿ **ಧೋಂಡೋಜಿ ವಾಘನೆಂಬುವನೂ ಸಾತಾರೆಯ, ಕೊಲ್ಹಾಪುರದ ಅರಸರೂ** ದಂಗೆಯನ್ನೆಬ್ಬಿಸಿದರು. ಇತ್ತ **ಯಶವಂತರಾವ ಹೋಳಕರನ** ತಮ್ಮನಾದ **ವಿಠೋಜಿಯು** ಬಂಡಾಯ ಮಾಡಿದನೆಂದು ಇಲ್ಲದ್ದೊಂದು ಆರೋಪವನ್ನು ಹೊರಿಸಿ, ಅವನನ್ನು



೨ನೆಯ ಬಾಜೀರಾಯನು

ಆನೆಯ ಕಾಲಿಗೆ ಕಟ್ಟಿಸಿ, ಬಾಜೀರಾಯನು ಕೊಲ್ಲಿಸಿದನು. ಆದುದರಿಂದ ಯಶವಂತರಾಯನು ರೊಚ್ಚಿಗೆದ್ದು, ಪುಣೆಯ ಮೇಲೆ ದಂಡೆತ್ತಿ ಬಂದನು. (ಕ್ರಿ. ವ. ೧೮೦೧) ಆಗ ಬಾಜೀರಾಯನು ಹೆದರಿ ಸಿಂಹಗಡಕ್ಕೆ ಓಡಿಹೋದನು. ಅನಂತರ ಯಶವಂತರಾಯನು ಪುಣೆ ಪಟ್ಟಣವನ್ನು ಸುಲಿದುಕೊಂಡು, ಅಲ್ಲಿಯ ಪೇಶವೆಯ ಪದವನ್ನು ಅಮೃತರಾಯನೆಂಬುವನಿಗೆ ಕೊಟ್ಟು, ತಾನು ಮಾಳವಾ ಪ್ರಾಂತದ ಕಡೆಗೆ ತೆರಳಿದನು. ಇತ್ತ ಬಾಜೀರಾಯನು ಸಿಂಹಗಡದಿಂದ ವಸಯಿಗೆ ಹೋಗಿ, ಇಂಗ್ಲಿಷರಿಗೆ ಶರಣು ಹೋದನು. (ಕ್ರಿ. ವ. ೧೮೦೨) ಹಿಂದೆ ಕ್ರಿ. ವ. ೧೭೯೮ರಲ್ಲಿ "ಸಬ್ಸಿಡಿಯರಿ" ಪದ್ಧತಿಯ ಪ್ರಕಾರ ನಿಜಾಮನು ಇಂಗ್ಲಿಷರ ಸೈನ್ಯವನ್ನಿಟ್ಟುಕೊಂಡು, ಅದರ ವೆಚ್ಚಕ್ಕಾಗಿ ಕಡಪಾ, ಬಳ್ಳಾರಿ, ಕರ್ನೂಲ ಜಿಲ್ಹೆಗಳನ್ನು ಇಂಗ್ಲಿಷರಿಗೆ ಕೊಟ್ಟಂತೆ ಬಾಜೀರಾಯನೂ ಇದೇ ಪದ್ಧತಿಯ ಪ್ರಕಾರ ಇಂಗ್ಲಿಷರ ೧೦ ಸಾವಿರ ಸೈನ್ಯವನ್ನು ತನ್ನ ಸಂರಕ್ಷಣೆಗೋಸ್ಕರ ಇಟ್ಟುಕೊಂಡು, ೩೬ ಲಕ್ಷ ರೂಪಾಯಿ ಉತ್ಪನ್ನ ಬರುವಂಥ ಧಾರವಾಡ ಮುಂತಾದ ಪ್ರಾಂತಗಳನ್ನು ಬ್ರಿಟಿಶರಿಗೆ ಕೊಟ್ಟನು. ಆಗ ಇಂಗ್ಲಿಷರು ಬಾಜೀರಾಯನನ್ನು ಪುಣೆಗೆ ಕರೆದುಕೊಂಡು ಬಂದು, ಪುನಃ ಅವನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದರು. (ಕ್ರಿ. ವ. ೧೮೦೨) ಇಂದಿಗೆ ಮರಾಟಿಗರ ಸ್ವಾತಂತ್ರ್ಯವು ನಷ್ಟವಾಗಿ ಹೋಯಿತು. ಈ ಒಪ್ಪಂದದಿಂದ ತಮ್ಮ ಸ್ವಾತಂತ್ರ್ಯವು ನಷ್ಟವಾಯಿತೆಂದು, ಮಹಾರಾಷ್ಟ್ರ ಸರದಾರರು ಸಿಟ್ಟಿಗೆದ್ದರು. ಆಗ ಇಂಗ್ಲಿಷರು ಒಬ್ಬೊಬ್ಬ ಮಹಾರಾಷ್ಟ್ರ ಸರದಾರರನ್ನು ಸದೆಬಡೆದು ಹಣಹಾಕುತ್ತ ನಡೆದರು. ಕೊನೆಗೆ ಕ್ರಿ. ವ. ೧೮೧೭ರಲ್ಲಿ ಖಡಕಿಯಲ್ಲಿ ಬಾಜೀರಾಯನನ್ನು ಹೊಡೆದೋಡಿಸಿದರು. ಮತ್ತು ಪುಣೆ ಪಟ್ಟಣವನ್ನು ಕೈವಶಮಾಡಿಕೊಂಡರು. ಮುಂದೆ ಕೋರೇಗಾವ, ಅಷ್ಟೇ ಎಂಬೆರಡು ಸ್ಥಳಗಳಲ್ಲಿ ಬಾಜೀರಾಯನ ಸೇನಾಪತಿಯಾದ ಬಾಪೂ ಗೋಖಲೆಯು ಇಂಗ್ಲಿಷರ ಸಂಗಡ ಯುದ್ಧಮಾಡಿ ಕೊನೆಯ ಯುದ್ಧದಲ್ಲಿ ಮರಣ ಹೊಂದಿದನು. ಆ ಬಳಿಕ ಬಾಜೀರಾಯನು ವರ್ಹಾಡದ ಕಡೆಗೆ ಓಡಿಹೋಗುತ್ತಿರಲು, ನರ್ಮದಾನದಿಯ ತೀರದಲ್ಲಿ ಅವನನ್ನು ಇಂಗ್ಲಿಷರು ಹಿಡಿದರು. ಹಾಗೂ ಅವನಿಗೆ ವರ್ಷಕ್ಕೆ ೮ ಲಕ್ಷ ರೂಪಾಯಿ ಕೊಡುವ

ವನ್ನು ಗೊತ್ತುಮಾಡಿ, ಭಾಗೀರಥೀ ನದಿಯ ತೀರದಲ್ಲಿ **ಬ್ರಹ್ಮಾವರ್ತ** ಎಂದರೆ **ಬಿಠೂರ** ಎಂಬ ಗ್ರಾಮದಲ್ಲಿ ಅವನನ್ನು ಇಟ್ಟರು. ತರುವಾಯ ಬಾಜೀರಾಯನ ರಾಜ್ಯವೆಲ್ಲ ಇಂಗ್ಲಿಷರ ಕೈಸೇರಿತು. (ಕ್ರಿ. ವ. ೧೮೧೮).

ಸಾತಾರೆಯ ಅರಸನಾದ **ಪ್ರತಾಪಸಿಂಹ**ನನ್ನು (ಕ್ರಿ. ವ. ೧೮೦೮–೧೮೩೯) ಸಾತಾರೆಯ ಸಿಂಹಾಸನದ ಮೇಲೆ ಭದ್ರವಾಗಿರುವಂತೆ ಮಾಡಿ, ಅವನಿಗೆ ೧೪ ಲಕ್ಷದ ಸೀಮೆಯನ್ನು ಕೊಟ್ಟರು. ಇದೇ ಪ್ರಕಾರ **ಪಟವರ್ಧನ** ಮೊದಲಾದ ಸರದಾರರಿಗೆ ಅವರ ಸೀಮೆಗಳನ್ನು ಅವರಿಗೆ ಕೊಟ್ಟರು. (ಕ್ರಿ. ವ. ೧೮೧೮).

ಇತ್ತ **ಮೈಸೂರಿ**ನಲ್ಲಿ ದಿವಾಣ **ಪೂರ್ಣಯ್ಯ**ನು ಉತ್ತಮ ರೀತಿಯಿಂದ ರಾಜ್ಯಕಾರಭಾರವನ್ನು ಮಾಡಿ, ಸಂಸ್ಥಾನವನ್ನು ಅಭಿವೃದ್ಧಿಸ್ಥಿತಿಗೆ ತಂದದ್ದರಿಂದ **ಮುಮ್ಮಡಿ ಕೃಷ್ಣರಾಜ** ದೊರೆಗಳವರು ಪೂರ್ಣಯ್ಯನಿಗೆ **ಎಳಂದೂರ** ಜಹಾಗೀರನ್ನು ಕೊಟ್ಟರು. **ಪೂರ್ಣಯ್ಯ**ನು ಕ್ರಿ ವ. ೧೮೧೧ರಲ್ಲಿ ಕೃಷ್ಣರಾಜ ಒಡೆಯರಿಗೆ ಅಧಿಕಾರವನ್ನು ಒಪ್ಪಿಸಿ, ಕ್ರಿ. ವ. ೧೮೧೨ರಲ್ಲಿ **ಶ್ರೀರಂಗಪಟ್ಟಣ**ದಲ್ಲಿ ಸ್ವರ್ಗಸ್ಥನಾದನು. ಕೃಷ್ಣರಾಜ ಒಡೆಯರು ತಾವೇ ರಾಜ್ಯಕಾರಭಾರವನ್ನು ಮಾಡಲುಪಕ್ರಮಿಸಿದರು.

ಇತ್ತ **ಹೈದರಾಬಾದ**ದಲ್ಲಿ **ನಿಜಾಮು ಅಲ್ಲಿಯು** ಕ್ರಿ. ವ. ೧೮೦೩ರಲ್ಲಿ ಮರಣ ಹೊಂದಿದನು. ಇವನ ತರುವಾಯ **ಮಿರ್ಜಾಸಿಕಂದರಜಾತ**ನೆಂಬುವನು ಸಿಂಹಾಸನವನ್ನೇರಿ, ಇಂಗ್ಲಿಷರಿಗೆ ಮಾಂಡಲಿಕನಾಗಿ ರಾಜ್ಯವನ್ನಾಳಹತ್ತಿದನು.

೧೪ನೆಯ ಪ್ರಕರಣ

ಇಂಗ್ಲಿಷರು ಸಾರ್ವಭೌಮ ರಾಜರಾದರು.

ಕ್ರಿ ವ. ೧೮೧೮ರಿಂದ ಮುಂದೆ

ಇಂಗ್ಲಿಷರು ಪೇಶವೆಯ ರಾಜ್ಯವನ್ನು ಕೈವಶಮಾಡಿಕೊಂಡು, ಕರ್ನಾಟಕಕ್ಕೆ **ಸಾರ್ವಭೌಮ** ರಾಜರಾದರು. ಇಷ್ಟೇ ಅಲ್ಲ, ಆ ಕಾಲಕ್ಕೆ ಇವರು ಇಡೀ ಹಿಂದುಸ್ಥಾನಕ್ಕೆ **ಚಕ್ರವರ್ತಿ**ಗಳಾಗಿದ್ದರು. ಈ ಕಂಪನಿ

ಸರಕಾರಕ್ಕೆ ಸಾತಾರೆಯು ಅರಸು, ನಿಜಾಮು, ಮೈಸೂರು ಅರಸು ಮೊದಲಾದ ಚಿಕ್ಕ ದೊಡ್ಡ ಸಂಸ್ಥಾನಿಕರೆಲ್ಲರೂ ಮಾಂಡಲಿಕರಾದರು. ಮುಸಲ್ಮಾನರ ಹಾಗೂ ಮರಾಟಿಗರ ಕಾಲದಲ್ಲಿ ಮೇಲಿಂದ ಮೇಲೆ ಬಂದೊದಗುತ್ತಿದ್ದಂಥ ಪುಂಡಾಟಿಕೆಗಳು ಇವರ ಕಾಲದಲ್ಲಿ ಅಡಗಿದವು. ಮತ್ತು ಎಲ್ಲ ಕಡೆಗೂ ಶಾಂತತೆಯು ನೆಲೆಗೊಂಡಿತು. ಆದರೂ ಕ್ರಿ. ಶ. ೧೮೫೭ರ ವರೆಗೆ ಸಣ್ಣದೊಡ್ಡ ಗಲಭೆಗಳು ನಡುನಡುವೆ ಎದ್ದವು. ಅವು ಯಾವವೆಂದರೆ:—

ಕಿತ್ತೂರ ಸಂಸ್ಥಾನದಲ್ಲಿ ಸುಪ್ರಸಿದ್ಧನಾದ **ಮಲಸರ್ಜನೆಂಬ** ವೀರಶೈವ ಮತದ ಸಂಸ್ಥಾನಿಕನು, ಕ್ರಿ. ಶ. ೧೭೮೨ರಲ್ಲಿ ಸಿಂಹಾಸನವನ್ನೇರಿ **೩೪ ವರ್ಷ** ಉತ್ತಮ ರೀತಿಯಿಂದ ರಾಜ್ಯವನ್ನಾಳಿ ಕ್ರಿ. ಶ. ೧೮೧೬ರಲ್ಲಿ ಮರಣ ಹೊಂದಿದನು. ಈತನಿಗೆ **ಅವ್ವರುದ್ರವ್ವ, ಅವ್ವ-ಚೆನ್ನವ್ವ** ಎಂಬ ಇಬ್ಬರು ಹೆಂಡಂದಿರಿದ್ದರು. ಮಲಸರ್ಜನು ಮರಣ ಹೊಂದಿದ ನಂತರ ಈತನ ಹಿರಿಯ ಹೆಂಡತಿಯಾದ ಅವ್ವರುದ್ರವ್ವನ ಮಗನಾದ **ಶಿವಲಿಂಗರುದ್ರಸರ್ಜನು** ಪಟ್ಟಕ್ಕೆ ಕುಳಿತನು. ಆದರೆ ಆತನು ಶೀಘ್ರದಲ್ಲಿಯೇ ಎಂದರೆ ಕ್ರಿ. ಶ ೧೮೨೪ರಲ್ಲಿ ತೀರಿದನು. ಅವನಿಗೆ ಮಕ್ಕಳಿರಲಿಲ್ಲ; ಆದುದರಿಂದ ದರಬಾರಿನವರೆಲ್ಲರೂ ಸೇರಿ, **ಮಾಸ್ತಮರಡಿಯ ಗೌಡರ** ಮಗನನ್ನು ಆ ದೇಸಾಯಿಯ ದತ್ತಕ ಪುತ್ರನನ್ನು ಮಾಡಿದರು. ಆ ದತ್ತಕಮಗನ ಹೆಸರಿನಿಂದ **ಚೆನ್ನಮ್ಮನೇ** ರಾಜ್ಯಕಾರಭಾರವನ್ನು ಸಾಗಿಸಿದಳು. ಆದರೆ **ಮಲ್ಲಪ್ಪಶೆಟ್ಟಿ** ಎಂಬವನು, ದೇಸಾಯಿಯ ಮರಣದ ನಂತರ ದತ್ತಕ ಮಾಡಿಕೊಂಡಿರುವರೆಂದು ಕಂಪನೀ ಸರಕಾರಕ್ಕೆ ತಿಳಿಸಿದನು. ಆಗ ಪೋಲಿಟಿಕಲ್ ಏಜಂಟನಾದ **ಥ್ಯಾಕರೆಸಾಹೇಬನು** ಕಿತ್ತೂರ ಸಂಸ್ಥಾನದ ರಾಜ್ಯಕಾರಭಾರವನ್ನೂ ಬೊಕ್ಕಸದ ಸ್ಥಿತಿಗತಿಯನ್ನೂ ನೋಡುವದಕ್ಕೋಸ್ಕರ ಬರುತ್ತೇನೆಂದು ಹೇಳಿ ಕಳುಹಿಸಿದನು. ಆದರೆ ಮಲಸರ್ಜನ ಚಿಕ್ಕ ಹೆಂಡತಿಯಾದ **ಅವ್ವ ಚೆನ್ನವ್ವನು** ಮಹಾ ತೇಜಸ್ವಿಯೂ ಶೂರಳೂ ಆಗಿದ್ದುದರಿಂದ ಈ ವರ್ತಮಾನವು ಆ ಸಾಧ್ವಿಗೆ ಸಹನವಾಗಲಿಲ್ಲ. "ನಮ್ಮ ಸಂಸ್ಥಾನದಲ್ಲಿ ಕೈಹಾಕುವದಕ್ಕೆ ಇಂಗ್ಲಿಷರು ಇವರು

ಯಾರು?" ಎಂದು ನುಡಿದು, ತನ್ನ ಕೋಟೆಯನ್ನು ಭದ್ರಪಡಿಸಿ, ಯುದ್ಧದ ಸಿದ್ಧತೆಯನ್ನು ಮಾಡಿದಳು. ಈ ಸುದ್ದಿಯನ್ನು ಕೇಳಿದ ಕೂಡಲೆ ಥ್ಯಾಕರೆ ಸಾಹೇಬನು ಸೈನ್ಯವನ್ನು ತೆಗೆದುಕೊಂಡು ಕಿತ್ತೂರಿಗೆ ಬಂದು ಕೋಟೆಗೆ ಮುತ್ತಿಗೆಯನ್ನು ಹಾಕಿದನು. ಆ ಕ್ಷಣವೇ ಶೂರಳಾದ ಚನ್ನವ್ವನು ಯುದ್ಧಕ್ಕೆ ಸಿದ್ಧಳಾದಳು. ಹಾಗೂ ಬಾಳಪ್ಪನೆಂಬ ವೀರ ಸೇನಾಪತಿಯ ಸಾಹಾಯ್ಯದಿಂದ [೧]ಥ್ಯಾಕರೆ ಮೊದಲಾದ ಕೆಲವು ಜನ ಇಂಗ್ಲಿಷರನ್ನು



ಕಿತ್ತೂರ ಚನ್ನವ್ವನು

ಸಂಹಾರ ಮಾಡಿದಳು! ಆ ಬಳಿಕ ಕೇಳುವದೇನು? ಇಂಗ್ಲಿಷರ ಪ್ರಚಂಡ ವಾದ ಸೈನ್ಯವು ಕಿತ್ತೂರಿಗೆ ಹೋಗಿ, ಅದನ್ನು ಕೈವಶ ಮಾಡಿಕೊಂಡಿತು. ಆ ಸಂಸ್ಥಾನವೆಲ್ಲ ಕಂಪನಿ ಸರಕಾರಕ್ಕೆ ಸೇರಿತು. ಚೆನ್ನವ್ವನೂ ರುದ್ರವ್ವನೂ ವೈರಿಗಳ ಕೈಗೆ ಸಿಗದೆ, ಮಲಪ್ರಭಾ ನದಿಯಲ್ಲಿ ಜಲಸಮಾಧಿಯಿಂದ ಸ್ವರ್ಗಸ್ಥರಾದರು. ಶಿವಲಿಂಗರುದ್ರಸರ್ಜನ ರಾಣಿಯಾದ ಈರವ್ವನು ಸೀಲರತ್ನವನ್ನು ಅರೆದು ಕುಡಿದು ಪ್ರಾಣವನ್ನು ನೀಗಿದಳು. ಈ

೧. ಥ್ಯಾಕರೆ ಸಾಹೇಬನ ಗೋರಿಯು ಧಾರವಾಡದಲ್ಲಿರುತ್ತದೆ.

ಸಂಸ್ಥಾನವು ಹಾಳಾದುದರಿಂದ ಎಷ್ಟೋ ಜನರ ಅಧಿಕಾರಗಳೂ ಉಂಬಳಿ ಜಮೀನುಗಳೂ ಕೈಬಿಟ್ಟು ಹೋದವು. ಆದುದರಿಂದ ಆ ಅಧಿಕಾರಿಗಳಲ್ಲಿ ಒಬ್ಬನಾದ **ಸಂಗೊಳ್ಳಿ ರಾಯಣ್ಣ**ನೆಂಬ ಕಿತ್ತೂರ **ಹಳಬ**ನು ಮುಂದೆ ಕೆಲವು ದಿವಸಗಳ ಮೇಲೆ ಕಿತ್ತೂರ ಸಂಸ್ಥಾನವನ್ನು ಪುನಃ ಸ್ಥಾಪಿಸುತ್ತೇನೆಂದು ಸಾರಿ, ಕಂಪನಿ ಸರಕಾರದ ವಿರುದ್ಧ **ಬಂಡಾಯ**ವನ್ನು ಮಾಡಲಾರಂಭಿಸಿದನು. ಅವನು **ಸಂಪಗಾವಿ, ಬೀಡಿ** ತಾಲೂಕ ಕಚೇರಿಗಳನ್ನು ಸುಟ್ಟನು. ಇದೇ ಪ್ರಕಾರ ಅವನ ಹಾವಳಿಯು **೪ ತಿಂಗಳು** ನಡೆಯಿತು. ಕೊನೆಗೆ ಕೆಲವರು ಅವನನ್ನು ಹಿಡಿದುಕೊಟ್ಟು, ಕಂಪನಿ ಸರಕಾರದಿಂದ ಇನಾಮನ್ನು ಪಡೆದರು. **ನಂದಗಡ**ದಲ್ಲಿ ಅವನನ್ನು ಗಲ್ಲಿಗೇರಿಸಿದರು. (ಕ್ರಿ. ಶ. ೧೮೩೨).

ಇತ್ತ **ಮೈಸೂರ** ಸಂಸ್ಥಾನದಲ್ಲಿ **ಮುಮ್ಮಡಿ ಕೃಷ್ಣರಾಜ ಒಡೆಯರು** ಕ್ರಿ. ಶ. **೧೮೧೨**ರಿಂದ ರಾಜ್ಯವನ್ನಾಳುತ್ತಿರಲು, ಅಧಿಕಾರಿಗಳು **ಪೂರ್ಣಯ್ಯ**ನು ಕೂಡಿಸಿಟ್ಟಿದ್ದ ಮೂರು ಕೋಟಿ ರೂಪಾಯಿಗಳನ್ನು ೩-೪ ವರ್ಷಗಳಲ್ಲಿಯೇ ಹಾಳುಮಾಡಿ ಬಿಟ್ಟರು. ಇಷ್ಟೇ ಅಲ್ಲ, ಮನಸ್ಸು ಬಂದಂತೆ ರೈತರಿಂದ ಹಣವನ್ನು ದೋಚಿಕೊಳ್ಳುವವಕ್ಕೆ ಉಪಕ್ರಮಿಸಿದರು. ಆದುದರಿಂದ ಪ್ರಜೆಗಳು ಸಿಟ್ಟಿಗೆದ್ದು **ದೊಂಬಿ**ಯನ್ನು ಮಾಡುವದಕ್ಕಾರಂಭಿಸಿದರು. ಆಗ ಇಂಗ್ಲಿಷರು ಕ್ರಿ. ಶ. ೧೮೩೧ರಲ್ಲಿ ಮೈಸೂರ ಸಂಸ್ಥಾನದ ರಾಜ್ಯಕಾರಭಾರವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಮುಂದೆ ಕ್ರಿ. ಶ. **೧೮೩೪**ರಲ್ಲಿ ಕೊಡಗು ದೇಶದ ಅರಸನಾದ **ವೀರರಾಜೇಂದ್ರ**ನಿಗೆ (ಕ್ರಿ. ಶ. **೧೮೨೦-೧೮೩೪**) ಹುಚ್ಚು ಹಿಡಿದುದರಿಂದ ಅವನು ತನ್ನ ಮನೆತನದವರನ್ನೆಲ್ಲ ಕೊಲ್ಲಿಸಿ, ಇಂಗ್ಲಿಷರನ್ನು ತನ್ನ ದೇಶದಿಂದ ಹೊರಗೆ ಹಾಕಲು ಪ್ರಯತ್ನಮಾಡಿದನು. ಕೂಡಲೇ ಇಂಗ್ಲಿಷರು ಅವನನ್ನು ಸೆರೆ ಹಿಡಿದು, ಅವನ ರಾಜ್ಯವನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು.

ಮುಂದೆ **ಲಾರ್ಡ ಡಾಲಹೌಸಿ**ಯು (ಕ್ರಿ. ಶ. **೧೮೪೮-೧೮೫೬**) ಮಾಂಡಲಿಕ ಅರಸನಿಗೆ ದತ್ತಕ ತೆಗೆದುಕೊಳ್ಳುವ ಅಧಿಕಾರವಿಲ್ಲೆಂದು ಕಟ್ಟಪ್ಪಣೆಯನ್ನು ಮಾಡಿದನು. ಅದೇ ಮೇರೆಗೆ **ಸಾತಾರೆಯ ಅರಸನು**,


ನಿಪ್ಪಾಣಿಯ ಹಾಗೂ ತಾಸಗಾವಿಯ ಸಂಸ್ಥಾನಿಕರು ಮೊದಲಾದವರು ಮಕ್ಕಳಿಲ್ಲದೆ ಮರಣಹೊಂದಲು ಇಂಗ್ಲಿಷರು ಅವರ ರಾಜ್ಯಗಳನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. ಇದರಿಂದ ಎಲ್ಲ ಸಂಸ್ಥಾನಿಕರ ಮನಸ್ಸು ಕೆಟ್ಟುಹೋಯಿತು. ಇದೇ ಕಾಲಕ್ಕೆ ಬ್ರಹ್ಮಾವರ್ತದಲ್ಲಿರುತ್ತಿದ್ದ ಬಾಜೀ ರಾಯನ ಮಗನಾದ ನಾನಾಸಾಹೇಬನು ಒಳಸಂಚು ಮಾಡಿ, ಇಂಗ್ಲಿಷ ಸರಕಾರದವರ ಸೈನ್ಯದೊಳಗಿನ ಸಿಪಾಯಿಗಳ ಮನಸ್ಸನ್ನು ಕೆಡಿಸಿ, ಅವರನ್ನು ಬಂಡಾಯ ಮಾಡುವದಕ್ಕೆ ಹುರಿದುಂಬಿಸಿದನು. ಇವೆಲ್ಲ ಕಾರಣಗಳಿಂದ ಕ್ರಿ. ಶ. ೧೮೫೭ರಲ್ಲಿ ಉತ್ತರ ಹಿಂದುಸ್ಥಾನದಲ್ಲಿ ದೊಡ್ಡದೊಂದು ಬಂಡಾಯವಾಯಿತು. ಆ ಕಾಲಕ್ಕೆ ಕರ್ನಾಟಕದೊಳಗೂ ಕೆಲವು ಗಲಭೆಗಳುಂಟಾದವು. ಸುರಪುರದ ಬೇಡ ಜಾತಿಯ ನಾಯಕನೂ ನರಗುಂದದ ಸಂಸ್ಥಾನಿಕನಾದ ಬಾಬಾಸಾಹೇಬನೂ ಹಾಗೂ ಮುಂಡರಿಗೆಯ ಭೀಮರಾಯನೂ ಸೇರಿ, ಇಂಗ್ಲಿಷರನ್ನು ಈ ದೇಶದಿಂದ ಹೊರಗೆ ಹಾಕುವದಕ್ಕೆ ಬಂಡಾಯವನ್ನು ಹೂಡಿದರು. ಆದರೆ ಇವರ ಕೋರಿಕೆಯು ಈಡೇರಲಿಲ್ಲ. ಇಂಗ್ಲಿಷರು ಆ ಸುರಪುರದ ಬೇಡ ನಾಯಕನನ್ನು ಸೆರೆಹಿಡಿಯಲು ಅವನು ವಿಷವನ್ನು ತಿಂದು ಮರಣ ಹೊಂದಿದನು. ಅತ್ತ ನರಗುಂದದ ಬಾಬಾಸಾಹೇಬನು ಅಸಿಸ್ಟಂಟ ಪೊಲಿಟಿಕಲ್ ಏಜಂಟನಾದ ಮ್ಯಾನಸನ್ ದೊರೆಯನ್ನು ಕಪಟದಿಂದ ಕೊಂದನು. ಇದನ್ನು ನೋಡಿ ಇಂಗ್ಲಿಷರು ಸಿಟ್ಟಿಗೆದ್ದು, ಸೈನ್ಯದೊಡನೆ ನರಗುಂದಕ್ಕೆ ಹೋಗಿ, ಎರಡೇ ದಿವಸಗಳಲ್ಲಿ ಆ ಕೋಟೆಯನ್ನು ವಶಮಾಡಿಕೊಳ್ಳಲು, ಬಾಬಾಸಾಹೇಬನು ಓಡಿಹೋದನು. ಆಗ ಇಂಗ್ಲಿಷ ಸೈನಿಕರು ಬೆನ್ನಟ್ಟಿ ಹೋಗಿ ಅವನನ್ನು ತೊರಗಲ್ಲಿನ ಸಮೀಪದಲ್ಲಿ ಹಿಡಿದು, ಬೆಳಗಾವಿಯಲ್ಲಿ ಗಲ್ಲಿಗೆ ಹಾಕಿದರು. (ಕ್ರಿ. ಶ. ೧೮೫೮), ಮುಂಡರಿಗೆಯ ಭೀಮರಾಯನು ಕೊಪ್ಪಳದ ಕೋಟೆಯನ್ನು ವಶಮಾಡಿಕೊಂಡು ಅಲ್ಲಿ ಇರುತ್ತಿರಲು, ಇಂಗ್ಲಿಷರು ಅವನನ್ನು ರಣಭೂಮಿಯಲ್ಲಿ ಸಂಹರಿಸಿ, ಆ ಕೋಟೆಯನ್ನು ಕೈವಶಮಾಡಿಕೊಂಡರು. ಆಗ ಕರ್ನಾಟಕದಲ್ಲಿ ಎಲ್ಲ ಕಡೆಯಲ್ಲಿಯೂ ದಾಳಿಗಳು ಅಡಗಿದವು.

ಮೈಸೂರ ಸಂಸ್ಥಾನದಲ್ಲಿ ಇಂಗ್ಲಿಷರು ಕ್ರಿ. ಶ. ೧೮೩೧ರಿಂದ ೧೮೮೧ರ ವರೆಗೆ ೫೦ ವರ್ಷಗಳ ಕಾಲ ರಾಜ್ಯವನ್ನಾಳಿದರು. ಈ ಕಾಲದಲ್ಲಿ

ಮುಮ್ಮಡಿ ಕೃಷ್ಣರಾಜ **ಒಡೆಯರು** ಕ್ರಿ. ವ. ೧೮೬೫ರಲ್ಲಿ ದತ್ತಕ ಮಾಡಿಕೊಂಡಿದ್ದ **ಚಾಮರಾಜ** ಒಡೆಯರಿಗೆ ರಾಜ್ಯವನ್ನು ಕೊಡಬೇಕೆಂದು ಇಂಗ್ಲಿಷ ಸರಕಾರದವರು ಕ್ರಿ. ವ. ೧೮೬೭ರಲ್ಲಿ ತೀರ್ಮಾನವನ್ನು ಮಾಡಿದರು. ಮರುವರ್ಷವೇ ಕೃಷ್ಣರಾಜ ಒಡೆಯರು ಸ್ವರ್ಗಸ್ಥರಾದರು. ಬಳಿಕ ಸರಕಾರದವರು **ಚಾಮರಾಜ ಒಡೆಯರಿಗೆ** ಪಟ್ಟವನ್ನು ಕಟ್ಟಿ, ಅವರಿಗೆ ಸರಿಯಾದ ವಯಸ್ಸು ಬಂದ ಮೇಲೆ ರಾಜ್ಯವನ್ನು ಕೊಡುತ್ತೇವೆಂದು ತಿಳಿಯಪಡಿಸಿದರು. ಮತ್ತು ಈ ಚಾಮರಾಜರಿಗೆ ವಿದ್ಯಾಭ್ಯಾಸವನ್ನು ಮಾಡಿಸುವದಕ್ಕೆ ತಕ್ಕ ಏರ್ಪಾಟುಗಳನ್ನು ಮಾಡಿದರು. ಮುಂದೆ ಕ್ರಿ. ವ. ೧೮೮೧ರಲ್ಲಿ ಚಾಮರಾಜ ಒಡೆಯರಿಗೆ ೧೮ ವರ್ಷ ತುಂಬಲು, ಅದೇ ವರ್ಷದ **ಮಾರ್ಚ** ತಿಂಗಳ **೨೫ನೆಯ ತಾರೀಖಿಗೆ** ರಾಜ್ಯವನ್ನು ಇವರಿಗೆ ಕೊಟ್ಟರು. ಇವರು ತಮ್ಮ ಆಳಿಕೆಯಲ್ಲಿ ಪ್ರಜೆಗಳ ಹಿತಕ್ಕೋಸ್ಕರ "**ಪ್ರಜಾಪ್ರತಿನಿಧಿ ಸಭೆ**" ಯೊಂದನ್ನು ಏರ್ಪಡಿಸಿದರು. ಇದಲ್ಲದೆ ಕೆರೆ, ಕಾಲುವೆಗಳನ್ನು ಕಟ್ಟಿಸಿದರು. ಮತ್ತು ಇವರು, ರಾಜ್ಯದಲ್ಲಿ ಎಲ್ಲ ಕಡೆಗೆ ಶಾಲೆ, ವಿದ್ಯಾಲಯಗಳನ್ನು ಸ್ಥಾಪಿಸಿ, ವಿದ್ಯಾಭ್ಯಾಸಕ್ಕೆ ಹೆಚ್ಚಾಗಿ ಪ್ರೋತ್ಸಾಹವನ್ನು ಕೊಟ್ಟರು. ಈ ಪ್ರಕಾರ ಈ ಚಾಮರಾಜ ಒಡೆಯರು ೧೪ ವರ್ಷ ಪ್ರಜೆಗಳಿಗೆ ಹಿತವಾಗುವಂತೆ ರಾಜ್ಯವನ್ನಾಳಿದರು. ಇವರು ಕ್ರಿ. ವ. ೧೮೯೪ರಲ್ಲಿ ಕಲಕತ್ತೆಗೆ ಹೋಗಿದ್ದಾಗ ಅಲ್ಲಿ ಮರಣವನ್ನು ಹೊಂದಿದರು. ಚಾಮರಾಜ ಒಡೆಯರ ತರುವಾಯ ಅವರ ಹಿರಿಯ ಮಕ್ಕಳಾದ **ಶ್ರೀಕೃಷ್ಣರಾಜ ಒಡೆಯರವರಿಗೆ** ಕ್ರಿ. ವ. ೧೮೯೫ರಲ್ಲಿ ಪಟ್ಟಾಭಿಷೇಕವಾಯಿತು. ಆಗ ಇವರು ಚಿಕ್ಕವರಿದ್ದರು. ಆದುದರಿಂದ



ಶ್ರೀಕೃಷ್ಣರಾಜ ಒಡೆಯರವರು



ಮೈಸೂರಿನಲ್ಲಿ ಹೊಸದಾಗಿ ಕಟ್ಟಿಸಿದ ಅರಮನೆ

ಮುಂದೆ ಕ್ರಿ. ವ. **೧೯೦೨ರಲ್ಲಿ ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರು** ರಾಜ್ಯಾಧಿಪತ್ಯವನ್ನು ವಹಿಸಿದರು. ಆ ಮಹೋತ್ಸವ ಕಾಲದಲ್ಲಿ ವ್ಹಾಯಿಸರಾಯರಾದ **ಲಾರ್ಡ ಕರ್ಝನ್** ಪ್ರಭುಗಳು ಮೈಸೂರಿಗೆ ಬಂದು, ಈ ಶುಭ ಸಮಯದಲ್ಲಿ ನಡೆಯತಕ್ಕ ಕಾರ್ಯಗಳನ್ನು ಸ್ವತಃ ನೆರವೇರಿಸಿದರು. ಇವರ ಆಳಿಕೆಯಲ್ಲಿ ಮೈಸೂರ ಸಂಸ್ಥಾನವು ಎಲ್ಲ ದೃಷ್ಟಿಯಿಂದಲೂ ಏಳಿಗೆಯನ್ನು ಹೊಂದುತ್ತ ನಡೆದಿದೆ. ಮೈಸೂರ ಸಂಸ್ಥಾನದಲ್ಲಿ ಸ್ವತಂತ್ರ **ವಿಶ್ವವಿದ್ಯಾಲಯವು** ಸ್ಥಾಪಿಸಲ್ಪಟ್ಟು, ಸಕಲ ವಿದ್ಯಾಕಲಾಕೌಶಲ್ಯಗಳಿಗೆ ಉತ್ತೇಜನವು ಪ್ರಾಪ್ತವಾಗಿದೆ. **ಸಾರಾಂಶ**ವೇನಂದರೆ, ಹಿಂದುಸ್ಥಾನದಲ್ಲಿರುವ ಎಲ್ಲ ದೇಶೀಯ ಸಂಸ್ಥಾನಗಳಲ್ಲಿ "**ಮಾದರಿಯ ಸಂಸ್ಥಾನ**" ವೆಂದು ಎಲ್ಲರೂ ಮೈಸೂರ ಸಂಸ್ಥಾನವನ್ನು ಹೊಗಳುತ್ತಿದ್ದಾರೆ. ಇದೇ ಮೇರೆಗೆ **ಹೈದರಾಬಾದ** ಸಂಸ್ಥಾನದಲ್ಲಿಯೂ ಸ್ವತಂತ್ರವಾದ "**ಉಸ್ಮಾನಿಯಾ ವಿಶ್ವವಿದ್ಯಾಲಯ**"ವು ಸ್ಥಾಪಿಸಲ್ಪಟ್ಟಿದೆ. ಇಲ್ಲಿಯ ಈಗಿನ **ನಿಜಾಮಸಾಹೇಬರಾದ ಮೀರ ಉಸ್ಮಾನ ಅಲ್ಲೀ**



ಲಾರ್ಡ ಕರ್ಝನ್

ಇವರು ಹೊಸ ಹೊಸ ಸುಧಾರಣೆಗಳನ್ನು ಪ್ರಚಾರದಲ್ಲಿ ತರುತ್ತಿದ್ದಾರೆ. ಇದೇ ಮೇರೆಗೆ **ಸವಣೂರ** ಸಂಸ್ಥಾನದ ಈಗಿನ **ನವಾಬಸಾಹೇಬರಾದ ಅಬ್ದುಲ್ ಮಜೀದಖಾನ ದಿಲೇರಜಂಗ ಬಹಾದ್ದೂರ** ಇವರೂ ತಮ್ಮ ಸಂಸ್ಥಾನವನ್ನು ಸುಧಾರಿಸಿದ್ದಾರೆ.



ವ್ಹಿಕ್ಟೋರಿಯಾ ಮಹಾರಾಣಿಯವರು

ಕ್ರಿ. ವ. ೧೮೫೭ರಲ್ಲಿ ಉಂಟಾದ ಬಂಡಾಯವನ್ನು ಅಡಗಿಸಿದ ಬಳಿಕ **ವ್ಹಿಕ್ಟೋರಿಯಾ ಮಹಾರಾಣಿಯವರು**, ಹಿಂದುಸ್ಥಾನದ ರಾಜ್ಯಕಾರಭಾರವನ್ನು ಈಸ್ಟ ಇಂಡಿಯ ಕಂಪನಿ ಸರಕಾರದವರ ಕೈಯಿಂದ ತಮ್ಮ ವಶಕ್ಕೆ ತೆಗೆದುಕೊಂಡರು. ಮುಂದೆ ಈ ಮಹಾರಾಣಿಯವರು **೬೪ ವರ್ಷ** ವೈಭವದಿಂದ ರಾಜ್ಯವನ್ನಾಳಿ, ಕ್ರಿ. ವ. ೧೯೦೧ನೆಯ ಜನವರಿ ೨೨ನೆಯ ತಾರೀಖಿಗೆ ಪರಲೋಕವಾಸಿಗಳಾದರು. ಇವರ ತರುವಾಯ ಇವರ ಮಕ್ಕಳಾದ **ಏಳನೆಯ ಎಡ್ವರ್ಡ ಬಾದಶಹರು** ಸಿಂಹಾಸನವನ್ನೇರಿದರು. ಇವರ ಆಳಿಕೆಯಲ್ಲಿ ಇವರ ಹಿರಿಯ ಮಕ್ಕಳಾದ **ಪಂಚಮ ಜಾರ್ಜ ಯುವರಾಜರು** ಹಿಂದುಸ್ಥಾನಕ್ಕೆ ಬಂದು, ಎಲ್ಲ ಪ್ರಾಂತಗಳಲ್ಲಿ ಸಂಚರಿಸಿ, ಪ್ರಜೆಗಳಿಗೆ ತಮ್ಮ ದರ್ಶನಲಾಭವನ್ನು ಕೊಟ್ಟರು. (ಕ್ರಿ. ವ. ೧೯೦೫) ಎಡ್ವರ್ಡ



ಏಳನೆಯ ಎಡ್ವರ್ಡ ಬಾದಶಹರು

ಬಾದಶಹರು ೯ ವರ್ಷ ಬಹು ಶಾಂತತೆಯಿಂದ ರಾಜ್ಯವನ್ನಾಳಿ, ಕ್ರಿ. ಶ. ೧೯೧೦ನೆಯ ಮೇ ತಿಂಗಳ ೬ನೆಯ ತಾರೀಖಿಗೆ ಮರಣ ಹೊಂದಿದರು. ಆ ಬಳಿಕ ಇವರ ಜ್ಯೇಷ್ಠ ಪುತ್ರರಾದ ಪಂಚಮ ಜಾರ್ಜ ಬಾದಶಹರು



ಪಂಚಮ ಜಾರ್ಜ ಬಾದಶಹರವರು

ಸಿಂಹಾಸನದ ಮೇಲೆ ಕುಳಿತರು. ಮತ್ತು ಮರುವರ್ಷ ಎಂದರೆ ಕ್ರಿ. ಶ. ೧೯೧೧ನೆಯ ಡಿಸೆಂಬರ ೧೨ನೆಯ ತಾರೀಖಿನ ದಿವಸ ದಿಲ್ಲಿಯಲ್ಲಿ ಬಹು ವೈಭವದಿಂದ ಪರಿಪೂರ್ಣವಾದ ಓಲಗವನ್ನು ಏರ್ಪಡಿಸಿ,

ತಾವು ಪಟ್ಟಕ್ಕೆ ಕುಳಿತ ಸಂಗತಿಯನ್ನು ಪ್ರಜೆಗಳಿಗೆ ತಿಳಿಸಿದರು. ಮತ್ತು **ದಿಲ್ಲಿ** ಪಟ್ಟಣವನ್ನು ತಮ್ಮ **ನೆಲೆವೀಡನ್ನಾಗಿ** ಮಾಡಿಕೊಂಡರು.

ಬ್ರಿಟಿಶರ ಆಳಿಕೆಯಿಂದ ಲಾಭಗಳು :— ಇಂಗ್ಲಿಷರು ಎಲ್ಲ ಕಡೆಗೂ ಸುವ್ಯವಸ್ಥಿತವಾದ ರಾಜ್ಯಪದ್ಧತಿಯನ್ನು ಏರ್ಪಡಿಸಿ, ಶಾಂತತೆಯನ್ನು ನೆಲೆಗೊಳಿಸಿದರು. ಇಷ್ಟೇ ಅಲ್ಲ, ಅಲ್ಲಲ್ಲಿಗೆ ಶಾಲೆ, ವಿದ್ಯಾಲಯಗಳನ್ನು ಸ್ಥಾಪಿಸಿ, ಜ್ಞಾನಪ್ರಸಾರವನ್ನು ಮಾಡುತ್ತಿದ್ದಾರೆ. ಇದರಿಂದ ಜನರು ಎಚ್ಚತ್ತು, ಸಂಕುಚಿತ ವಿಚಾರಗಳನ್ನು ಬಿಟ್ಟು, ಒಬ್ಬರಿಗೊಬ್ಬರು ಪ್ರೇಮದಿಂದ ನಡೆದುಕೊಳ್ಳಹತ್ತಿದ್ದಾರೆ.

ಈ ಬ್ರಿಟಿಶರ ಆಳಿಕೆಯಲ್ಲಿ ಈಗ ಇರತಕ್ಕ ಕರ್ನಾಟಕದ ಸ್ಥಿತಿಯು ಹೇಗೆಂದರೆ, **ಕರ್ನಾಟಕ**ವು, ದಕ್ಷಿಣೋತ್ತರ **೪೫೦ ಮೈಲು** ಉದ್ದವಾಗಿಯೂ ಪೂರ್ವಪಶ್ಚಿಮ **೩೨೫ ಮೈಲು** ಅಗಲವಾಗಿಯೂ ಇದೆ. ಇದರಲ್ಲಿ ಸುಮಾರು ೧ತ್ತಿ **ಕೋಟಿ** ಜನರು ಕನ್ನಡಿಗರು ಇದ್ದಾರೆ. **ಬ್ರಿಟಿಶ-ಕರ್ನಾಟಕ**ದಲ್ಲಿ ಮುಂಬಯಿ ಇಲಾಖೆಯ ಕರ್ನಾಟಕವೆಂದೂ ಮದ್ರಾಸ ಇಲಾಖೆಯ ಕರ್ನಾಟಕವೆಂದೂ ಎರಡು ಭಾಗಗಳಾಗಿವೆ. ಈ ಬ್ರಿಟಿಶರಿಗೆ ಮಾಂಡಲಿಕರಾದ **ಸಂಸ್ಥಾನಿಕರ--ಕರ್ನಾಟಕ**ದಲ್ಲಿ **ಮೈಸೂರ--ಕರ್ನಾಟಕ**ವೆಂದೂ **ಹೈದರಾಬಾದ--ಕರ್ನಾಟಕ**ವೆಂದೂ ಎರಡು ಮುಖ್ಯವಾದ ಭಾಗಗಳುಂಟು.


ಸವಣೂರ ನವಾಬಸಾಹೇಬರವರು

(೧) **ಮುಂಬಯಿ ಇಲಾಖೆಯ ಕರ್ನಾಟಕ**ದಲ್ಲಿ:— ಧಾರವಾಡ ಜಿಲ್ಲೆ, ಬೆಳಗಾವ ಜಿಲ್ಲೆ, ವಿಜಾಪುರ ಜಿಲ್ಲೆ, ಕಾರವಾರ ಜಿಲ್ಲೆ, ಸೊಲ್ಲಾಪುರ ಜಿಲ್ಲೆಯ

ಕೆಲವು ಭಾಗ, ಸಾತಾರಿ ಜಿಲ್ಲೆಯಲ್ಲಿಯ ಕೆಲವು ಗ್ರಾಮಗಳು, ಕೊಲ್ಹಾಪುರ, ನಾಂಗಲಿ, ಮಿರ್ಜಿ, ಕುರುಂದವಾಡ, ಔಂಧ ಸಂಸ್ಥಾನಗಳಲ್ಲಿ ಕೆಲವು ಭಾಗ; ಸವಣೂರು, ಜಮುಖಂಡಿ, ಮುಧೋಳ, ರಾಮದುರ್ಗ, ಜತ, ಅಕ್ಕಲಕೋಟೆ ಸಂಸ್ಥಾನಗಳಲ್ಲಿ ಸಂಪೂರ್ಣಭಾಗ ಈ ಪ್ರಕಾರ ಹಂಚಿ ಹೋಗಿದೆ.

(೨) **ಮದ್ರಾಸ ಇಲಾಖೆಯ ಕರ್ನಾಟಕದಲ್ಲಿ**:— **ಬಳ್ಳಾರಿ** ಜಿಲ್ಲೆ (ಸೊಂಡೂರು ಸಂಸ್ಥಾನ ಸಹಿತ) **ಅನಂತಪುರ** ಜಿಲ್ಲೆಯಲ್ಲಿ **ಮಡಗಸಿರಾ** ತಾಲೂಕು, **ಸೇಲಮ** ಜಿಲ್ಲೆಯಲ್ಲಿ **ಹೊಸೂರು**, **ಕೃಷ್ಣಗಿರಿ** ಇವೆರಡು ತಾಲೂಕುಗಳು, **ಕೊಯಮುತ್ತೂರ** ಜಿಲ್ಲೆಯಲ್ಲಿ **ಕೊಳ್ಳೇಗಾಲ** ತಾಲೂಕು, ನೀಲಗಿರಿ ಜಿಲ್ಲೆ, ಕೊಡಗು ಪ್ರಾಂತ, ಮಂಗಳೂರು ಜಿಲ್ಲೆ ಈ ಪ್ರಕಾರ ವಿಭಾಗವಾಗಿದೆ.



ಹೈದರಾಬಾದದ ನಿಜಾಮು ಶಾಹೇಬರವರು

(೩) **ಮೈಸೂರು ಸಂಸ್ಥಾನದಲ್ಲಿ**:— ಮೈಸೂರು ಜಿಲ್ಲೆ, ಬೆಂಗಳೂರು ಜಿಲ್ಲೆ, ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆ, ಹಾಸನ ಜಿಲ್ಲೆ, ಕಡೂರು ಜಿಲ್ಲೆ, ಶಿವಮೊಗ್ಗೆ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ಈ ಪ್ರಕಾರ ೮ ಜಿಲ್ಲೆಗಳಿವೆ.

(೪) **ಹೈದರಾಬಾದ ಸಂಸ್ಥಾನದಲ್ಲಿ**:—ಬೀದರ ಜಿಲ್ಲೆ, ಕಲಬುರ್ಗಿ ಜಿಲ್ಲೆ, ರಾಯಚೂರು ಜಿಲ್ಲೆ (ಕೊಪ್ಪಳ ಜಹಾಗೀರು ಸಹಿತ) ಈ ಪ್ರಕಾರ ೩ ಜಿಲ್ಲೆಗಳಿರುತ್ತವೆ.

ಬ್ರಿಟಿಶರ ರಾಜ್ಯವ್ಯವಸ್ಥೆಯು:— **ವ್ಹಾಯಿಸರಾಯರು**, ಪಂಚಮ ಜಾರ್ಜ ಬಾದಶಹರ ಪ್ರತಿನಿಧಿಯಾಗಿ ಇಡಿ ಹಿಂದುಸ್ಥಾನವನ್ನು

ಆಳುತ್ತಾನೆ. ಇವನ ಕೈಕೆಳಗೆ ಪ್ರತಿಯೊಂದು ಇಲಾಖೆಗೆ '**ಗವ್ಹರ್ನರ**' ನೆಂಬ ಮುಖ್ಯ ಅಧಿಕಾರಿಯು ಇರುತ್ತಾನೆ. ಈ ಗವ್ಹರ್ನರನ ಕೈಕೆಳಗೆ ಪ್ರತಿಯೊಂದು ಜಿಲ್ಲೆಗೆ '**ಕಲೆಕ್ಟರ**' ನೆಂಬ ಅಧಿಕಾರಸ್ಥನೂ ಈ ಕಲೆಕ್ಟರನ ಕೈಕೆಳಗೆ ಪ್ರತಿಯೊಂದು ತಾಲೂಕಿಗೆ **ಮಾಮಲೇದಾರ**ನೆಂಬ ಅಧಿಕಾರಿಯೂ ಇದ್ದಾರೆ. ಇವರಲ್ಲದೆ **ನ್ಯಾಯಾಧೀಶರು**, **ವಿದ್ಯಾಧಿಕಾರಿಗಳು** ಮುಂತಾದ ಇನ್ನೂ ಅನೇಕ ಜನ ಅಧಿಕಾರಿಗಳಿದ್ದಾರೆ. ಇವರೆಲ್ಲರ ಮೇಲೆ '**ಪಾರ್ಲಿಮೆಂಟ**' ಎಂಬ ವರಿಷ್ಠ ಅಧಿಕಾರದ ಸಭೆಯು **ಇಂಗ್ಲಂಡ** ದೇಶದಲ್ಲಿದೆ. ಮುನಸಿಪಾಲ್ಟಿ, ಲೋಕಲ ಬೋರ್ಡುಗಳನ್ನು ಪ್ರಜೆಗಳ ಕೈಯಲ್ಲಿ ಕೊಟ್ಟಿದ್ದಾರೆ. ಕಾಯದೆ ಕೌನ್ಸಿಲದಲ್ಲಿ ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳ ಒಪ್ಪಿಗೆಯಿಂದ ಕಾಯದೆ ಕಾನೂನುಗಳನ್ನು ಮಾಡುತ್ತಿದ್ದಾರೆ. ಮೈಸೂರು, ಹೈದರಾಬಾದ ಮುಂತಾದ ಸಂಸ್ಥಾನಗಳಲ್ಲಿಯೂ ಸಹ ಈ ಬ್ರಿಟಿಶರ ಆಳಿಕೆಯ ಪದ್ಧತಿಯನ್ನೇ ಬಹುಮಟ್ಟಿಗೆ ಸ್ವೀಕರಿಸಿದ್ದಾರೆ.

ಕನ್ನಡನಾಡು

ಗಾಡಿಯ ಸೀಮೆ ಚೆಲ್ವಾಗೆವ ತಾಣಮಲಂಪಿನ ಸಂತೆ ಪೆಂಪು ಸಾ–।
ರ್ದಾಡುವ ಭೂಮಿ ಸೌಖ್ಯದೆಡೆ ಪುಣ್ಯದ ಗೊತ್ತು ವಿನೋದದಾಗರಂ ॥
ಮೋಡಿಯ ಮಂಟಪಂ ಸಿರಿಯ ಪೆರ್ಚುಗೆಗೊಳ್ಮನೆ ಮುಕ್ತಿಕಾಂತೆ ಕೈ।
ಗೂಡುವ ಬೀಡು ಕನ್ನಡದ ನಾಡು ವಿರಾಜಿಪುದೆಂತು ಬಣ್ಣಿಪೆಂ।

— ಚಿಕ್ಕುಪಾಧ್ಯಾಯ

ತಿರೆಯೊಳಗಾವುದು ಕನ್ನಡ ನಾಡಿಗೆ।
ದೊರೆ ಪೆರತಿರ್ಪುದು? ತತ್ವಜ್ಞರ ಭ–।
ಕ್ತರ ಸಚ್ಚರಿತರ ವಸತಿಸ್ಥಳಮಿದು ಸಿರಿಗನ್ನಡನಾಡು ! ॥
ಪರಿದೊರೆ-ತಿಳಿಗೊಳ-ಪೊಸಬನ-ಬೆಳವೊಲ- ।
ನರುವೂ ಪಾಲ್ದೆನೆ ತನಿವಣ್ಗಳಿನನ- ।
ವರತಂ ಮೆರೆವುದು ಸಗ್ಗಕೆ ಮಿಗಿಲೆನ್ನಿಸುತಿಯ ತಾಯ್ನಾಡು ।

—ಶಾಲಿ ರಾಮಚಂದ್ರರಾಯ

ರಾಗ ಮೋಹನ, ಆದಿತಾಳ

ರಕ್ಷಿಸು ಕರ್ನಾಟಕ ದೇವಿಯೆ ಸಂ। ರಕ್ಷಿಸು ಕರ್ನಾಟಕ ದೇವಿ ॥ಪಲ್ಲ॥

ಕದಂಬಾದಿಸಂಪೂಜಿತ ಚರಣೆ ।
ಗಂಗಾರಾಧಿತ ಪದನಖ ಸರಣೆ ।
ಚಲುಕ್ಯರುತ್ತಮ ಕಾಂಚೀ ಕಿರಣೆ ।
ರಾಷ್ಟ್ರಕೂಟ ಮಣಿ ಕಂಠಾಭರಣೆ ।
ಚಾಲುಕ್ಯಾಂಶುಕ ಶೋಭಾವರಣೆ ॥ ೧ ॥

ಯಾದವಮಣಿ ಕಂಕಣಾಂಶು ಸುಂದರಿ ।
ಬಲ್ಲಾಳರ ಭುಜ ಭೂಷಣ ಬಂಧುರೆ ।
ವಿಜಯನಗರ ಮಂಗಳಮಣಿ ಕಂಧರೆ ।
ಮೈಸೂರೊಡೆಯರ ಸುಕೀರ್ತಿಮಂದಿರೆ ।
ಮಾಂಡಲಿಕಾವನ ಭಾರಧುರಂಧರೆ ॥ ೨ ॥

ಮತ ಸ್ಥಾಪಕ ಸ್ಥಾಪಿತ ಪ್ರಾಣೆ ।
ಶಿಲ್ಪಕಲಾ ಮಂಡಪ ಸುಸ್ಥಾನೆ ।
ಕವಿಜನ ಕೀರ್ತಿತ ಸುಯಶಸ್ ತ್ರಾಣೆ ।
ಸಾಧು ಸತ್ಕಥಾ ಭೇರಿಧ್ವಾನೆ !
ಸ್ವೇತಿಹಾಸನೀರಾಜನ ರಾಣೆ ॥ ೩ ॥

—ಶಾಂತಕವಿ

ಸಮಾಪ್ತ

Printed by K. R. Bhuse, at the Karnatak Printing Works, Dharwar.